MYSORE LEGISLATIVE ASSEMBLY

Eighth Day

Tuesday, 10th March 1959.

The House met in the Assembly Hall, Vidhana Soudha, Bangalore, at One of the Clock.

Mr. Deputy Speaker (Sri L. H. Thimma Bovi, b.a.) in the Chair.

BUDGET ESTIMATES FOR 1959-60 : GENERAL DISCUSSION—(Contd.)

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದಿಟ್ಟ ಬಡ್ಜೆಟ್ಟನ್ನು ನಾನು ಸಾಮಾನ್ಯವಾಗಿ ಒಪ್ಪುತ್ತಾ ಕೆಲವು ಸೂಚನೆಗಳನ್ನು ಮಾಡಲಿಕ್ಕೆ ಅಪೇಕ್ಷೆಪಡುತ್ತೇನೆ.

Sri C. M. ARUMUGHAM (Kolar Gold Fields).—Sir, since there is no question hour today, I want to submit that we may sit only up to 6 O'clock because we have not been definite about the time of our sitting. So my submission is that today we may sit only up to 6 P.M. instead of up to 7-30 P.M.

Mr. DEPUTY SPEAKER.—I will consider that suggestion.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಬಡ್ಜೆಟ್ಟನಲ್ಲಿ ಯಾವುದೇ ಹೊಸ ತರಹ ಕರವನ್ನು ಹಾಕದೇ ಇದ್ದರೂ ಅನೇಕ ಕರಗಳನ್ನು ಸಮನ್ವಯಿಸಿದ ರೂಪದಲ್ಲಿ ಹೋದ ಸಾರಿ ಹಾಕಿದ್ದಾಗಿದೆ; ಮತ್ತು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಮುಂತಾದ ಕರಗಳು ಅದರಲ್ಲಿ ಸಮಾವೇಶವಾಗಿವೆ. ಒಕ್ಕಲುತನದ ಉತ್ಪನ್ನ ಕರದಲ್ಲಿ ಈ ಆಹಾರ ಧಾನ್ಯಗಳು ಎಂಬ ಒಂದು ಕಲಮಿನೊಳಗೆ ಅನೇಕ ಹೆಚ್ಚುಕಡಿಮೆಯಾಗಬೇಕಾದುದು ಅವಶ್ಯಕವೆಂದು ಕಾಣುತ್ತದೆ. ಮೆಣಸಿನಕಾಯಿ ಎಂಬುದು ಒಂದು ಆಹಾರ ಪದಾರ್ಥ. ಸಾಮಾನ್ಯವಾಗಿ ಪ್ರತಿದಿನವೂ ಎಲ್ಲರೂ ಉಪಯೋಗಿಸುವಂಥದು. ಇನ್ನು ಕೆಲವು ಇಂತಹ ಪದಾರ್ಥಗಳಿವೆ. ಇಂತಹದಕ್ಕೆಲ್ಲಾ ಬಡ್ಜೆಟ್ಟನಲ್ಲಿ ವಿನಾಯತಿ ಸೌಲಭ್ಯವನ್ನು ತೋರಿಸಿದ್ದರೆ ಜನತೆಗೆ ಒಳ್ಳೆಯದಾಗುತ್ತಿತ್ತೆಂದು ನನಗೆ ಕಾಣುತ್ತದೆ. ಈ ಪದಾರ್ಥದ ಮೇಲೆ ಮತ್ತು ಉರುವಲು ಕಟ್ಟಿಗೆಯಮೇಲೆ ಹಾಕಿರುವ ಟ್ಯಾಕ್ಸನ್ನು ಕಡಿಮೆಮಾಡಬೇಕೆಂದು ಜನರಿಂದ ಸರ್ಕಾರಕ್ಕೆ ಎಷ್ಟೋ ದೂರುಗಳು ಬಹಳ ದಿವಸಗಳಿಂದ ಬರುತ್ತಿವೆ. ಆದರೂ ಆ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಿದಂತೆ ಕಾಣಲಿಲ್ಲ. ಇದರಿಂದ ಸಾಮಾನ್ಯ ಜನತೆಗೆ ಎಷ್ಟು ತೊಂದರೆಯಾಗುತ್ತದೆಂಬುದನ್ನು ಸರ್ಕಾರ ಯೋಚಿಸಬೇಕು. ವಿದ್ಯುದ್ದೀಪವನ್ನುಪಯೋಗಿಸಿ ಅಡಿಗೆ ಮಾಡಿಕೊಳ್ಳುವವರು ವಿಶೇಷ ಸಂಪತ್ತನ್ನು ಹೊಂದಿರುವವರು. ಅವರಿಗೆ ಅಷ್ಟಾಗಿ ತೊಂದರೆಯೇನೂ ಕಾಣುವುದಿಲ್ಲ. ಆದರೆ ಕೂಲಿಗಾರರಿಗೆ, ಬಡವರಿಗೆ ಈ ಕರಗಳಿಂದ ಎಷ್ಟು ತೊಂದರೆಯೆಂಬುದನ್ನು ಸರ್ಕಾರ ಆಲೋಚಿಸಬೇಕು. ಕೂಲಿಗಾರರು ಉರುವಲು ಕಟ್ಟಿಗೆಯನ್ನು ಉಪಯೋಗಿಸಬೇಕಾಗುತ್ತದೆ. ಅದರ ವ್ಯಾಪಾರಸ್ಥರು ಮಾರಾಟದ ಕರವನ್ನು ಸ್ವಾಭಾವಿಕವಾಗಿ ಗಿರಾಕಿಗಳ ಮೇಲೆಯೇ ಹಾಕುತ್ತಾರೆ. ಕೂಲಿಗಾರರು ಅಂತಹ ಕರವನ್ನು ಕೊಟ್ಟು ಯಾವ ರೀತಿ ಜೀವನ ಮಾಡಬೇಕು ? ಇದು ನನಗೆ ಸ್ವಲ್ಪ ಸೋಜಿಗವೆಂದು ಕಾಣುತ್ತದೆ. ಆದ್ದರಿಂದ ಈ ಮೆಣಸಿನಕಾಯಿ ಮತ್ತು ಉರುವಲು ಕಟ್ಟಿಗೆಗಳಮೇಲೆ ವಿಧಿಸುತ್ತಿರುವ ಮಾರಾಟಕರವನ್ನು ರದ್ದುಮಾಡಬೇಕೆಂದು ಕೇಳುತ್ತೇನೆ. ಇನ್ನು ಬೇರೆ ಬೇರೆ ಖಾತೆಗಳ ಪ್ರಕಾರ ವೆಚ್ಚದ ಖಾತೆಗಳನ್ನು ಲಕ್ಷ್ಯದಲ್ಲಿ ತೆಗೆದುಕೊಂಡರೆ ಲೋಕೋಪಯೋಗಿ ಖಾತೆ, ಮರಾಮತ್ತು ಶಾಖೆ ಅಥವಾ ಪಿ. ಡಬ್ಲ್ಯು. ಡಿ. ಮೊಟ್ಟ ಮೊದಲನೆಯದಾಗಿದೆ. ಸಾಮಾನ್ಯವಾಗಿ ಇದು ಹೆಚ್ಚಿಗೆ ಎಲ್ಲಕಾರ್ಯಗಳಿಗೂ ಲಕ್ಷ್ಯಕೊಟ್ಟು ನೋಡತಕ್ಕಂಥ ಖಾತೆಯಾದ್ದರಿಂದ ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಬಹಳ ಬುದ್ಧಿವಂತಿಕೆಯಿಂದ ಬಡ್ಜೆಟ್ಟನಲ್ಲಿ ಅಡಕಮಾಡಿದ್ದಾರೆ. ಈ ಖಾತೆಗೆ ಒದಗಿಸಿರುವ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡಬೇಕು.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚೆನ್ನಪಟ್ಟಣ).—ಮಾನ್ಯ ಸದಸ್ಯರು ಈಗ್ಗೆ ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ. ಸದಸ್ಯರು ಮಾತನಾಡುವಾಗ ಬೇಕಾದಷ್ಟು ವ್ಯಾಲ್ಯುಬಲ್ ಸಜೆಷನ್ಸನ್ನು ಕೊಡುತ್ತಿದ್ದಾರೆ. ಅದರಲ್ಲೂ ಬಡ್ಜೆಟ್ ಚರ್ಚೆಯಾಗುವ ಕಾಲದಲ್ಲಿ ಸಂಬಂಧಪಟ್ಟ ಮಂತ್ರಿಗಳು ಹಾಜರಿರಬೇಕು. ಆ ರೀತಿ ಹಾಜರಿಲ್ಲದಿದ್ದರೆ, ಸದಸ್ಯರು ಹೇಳಿದ ಸಲಹೆಗಳನ್ನು ಮಂತ್ರಿಗಳು ತಿಳಿಯುವ ಬಗೆ ಹೇಗೆ ? ಆ ಸಲಹೆಗಳನ್ನು ತಿಳಿದುಕೊಳ್ಳದೆ ದೇಶಕ್ಕೆ ಏನೇನು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಾರು ? ಈ ಸಭೆಯಲ್ಲಿ ಏನು ಉತ್ತರವನ್ನು ಕೊಟ್ಟಾರು ? ನಾನು ಅಧ್ಯಕ್ಷರನ್ನು ಈ ವಿಷಯದ ಬಗ್ಗೆ ಪ್ರೆಸ್ ಮಾಡಬೇಕೆಂದು ಹೇಳುತ್ತಿಲ್ಲ. ತಮ್ಮ ಗಮನಕ್ಕೂ ಮತ್ತು ಸಭೆಯ ಗಮನಕ್ಕೂ ಈ ವಿಷಯವನ್ನು ತರುತ್ತಿದ್ದೇನೆ.

Sri C. M. ARUMUGHAM.—The other day I also brought to the notice of the Speaker the absence of the Chief Minister from the House because he holds about 75 per cent of the

(SRI C. M. ARUMUGHAM)

important portfolios. Then the Speaker said that he would give his ruling. Today, the Upper House also is not sitting at this hour and we are deprived of our usual question hour also. So I cannot understand why all the Ministers could not have been present here. I, therefore, submit to the Speaker to give the exhaustive ruling which he has promised to give.

SRI H. M. CHANNABASAPPA (Minister for Public Works).—Sir, I would like to submit that Government are anxious to hear whatever Hon'ble Members of this House tell us and make a note of them and try to convince them on points where we can carry conviction or get convinced on the points which they raise. It is very difficult for all the Ministers to be present at all times. Particularly today the issue was raised and it was said that since the Upper House was not sitting now it should have been possible for all Ministers to be present here. I do admit that all the Ministers could have come here, but there is another important issue which has arisen and on account of that some of the Ministers had to go elsewhere and so it is not possible for them to be present here. But that should not be taken to mean that Government is not attentive to the criticisms that Hon'ble Members of this House make. In fact, Government is anxious and we are here to make a note of all the criticisms that are made by Hon'ble Members and appreciate all constructive criticisms and reply to the destructive criticisms. Therefore Hon'ble Members will kindly appreciate the difficulty of Ministers, but it should not be mistaken that if a particular Minister is not present he is not anxious to know the viewpoints of Hon'ble Members. We make a note of all points that are raised here and we shall try to carry conviction on all matters that are raised in this House.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಯಾರೇ ಆಗಲಿ ಸೆಕ್ರೆಟೇರಿಯಟ್ಟಿನಲ್ಲಿ ಕೆಲಸಮಾಡುತ್ತಿದ್ದಾರೆಂದರೆ ಎಕ್ಸ್‌ಕ್ಯೂಜ್ ಮಾಡೋಣವೆಂದು ಹೇಳಬಹುದಾಗಿತ್ತು. ಅವರು ಸರ್ಕಾರದ ಕೆಲಸಕಾರ್ಯಗಳನ್ನು ಮಾಡದೆ ಕಾಂಗ್ರೆಸ್ ಪಕ್ಷವನ್ನು ಬಲಪಡಿಸಿಕೊಳ್ಳತಕ್ಕ ಪ್ರಚಾರ ಕಾರ್ಯಗಳಲ್ಲಿ ಭಾಗವಹಿಸಲು ಬೆಂಗಳೂರನ್ನು ಬಿಟ್ಟು ಹೊರಗಡೆ ಹೋಗಿದ್ದರೆ ಏನುಮಾಡುವುದು ! ಅವರು ಈ ಸಭೆಯ ಗೌರವ ಮತ್ತು ಘನತೆಗಳನ್ನು ಎಷ್ಟರಮಟ್ಟಿಗೆ ಎತ್ತಿಹಿಡಿಯುತ್ತಿದಾರೆ ಮತ್ತು ಸೆಕ್ರೆಟೇರಿಯಟ್ಟಿನಲ್ಲಿರತಕ್ಕ ಕೆಲಸಗಳಲ್ಲಿ ಎಷ್ಟರಮಟ್ಟಿಗೆ ಜವಾಬ್ದಾರಿಯನ್ನು ವಹಿಸಿದ್ದಾರೆ ಎಂಬುದನ್ನು ಈ ಸಭೆಯಲ್ಲಿ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳ ಗೈರುಹಾಜರಿಯೇ ಸ್ಪಷ್ಟಪಡಿಸುತ್ತದೆ. ಈ ಸಭೆಯ ಜವಾಬ್ದಾರಿಯನ್ನು ತಿಳಿದುಕೊಳ್ಳದೆ ಅಧಿವೇಶನಕಾಲದಲ್ಲಿಯೂ ಹೊರಗಡೆ ಟೂರ್ ಹೊರಡುತ್ತಿದ್ದಾರೆ. ಇದೇನು ಚೆನ್ನಾಗಿರುತ್ತದೆಯೋ ! ಈ ಸಭೆಯ ಗೌರವಕ್ಕೂ ಘನತೆಗೂ ಅವರು ಜವಾಬ್ದಾರರಲ್ಲವೆಂಬುದಾಗಿ ತಿಳಿದಿದ್ದಾರೋ ಏನೋ ನನಗೆ ತಿಳಿಯಲಿಲ್ಲ. ಅವರು ಹೊರಗಡೆ ಏನುಬೇಕಾದರೂ ಜವಾಬ್ದಾರಿಹೊತ್ತುಕೊಳ್ಳಬಹುದೇ ಹೊರತು ಈ ಸಭೆಗೆ ಬಂದಾಗ all members are equal ಎಂಬ ಭಾವನೆ ಅವರಿಗೆ ಬರಬೇಕು. ನಾವು ಮೆಜಾರಿಟಿ ಎಂದು ಅವರು ಎಂದಿಗೂ ತಿಳಿಯಬಾರದು.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ನಾನು ಈಗ ಒಂದು ಕ್ರಿಯಾಲೋಪವನ್ನು ಸೂಚಿಸಬೇಕಾಗಿದೆ. ಅದೇನೆಂದರೆ ಈಗ ತಾನೆ ಮಾತನಾಡಿದ ಮಾನ್ಯ ಸದಸ್ಯರು ಮಂತ್ರಿಗಳು ಈ ಸಭೆಯ ಘನತೆಗೌರವಗಳನ್ನು ಬಿಟ್ಟು ಹೊರಗಡೆ ಹೋಗಿ ಹಾರಾಡುತ್ತಿದ್ದಾರೆಂದು ಅವರೇನು ಹೇಳಿದರೋ ಹಾಗೆ ಮಾತನಾಡಿದುದು ಆ ಮಾನ್ಯ ಸದಸ್ಯರ ಘನತೆ ಗೌರವಗಳಿಗೂ ಕೂಡ ಸರಿಯಾದ್ದಲ್ಲ.

SRI G. N. PUTTANNA (Tumkur).—It is a terrible accusation and there is no point of order. I strongly protest against it. It is meaningless and there is no point of order.

ಉಪಾಧ್ಯಕ್ಷರು.—ಶ್ರೀ ಮೂಡಲಗಿರಿಗೌಡರು ಹೇಳಿದ ವಿಚಾರದಲ್ಲಿ ಪಾಯಿಂಟ್ ಆಫ್ ಆರ್ಡರೇನೂ ಇಲ್ಲ. ಸಭೆ ನಡೆಯುತ್ತಿರುವಾಗ ಇಲ್ಲಿ ಎಲ್ಲ ಮಂತ್ರಿಗಳೂ ಇರಬೇಕಾದುದು ಅವರ ಕರ್ತವ್ಯ. ಆದರೆ ನಾನು ಈಗ್ಗೆ ಸ್ವಲ್ಪಹೊತ್ತಿನ ಮುಂಚೆ ಈ ಸಭೆಗೆ ಬರುವ ಮುನ್ನ ಹಣಕಾಸಿನ ಸಚಿವರು ಇನ್ನು 20 ನಿಮಿಷಗಳೊಳಗಾಗಿ ಸಭೆಗೆ ಬರುತ್ತೇನೆಂಬುದಾಗಿ ಹೇಳಕಳುಹಿಸಿದ್ದರು. ಆದರೆ ಮಾನ್ಯ ಸದಸ್ಯರುಗಳೂ ಸಹ ಮಂತ್ರಿಗಳ ಹಾಜರಾತಿಯ ಬಗ್ಗೆ ಇಷ್ಟೊಂದು ಆಂಗ್ಝೈಟಿ ಇಟ್ಟುಕೊಳ್ಳಬಾರದೆಂದು ಹೇಳುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಈಗ ಪಾಯಿಂಟ್ ಆಫ್ ಆರ್ಡರ್ ಎತ್ತಿ ಆ ಮಾನ್ಯ ಸದಸ್ಯರೊಬ್ಬರು ಏನು ಹೇಳಿದರೋ ಅವರು ಆ ಮಾತುಗಳನ್ನು ಬೇರೆ ಭಾವನೆಯಿಟ್ಟುಕೊಂಡು ಮಾತನಾಡಿದ್ದಾರೆ. ನಾನು ಹೇಳಿದ್ದು ಎಲ್ಲರಿಗೂ ಘನತೆಗೌರವಗಳಿರಬೇಕೆಂದು.

ಶ್ರೀ ಎ. ಜಿ. ದೊಡ್ಡಮೇಟಿ.—ಸ್ವಾಮಿ, ಬಹಳ ಸಂತೋಷವಾಯಿತು. ನಾನು ಮುಜರಾಯಿ ಶಾಖೆಯು ಎಂದರೆ ಲೋಕೋಪಯೋಗಿ ಶಾಖೆಯ ವಿಚಾರವನ್ನು ಪ್ರಸ್ತಾಪಮಾಡಲಿದ್ದೆ. ಆದರೆ ಈ ಶಾಖೆಗೆ ಬಡ್ಜೆಟ್ಟಿನಲ್ಲಿ ಅನೇಕ ಕೆಲಸಕಾರ್ಯಗಳಿಗೆಂದು ಹಣವನ್ನೇನೋ ಅಲಾಟ್‌ಮಾಡಿರುತ್ತಾರೆ. ಆದರೆ

Asterisk indicates that the remarks or speeches have not been revised by the member concerned.

ಮುಂದೆ ವರ್ಷಕಳೆದಮೇಲೂ ಆ ಹಣ ಹಾಗೆಯೇ ಉಳಿದಿರುತ್ತದೆ. ಸ್ಟೇಟ್‌ನಿಂದಿನ ಹಣವೇನೋ ಅನೇಕ ಕಾರ್ಯಗಳಿಗೆ ದೊರೆಯುತ್ತದೆ. ಅಲಾಟೆಡ್ ಅಮೌಂಟು ಖಜಾನೆಯಲ್ಲಿರುತ್ತದೆ; ಆದರೆ ಇಲಾಖಾ ಮಂತ್ರಿಗಳವರ ಹಾಗೂ ಸರ್ಕಾರದ ಮಂಜೂರಾತಿಯಿಲ್ಲದೆ ಅಥವಾ ದೊರೆಯದೆ ಅನೇಕ ಕೆಲಸಗಳನ್ನು ಕಾರ್ಯಗತಮಾಡದೆ ಕೈಬಿಡಲಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಹೋದ ಸಲದ ಬಜೆಟ್ಟಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಒಂದು ಕೆಲಸದ ಬಗ್ಗೆ ಖರ್ಚುಮಾಡುತ್ತೇವೆಂದು ಹೇಳಿದ್ದರು, ಹಣವನ್ನೂ ಸಹ ಒದಗಿಸಿದ್ದರು. ಆದರೆ ಆ ಸ್ಟೇಟ್ ಫಂಡ್ ಕಟ್ಟೆಯನ್ನು ಮಾತ್ರ ಕಟ್ಟಿಸಲಿಲ್ಲ. ಆ ಬಗ್ಗೆ ಒಬ್ಬ ಕಂಟ್ರಾಕ್ಟರ್ ಕೂಡ ಬಂದಿದ್ದರೆಂದು ಕೇಳುತ್ತೇನೆ. ಆದರೇನು ಆ ಕೆಲಸವಿನ್ನೂ ಮಂಜೂರಾಗಿಲ್ಲ. ಕಟ್ಟಕಡೆಗೆ ಕೇಂದ್ರದಿಂದ ಆ ಬಗ್ಗೆ ಸಮ್ಮತಿ ಸಿಕ್ಕಲಿಲ್ಲ. ಆದ್ದರಿಂದ ಆ ಕೆಲಸವನ್ನು ತೆಗೆದುಕೊಳ್ಳಲಿಕ್ಕಾಗಲಿಲ್ಲ ಎಂಬುದಾಗಿ ಕೇಳುತ್ತೇನೆ. ಹೀಗೆ ತಾವು ಹಣವನ್ನು ಹಂಚಬಾರದು. ಹಣವನ್ನು ಹಂಚುವುದಕ್ಕೆ ಮುಂಚಿತವಾಗಿಯೇ ಯಾವ ಯಾವ ಕಾರ್ಯಗಳ ಬಗ್ಗೆ ನೀವು ನಿಜವಾಗಿಯೂ ಹಣವನ್ನು ಖರ್ಚುಮಾಡಬಹುದೋ ಅಂಥ ಕಾರ್ಯಗಳನ್ನು ಮಾತ್ರ ನೀವು ತಿಳಿಸಿ, ಅವುಗಳಿಗಾಗಿ ಹಣವನ್ನೊದಗಿಸುವುದು ಯೋಗ್ಯವಾಗಿ ಕಾಣುತ್ತದೆ. ಸರ್ಕಾರದವರು ಯಾವಾಗ ಒಂದಾವರ್ತಿ ಹಣವನ್ನು ತೆಗೆದಿಡುತ್ತಾರೋ ಅಂಥ ಕೆಲಸಗಳೆಲ್ಲ ಪ್ರಾರಂಭ ಆಗೇ ತೀರಬೇಕೆಂದು ಒಂದು ಸಂಕಲ್ಪದ ವ್ಯವಸ್ಥೆಯನ್ನು ಮಾಡಿಕೊಂಡು ತದನಂತರ ಆ ಬಗ್ಗೆ ಹಣವನ್ನು ಅಲಾಟ್ ಮಾಡಬೇಕು. ಹಾಗೆ ಅಲಾಟ್‌ಮಾಡುವ ಮುನ್ನವೇ ಮುಂದೆ ಆ ಹಣವನ್ನು ಖರ್ಚುಮಾಡಲು ಅಡ್ಡಿ ಆತಂಕಗಳಿವೆಯೇ ಇಲ್ಲವೇ ಎಂಬುದನ್ನೆಲ್ಲಾ ತಾವು ಆಲೋಚನೆಮಾಡಿ ನೋಡಬೇಕು. ಒಂದಾವರ್ತಿ ಅಲಾಟ್‌ಮಾಡಿದ ಹಣವನ್ನು ಆಯಾ ವರ್ಷವೇ ಖರ್ಚು ಮಾಡಲೇಬೇಕು ಎಂಬ ತತ್ತ್ವವನ್ನು ಲೋಕೋಪಯೋಗಿ ಶಾಖೆ ಗಮನಿಸಬೇಕಾದ್ದು ಅತ್ಯಗತ್ಯ. ಹಣವನ್ನು ಲ್ಯಾಪ್ಸ್ ಆಗುವುದಕ್ಕೆ ಎಂದೂ ಅವಕಾಶ ಕೊಡಬಾರದು.

ನಮ್ಮ ಆ ಧಾರವಾಡ ಜಿಲ್ಲೆಯಲ್ಲಿ ಅನೇಕ ಮುಖ್ಯರಸ್ತೆಗಳಿದ್ದರೂ ಅವುಗಳ ಅನುಕೂಲದ ಬಗ್ಗೆ ಏಕೋ ಏನೋ ಬಹಳ ಕಡಮೆ ಹಣ ಮುಟ್ಟಿರುವಂತೆ ನನಗೆ ಕಾಣುತ್ತದೆ. ಅದನ್ನು ತಾವು ಮತ್ತೊಮ್ಮೆ ಲೆಕ್ಕಮಾಡಿನೋಡಬೇಕೆಂದು ಹೇಳುತ್ತೇನೆ. ಅಲ್ಲಿನ ರಸ್ತೆಗಳಲ್ಲಿ ಅತಿ ಮುಖ್ಯವಾದ ಕಾರವಾರ-ಹುಬ್ಬಳ್ಳಿ ರಸ್ತೆಯ ಕಾಂಗಾರಿಯನ್ನು ನೋಡಿದರೆ ಆ ಕೆಲಸಕ್ಕೆ ಎಷ್ಟು ಹಣವನ್ನು ಖರ್ಚುಮಾಡಬೇಕಾಗಿತ್ತೋ ಅಷ್ಟು ಹಣವನ್ನು ಖರ್ಚುಮಾಡಿಲ್ಲವೆಂದು ಕಾಣುತ್ತದೆ. ಈ ವರ್ಷ ಆ ಕೆಲಸವನ್ನು ಕೈಗೊಂಡು ಅಲ್ಲಿಗೆ ಎಷ್ಟು ಹಣ ವೆಚ್ಚಮಾಡಬೇಕೆಂದು ಮಾಡಿದ್ದಾರೋ ಅಷ್ಟೂ ಹಣವನ್ನು ಪೂರ್ತಿಯಾಗಿ ಖರ್ಚುಮಾಡಲೇಬೇಕೆಂದು ನಾನು ಈ ಮೂಲಕ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಲ್ಲಿಯ ತನಕ ಅನೇಕ ಕಾರ್ಯಗಳ ಬಗ್ಗೆ ಕಣ್ಣಿನಲ್ಲಿ ಮಣ್ಣುಹಾಕತಕ್ಕರೀತಿ ಮಾಡಿದ್ದರೂ ಕೂಡ ಇನ್ನು ಮುಂದಕ್ಕಾದರೂ ಹಾಗೆ ಆಗಬಾರದೆಂದು ಹೇಳುತ್ತೇನೆ. ಈ ಸಾರಿ ಸರ್ಕಾರದವರು ಅನೇಕ ಮಹತ್ತ್ವದ ರೋಡ್ ಕೆಲಸಗಳನ್ನು ತೆಗೆದುಕೊಂಡಿರುತ್ತಾರೆ. ಆದರೆ ಅಷ್ಟೇ ಮಹತ್ತ್ವದ ಮಾರ್ಗಗಳೂ ಇನ್ನೂ ಕೆಲವಿವೆ. ಪಂಢಾರ್-ಬಾದಾಮಿ ಮಾರ್ಗವೂ ಕೂಡ ಒಂದು ಅತಿ ಮಹತ್ತ್ವದ ರಸ್ತೆ. ಬಜೆಟ್ಟಿನಲ್ಲಿಯೇನೋ ಇದರ ಬಗ್ಗೆ ಮೂರು ಲಕ್ಷ ರೂಪಾಯಿಗಳನ್ನು ತೋರಿಸಿದ್ದರೂ ಅಲಾಟ್‌ಮೆಂಟ್ ಬಗ್ಗೆ ಆ ಮೊಬಲಗನ್ನು ತೋರಿಸಿಲ್ಲ. ಈ ರಸ್ತೆಯ ಕೆಲಸವನ್ನೂ ಸಹ ತೆಗೆದುಕೊಳ್ಳಬೇಕೆಂದು ಈ ಮೂಲಕ ಅರಿಕೆಮಾಡಿಕೊಳ್ಳುತ್ತೇನೆ. ಆದರೆ ಪಿ.ಡಬ್ಲ್ಯು.ಡಿ ಇಲ್ಲಿಯವರೆಗೂ ಇನ್ನೂ ಬಾಲ್ಯಾವಸ್ಥೆಯಲ್ಲೇ ಇತ್ತು. ಆದರೆ ಈಗ ಇದು ಮೊದಲಿನಂತೆ ಇಲ್ಲ. ಇನ್ನುಮುಂದೆ ಇದು ಬೇಗ ಓಡಾಡಲಿಕ್ಕೆ ಪ್ರಾರಂಭಮಾಡಬಹುದು. ಈ ಇಲಾಖೆಗೆ ಇನ್ನೂ ಪ್ರಾಯಬಂದು ಇದು ಬೇಗ ಬೇಗ ಓಡಾಡುವ ಹಾಗೆ ಆಗುವಂತೆ ಮಾಡಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಇನ್ನು ಶಿಕ್ಷಣದ ವಿಷಯ. ಈಗ ಸಭೆಯಲ್ಲಿ ಶಿಕ್ಷಣ ಸಚಿವರಿಲ್ಲ. ನಾನು ಈಗಾಗಲೇ ಅವರ ಸಂಗಡ ಈ ವಿಷಯವಾಗಿ ಬಹಳ ಮಾತನಾಡಿದ್ದೇನೆ. ಶಿಕ್ಷಣ ವಿಷಯದಲ್ಲಿ ಇತ್ತೀಚೆಗೆ ಸರ್ಕಾರದವರೇ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಒಂದು ಧೋರಣೆಯನ್ನು ಗೊತ್ತುಮಾಡಿಕೊಂಡಿದ್ದಾರೆ. ನಮ್ಮ ಅಖಿಲಭಾರತ ಕಾಂಗ್ರೆಸ್ ಪಾರ್ಟಿಯು ಹೇಳುತ್ತಿರುವ ಘೋಷಣೆಯಲ್ಲೂ ಈ ವಿದ್ಯಾಸಂಪತ್ತು ಮತ್ತು ಭೂಹಿಡುವಳಿಯ ಸಂಪತ್ತು ಇವುಗಳಬಗ್ಗೆ ಒಂದು ನೀತಿಯನ್ನು ಜಾರಿಗೆ ತರಬೇಕೆಂಬ ಆಲೋಚನೆ ಇದೆಯೆಂದು ಗೊತ್ತಾಗುತ್ತದೆ. ಈ ಮಾರ್ಗದಲ್ಲಿ ಇನ್ನೂ ಕೆಲವು ಅಡ್ಡಿ ಆತಂಕಗಳಿವೆ. ನಿಜವಾಗಿಯೂ ನಮ್ಮ ಭಾರತದಲ್ಲಿ ಸಮಾಜವಾದಿ ಸಮಾಜರಚನೆಯಾಗಬೇಕಾದರೆ ಮೊದಲು ಈ ವಿದ್ಯಾಸೌಕರ್ಯದ ವ್ಯವಸ್ಥೆ ಆಗಬೇಕು. ಅದು ಆದನಂತರ ಭೂಮಿ ಕಸಿದುಕೊಳ್ಳುವುದು, ಉತ್ಪನ್ನ ಕಸಿದುಕೊಳ್ಳುವುದು ಇತ್ಯಾದಿ ಕಾರ್ಯಗಳೆಲ್ಲ ಸುಲಭವಾಗಿ ಆಗುತ್ತವೆ. ಆದ್ದರಿಂದ ಮೊದಲು ಶಿಕ್ಷಣ ಸೌಕರ್ಯ ಜನರಿಗೆ ದೊರೆಯಬೇಕು. ಯಾವ ದೇಶದಲ್ಲಿ ಯಾವ ರಾಷ್ಟ್ರದಲ್ಲಿ ಶಿಕ್ಷಣ ಮತ್ತು ವೈದ್ಯ ಸೌಕರ್ಯಗಳು ಜನರಿಗೆ ಪುಕ್ಕಟ್ಟೆಯಾಗಿ ದೊರೆಯುತ್ತವೆಯೋ ಅಂಥ ರಾಷ್ಟ್ರದಲ್ಲಿ ಈ ಕಾರ್ಯ ಸಮಾಜವಾದಿ ಸಮಾಜರಚನೆಗೆ ಮೊದಲನೆಯ ಹೆಜ್ಜೆಯಾಗಿರುತ್ತದೆಂದು ಹೇಳಬಹುದು. ದೊಡ್ಡ ಪಟ್ಟಣಗಳಲ್ಲಿರತಕ್ಕವರೂ ಶ್ರೀಮಂತರೂ ತಮ್ಮ ಮಕ್ಕಳಿಗೆ ಎಂ. ಬಿ. ಬಿ. ಎಸ್. ಮತ್ತು ಇಂಜಿನಿಯರಿಂಗ್ ವಿದ್ಯೆಗಳನ್ನು ಕಲಿಸಬಹುದು. ಪಟ್ಟಣದಲ್ಲಿರತಕ್ಕ ನಮ್ಮ ಶ್ರೀಮಾನ್ ರಾಚಯ್ಯನವರು ಮಕ್ಕಳಿಗೆ 15 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಅವರನ್ನು ಡಾಕ್ಟರುಗಳನ್ನಾಗಿಯೋ ಅಥವಾ ಇಂಜಿನಿಯರುಗಳನ್ನಾಗಿಯೋ ಮಾಡಬಹುದು. ಆದರೆ ಈಗೇನು ಅವರ ಮಕ್ಕಳಿಗೆ ಕಲಿಸುತ್ತಿದ್ದಾರೋ ಅದು ನನಗೆ ಗೊತ್ತಿಲ್ಲ. ದೇಶದಲ್ಲಿರತಕ್ಕ ಬಡವನ ಮಕ್ಕಳಿಗೆ ಈ ವಿದ್ಯಾಸೌಕರ್ಯಗಳು ಸಿಕ್ಕಬೇಕು. ಅಂದಮಾತ್ರಕ್ಕೇ ಈ ಕಾರ್ಯವನ್ನು ಒಮ್ಮೆಲೇ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ 5-10 ವರ್ಷಗಳ ಒಂದು ಪ್ಲಾನ್ ಬೇಕು. ಇದರ ಬಗ್ಗೆ ದೊಡ್ಡ ದೊಡ್ಡ ಪಟ್ಟಣದಲ್ಲಿರತಕ್ಕ 3-4-5 ಅಂತಸ್ತುಗಳಲ್ಲಿ ವಾಸಮಾಡತಕ್ಕವರ ಮೇಲೆ ಎಜುಕೇಷನ್ ಕರ ಹಾಕಬೇಕು. ಈಗ ಏನೋ ಒಂದು ಉದ್ದೇಶವನ್ನಿಟ್ಟುಕೊಂಡು ಅಧಿಕಾರಸ್ಥಾನದಲ್ಲಿರತಕ್ಕವರನ್ನು ಕರೆದು ಅವರಿಂದ ಒಂದು ಹೊರಲಾರದಂಥ ಹೂವಿನಸರವನ್ನು ಹಾಕಿಸಿಕೊಂಡು ಅವರು ಯಾವುದೋ ಒಂದು ರೀತಿಯಲ್ಲಿ, ಗಳಿಸಿದ್ದ ಹಣವನ್ನು ತಾವು ಯಾವುದೋ ಒಂದುರೀತಿಯಲ್ಲಿ ತೆಗೆದುಕೊಂಡು ಅಥವಾ ಗಳಿಸಿಕೊಂಡು ಈ ಕಾರ್ಯ

(ಶ್ರೀ ಎ. ಜೆ. ದೊಡ್ಡಮೇಟಿ)

ಗಳನ್ನು ನಡೆಸುವಂತಹದು ಬಹಳ ಹಳೆಯ ಕಾಲದ ಸಂಪ್ರದಾಯ ಅದು. ಈಗಿನ ಕಾಲಕ್ಕೆ ಅದು ಹೊಂದಾಣಿಕೆ ಆಗುವುದಿಲ್ಲ. ಆದಕಾರಣ ಈ ಎಲ್ಲಾ ಶಿಕ್ಷಣವೂ ಅದು ಪ್ರಾಥಮಿಕವೇ ಆಗಿರಲಿ, ಮಾಧ್ಯಮಿಕವೇ ಆಗಿರಲಿ ಉಚ್ಚ ಶಿಕ್ಷಣವೇ ಆಗಿರಲಿ, ಇಡಿಯ ರಾಷ್ಟ್ರದಲ್ಲೆಲ್ಲಾ ಏಕ್ಕಟಿಯಾಗಿ ಸಿಕ್ಕುವಂತೆ ಒಂದು ಯೋಜನೆಯನ್ನು ಸರ್ಕಾರದವರು ಸಿದ್ಧಗೊಳಿಸಬೇಕು. ಇದಕ್ಕಾಗಿ ಸರ್ಕಾರದವರು ಒಂದು ಕಮಿಟಿಯನ್ನು ಮಾಡಿ, ಅದಕ್ಕೆ ಶಿಕ್ಷಣ ತಜ್ಞರನ್ನು ನೇಮಿಸಿದರೆ ಅಡ್ಡಿಯಿಲ್ಲ. ಆ ರೀತಿ ತಾವು ಒಂದು ಯೋಜನೆಯನ್ನು ಮಾಡಿದರೆ ಅದು ಒಳ್ಳೆಯದೆಂದು ಕಾಣುತ್ತದೆ. ಇದು ವಿಚಾರಮಾಡಲಿಕ್ಕೆ ಸಾಧ್ಯವಿಲ್ಲ ಎಂದಲ್ಲ, ವಿಚಾರ ಮಾಡಲಿಕ್ಕೆ ನಿಶ್ಚಯವಾಗಿ ಸಾಧ್ಯವಿದೆ. ಶ್ರೀಮಂತರ ಮೇಲೆ ಶಿಕ್ಷಣಕರವನ್ನು ಹಾಕಿದರೆ ಬೇಡ ಎಂದು ಅವರು ಹೇಳಲಿಕ್ಕೆ ಸಾಧ್ಯವಿಲ್ಲ. ಹಾಗೆ ಮಾಡಿದರೆ ಹೆಚ್ಚಿನ ಅನುಕೂಲ ಆದೀತು ಎಂದು ಕಾಣುತ್ತದೆ. ಸಮಾಜವಾದಿ ಸ್ವರೂಪ ಹಿಂದೂಸ್ಥಾನದಲ್ಲಿ ಬರಬೇಕು ಎನ್ನುವಾಗ ರಷ್ಯಾ, ಚೈನಾವನ್ನು ಅನುಕರಣ ಮಾಡುತ್ತೇವೆಂದು ಯಾರೂ ಭಯಪಡಬೇಕಾಗಿಲ್ಲ. ಅಂತಹದು ಹಿಂದೂಸ್ಥಾನಕ್ಕೆ ಬರಲಿಕ್ಕೆ ಅವಕಾಶವಿಲ್ಲ. ಭಾರತದೇಶದಲ್ಲಿ ಸಮಾಜವಾದೀ ಸಮಾಜ ರಚನೆ ಹಿಂದೂಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದರೆ ಅದು ಸ್ಪಿರಿಚ್ಯುಯಲ್ ಸಮಾಜವಾದಿ ರಚನೆ ಆದೀತೆ ಹೊರತು ಮೆಟೀರಿಯಲ್ ಸಮಾಜವಾದಿ ಸಮಾಜ ರಚನೆಯಾಗುವುದಿಲ್ಲ ಎನ್ನುವುದನ್ನು ನಾನು ತಮ್ಮ ಮುಂದೆ ಇಡುತ್ತೇನೆ. ಸ್ಪಿರಿಚ್ಯುಯಲ್ ಸೋಷಲಿಜಮ್ ಆಗಬೇಕಾದುದು ಅವಶ್ಯ ಅದು ಯಾವ ರೀತಿ ಎನ್ನುವುದನ್ನು ಜಯಪ್ರಕಾಶ್ ನಾರಾಯಣ್ ಅವರು ಹೇಳಿದ್ದಾರೆ. ಅದನ್ನು ಕೇಳಿಕೊಂಡು ಅಂಥಹದು ಆಗಬೇಕಾದರೆ ಬಾಲಕ ಬಾಲಕಿಯರಿಗೆ ಅಂತಹ ಶಿಕ್ಷಣ ಕೊಡಬೇಕಾಗುತ್ತದೆ. ಇಂತಹ ದೈಹಿಕವಾದ ಮತ್ತು ಮಾನಸಿಕವಾದಂಥ ಶಿಕ್ಷಣದೊರೆಯಲು ರೆಸಿಡೆನ್ಷಿಯಲ್ ಹೈಸ್ಕೂಲುಗಳು ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಆಗಬೇಕು. ಈಗ ರಾಮಕೃಷ್ಣ ಮಿಷನ್ ಅವರು ನಡೆಸುತ್ತಿದ್ದಾರೆ. ಅದರಂತೆಯೇ ಇದನ್ನೂ ಮಾಡೋಣ. ಅಂಥ ಒಂದು ತಳಹದಿಯ ಮೇಲೆ ರೆಸಿಡೆನ್ಷಿಯಲ್ ಹೈಸ್ಕೂಲ್ಸ್ ನಮ್ಮ ರಾಜ್ಯದಲ್ಲಿ ಆಗಬೇಕು. ಏಳು ವರ್ಷಗಳ ಕೆಳಗೆ ಕರ್ಣಾಟಕ ಐತಿಹಾಸಿಕ ಸಂಶೋಧನಾ ಕೇಂದ್ರವನ್ನು ಏರ್ಪಾಡು ಮಾಡಿ ನಮ್ಮ ಇದೇ ರಾಜ್ಯಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವನ್ನು ತಯಾರುಮಾಡುವ ಯೋಜನೆಯನ್ನು ಸಿದ್ಧಗೊಳಿಸಬೇಕೆಂದು ಹಿಂದೆ ಕೇಂದ್ರ ಸರ್ಕಾರದ ಮಂತ್ರಿಗಳಾಗಿದ್ದ ಶ್ರೀ ಆರ್. ಆರ್. ದಿವಾಕರ್ ಅವರೂ ಲಿಖಿತ ಮೂಲಕ ಸರ್ಕಾರಕ್ಕೆ ಬರೆದು ಕಳುಹಿಸಿದ್ದರು. ಅದು ಏನಾಯಿತೋ ಗೊತ್ತಿಲ್ಲ. ಕಳುಹಿಸಿ ಎರಡು ವರ್ಷಗಳಾಗಿದೆ. "Ages through Karnatak" ಎನ್ನುವ ಒಂದು ಪುಸ್ತಕವನ್ನು ಪ್ರಸಿದ್ಧಮಾಡಬೇಕು ಎಂದು ಅದರಲ್ಲಿ ಬರೆದಿತ್ತು, ಈ ರೀತಿಯ ಒಂದು ವಿವರವಾದ ಯೋಜನೆ ಕಳುಹಿಸಿತ್ತು. ಅದರಲ್ಲಿ ಏನು ಇತ್ತು ಎಂಬುದು ಶಿಕ್ಷಣ ಖಾತೆಗೆ ಗೊತ್ತು.

Sri T. PARTHASARATHY (Malleswaram).—The Minister who has been giving us plenty of assurances has suddenly disappeared.

ಶ್ರೀ ಎ. ಜೆ. ದೊಡ್ಡಮೇಟಿ.—ಬೇರೆಯವರು ಇದ್ದಾರೆ; ಅವರು ಬರೆದುಕೊಳ್ಳಬಹುದು.

ಶ್ರೀ ಟಿ. ಪಾರ್ಥಸಾರಥಿ.—ಮಂತ್ರಿಗಳು ಇಲ್ಲದೆ ಇರುವುದರಿಂದ ಮನುಷ್ಯರು ಗೋಡೆಗೆ ಮಾತನಾಡಿದ ಹಾಗೆ ಆಗುತ್ತದೆ. ಶ್ರೀಮಾನ್ ದೊಡ್ಡಮೇಟಿಯವರಂತಹ ಮಹನೀಯರು ಮಾತನಾಡುವುದನ್ನು ಗೋಡೆ ಕೇಳುತ್ತದೆಯೋ ಏನೋ ಎನ್ನುವ ಹಾಗೆ ಆಗಿದೆ.

ಶ್ರೀ ಎನ್. ರಾಚಯ್ಯ (ಸಮಾಜಕಲ್ಯಾಣ ಮತ್ತು ಎಕ್ಸೈಸ್ ಶಾಖೆಗಳ ಮಂತ್ರಿಗಳು).—ನಮಗೆ ಜಾಯಿಂಟ್ ಜವಾಬ್ದಾರಿ ಇರುವುದರಿಂದ ಸಭೆಯಲ್ಲಿ ಒಬ್ಬರೇ ಮಂತ್ರಿಗಳೂ ಇದ್ದರೂ ಕೂಡ ಅವರು ಎಲ್ಲಾ ಟೀಕೆಗಳನ್ನೂ ಸಲಹೆಗಳನ್ನೂ ನೋಟುಮಾಡಿಕೊಂಡು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತಾರೆ. ಎಲ್ಲಾ ಮಂತ್ರಿಗಳೂ ಇರುವುದು ಅಗತ್ಯವಿದ್ದರೂ ಸರ್ಕಾರ ಮತ್ತು ದೇಶದ ಹಿತದೃಷ್ಟಿಯಿಂದ ಹೊರಗಡೆ ಹೋಗಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಗೋಡೆಗೆ ಮಾತನಾಡುತ್ತಾರೆ ಎಂದು ತಾವು ತಿಳಿದುಕೊಳ್ಳಬಾರದು.

ಶ್ರೀ ಎ. ಜೆ. ದೊಡ್ಡಮೇಟಿ.—ಮಂತ್ರಿಮಂಡಲದವರು ಯಾವ ಯಾವ ಮಹನೀಯರ ಬಗ್ಗೆ ಎಷ್ಟು ಆಸಕ್ತಿ ವಹಿಸಿದ್ದಾರೆ ಎಂಬುದನ್ನು ಮಂತ್ರಿಗಳು ಹೇಳುವ ಉತ್ತರಗಳ ಮೇಲೆ ನಿರ್ಣಯಮಾಡೋಣ. ಪ್ರತಿಯೊಬ್ಬ ಸದಸ್ಯರ ಬಗ್ಗೆಯೂ ಲಕ್ಷ್ಯ ಕೊಟ್ಟಿದ್ದಾರೋ ಇಲ್ಲವೋ ಎಂಬುದನ್ನು ಆಮೇಲೆ ನೋಡೋಣ. ನಿಜವಾಗಿಯೂ ನನ್ನ ಸ್ನೇಹಿತರ ಮಾತು ವಾಸ್ತವಿಕವಾದದ್ದು. ಆ ರೀತಿ ಇರುವುದು ಒಳ್ಳೆಯದಲ್ಲ. ನಮ್ಮ ರಾಜ್ಯದಲ್ಲಿ ಸಹಕಾರದ ಅಭಿವೃದ್ಧಿ ಸ್ಫೂರ್ತಿಯಿಂದ ನಡೆದಿದೆ ಎಂದು ಒಳ್ಳೆಯ ಪ್ರಚಾರ ಆಗಿದೆ. ಬಹಳ ಯಶಸ್ವಿಯಾಗಿದೆ ಒಳ್ಳೆಯರೀತಿ ನಡೆದಿದೆ ಎಂದು ಪ್ರಚಾರ ಬಹಳ ನಡೆದಂತೆ ಕಾಣುತ್ತದೆ. ನಮ್ಮ ಮಂತ್ರಿಗಳು ಮತ್ತು ಸಹಕಾರಿ ಮಂತ್ರಿಗಳು ಮತ್ತು ಸಹಕಾರಿ ಶಾಖೆಯ ಕಾರ್ಯಕರ್ತರು ಸಹಕಾರಿ ಶಾಖೆಯಲ್ಲಿ ಎಷ್ಟರಮಟ್ಟಿಗೆ ಕಾರ್ಯವನ್ನು ನಡೆಸುತ್ತಾರೋ ಅದರ ಮೇಲೆ ಸಹಕಾರ ತತ್ತ್ವದ ಯಶಸ್ಸು ಅವಲಂಬಿಸಿದೆ. ಆದಕಾರಣ ಸಹಕಾರ ಮಂತ್ರಿಗಳಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸಹಕಾರ ಸಂಘಗಳಲ್ಲಿ ಎಲ್ಲಾ ಚುನಾವಣೆಗಳು ಬ್ಯಾಲಟ್ ಸಿಸ್ಟಮ್ ಮೇಲೆ ಆಗಬೇಕು. ಕೈ ಎತ್ತಿ ಓಟುಮಾಡುವರೀತಿಯಲ್ಲಿ ಇದ್ದರೆ ಕೆಲವು ಜನಗಳಿಗೆ ತೊಂದರೆ ಆಗುವ ಸಂಭವ ಇದೆ. ತಮಗೆ ಬೇಕಾದರೆ ಅದನ್ನು ಪ್ರತ್ಯೇಕವಾಗಿ ಭೇಟಿಮಾಡಿ ಹೇಳಬಲ್ಲೆ. ಸಹಕಾರ ಸಂಘಗಳಲ್ಲಿ ಬ್ಯಾಲೆಟ್ ಪದ್ಧತಿಯಿಂದ ಚುನಾವಣೆಗಳು ನಡೆಯುವಂತೆ ಸರ್ಕಾರ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಇನ್ನೂ ಅನೇಕ ವಿಷಯಗಳನ್ನು ಹೇಳಬೇಕಾಗಿತ್ತು. ಕಾಲಾವಕಾಶ ಇಲ್ಲವಾದ್ದರಿಂದ ಇಷ್ಟಕ್ಕೇ ನಿಲ್ಲಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ಈಗಾಗಲೇ ಈ ಬಡ್ಜೆಟ್ಟಿನ ಮೇಲೆ ನಮ್ಮ ಪಾರ್ಟಿಯ ಮುಖಂಡರ ಮತ್ತು ಪಾರ್ಟಿಯ ಇತರ ಸದಸ್ಯರು ತಂತಮ್ಮ ಭಾಷಣಗಳಲ್ಲಿ ಈ ಬಡ್ಜೆಟ್ಟು ಎಷ್ಟು ಪ್ರಗತಿದಾಯಕವಾಗಿದೆ ಎನ್ನುವುದನ್ನು ಹೇಳಿದ್ದಾರೆ. ಅದನ್ನು ತಾವೇ ಅರ್ಥಮಾಡಿಕೊಳ್ಳಬೇಕು. ಸ್ವಾಮಿ ಸುಮಾರು 11 ವರ್ಷಗಳಿಂದಲೂ ಪ್ರತಿ ವರ್ಷವೂ

ನಮ್ಮ ಮುಂದೆ ಒಂದೊಂದು ಬಜೆಟ್ ಪುಸ್ತಕ ಬರುತ್ತದೆ. ಏಪ್ರಿಲ್ ತಿಂಗಳು 30ನೇ ತಾರೀಖಿನೊಳಗಾಗಿ ಓಟ್ ಮಾಡಿಕೊಳ್ಳುತ್ತಾರೆ. ಹಣ ಖರ್ಚು ಮಾಡಿ, ಸರ್ಕಾರದ ವರಮಾನ ಕಡಮೆ ಇದ್ದದ್ದನ್ನು ಹೆಚ್ಚಿಸಿದ್ದಾರೆ. ಈಗ 11 ವರ್ಷಗಳಿಂದ ಎಷ್ಟೋ ಹಣ ಖರ್ಚುಮಾಡಿರುವ ಜೊತೆಗೆ ಸಾಲ ಕೂಡ ಮಾಡಿದ್ದಾರೆ; ದಾನಕೂಡ ತೆಗೆದುಕೊಂಡಿದ್ದಾರೆ. ಇಷ್ಟೊಂದು ಮಾಡಿರುವುದರಿಂದ ಇವೊತ್ತು ಏನಾಗಿದೆ ಎಂದು ಯೋಚನೆ ಮಾಡಿದರೆ ಈಗ 11 ವರ್ಷಗಳಿಂದ ಶರಾವತಿ ಇತ್ಯಾದಿ ಪ್ರಾಜೆಕ್ಟುಗಳನ್ನು ಮಾಡಿದ್ದೇವೆ ಎಂದು ಹೇಳುತ್ತಾರೆ. ಪ್ಲಾನುಗಳು, ಸ್ಕೀಮುಗಳು ಹಾಕಿದ್ದಾರೆ ಎಂದು ಹೇಳುತ್ತಾರೆ. ಆದರೆ ಇವೊತ್ತು ಸರ್ಕಾರಕ್ಕೆ ವರಮಾನ ಹೆಚ್ಚಿದೆಯೇ ವಿನಾ ಸರ್ಕಾರಕ್ಕೆ ತೆರಿಗೆ ಕೊಡತಕ್ಕವನ ವರಮಾನ ಹೆಚ್ಚಿಸುವುದಕ್ಕೆ ಪ್ರಯತ್ನ ಪಟ್ಟಿಲ್ಲ. 11 ವರ್ಷಗಳಿಂದ ಬೇಕಾದಷ್ಟು ಬಜೆಟ್ಟನ್ನು ನಮ್ಮ ಮುಂದಿಟ್ಟು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹಿಂದೆ ಹಳೆಯ ಮೈಸೂರಿಗೆ ನಾಲ್ಕುವರೆ ಕೋಟಿ ರೂಪಾಯಿಗಳ ವರಮಾನ ವಿತ್ತು. ಹೊಸ ಮೈಸೂರು ಸೇರಿಸಿದರೆ 8-9 ಕೋಟಿ ರೂಪಾಯಿಗಳ ವರಮಾನ ಆಗುತ್ತದೆ ನಾಲ್ಕೂವರೆ ಕೋಟಿ ರೂಪಾಯಿಗಳು ನಮ್ಮ ದೇಶಕ್ಕೆ ವರಮಾನ ಇದ್ದ ದಿವಸ ನಮ್ಮ ದೇಶದ ಜನಗಳು ಸುಖವಾಗಿದ್ದರು. ಈಗ ವರಮಾನ ಜಾಸ್ತಿಯಾಗಿರುವಾಗ ಇವೊತ್ತು ಇನ್ನೂ ಸುಖವಾಗಿದ್ದಾರೆಯೇ ಎನ್ನುವುದನ್ನು ಲೆಕ್ಕಹಾಕಿ ನೋಡಬೇಕು. ಇವೊತ್ತು ಅದನ್ನು ಯೋಚನೆ ಮಾಡುವುದಾದರೆ ಜನರಿಗೆ ಏನೇನೂ ಸುಖವಿಲ್ಲ. ಅದನ್ನು ಯೋಚನೆ ಮಾಡುವ ಹಾಗಿಲ್ಲ. ಯಾವುದೇ ಬಾಬಿನಲ್ಲಿ ಖರ್ಚುಮಾಡಿ ಕಾಮನ್ ಮಾರ್ಕ್ ಮುಂದೆ ಬರಲು ಏರ್ಪಾಡು ಮಾಡಿದ್ದರೆ ತೋರಿಸಬೇಕು. ಡಿಪ್ರೆಸ್ಡ್ ಕ್ಲಾಸ್ ಉದ್ಧಾರ ಮಾಡುತ್ತೇವೆ, ಹಿಂದುಳಿದ ಪಂಗಡದವರನ್ನು ಉದ್ಧಾರ ಮಾಡುತ್ತೇವೆ, ಶರಾವತಿ ವ್ಯಾಲಿ ಬಂದಿದೆ ಎಂದು ಬಾಯಲ್ಲಿ ಹೇಳುತ್ತೀರಿ. ಗವರ್ನರ ಭಾಷಣ ಮತ್ತು ವಿರೋಧ ಪಕ್ಷದವರ ಭಾಷಣಗಳು ಇಲ್ಲ ಆಗುತ್ತಿವೆಯೇ ವಿನಾ ಯಾರಿಗೂ ಪ್ರಯೋಜನ ಮಾತ್ರ ಆಗಿಲ್ಲ. ಈಗ ಏನಾಗಿದೆ ಎಂದರೆ ನೀವು 16 ಜನ ಮಂತ್ರಿಗಳು ಮತ್ತು ಉಪಮಂತ್ರಿಗಳು ಆಗಿದ್ದೀರಿ ನಾವು 180 ಜನ ಅಸೆಂಬ್ಲಿಯ ಸದಸ್ಯರುಗಳಾಗಿದ್ದೇವೆ. ಈ ವಿಧಾನಸಭೆಯ ಭವನದಲ್ಲಿ

1.30 P.M.

ನಾವು ಕುಳಿತುಕೊಳ್ಳುವುದಕ್ಕೆ ಒಂದು ಅವಕಾಶವಾಯಿತೇ ವಿನಾ ಜನಗಳಿಗೆ ಏನೂ ಪ್ರಯೋಜನವಾಗಿಲ್ಲ. ಜನಗಳಿಗೆ ಇಂತಹದನ್ನು ಮಾಡಿದ್ದೇವೆಂದು ಬೆರಳೆತ್ತಿ ತೋರಿಸುವ ಹಾಗಿಲ್ಲ. ಜನಕ್ಕೆ ಒಂದು ವರ್ಷಕ್ಕೆ ಒಂದು ಜೊತೆ ಬಟ್ಟೆಯನ್ನು ಹಾಕಿಕೊಳ್ಳುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ. ಇದನ್ನೇನಾದರೂ ಉತ್ಪಾದಿಸಿದ್ದೀರಾ? ಕಷ್ಟದ ಫಲವಾಗಿ ಪ್ರತಿ ವರ್ಷವೂ ಎರಡು ಜೊತೆ ಬಟ್ಟೆ ಸಿಕ್ಕುತ್ತದೆಯೇ? ಎರಡು ಹೊತ್ತಿನ ಊಟವಾದರೂ ಅವನಿಗೆ ಖಾತ್ರಿಯಾಗಿ ಸಿಕ್ಕುತ್ತದೆಯೇ? ಇದೊಂದನ್ನೂ ಮಾಡಿಲ್ಲ.

ನಮ್ಮ ಮುಂದೆ ಆಯವ್ಯಯ ಪಟ್ಟಿಯನ್ನಿಟ್ಟಿದ್ದೀರಿ. ಇದರ ಪ್ರಕಾರ ಏನೇನು ಸಾಧನೆಯಾಗಿದೆ ಎಂದು ಹೇಳಬಲ್ಲಿರಿ. ನಾವು ಬೇಕಾದಷ್ಟು ಮಾತನಾಡುತ್ತಿದ್ದೇವೆ. ಅದೆಲ್ಲ ಪತ್ರಿಕೆಗಳಲ್ಲಿ ಬೇಕಾದಷ್ಟು ಬರುತ್ತದೆ. ಹದಿನಾರು ಜನ ಮಂತ್ರಿಗಳು ಹದಿನಾರು ಬಂಗಲೆಗಳಲ್ಲಿದ್ದಾರೆ. 50-60 ಕಾರುಗಳಿವೆ. ಈ achievement ಪ್ರಜಾಪ್ರಭುತ್ವದ ಹತ್ತು ವರ್ಷಗಳಲ್ಲಿ ಆಗಿದೆ ಎಂದು ಮಾತ್ರ ಹೇಳಬಲ್ಲೆ.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಇಲಾಖೆಯ ಮಂತ್ರಿಗಳು).—ಏನೂ ಆಗಿಲ್ಲವೆಂದು ಹೇಳುತ್ತೀರಾ?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅದನ್ನು ತಾವುಗಳೇ ಯೋಚಿಸಬೇಕು. ಮನುಷ್ಯನಿಗೆ ಮುಖ್ಯವಾಗಿ ಬೇಕಾದುದು ಆರೋಗ್ಯ, ಆಹಾರ, ಬಟ್ಟೆ ಮತ್ತು ವಿದ್ಯೆ ಈ ನಾಲ್ಕರಲ್ಲಿ ಯಾವುದನ್ನು ಖಾತ್ರಿಯಾಗಿ ಮಾಡಿದ್ದೀರಿ ಎಂಬುದನ್ನು ಹೇಳಿ. ಆರೋಗ್ಯದ ವಿಚಾರದಲ್ಲಿ ಏನು ಖಾತ್ರಿ ಕೊಟ್ಟಿದ್ದೀರಿ ಎಂದರೆ ಏನೂ ಇಲ್ಲ. ಆಹಾರದ ಬಗ್ಗೆ ಏನು ಖಾತ್ರಿ ಕೊಟ್ಟಿದ್ದೀರಿ? ಇವೊತ್ತು ದೇಶದಲ್ಲಿ ನಿರುದ್ಯೋಗವಿಷ್ಟಿದೆ? ಇದನ್ನು ತಪ್ಪಿಸುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ? ಕಾರ್ಯಕ್ರಮವೆಂದರೆ ಅಷ್ಟೊಂದು ಫ್ಯಾಕ್ಟರಿ ಇಷ್ಟೊಂದು ಫ್ಯಾಕ್ಟರಿ ಮಾಡಿ ಎಂದು ಹೇಳುವುದಿಲ್ಲ. ಈ ಸಮಸ್ಯೆ ಖಚಿತವಾಗಿ ತೀರ್ಮಾನವಾಗಬೇಕು; ಪರಿಹಾರವಾಗಬೇಕು. ಇಷ್ಟು ವರ್ಷಗಳಲ್ಲಿ ಯಾದರೂ ಆ ಗುರಿಯನ್ನು ಸಾಧನೆ ಮಾಡಬೇಕು. ಹಾಗೆ ಸಾಧಿಸದೆ ಇದ್ದರೆ ಪ್ರಯೋಜನವಿಲ್ಲವೆನ್ನತಕ್ಕ ನೀತಿಯನ್ನು ಹಾಕಿಕೊಂಡು ಏನೇನು ಕೆಲಸ ಮಾಡುತ್ತಿದ್ದೀರಿ? ನಿಮ್ಮ achievement ಏನು?

ಸ್ವಾಮಿ, ಖರ್ಚು ಮಾಡಬೇಕಾದ ಹಣವನ್ನು ಖರ್ಚು ಮಾಡುವುದಕ್ಕೆ ಕೂಡ ನಿಮ್ಮಿಂದ ಆಗಿಲ್ಲ. ಹೋದ ವರ್ಷದ ಬಜೆಟ್ಟಿನಲ್ಲಿ ಹಣವನ್ನು ವೋಟ್ ಮಾಡಿಸಿ ತೆಗೆದುಕೊಂಡು ಅದನ್ನು ಖರ್ಚು ಮಾಡಿಲ್ಲ. ಒಂದೊಂದು ಇಲಾಖೆಯನ್ನೇ ತೆಗೆದುಕೊಂಡರೆ ಎಷ್ಟೆಷ್ಟು ಹಣ ಯಾವ ಯಾವ ಬಾಬಿನಲ್ಲಿ ಖರ್ಚುಮಾಡಿಲ್ಲ ಏತಕ್ಕಾಗಿ ಖರ್ಚುಮಾಡಲಿಲ್ಲವೆಂದು ನೀವು ಕೊಟ್ಟಿರುವ explanation ಕೆಲವು ಕಡೆ ಸರಿಯಾಗಿದೆ ಕೆಲವು ಕಡೆ ಸರಿಯಾಗಿಲ್ಲ. ಏನೂ explanation ಕೊಡದೆ ಇರತಕ್ಕ ಕಡೆ ಅದನ್ನು ನಾವೇ ಅರ್ಥಮಾಡಿಕೊಳ್ಳಬೇಕು.

Administration of Justiceನಲ್ಲಿ ಏಳು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಲ್ಲ. ಈ ಹಣ ಏಕೆ ಖರ್ಚಾಗಲಿಲ್ಲವೆನ್ನುವುದಕ್ಕೆ ಕೊಟ್ಟಿರತಕ್ಕ explanation ಸರಿಯಾಗಿಲ್ಲವೆಂದು ತಿಳಿದುಕೊಂಡಿದ್ದೇನೆ. ಇಷ್ಟು ಹಣ ಏಕೆ ಉಳಿಯಿತೆಂದರೆ ನ್ಯಾಯ ದೊರಕಬೇಕಾದುದಕ್ಕೆ ಅಧಿಕಾರಿಗಳನ್ನು ನ್ಯಾಯಾಂಗದಲ್ಲಿ ನೇಮಕಮಾಡುವುದರಲ್ಲಿ ತಡವಾಗಿರುವುದರಿಂದ ಈ ಹಣ ಉಳಿದಿದೆ. 40 ಜನ, 50 ಜನ, 100 ಜನ ಮುನಸೀಫರುಗಳ ನೇಮಕಮಾಡುವುದನ್ನು ತಡೆಹಿಡಿಯದೆ ನೇಮಕ ಮಾಡಿದ್ದರೆ, ಹಣ ಉಳಿಯುತ್ತಿರಲಿಲ್ಲ. ಇವರನ್ನು ನೇಮಕ ಮಾಡದೆ ಇರುವುದರಿಂದ ನ್ಯಾಯಾಂಗದ ಕೆಲಸ ಸುಲಲಿತವಾಗಿ, ಜಾಗ್ರತೆಯಾಗಿ ಆಗದೆ ಕೆಲಸ ನಿಂತಿದೆ. ಇದನ್ನು ಯಾರೂ deny ಮಾಡುವ ಹಾಗಿಲ್ಲ. ಇದಕ್ಕೆ ಗಮನ ಕೊಡುವುದರಲ್ಲಿ ಕಷ್ಟವೇನಿದೆ? ಈ ನೇಮಕಗಳನ್ನು ಜಾಗ್ರತೆ ಮಾಡುವುದರಲ್ಲಿ ನಿಮಗೆ ಇದ್ದ ತೊಂದರೆಗಳೇನು ಎನ್ನುವುದನ್ನೆಲ್ಲ ತಮ್ಮ ಉತ್ತರದಲ್ಲಿ ತಿಳಿಯಬೇಕೆಂದು ನನ್ನ ಆಸೆ.

Scientific departmentಗಳಲ್ಲಿ ಕೊಟ್ಟ ಹಣವನ್ನು ಖರ್ಚು ಮಾಡಿಲ್ಲ. ವೈದ್ಯಕೀಯ ಇಲಾಖೆಯಲ್ಲಿ ಹಣ ಖರ್ಚಾಗದೆ ಇರುವುದಕ್ಕೆ ಒಂದು explanation ಕೊಟ್ಟಿದ್ದಾರೆ. ಇದು ಸಾಕಾದ ಕಾರಣವೆಂದು ನಮ್ಮ ಮಾನ್ಯ ಮಂತ್ರಿಗಳೂ ಹೇಳಲಾರರು. ಇದಕ್ಕೆ ಕೊಟ್ಟಿರುವ ಕಾರಣ ಸರಿಯಿಲ್ಲ. ವೈದ್ಯಕೀಯ ಇಲಾಖೆಯಲ್ಲಿ ಹಣವನ್ನು ಖರ್ಚುಮಾಡದೆ ಯಾರಾದರೂ ಉಳಿಸುತ್ತಾರೆಯೇ? ನಮ್ಮ ರಾಜ್ಯದ ಎಲ್ಲ ಇಲಾಖೆಗಳಿಗಿಂತಲೂ ಈ ಇಲಾಖೆಗೆ ಪ್ರಾಶಸ್ತ್ಯ ಮತ್ತು

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಪ್ರಾಮುಖ್ಯತೆಯನ್ನು ಮೊದಲು ಕೊಡಬೇಕು. ತಾವು ಮಂತ್ರಿಗಳಾಗಿ ಇಲ್ಲರಬೇಕಾಗಿದ್ದರೆ, ಆರೋಗ್ಯಭಾಗ್ಯ ಚೆನ್ನಾಗಿಲ್ಲದೆ ಇದ್ದರೆ ಮಂತ್ರಿಗಳಾಗಿ ಇರಲು ಸಾಧ್ಯ ವಿಲ್ಲ. ವಿದ್ಯಾವಂತರಾಗಬೇಕಾದರೆ ಯಾವುದಾ ದರೂ ಒಂದು ಕೆಲಸವನ್ನು ಮಾಡಬೇಕಾದರೆ, ಅಸೆಂಬ್ಲಿಯಲ್ಲಿ ಸದಸ್ಯರಾಗಿ ಕೆಲಸ ಮಾಡಬೇಕಾದರೆ ಆರೋಗ್ಯ ಸರಿಯಾಗಿರಬೇಕು. ಆರೋಗ್ಯವಿಲ್ಲದೆ ಇದ್ದರೆ ಒಂದು ಕೋಟಿ ರೂಪಾಯಿ ಇದ್ದರೂ ಕೂಡ ಏನೂ ಪ್ರಯೋಜನವಿಲ್ಲ. ಹಣವನ್ನು ನೋಡಿಕೊಂಡು ಸಾಯಬೇಕು. ಇಂಥ ಒಂದು ಇಲಾಖೆಯಲ್ಲಿ ಹಣ ವನ್ನುಳಿಸುವುದು ಎಂದರೆ ನಿಮ್ಮ ಸಮತ ದೇಶದ ಮೇಲೆ ಎಷ್ಟಿದೆ, ಜನಗಳು ಸುಖವಾಗಿರಲಿ ಎನ್ನುವ ಆಸೆ ಎಷ್ಟಿದೆ ಎಂಬುದನ್ನು ಎತ್ತಿ ತೋರಿಸುತ್ತದೆ ಎಂದು ನಾನು ನಿಮಗೆ ಹೇಳಬಲ್ಲೆ.

ರೂರಲ್ ಡೆವಲಪ್‌ಮೆಂಟಿನಲ್ಲಿ ಸಹ ಹಣವನ್ನು ಉಳಿಸಿದ್ದಾರೆ. ಈ ಬಾಬಿನಲ್ಲಿ ಯಾರಾದರೂ ಹಣವನ್ನು ಉಳಿಸುತ್ತಾರೆಯೇ! ಹಳ್ಳಿಗಾಡುಗಳು ಉದ್ಧಾರವಾಗದೆ ಹಾಳಾಗುತ್ತಿರುವಾಗ ಈ ಬಾಬಿನಲ್ಲಿ ಹಣ ಉಳಿದಿರುವು ದನ್ನು ನೋಡಿದರೆ ದೇಶಕ್ಕೆ ಇನ್ನೇನನ್ನು ಮಾಡುತ್ತೀರಿ ಎಂದು ನಾನು ಕೇಳುತ್ತೇನೆ.

Industries and Supplies ಇಲಾಖೆಯಲ್ಲಿ ಸಹ ಹಣವನ್ನುಳಿಸಿದ್ದೀರಿ. Technical education ಬಾಬಿನಲ್ಲಿ ಖರ್ಚು ಮಾಡಲಿಲ್ಲವೆಂದರೆ, ಹೇಗೆ ಈ ಮಾತನ್ನು ಹೇಳುತ್ತೀರೋ ಗೊತ್ತಾಗುವುದಿಲ್ಲ. Technical education ಇಲ್ಲದೆ ದೇಶವನ್ನು ಕಟ್ಟುವ ಕೆಲಸ ನಮ್ಮಂಥ ಸಾಧ್ಯವೇ! ದೇಶ ಮುಂದೆ ಬರಬೇಕು, ದೇಶ ಉದ್ಧಾರವಾಗಬೇಕು, ಜನರು ಬದುಕಬೇಕು, ಎನ್ನುವುದಾದರೆ ನೆರೆಹೊರೆಯ ದೇಶ ಗಳ ಜೊತೆಯಲ್ಲಿ ನಮ್ಮ ಕಾಲ ಮೇಲೆ ನಾವು ನಿಂತು ಕೊಳ್ಳಬೇಕಾಗಿದ್ದರೆ ಈ ಬಾಬಿನಲ್ಲಿ ಹಣವನ್ನು ಖರ್ಚು ಮಾಡದೆ ಉಳಿಸಿರುವುದು ಸರಿಯಿಲ್ಲ. ಇದನ್ನೆಲ್ಲ ಖರ್ಚು ಮಾಡಬೇಕಾಗಿತ್ತು. ಇದೇ ರೀತಿಯಾಗಿ Industrial devel pment ಬಾಬಿನಲ್ಲೂ ಉಳಿಸಿದ್ದಾರೆ. ಸಿವಿಲ್ ವರ್ಕ್ಸ್‌ನಲ್ಲೂ ಉಳಿಸಿದ್ದೀರಿ. ಆದರೆ ಒಂದು ಇಲಾಖೆಯಲ್ಲಿ ಮಾತ್ರ ನೀವು ಹಣವನ್ನು ಹೆಚ್ಚಾಗಿ ಖರ್ಚು ಮಾಡಿದ್ದೀರಿ. ಅದು ಒಂದೇ ನೀವು ಸಾಧಿಸಿರ ತಕ್ಕ ಸಾಧನೆ ಎಂದು ತಮಗೆ ಹೇಳಬೇಕಾಗಿದೆ. ಅದು ಎಷ್ಟು ಉತ್ತಮವಾದ ಸಾಧನೆ ಎನ್ನುವುದನ್ನು ತಮಗೆ ಮಾತ್ರ ಹೇಳುವುದಕ್ಕೆ ಸಾಧ್ಯ. ಅದು ಯಾವ ಇಲಾಖೆ ಯಲ್ಲಿ ಎಂದರೆ ಪೋಲೀಸ್ ಖಾತೆಯಲ್ಲಿ. ತಾವು ಖರ್ಚು ಮಾಡಬೇಕಾದುದಕ್ಕಿಂತಲೂ ಹೆಚ್ಚು ಹಣವನ್ನು ಖರ್ಚುಮಾಡಿ ಮುಗಿಸಿದ್ದೀರಿ.

ಶ್ರೀ ಜೆ. ಎಚ್. ಷಂಷುದ್ದೀನ್ (ಹಣಕಾಸಿನ ಶಾಖೆಯ ಉಪ ಮಂತ್ರಿಗಳು).—ಪಬ್ಲಿಕ್ ಹೆಲ್ತ್ ಶಾಖೆಗೆ ಹೆಚ್ಚಿನ ಹಣವನ್ನು ಖರ್ಚು ಮಾಡಲಾಗಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹೆಲ್ತ್ ಇಲಾಖೆಗೆ ಎಷ್ಟು ಹೆಚ್ಚಾಗಿ ಕೊಟ್ಟಿದ್ದೀರಿ ಎನ್ನುವುದನ್ನೂ ಮುಂದೆ ಹೇಳುತ್ತೇನೆ. ಹಿಂದೆ 36 ಲಕ್ಷ ರೂಪಾಯಿ ಖರ್ಚುಮಾ ಡಿರುವ ಕಡೆಗಳಲ್ಲಿ ಈಗ 96 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ. ಹೀಗೆ ಈ ದೇಶವೆಲ್ಲ ಏಕೆ ಸಾಯೀ? ಜನರನ್ನು ಉದ್ಧಾರಮಾಡುತ್ತೇವೆಂದು ಹೇಳಿ ಈರೀತಿ ಮಾಡುತ್ತಿದ್ದರೆ ಜನರನ್ನು ಉದ್ಧಾರಮಾಡಿ ದಂತಾಯಿತೇ? ಮೊದಲು ಎಲ್ಲ ಜನರನ್ನೂ ಉದ್ಧಾರ ಮಾಡುತ್ತಿದ್ದೀರಿ ಎಂದು ಹೇಳುವುದಕ್ಕೆ ನೀವು ದುಡ್ಡನ್ನು ಒದಗಿಸುತ್ತಿರುವುದೇ ಉದಾಹರಣೆಯಾಗಿದೆ. ಹೀಗೆ ಇಷ್ಟು ಹಣವನ್ನು ಕೊಟ್ಟರೆ ಈ ಇಲಾಖೆಗೆ ಸಾಕಾಗುತ್ತ ದೆಯೇ? ಇನ್ನು ಅಮಲಯೋರೇಷನ್ ಫಂಡಿನಿಂದ ಬೇರೆ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಈ ಫಂಡಿನಿಂದ ಯಾರಿಗೆ ಯಾವಾಗ ಮತ್ತು ಎಲ್ಲಿ ಕೊಟ್ಟಿದ್ದೀರಿ ಎನ್ನುವುದನ್ನು ಸ್ವಲ್ಪ ಹೇಳಿ. ಅದನ್ನಾ ದರೂ ತಿಳಿದುಕೊಳ್ಳೋಣ.

ಶ್ರೀ ಬಿ. ಎನ್. ಪುಟ್ಟಣ್ಣ.—ವೋಟನ್ನು ಕೊಟ್ಟವ ರಿಗೆ ದುಡ್ಡನ್ನು ಕೊಡುತ್ತಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಏತಕ್ಕಾಗಿ ಕೊಟ್ಟಿ ದ್ದೀರಿ! ಇನ್ನು ಪೋಲೀಸು ಖಾತೆಯಲ್ಲಿ ಮಾಡಿರುವ ಖರ್ಚು ಹೇಗಿದೆ ಎಂದರೆ 3 ಕೋಟಿ 9 ಲಕ್ಷ ರೂಪಾಯಿ ಗಳು ಇದ್ದದ್ದನ್ನು 3 ಕೋಟಿ 12 ಲಕ್ಷಕ್ಕೆಂದು ಏರಿಸಿ ಖರ್ಚು ಮಾಡಲಾಗಿದೆ. ಇಷ್ಟು ಹೆಚ್ಚಾಗಿ ಹಣವನ್ನು ಖರ್ಚುಮಾಡಿದ್ದೇವೆ ಎನ್ನುವುದನ್ನು ನೀವೇ ನೋಡಿ ಕೊಂಡು ಚೆನ್ನು ತಟ್ಟಿಕೊಳ್ಳಬೇಕು, ಅಷ್ಟೇ. ಹಿಂದೆ ಹಳೆಯ ಮೈಸೂರಿನಲ್ಲಿ ಖರ್ಚು ಮಾಡುತ್ತಿದ್ದುದು 27 ಲಕ್ಷ ರೂಪಾಯಿಗಳು ಈಗ ಇದಕ್ಕೆ ಎರಡಷ್ಟನ್ನು ಎಂದರೆ ಸುಮಾರು ಐವತ್ತನಾಲ್ಕು ಲಕ್ಷ ರೂಪಾಯಿಗಳಷ್ಟು ಖರ್ಚು ಆಯಿತು ಎಂದರೂ ಒಪ್ಪಿಕೊಳ್ಳ ಬಹುದು. ಆದರೆ ಈಗ ಇರುವ ರಾಜ್ಯಕ್ಕೂ ಹಿಂದೆ ಇದ್ದ ರಾಜ್ಯಕ್ಕೂ ಏನು ವ್ಯತ್ಯಾಸವಿದೆ? ಹಿಂದೆ ಪೋಲೀಸು ಸ್ಟೇಟು ಎಂದು ಏನು ಹೇಳುತ್ತಿದ್ದರೋ ಇವೊತ್ತಿಗೂ ಅದು ಪೋಲೀಸು ಸ್ಟೇಟನಂತಿದೆಯೇ ವಿನಾ ಇದರಲ್ಲಿ ಬೇರೆ ವ್ಯತ್ಯಾಸ ಕಾಣುತ್ತಿಲ್ಲ. ಇದನ್ನು ತಾವು ಪರಿಶೀಲಿಸಿ ಮಾಡಿ ನೋಡಬಹುದು. ನಮ್ಮ ಮುಂದಿರುವ ಬಡ್ಜೆಟ್ಟಿನಲ್ಲಿ ನೋಡಿದರೆ ಹಿಂದಿನ ವರ್ಷ ಮೂರು ಕೋಟಿ ಹನ್ನೆರಡು ಲಕ್ಷಗಳಷ್ಟನ್ನು ಖರ್ಚು ಮಾಡಿರುವಾಗ ಮುಂದಿನ ವರ್ಷಕ್ಕೆಂದು ಮೂರು ಕೋಟಿ ಇಪ್ಪತ್ತೆರಡು ಲಕ್ಷ ರೂಪಾ ಯಿಗಳನ್ನು ಇದರಲ್ಲಿ ಒದಗಿಸಿದ್ದೀರಿ. ಇದರಿಂದ ಯಾರನ್ನು ಉದ್ಧಾರ ಮಾಡಬೇಕೆಂದು ಹೀಗೆ ಮಾಡು ತ್ತಿದ್ದೀರಿ, ಸ್ವಾಮಿ? ಇಂತಹ ಒಂದು ಪೋಲೀಸು ಶಾಖೆಯ ವಿಚಾರದಲ್ಲಿ ಈ ರೀತಿ ಖರ್ಚುಮಾಡಿ ರಾಜ್ಯ ವನ್ನು ಕಟ್ಟುವುದಕ್ಕೆ ಹೋದರೆ, ಸಾಮ್ರಾಜ್ಯ ಸ್ಥಾಪನೆ ಮಾಡುವುದಕ್ಕೆ ಹೋದರೆ, ಇದರಿಂದ ದೇಶ ಉದ್ಧಾರ ವಾಗುತ್ತದೆಯೇ! ಇದು ಯಾರಿಗೆ ಬೇಕು!

*ಶ್ರೀ ಟಿ. ಮರಿಯಪ್ಪ (ಹಣಕಾಸಿನ ಶಾಖೆಯ ಮಂತ್ರಿಗಳು).—ನಿಮಗೋಸ್ಕರವಾಗಿಯೇ ಮಾಡ ಬೇಕು ಎಂದು ಮಾಡುತ್ತಿದ್ದೇವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹೌದು, ಒಪ್ಪಿ ಕೊಳ್ಳಬಹುದು. ತಾವು ಒಪ್ಪಿಕೊಳ್ಳುವಂತೆ ಈ ಪೋಲೀಸು ಶಾಖೆಯನ್ನು ಆರ್ಗನೈಜು ಮಾಡಬೇಕೆಂದು ನೂರು ಜನರನ್ನು ಈ ಕಡೆಗೆ ನೂರು ಜನರನ್ನು ಆ ಕಡೆಗೆ ಹಾಕುವುದಿಲ್ಲ. ಇನ್ನು ಈ ಶಾಖೆಯಲ್ಲಿ ಹೋಂ ಗಾರ್ಡ್ಸ್ ಎಂದು ಇರುವವರು ಏತಕ್ಕೆ ಬೇಕಾಗಿದೆ ಎಲ್ಲಿಗೆ ಬೇಕು ಮತ್ತು ಯಾರಿಗೆ ಬೇಕು ಎನ್ನುವುದನ್ನು ತಿಳಿಸಿದರೆ ಒಪ್ಪಬಹುದು. ಹೋಂ ಗಾರ್ಡ್ಸ್ ಎಂದು ಒಂದು ದೊಡ್ಡ ಖಾತೆಯನ್ನೇ ಹಾಕಿದ್ದೀರಿ. ಇವರು ಮಾಡತಕ್ಕ ಕೆಲಸ ಎಂತಹದು? ಕೆಲಸವನ್ನು ಚೆನ್ನಾಗಿ ಮಾಡುತ್ತಿದ್ದಾರೆಯೇ, ಇಲ್ಲವೇ, ಇವರ ದಕ್ಷತೆಯನ್ನು ನೋಡುವವರು ಯಾರು! ಇವರ ಮೇಲೆ ಯಾರ ಕಂಟ್ರೋಲು ಇದೆ? ಯಾರ ಅಧೀನದಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ!

ಶ್ರೀ ಬಿ. ಡಿ. ಜತ್ತಿ (ಮುಖ್ಯಮಂತ್ರಿಗಳು).—ತಮಗೂ ಗೊತ್ತಿರುವಂತೆ ಬೊಂಬಾಯಿ ಸರ್ಕಾರದ ಆಡಳಿತದಲ್ಲಿ ಈ ರೀತಿ ಹೋಂ ಗಾರ್ಡುಗಳಿದ್ದರು. ಹೊಸದಾಗಿ ಈಗ ಮಾಡಿಲ್ಲ. ಆ ಭಾಗದ ಕೆಲವು ಜಿಲ್ಲೆಗಳು ಬಂದುದ

ರಿಂದ ಈಗಲೂ ಇಲ್ಲ ಅವರನ್ನು ಇಡಲಾಗಿದೆ. ಇವರಿಗೆ ಸಂಬಳವನ್ನೇನೂ ಕೊಡುತ್ತಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸಂಬಳವನ್ನು ಕೊಡುತ್ತಿಲ್ಲ, ಹೌದು. ಆದರೆ ಅಲೋಯನ್ಸಸ್ ಎಂದು ಹಣವನ್ನು ಕೊಡುತ್ತಿದ್ದೀರಿ. ಹಿಂದೆ ಇದು ಬೊಂಬಾಯಿ ರಾಜ್ಯದಲ್ಲಿತ್ತು ಎಂದು ಈಗೇಕೆ ಈ ಶಾಖೆಗೆ ಹಣವನ್ನು ಒದಗಿಸಿದ್ದೀರಿ? ಏತಕ್ಕಾಗಿ? What is the purpose? ಇವರು ನಿಮಗೇನಾದರೂ ಸಹಾಯ ಮಾಡುತ್ತಿದ್ದಾರೆಯೇ? ಇವರನ್ನೆಲ್ಲ ಬೇಕಾದರೆ ಪೋಲೀಸು ಶಾಖೆಗೇ ಸೇರಿಸಬಹುದಾಗಿತ್ತು. ತಪ್ಪಿತಸ್ಥರನ್ನು ಶಿಕ್ಷೆಮಾಡಲಿಕ್ಕೆ ಪೋಲೀಸು ಶಾಖೆ ಇರಬೇಕು. ಹಾಗೆ ತಪ್ಪಿತಸ್ಥರನ್ನು ಬಲಹಾಕಿ, ಬೇರೆ ಎನ್ನುವುದಿಲ್ಲ. ಹಳೆಯ ಮೈಸೂರಿನಲ್ಲಿ ಒಂದು ರೀತಿ ಇತ್ತು, ದಕ್ಷಿಣ ಕರ್ನಾಟಕದಲ್ಲಿ ಒಂದು ರೀತಿ ಇತ್ತು. ಮತ್ತೊಂದು ಕಡೆಗಳಲ್ಲಿ ಹೀಗೆ ಇತ್ತು ಎಂದು ಈ ರೀತಿ ಹಣವನ್ನು ಖರ್ಚು ಏಕೆ ಮಾಡಬೇಕು? ಪೋಲೀಸಿನವರು ರಕ್ಷಣೆಗಾಗಿ ಇರಬೇಕೆಂದು ಖರ್ಚು ಮಾಡುವಾಗ ಅದಕ್ಕೆ ತಕ್ಕಂತೆ ಖರ್ಚನ್ನು ಒದಗಿಸಿ ಕೊಡಬಹುದು. ಮಾನ್ಯ ಹಣಕಾಸಿನ ಸಚಿವರು ಹೇಳಿದಂತೆ ಅಮಿಲಯೋರೇಷನ್ ಫಂಡಿನಿಂದ ಎಂದು 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಎಂದರೆ ನಿಮ್ಮ ಆತ್ಮ ಒಪ್ಪುತ್ತದೆಯೇ? ಮೂರೂವರೆ ಕೋಟಿ ಖರ್ಚು ಮಾಡುವ ಕಡೆಗೆ ಒಂದೂವರೆ ಕೋಟಿಯಷ್ಟು ಪೋಲೀಸ್ ರಾಜ್ಯದ ಆಡಳಿತಕ್ಕೆ ಎಂದರೆ ಏನು ಸ್ವಾಮಿ, ಇದು?

ಶ್ರೀ ಟಿ. ಮರಿಯಪ್ಪ.—ಇದೂ ಸಾಲದು, ಇನ್ನೂ ಹೆಚ್ಚು ಮಾಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಪೋಲೀಸು ಶಾಖೆಯಲ್ಲಿ ದಕ್ಷತೆಇಲ್ಲ ಎಂದು ಹೇಳಿದರೇ ವಿನಾ ಹೆಚ್ಚು ಜನ ಪೋಲೀಸು ಶಾಖೆಯಲ್ಲಿರಬೇಕೆಂದಲ್ಲ.

ಶ್ರೀ ಟಿ. ಮರಿಯಪ್ಪ.—ಈ ಶಾಖೆಯನ್ನು ಬಾಕಿ ಸ್ಟೇಟುಗಳೊಂದಿಗೆ ಹೋಲಿಸಿ ನೋಡಿದರೆ ಇದು ಶೇಕಡ 4.5 ಇದೆ. ಇದನ್ನು ಹೆಚ್ಚುಮಾಡಬೇಕೆಂದು ಹೇಳಿದರು. It must be increased.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಪೋಲೀಸ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳಿಗೆ ಸಂಬಳಸಾರಿಗೆಗಳನ್ನು ಹೆಚ್ಚಿಸಿರುವುದು ನ್ಯಾಯವಾಗಿದೆ ಎಂದು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಇಲಾಖೆಗೆ ಇಷ್ಟೊಂದು ಪರ್ಸನೆಲ್ಲುಗಳನ್ನು ಏಕೆ ಇಟ್ಟುಕೊಳ್ಳಬೇಕು ಎನ್ನುವುದೇ ನನ್ನ ಪ್ರಶ್ನೆ. ಇದಕ್ಕೆ ಒದಗಿಸಿರುವ ಮೂರು ಕೋಟಿಯನ್ನು ಎರಡು ಕೋಟಿಯವರೆಗೆ ಇಳಿಸಿದರೆ ಸರಿಯಾಗಿರುತ್ತದೆ. ಇಲ್ಲಿ ಜನರನ್ನು ಕಡಮೆ ಮಾಡಿದರೆ ನಿರುದ್ಯೋಗಕ್ಕೆ ಅವಕಾಶವಾಗುತ್ತದೆ ಎಂದು ಹೇಳಬಹುದು. ಅವರನ್ನು ಬೇರೆ ಕಡೆ ಇರುವ ಜಾಗಗಳಿಗೆ ನೇಮಿಸಿ ಅನುಕೂಲ ಮಾಡಬಹುದು. ಬೇಕಾದ ಹಾಗೆ ಇಂಡಸ್ಟ್ರಿಗಳನ್ನು ಪ್ರಾರಂಭಿಸಲು ಇಲ್ಲಿ ಅವಕಾಶವಿದೆ. ಯಾವುದನ್ನಾದರೂ ಸ್ಟಾರ್ಟ್ ಮಾಡಿದರೆ ತಾನೇ ಸ್ವಾಮಿ? ಈ ಹನ್ನೊಂದು ವರ್ಷಗಳಿಂದ ಇಂಡಸ್ಟ್ರಿಗಳನ್ನು ಸ್ಟಾರ್ಟ್ ಮಾಡಿ ಎಷ್ಟು ಜನಕ್ಕೆ ಅನುಕೂಲ ಮಾಡಿದ್ದೀರಿ? ಈ ರೀತಿಯಿಂದ ಒಂದು ರೆಕ್ಕವನ್ನಾದರೂ ಕೊಡಿ. ಹತ್ತು ಲಕ್ಷ ಕೊಡುವ ಕಡೆಗಳಲ್ಲಿ ಏನೋ ಒಂದು ಐದು ಲಕ್ಷ ಕೊಟ್ಟಿದ್ದಾರೆ. ಅದರಲ್ಲೂ ಈಗಾಗಲೇ ಎರಡು ಮಿಲ್ಲುಗಳು ಮುಚ್ಚಲಟ್ಟಿವೆ. ಚನ್ನಪಟ್ಟಣದಲ್ಲಿರುವ ಸ್ಪಿನ್ನಿಂಗು ಮಿಲ್ಲು ಮತ್ತು ಹುಬ್ಬಳ್ಳಿ ಕಡೆಗಿರುವ ಒಂದು ಮಿಲ್ಲನ್ನೂ ಕೂಡ ಮುಚ್ಚಲಾಗಿದೆ. ಹೀಗೆ ಇರುವ ಇಂಡಸ್ಟ್ರಿಗಳನ್ನೇ ಮುಚ್ಚುತ್ತಿದ್ದರೆ ನಿರುದ್ಯೋಗ ಹೇಗೆ ನಿವಾರಣೆಯಾಗುತ್ತದೆ? ಈ ಹಿಂದೆ ಗೋರವಾಲಾ ಸಮಿತಿಯು ಮಾಡಿರುವ ವರದಿಯಲ್ಲಿಯೂ ಕೂಡ ಈ ಪೋಲೀಸು ಶಾಖೆಯಲ್ಲಿರುವ ಜನಗಳ ಸಂಖ್ಯೆಯನ್ನು ಕಡಮೆಮಾಡಬೇಕೆಂದು ಅವರು ಸೂಚಿಸಿದ್ದಾರೆ.

ಇನ್ನು ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕೂಡ ಹೆಚ್ಚು ಖರ್ಚನ್ನು ಮಾಡಿಲ್ಲ. ಇಲ್ಲಿ ಏಕೆ ಕಡಮೆಯಾಗಿದೆ ಎನ್ನುವ ಬಗ್ಗೆ ವಿವರಗಳೂ ಇಲ್ಲ.

ಇನ್ನು ಈ ಎರಡನೆಯ ಪ್ಲಾನಿನ ವಿಚಾರವಾಗಿ ಸ್ವಲ್ಪ ಹೇಳಬೇಕಾಗಿದೆ. ನೀವು ಪ್ಲಾನನ್ನು ಮಾಡುವಾಗ ಆ ಪ್ಲಾನನ್ನು ಈ ಸಭೆಯ ಮುಂದಿಟ್ಟು ಅದರ ಬಗ್ಗೆ ಏನು ಮಾಡಬೇಕು ಮತ್ತು ಯಾವ ರೀತಿ ಮಾಡಿದರೆ ಸರಿಯಾಗಿರುತ್ತದೆ ಎನ್ನುವುದನ್ನು ಸರಿಯಾಗಿ ಕೂಲಂಕಷವಾಗಿ ವಿಚಾರ ಮಾಡಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಆದರೆ ನೀವೇ ಮೊದಲೇ ಎಲ್ಲವನ್ನೂ ಮಾಡಿಬಿಟ್ಟು ಕೊನೆಯಲ್ಲಿ ನಮ್ಮ ಮುಂದೆ ತಂದು ಇದನ್ನು ಒಪ್ಪಿಕೊಳ್ಳಿ ಎಂದು ಹೇಳಿದರೆ ಅದನ್ನು ಹೇಗೆ ತಾನೇ ಒಪ್ಪುವುದು? ನಮ್ಮ ಸಲಹೆಗಳನ್ನು ಕೊಟ್ಟರೆ ಅದರಂತೆ ಪುನಃ ಬದಲಾಯಿಸುವುದಕ್ಕೆ ಅವಕಾಶವಿರುವುದಿಲ್ಲ. ಆದುದರಿಂದ ಪ್ಲಾನನ್ನು ತಯಾರುಮಾಡುವುದಕ್ಕೆ ಮೊದಲೇ ಈ ಸಭೆಯ ಮುಂದೆ ಆ ಪ್ಲಾನನ್ನು ತಂದು ಇಲ್ಲಿ ಚರ್ಚಿಸಲು ಒಂದು ಅವಕಾಶ ಮಾಡಿಕೊಡಬೇಕು.

ಆ ಮೇಲೆ ಪ್ರೊಹಿಬಿಷನ್ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಇದರಲ್ಲಿ ನಿಮ್ಮದೊಂದು ಪಾಲಿಸಿ ಇದೆಯೆಂದು ಹೇಳಬಹುದೇ? ಎಕ್ಸೈಸ್ ಬಾಬಿನಲ್ಲಿ ಇಂದು ತಾವು ಏನು ಹಣ ನಿರೀಕ್ಷಿಸಿದ್ದೀರೋ ಅದು ಕಡಮೆಯೆಂದು ಹೇಳಬೇಕು. ಏಕೆ ಕಡಮೆ ಎಂದರೆ, ಕಾರಣ ಇಷ್ಟು; ಯಾವ ತಾಲ್ಲೂಕಿನಲ್ಲಿ ಡಿಸ್ಟ್ರಿಕ್ಟಿನಲ್ಲಿ ಪ್ರೊಹಿಬಿಷನ್ ಜಾರಿಗೆ ತರುತ್ತೀರೋ ಆ ತಾಲ್ಲೂಕಿನಲ್ಲಿ ಜುರ್ಮಾನೆಯಿಂದ ಬರತಕ್ಕ ಹಣ ಜಾಸ್ತಿಯಾಗಿ ಬರುತ್ತದೆ. ಏಕೆಂದರೆ, ಪ್ರೊಹಿಬಿಷನ್ ಜಾರಿಮಾಡಿದ ತಕ್ಷಣ ಅನೇಕ ಜನ ಏನು ಮಾಡುತ್ತಾರೆ ಎಂದರೆ, ಅನೇಕ ಜನ ಇದನ್ನು ಪದೇಪದೇ ಹೇಳಿದ್ದಾರೆ. ಹೇಳಿದ್ದನ್ನೇ ನಾನೂ ಮತ್ತೆ ಹೇಳಬೇಕಾಗಿದೆ. ಎಷ್ಟು ಸಾರಿ ಹೇಳಿದರೂ ಏನೂ ಮಾಡದಿದ್ದರೆ ಏನು ಮಾಡುವುದು? ಆದ್ದರಿಂದ ಪಾನನಿರೋಧದ ವಿಚಾರದಲ್ಲಿ ತಾವು ಏನಾದರೊಂದು ನಿರ್ಧಾರವಾದ ನೀತಿಗೆ ಬರಬೇಕೆಂದು ನಾನು ಹೇಳುತ್ತೇನೆ. ಇಲ್ಲವೇ, ಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತನ್ನಿ, ಇಲ್ಲದಿದ್ದರೆ ಇದನ್ನು scrap ಮಾಡಿಬಿಡಿ. ಅರ್ಧಮರ್ಧ ಮಾಡುವುದರಿಂದ ಜನರಿಗೆ ಮತ್ತಷ್ಟು ಕಷ್ಟ ಹೆಚ್ಚುತ್ತದೆ. ಕೆಲವರನ್ನು ಸಾಯಿಸುತ್ತೀರಿ, ಕಳ್ಳತನ ಜಾಸ್ತಿ ಮಾಡಿಸುತ್ತೀರಿ. ಕೆಲವರನ್ನು ಧನಿಕರನ್ನಾಗಿ ಮಾಡುತ್ತೀರಿ. ಕಳ್ಳಬಟ್ಟಿ ಸಾರಾಯಿ ಮಾಡಿ ಬಂಡವಾಳಗಾರರು ಮತ್ತಷ್ಟು ದೊಡ್ಡ ಮನುಷ್ಯನಾಗುತ್ತಾನೆ. ಈಗಂತೂ ಚುನಾವಣೆಗಳು ಬರಲಿವೆ. ಒಂದು ಕಾನ್ಸಿಟ್ಯೂಯನ್ಸಿಗೆ ಹೋಗಿ ನೀವೇನಾದರೂ ನಾಲ್ಕೈದು ಜನರನ್ನು ಹಿಡಿದುಕೊಂಡರೆ ಸಾಕು, ನಿಮ್ಮ ಎಲೆಕ್ಷನ್ ಕೆಲಸ ಮುಗಿಯಿತು!

ಶ್ರೀ ಟಿ. ಮರಿಯಪ್ಪ.—Financesನ್ನು improve ಮಾಡುವುದಕ್ಕೆ ಏನಾದರೂ ಸಲಹೆಗಳಿದ್ದರೆ ಕೊಡಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸಲಹೆಗಳನ್ನು ಎಷ್ಟು ಕೊಡುವುದು? ಇದನ್ನು ವಜಾಮಾಡಿಬಿಡಿ. ಬೇಕಾದಷ್ಟು ಹಣ ಸಿಕ್ಕುತ್ತದೆ. ನಿಮಗೆ ಹಣ ಹೆಚ್ಚಿಗೆ ಏಕೆ? ಕೊಟ್ಟ ಹಣವನ್ನೇ ತಾವು ಖರ್ಚುಮಾಡುತ್ತಿಲ್ಲ. ನಿಮ್ಮ ಬಡ್ಜೆಟ್ಟು ಸರ್ಪ್ಲಸ್ಸೇ ಅಥವಾ ಡಿಫಿಸಿಟ್ಟೇ ಎಂಬುದನ್ನು ಎಲ್ಲ ಲೆಕ್ಕಾಚಾರಮಾಡಿ ಸರಿಯಾಗಿ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ತಮಗೆ ಹೇಳುತ್ತಾರೆ, ನಮ್ಮ ಮಿತ್ರರು. ಆಗ ತಮಗೆ ಗೊತ್ತಾಗುತ್ತದೆ ತಮ್ಮ ಬಿಡ್ಜೆಟ್ಟು ಏನು ಎಂಬುದು.

ಶ್ರೀ ಟಿ. ಮರಿಯಪ್ಪ.—ಹಾಗೆ ಬಂದರೆ ಉತ್ತಮ. ಸುಮ್ಮನೆ delightfully vagueಆಗಿ ಹೇಳುವುದರಿಂದ ಏನೂ ಪ್ರಯೋಜನವಿಲ್ಲ, Constructive ಆಗಿ ಏನಾದರೂ ತಾವು ಹೇಳಿದರೆ ಅದನ್ನು follow up ಮಾಡಬಹುದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾನು ಹೇಳಿದ್ದರಲ್ಲಿ vague ಯಾವುದಿದೆ? ಹೇಳಿ; ನಾನು ಒಪ್ಪಿಕೊಳ್ಳುತ್ತೇನೆ. ನಿರ್ದಿಷ್ಟವಾಗಿ ಒಂದು ವಿಚಾರವನ್ನು ಹೇಳುತ್ತೇನೆ. ಪ್ರೊಹಿಬಿಷನ್ನಿನಲ್ಲಿ ಒಂದು ರೀತಿಯ ಮನಾಪಲಿ ಪದ್ಧತಿಯನ್ನು ತಾವು ಜಾರಿಗೆ ತಂದಿದ್ದೀರಿ. ಬೆಂಗಳೂರಿನಲ್ಲಿ, ಮೈಸೂರಿನಲ್ಲಿ ಬಾರ್ ಲೈಸೆನ್ಸ್‌ಗಳೆಂದು ಹೇಳಿ ಯಾವುದೋ ಕಾಲದಲ್ಲಿ 2,000-3,000 ರೂಪಾಯಿಗಳಿಗೆಂದು ಗೊತ್ತುಮಾಡಿ, ಅವರಿಗೆ ಇಂದಿಗೂ ವರ್ಷೇ ವರ್ಷೇ ಅದೇ ಮೊಬಲಗಿಗೇಕೆ ಕೊಡುತ್ತಿದ್ದೀರಿ. ಇದೇಕೆ ಅವರನ್ನೇ ಬದಲಾವಣೆ ಮಾಡಕೂಡದು? ಅವರಿಗೇ ಮನಾಪಲಿ ಕೊಡುವುದರ ಅರ್ಥವೇನು?

ಶ್ರೀ ಟಿ. ಮರಿಯಪ್ಪ.—ಪಾನ ನಿರೋಧವನ್ನು ಜಾರಿಗೆ ತಪ್ಪು ಎಂದು ನೀವೇ ಹೇಳುತ್ತಿದ್ದೀರಿ!

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅದು ಸರಿ. ತರುವುದಿದ್ದರೆ ತಪ್ಪು. ಅದಿಲ್ಲದಿದ್ದ ಮೇಲೆ, ಸರ್ಕಾರಕ್ಕೂ ಈ ಬಾರ್ ಲೈಸೆನ್ಸ್‌ದಾರರಿಗೂ ಏನು ಬಾಂಧವ್ಯ? ಅವರಿಗೇ ಮನಾಪಲಿ ಏಕೆ ಕೊಡಬೇಕು? ಯಾರು ಲೈಸೆನ್ಸ್‌ಬೇಕೆಂದು ಮುಂದೆ ಬರುತ್ತಾರೋ ಅವರಿಗೇಕೆ ಕೊಡಬಾರದು? ಒಂದು ಸಾವಿರ ರೂಪಾಯಿ ಕಡಮೆ ಫೀಜೆಂದರೆ, 4,000ರೂಪಾಯಿಗಳನ್ನು ಹಾಕಿ. ಯಾರು ಹೆಚ್ಚಿಗೆ ಕೊಡುತ್ತಾರೋ ಅವರಿಗೆ ಕೊಡಿ.

ಶ್ರೀ ಟಿ. ಮರಿಯಪ್ಪ.—ಮೊದಲು ಕಡಮೆ ಇತ್ತು; ಈಗ ಫೀಜು ಜಾಸ್ತಿಮಾಡಿದ್ದೇವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಜಾಸ್ತಿಮಾಡಿ; ಇನ್ನೂ ಬೇಕಾದರೂ ಜಾಸ್ತಿಮಾಡಿ. ನಾನು ಹೇಳುವುದು ಅದಲ್ಲ. ಒಬ್ಬರಿಗೇ ಮೊನಾಪಲಿ ಮಾಡಿ ಲೈಸೆನ್ಸ್‌ಗಳನ್ನೇಕೆ ಈಗ ಕೊಡುತ್ತಿದ್ದೀರಿ? ಈಗ ನೀವು ಒಂದು ಬಾರು ನಡೆಸುತ್ತಿದ್ದೀರಿ ಎಂದರೆ, ಅದನ್ನು ಎಂದೆಂದಿಗೂ ನೀವೇ ನಡೆಸಿಕೊಂಡಿರಬೇಕೆಂದಲ್ಲದೆ? ನೀವು ಎಂದರೆ ನೀವಲ್ಲ. ಒಬ್ಬನು ನಡೆಸುತ್ತಿರುವುದನ್ನು ತಪ್ಪಿಸಿ ಇನ್ನೊಬ್ಬನಿಗೆ ನಡೆಸುವುದಕ್ಕೆ ಕೊಡುವುದರಲ್ಲಿ ನಿಮಗಾಗುವ ತೊಂದರೆಯೇನು? ಇನ್ನೊಬ್ಬನಿಗಿರತಕ್ಕ disqualification ಏನು? ಆತನು ಹೆಚ್ಚಿಗೆ ಲಾಭ ತೆಗೆದುಕೊಳ್ಳುತ್ತಾನೆ ಎಂದರೆ ಅವನಿಗೆ ಜುಲ್ಮಾನೆ ಹಾಕಿ; ಗಲಾಟೆ ಮಾಡಿಸುತ್ತಾನೆ ಎಂದು ಪೋಲೀಸಿನವರಿಂದ ಬಿಗಿಸಿ. ಅದನ್ನು ಮಾಡುವುದನ್ನು ಬಿಟ್ಟು ಒಬ್ಬರಿಗೆ ಕೊಡುತ್ತಿರುವುವನು ಕಂಡರೆ ನಮಗೆ ನಿಮ್ಮ ಪಾಲಸಿಯಲ್ಲಿ ಸ್ವಲ್ಪ ಅನುಮಾನ ಬರುತ್ತದೆ. ನನ್ನ ಅಭಿಪ್ರಾಯದಲ್ಲಿ ನೀವು ಕೇಳಿದವರಿಗೆಲ್ಲಾ ಲೈಸೆನ್ಸ್ ಕೊಡಬೇಕು. ಬೇಕಾದಷ್ಟು ಡಿಪಾಸಿಟ್ ಕಟಿಸಿಕೊಳ್ಳಿ. ಏನು ಖಾತರಿ ಬೇಕಾದರೂ ಕೇಳಿ. ಅನ್ಯಾಯ ಮಾಡಿದರೆ ಶಿಕ್ಷೆಮಾಡಿ

ಒಬ್ಬ ಸದಸ್ಯರು.—ಈಗ ಲೈಸೆನ್ಸುಗಳ ಮಾರಾಟವೇ ಆಗುತ್ತಿದೆ.

ಶ್ರೀ ಎಚ್. ರಾಚಯ್ಯ.—ಪ್ರೊಹಿಬಿಷನ್ ಪಾಲಸಿಯ ಪ್ರಕಾರ, we are not issuing fresh licenses.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಿಮ್ಮ ನೀತಿ ಯಾವುದು? ಬಿದರೆಯಲ್ಲೇಕೆ ತೆಗೆಯುತ್ತೀರಿ, ಇಲ್ಲೇಕೆ ತೆಗೆಯುವುದಿಲ್ಲ?

ಶ್ರೀ ಟಿ. ಮರಿಯಪ್ಪ.—ಆ ಕಂಟ್ರಾಕ್ಟರುಗಳ ಮೇಲೆ ನಮಗೇನು ದ್ವೇಷವೇ? ಎಲ್ಲಾದರೂ ಒಂದು ಕಡೆ ಶುರು ಮಾಡಬೇಕು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಬಿದರೆಯಲ್ಲಿ ಮಾತ್ರ ಏಕೆ ಆ ಕಂಟ್ರಾಕ್ಟರುಗಳಿಗೆ ನಷ್ಟವಾಗಬೇಕು, ಇಲ್ಲಿನವರಿಗೇಕೆ ನಷ್ಟವಾಗಕೂಡದು. ಪ್ರೊಹಿಬಿಷನ್ ಜಾರಿಗೆ ತರುವುದರಲ್ಲಿ ಏನಾದರೊಂದು ನೀತಿಯಿರಬೇಡವೇ? ಈ ವಿಷಯವನ್ನು ನಾನು ಬಹಳ ಕಟುವಾಗಿ ಹೇಳಬಯಸುತ್ತೇನೆ. ನೀವು ಮಾಡುತ್ತಿರುವ ಮನಾಪಲಿ ನೀತಿಯಿಂದ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಸ್ಥಾಪನೆ ಯಾಗುತ್ತಿದೆಯೇ?

ಶ್ರೀ ಟಿ. ಮರಿಯಪ್ಪ.—ತಾವು ಹರಾಜು ಮಾಡಬೇಕೆಂದು ಸಲಹೆ ಮಾಡುತ್ತೀರಾ? ಆಗಲೂ ಬಂಡವಾಳಗಾರರಿಗೇ ಹೊರಟು ಹೋದರೆ!

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಒಂದು ಬಾರಿಗೆ ಇಷ್ಟು ಲೈಸೆನ್ಸ್ ಫೀ ಎಂದು ಗೊತ್ತುಮಾಡಿಬಿಡಿ. ಯಾರು ಬಂದು ಅಷ್ಟು ಕೊಡುವುದಕ್ಕೆ ಒಪ್ಪುತ್ತಾರೋ, ರೂಲ್ಸ್ ಪ್ರಕಾರ ನಡೆಸುವುದಕ್ಕೆ ಯಾರು ಒಪ್ಪಿಕೊಳ್ಳುತ್ತಾರೋ ಅವರಿಗೆ ಕೊಡಿ. ಹಣ ಒಬ್ಬನಿಗೇ ಹೋಗುವುದಕ್ಕೆ ಅವಕಾಶ ಕೊಡಬೇಡಿ. ಒಬ್ಬನ ಮನೆಗೆ ಹಣ ಹೋಗುವಂತೆ ಮಾಡುವುದರಿಂದ ನಿಮಗೆ ಆಗುವ ಪ್ರಯೋಜನವಾದರೂ ಏನು? ಬಾರದೆ ಇದ್ದರೆ ಬಿಡಿ. ಈಗ ಬಂದಿಲ್ಲವೇನು?

2 P.M.

ಶ್ರೀ ಟಿ. ಮರಿಯಪ್ಪ.—ಲೈಸೆನ್ಸ್ ಪದ್ಧತಿಯನ್ನು ಇಟ್ಟುಕೊಂಡಿರುತ್ತೇವೆ. ಸೇಲ್ಸ್‌ಟ್ಯಾಕ್ಸ್ ಹಾಕಿದ್ದೇವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸೇಲ್ಸ್‌ಟ್ಯಾಕ್ಸ್ ಹಾಕಿ. ಒಬ್ಬನಿಗೆ ಏನು ಹಾಕುತ್ತೀರೋ ಅದು ಇನ್ನೊಬ್ಬನಿಗೂ ಅಪ್ಲೈ ಆಗುತ್ತದೆ. ಆದರೆ ಮನಾಪಲಿ ಬೇಡ. ನಿಮ್ಮ ಮನಸ್ಸಿಗೇ ಇದು ಒಪ್ಪುತ್ತಾ ಇಲ್ಲ. ಸುಮ್ಮನೆ ಮಾತಿಗೋಸ್ಕರ ಮಾತನ್ನು ಹಣಕಾಸಿನ ಸಚಿವರು ಹೇಳುವುದು ಬೇಡ. ನಾನು ಹೇಳುವ ಮಾತು ನಿಮ್ಮ ಮನಸ್ಸಿಗೆ ಒಪ್ಪಿದ್ದರೂ ಸತಾಯಿಸಬೇಡಿ. ಪ್ರೊಹಿಬಿಷನ್ನನ್ನು ಪೂರ್ಣವಾಗಿ ಸ್ಕ್ರ್ಯಾಪ್ ಮಾಡಿ. ಆ ಮೇಲೆ ಬರುವ ಹಣದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಹಣ ಕೊಡಿ ಎಂದು ಹೇಳುತ್ತೇನೆ. ಪ್ರೊಹಿಬಿಷನ್ scrap ಮಾಡಿದರೆ, ಅವರಿಗೆ ಆರುಕೋಟಿ ರೂಪಾಯಿ ಹೆಚ್ಚು ಹಣ ಬೇಕೆಂದರೂ ಬರುತ್ತದೆ. ಒಂದು ಸ್ಕೀಮು ಹಾಕಿ ಈ 36ಲಕ್ಷ ರೂಪಾಯಿ ಕೊಡುವುದಕ್ಕಿಂತ ಆರುಕೋಟಿ ರೂಪಾಯಿಗಳನ್ನೇ ಕೊಡಿ ಈ ಮಧ್ಯಸ್ತಿಕೆಗಾರರಿಗೆ ಹಣಹೋಗುವುದನ್ನು ನಿಲ್ಲಿಸಿ. ಒಂದೊಂದು ಜಿಲ್ಲೆಯಲ್ಲಿ ಒಬ್ಬೊಬ್ಬ ಪೋಲೀಸು ಇನ್‌ಸ್ಪೆಕ್ಟರಿಗೆ 600ರೂಪಾಯಿ, ಡಿ. ಎಸ್. ಪಿ.ಗೆ ಇಷ್ಟು, ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗೆ ಇಷ್ಟು, ಪೋಲೀಸ್ ಸಬ್‌ಇನ್‌ಸ್ಪೆಕ್ಟರಿಗೆ ಇಷ್ಟು ಎಂದು ಪೋಲೀಸಿನವರಿಗೆ ಮಾಮೂಲು ಹೋಗುತ್ತಿದೆ. ಸ್ವಲ್ಪ ಬರೆ ಬಿದ್ದ ಮೇಲೆ ಎಕ್ಸ್‌ಸೈಸ್ ಡಿಪಾರ್ಟ್‌ಮೆಂಟಿನಲ್ಲಿ ಮಾಮೂಲು ಕಡಿಮೆಯಾಗಿದೆ ಎಂದು ಕೇಳಿದ್ದೇನೆ. ಎಲ್ಲಾ ಜಿಲ್ಲೆಗಳಲ್ಲೂ ಎಷ್ಟು ಹಣ ಲಂಚದ ರೂಪವಾಗಿ ಹೋಗುತ್ತಾ ಇದೆಯೋ ಅದನ್ನು ಸರ್ಕಾರದ ಖಜಾನೆಗೆ ತುಂಬಬೇಕು. ಮಧ್ಯಸ್ತಿಕೆಗಾರರಿಗೆ, ಪೋಲಿಸಿನವರಿಗೆ ಹಣ ಹೋಗಿ ವೇಸ್ಟ್ ಆಗುವುದಕೆ

ಬದಲು ಪ್ರೊಹಿಬಿಷನ್ನನ್ನು ಸ್ಕ್ರ್ಯಾಪ್ ಮಾಡಿ ಅದರಿಂದ ಬರತಕ್ಕಂಥದ್ದನ್ನು ಹರಿಜನೋದ್ಧಾರಕ್ಕೆ ಉಪಯೋಗಿಸಿ, ಹರಿಜನೋದ್ಧಾರ ಎಂದು ಬೂಟಾಟಿಗೆ ಹೇಳುವುದಕ್ಕೆ ಬದಲು, ಪ್ರೊಹಿಬಿಷನ್ scrap ಮಾಡಿದರೆ ಬರುವ ಹಣವನ್ನು ಅವರಿಗೇ ಪೂರ್ತಿಯಾಗಿ ಕೊಟ್ಟು, ಅವರ ಶ್ರೇಯಸ್ಸು ಆಗುವ ಹಾಗೆ ಕೆಲಸಮಾಡಿ.

ಹಣಕಾಸಿನ ಉಪಸಚಿವರು ಓಲ್ಡ್ ಮೈಸೂರಿಗೆ ಕೊಟ್ಟ ಅಮಿಲಿಯೊರೇಷನ್ ಫಂಡ್ ವಿಚಾರ ಹೇಳಿದರು. ಅದರ ಒಂದು ಚಿತ್ರಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ. ಓಲ್ಡ್ ಮೈಸೂರು ಬಜೆಟ್ಟಿನಲ್ಲಿ ಸುಮಾರು 40-60ಲಕ್ಷ ರೂಪಾಯಿ ಷೆಡ್ಯೂಲ್ಡ್ ಕ್ಯಾಸ್ಟ್ ಅಮಿಲಿಯೊರೇಷನ್ನಿಗೆ ಪ್ರೊವೈಡ್ ಮಾಡುತ್ತಾ ಇದ್ದರು. ಈಗ ಮೈಸೂರಿನ ವಿಸ್ತೀರ್ಣ, ಜನಸಂಖ್ಯೆ ಡಬಲ್ ಆಗಿವೆ. ಆದರೂ ಅವರಿಗೋಸ್ಕರ 36ಲಕ್ಷ ರೂಪಾಯಿ ಕೊಡುತ್ತಾ ಇದ್ದೀರಿ. ನೀವು 60ಲಕ್ಷ ಇದ್ದುದನ್ನು, 120ಲಕ್ಷ ರೂಪಾಯಿ ಮಾಡಿದ್ದರೆ ನ್ಯಾಯವಾಗಿರುತ್ತಿತ್ತು. ಈಗ ಮಾಡುತ್ತಿರುವ ಹಾಗೆಮಾಡಿ ಹರಿಜನೋದ್ಧಾರಕ್ಕೆ ಹೋಗಬೇಡಿ. ಅದನ್ನು ದೇವರ ಕೈಗೇ ಬಿಟ್ಟುಬಿಡಿ. ಕೈ ಹಾಕಿದರೆ ಕೆಲಸ ಆಗುವಂತೆ ಮಾಡಿ. ಏನಾದರೂ ಒಂದು ಕಾರ್ಯಕ್ಕೆ ಕೈ ಹಾಕಿದರೆ, ಅದು ಸಾಧನೆ ಆಗುವ ರೀತಿಯಲ್ಲಿ ಮಾಡಿ ಒಂದು ತಾಲ್ಲೂಕಿಗೆ 10-12ಸಾವಿರ ರೂಪಾಯಿ ಕೊಟ್ಟುಬಿಡುತ್ತೀರಿ. ಈ ಹಣವನ್ನು 20 ಮನೆಗಳಿಗೇ, 50 ಮನೆಗಳಿಗೇ ಹಂಚಿ ಕೊಡಬೇಕೆಂದು ಹೇಳುತ್ತೀರಿ. ಒಂದೊಂದು ಹಳ್ಳಿಗೆ ಏನು ಉಳಿಯುತ್ತದೆ. ಒಂದು ಸ್ಕೀಮನ್ನು ಯಶಸ್ವಿಯಾಗಿ ಮಾಡಬೇಕಾದರೆ, ಒಂದು ನೀತಿಯನ್ನು ಅನುಸರಿಸಿ ಅಲ್ಲೊಂದುಕಡೆ 10-15 ಮನೆಗಳು, ಇಲ್ಲೊಂದು ಕಡೆ 10-15 ಮನೆಗಳನ್ನು ಕೊಡುತ್ತೀರಿ. ಒಂದೊಂದು ಊರಾಗಿ ನೀವು ತೆಗೆದುಕೊಳ್ಳುವುದಿಲ್ಲ. ಹೋಬಳಿವಾರಾಗಿಯೋ, ತಾಲೂಕುವಾರಾಗಿಯೋ, ಒಂದೊಂದು ಸಾರಿ ಮನೆಗಳನ್ನು ಕಟ್ಟಿ. ಇರುವವರೆಲ್ಲಾ ಬಡವರೇ; ಬಡವರ ಮಧ್ಯದಲ್ಲಿ ಕೆಲವು ಬಡವರನ್ನು ಚುನಾಯಿಸಿ, ಪ್ರಯಾರಿಟಿಕೊಟ್ಟು, ಹಣವನ್ನು ಹಂಚಿದರೆ ಹೇಗೆ; ಇದರಿಂದ ಏನು ಸಾರ್ಥಕವಾಗುತ್ತದೆ, ಒಂದು ತಾಲೂಕಾದರೂ ಉದ್ಧಾರವಾಗುತ್ತದೆಯೇ! ಜನಗಳನ್ನು ಉದ್ಧಾರ ಮಾಡುತ್ತೇವೆಂದು ಅವರಿಗೆ ಆಶೆ ತೋರಿಸುತ್ತೀರಿ. ಏತಕ್ಕೋಸ್ಕರವೆಂದರೆ, ನನ್ನ ಸ್ನೇಹಿತರು ಹೇಳಿದ ಹಾಗೆ, ವೋಟು ಕ್ಯಾಚಿಂಗಿಗೋಸ್ಕರ. ಹೀಗೆ ಮಾಡುವುದರಿಂದ ಜನಗಳಿಗೆ ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳಿ, ಇಷ್ಟು ಹೊತ್ತು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮಾನ್ಯ ಸಭಾಪತಿಗಳೆ, 1959-60ನೆಯ ಸಾಲಿನ ಈ ಬಜೆಟ್ಟಿನ ಅಂಕಿ ಅಂಶಗಳನ್ನು ಇಟ್ಟು ಅದರಲ್ಲಿ 48⅓ ಲಕ್ಷ ಸರ್‌ಪ್ಲಸ್ ತೋರಿಸಿದ್ದಕ್ಕೋಸ್ಕರವಾಗಿ ಮಾನ್ಯ ಹಣಕಾಸಿನ ಸಚಿವರನ್ನು ಮೊದಲು ವಂದಿಸಿ, ಈ ಪ್ಲಾನಿನ ಕಾಲದ ಬಜೆಟ್ಟು ಯಾವರೀತಿಇದೆ ಎಂದು ಹೇಳಬೇಕಾಗಿದೆ. ಶ್ರೀಮಾನ್ ಮರಿಯಪ್ಪನವರು ಬಹಳ ದಕ್ಷರು; ಅವರು ಎಂತಹ ಬಜೆಟ್ಟನ್ನಾದರೂ ಕೂಡ ಬಹಳ ಚೆನ್ನಾಗಿ ಇದೆ, ಬಹಳ ಸೊಗಸಾಗಿದೆ ಎಂದು ಬಣ್ಣ ಕಟ್ಟಿ ಹೇಳುವ ದಕ್ಷರು ಎಂದು ತಿಳಿದುಕೊಂಡಿದ್ದೆ.

ಶ್ರೀ ಟಿ. ಮರಿಯಪ್ಪ.—ಆ ಗೋಜಿಗೆ ಹೋಗುವುದಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈ ಪ್ಲಾನ್ ಕಾಲದ ಬಜೆಟ್ ಹೇಗಾಗಿದೆಯೆಂದರೆ ನಮಗೆ ಬರಬೇಕಾಗಿದ್ದ ರಿಟರ್ನ್‌ಗಿಂತಲೂ, ಸಂಪದಭಿವೃದ್ಧಿಗಿಂತಲೂ ಕೂಡ, ಖರ್ಚಾಗತಕ್ಕಂಥ ಹಣ ಜಾಸ್ತಿಯಾಗಿದೆ. ಪ್ಲಾನನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಮೆಷಿನರಿಗೆ ಮತ್ತು ಎಸ್ಟಾಬ್ಲಿಷ್‌ಮೆಂಟಿಗೆ ಏನು ಖರ್ಚಾಗುತ್ತಾ ಇದೆಯೋ, ಅದರ ಕಾಲು ಭಾಗದಷ್ಟು ಉತ್ಪತ್ತಿ ಆಗುತ್ತಾ ಇಲ್ಲವಲ್ಲ ಎನ್ನತಕ್ಕಂಥ ಒಂದು ಕೊರತೆ ನಮ್ಮಗಳ ಮನಸ್ಸಿನ ಮೇಲೆ ಒಂದು ಪರಿಣಾಮವನ್ನುಂಟುಮಾಡಿದೆ. ಅದಕ್ಕೆ ಕಾರಣ ಮರಿಯಪ್ಪನವರೊಬ್ಬರೇ ಎಂದು ಹೇಳುವುದಿಲ್ಲ. ಪ್ಲಾನನ್ನು ಸೆಂಟ್ರಲ್ ಗವರ್ನಮೆಂಟಿನವರು ಹೇಳತಕ್ಕಂಥ ಮಾದರಿಯಲ್ಲಿ ಇಂಪ್ಲಿಮೆಂಟ್ ಮಾಡುತ್ತಾ ಇರುವುದರಿಂದ ಅದು ಈ ರೀತಿಯಾಗಿದೆ ಎಂದು ಹೇಳಬೇಕಾಗಿದೆ. ನಮ್ಮ ಸೋಷಿಯಲ್ ವೆಲ್‌ಫೇರ್ ಸೆಂಟರುಗಳನ್ನು ಮತ್ತು ಡೆವಲಪ್‌ಮೆಂಟ್ ಬ್ಲಾಕುಗಳನ್ನು ಡೀಪ್ ಆಗಿ ನೋಡುತ್ತಾ ಹೋದರೆ, ಆ ಕಡೆಗೆ ನಮ್ಮ ಮಂತ್ರಿಗಳು ಹೋದಾಗ ಹೂವಿನ ಹಾರಗಳನ್ನು ಹಾಕಿ, ಬೀದಿಗಳನ್ನು ಚೊಕ್ಕಟಮಾಡಿ ಬಿಟ್ಟು, ಎಷ್ಟು ಚೆನ್ನಾಗಿದೆಯೆಂದು ಅಧಿಕಾರಿಗಳು ಹೇಳಿ ಕಳುಹಿಸುತ್ತಾರೆ. ಹೊರಗಡೆಯ ವಾತಾವರಣ ಮಂತ್ರಿಗಳ ಗಮನಕ್ಕೆ ಬಾರದೆ, ಜನಗಳ ಮಧ್ಯದ ವಾತಾವರಣ ಸರಿಯಾಗಿ ತಿಳಿದುಕೊಳ್ಳದೆ, ಬಹಳ ದಕ್ಷತೆಯಿಂದ ಕೆಲಸ ನಡೆದಿದೆ ಅನ್ನುವಷ್ಟು ದೂರ ತಿಳಿದುಕೊಳ್ಳುತ್ತಿರಲಾಗಿದೆ. ಹಣ ದುರ್ವಿನಿಯೋಗ ಆಗುತ್ತಿದೆ ಎಂದು ಹೇಳುವುದಿಲ್ಲ. ಹಣ ಅಷ್ಟು ಫಲಕಾರಿಯಾಗುತ್ತಿಲ್ಲ, ಸದ್ವಿನಿಯೋಗವಾಗುತ್ತಿಲ್ಲ ಎಂದು ಹೇಳಬೇಕಾಗಿದೆ. ಶ್ರೀಮಾನ್ ಮರಿಯಪ್ಪನವರನ್ನು ಕೇಳುತ್ತೇನೆ. ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯನ್ನು ರಚಿಸುತ್ತೇವೆಂದು ಶ್ರೀಮಾನ್ ಜತ್ತಿಯವರಿಂದ ಹಿಡಿದು ಜವಹರಲಾಲ್ ನೆಹರೂರವರೆಗೂ ಹೇಳುತ್ತಿದ್ದೇವೆ.

ಈ ವಾದವನ್ನು ನಾವು ಸರಿಹೊಂದಿಸಿಕೊಂಡು ಕೆಲಸ ಮಾಡುತ್ತಿದ್ದೇವೆಯೇ; ಈ ವಾದದಲ್ಲಿ ಏನಾದರೂ ತಿರುಳು ಇದೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಸೋಷಿಯಾಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಮಾಡುತ್ತೇವೆಂದು ಹೇಳಿ, ಬರಿಯ ವ್ಯವಸಾಯಗಾರರ ಮೇಲೆ, ಆಹಾರದ ಉತ್ಪನ್ನವನ್ನು ಹೆಚ್ಚುಮಾಡಿಕೊಡುವವನಿಗೆ ಮಾತ್ರವೇ ಅನ್ವಯಿಸುವ ವಾದವನ್ನು ಹೇಳುತ್ತಿರಲಾಗಿದೆಯೇ ಹೊರತು, ಇಡಿಯ ಜನತೆಗೆ ಅನ್ವಯಿಸುತ್ತಾ ಇಲ್ಲ. 1,400, 1,800, 2,000, 3,000 ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳುವವನ ಮಗನನ್ನು ವಿದ್ಯಾಭ್ಯಾಸ ಮಾಡಿಸಲು ಏನು ಖರ್ಚು ಬೀಳುತ್ತದೆಯೋ, ಸಾಮಾನ್ಯವಾದ ದುಡಿಮೆಯನ್ನು ಮಾಡತಕ್ಕ ಮನುಷ್ಯನ ಮಗನನ್ನು ವಿದ್ಯಾಭ್ಯಾಸ ಮಾಡಿಸಲು ಅಷ್ಟೇ ಖರ್ಚು ಬೀಳುತ್ತದೆ. ಇದನ್ನು ಶ್ರೀ ಮರಿಯಪ್ಪನವರು ಒಪ್ಪಿಕೊಳ್ಳುತ್ತಾರೆಯೋ ಇಲ್ಲವೇ ಎಂದು ಕೇಳಬೇಕಾಗಿದೆ. 150 ರೂಪಾಯಿಗಳ ಆದಾಯ ಇರುವ ಅಥವಾ ಉತ್ಪತ್ತಿ ಇರುವ ವ್ಯವಸಾಯಗಾರ ತನ್ನ ಮಗನನ್ನು ಓದಿಸಬೇಕಾದರೆ, ಅವನನ್ನು ವಿದ್ಯಾವಂತನನ್ನಾಗಿ ಮಾಡಬೇಕಾದರೆ ಎಷ್ಟು ಖರ್ಚಾಗುತ್ತದೋ ಅದೇ ಸಮಾಜದಲ್ಲಿ ಎರಡು ಸಾವಿರ, ಮೂರು ಸಾವಿರ ರೂಪಾಯಿಗಳ ಉತ್ಪತ್ತಿ ಇರುವವನ ಮಗನನ್ನು ವಿದ್ಯಾಭ್ಯಾಸ ಮಾಡಿಸಬೇಕಾದರೂ ಅಷ್ಟೇ ಖರ್ಚಾಗುತ್ತದೆ. ಇಬ್ಬರಿಗೂ ಸಮಾನವಾದ ಖರ್ಚಾಗುತ್ತದೆಯೇ ಹೊರತು ಅದರಲ್ಲಿ ಏನೂ ವ್ಯತ್ಯಾಸವಿಲ್ಲ. ಸೋಷಿಯಾಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯಲ್ಲಿ ವ್ಯತ್ಯಾಸಗಳೇನೂ ಕಾಣುತ್ತಾ ಇಲ್ಲ. ಹೆಚ್ಚು ಆದಾಯ ಬರುವವನಿಗೆ ಸುಲಭವಾಗಿ ವಿದ್ಯಾ

(ಶ್ರೀ ಟಿ. ಎನ್. ಮೂಡಲಗಿರಿಗೌಡ)

ಭ್ಯಾಸ ಮಾಡತಕ್ಕ ಸೌಕರ್ಯಗಳು ಜಾಸ್ತಿ ಇರುತ್ತವೆ. ಹಳ್ಳಿಯಲ್ಲಿ ಮನೆ ಮನೆಗೂ ದೀಪವಿಲ್ಲ. ಒದಿ ಮೆರಿಟ್ ಸಂಪಾದನೆಮಾಡಿ ಸಮಾಜದಲ್ಲಿ ಬಾಳತಕ್ಕ ಧೈರ್ಯವೂ ಇಲ್ಲ. ಈ ರೀತಿ ಕಷ್ಟದಲ್ಲಿ ಸಿಕ್ಕಿ ತೊಳಲುತ್ತಾನೆ ಎನ್ನುವುದನ್ನು ಸರ್ವರೂ ಗಮನಿಸಬೇಕು. ಹೀಗೆ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಪ್ರತಿಯೊಂದು ಹೆಜ್ಜೆ ಹೆಜ್ಜೆಯಲ್ಲೂ ಕೂಡ ಪರಿಶೋಧಿಸಿಕೊಂಡು ಈ ತತ್ವತತ್ತ್ವವನ್ನು ನಾವು ದೇಶದಲ್ಲಿ ತರತಕ್ಕದ್ದು ಸರಿ. ಸೋಷಿಯಾಲಿಸ್ಟಿಕ್ ಪ್ಯಾಟ್ರನ್ ಬೇಡ ಎಂದು ಹೇಳುವುದಿಲ್ಲ, ಅಗತ್ಯವಾಗಿ ಬೇಕು. ನಮ್ಮ ದೇಶವನ್ನು, ನಮ್ಮ ಸಮಾಜವನ್ನು ಸುಧಾರಣೆ ಮಾಡಬೇಕು. ರಷ್ಯಾ, ಚೈನಾ ಮುಂತಾದ ದೇಶಗಳಲ್ಲಿರುವ ಹಾಗೆನಾವೂ ಮುಂದೆ ಬರಬೇಕು ಎಂದು ಮನಸ್ಸಿನಲ್ಲಿ ಮಾಡಿಕೊಂಡು ಸೋಷಿಯಾಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಎನ್ನುವ ವಾದವನ್ನು ಹೇಳುತ್ತಾ ಹೆಚ್ಚು ಸುಖಪಡತಕ್ಕವರು, ಹೆಚ್ಚು ಹೆಚ್ಚು ಸೌಕರ್ಯ ಪಡೆಯತಕ್ಕವರು, ಸಮಾಜದಲ್ಲಿ ಏನೇನು ಪಡೆಯುತ್ತಿದ್ದಾರೆ ಅವೆಲ್ಲವನ್ನೂ ಸಹಸ್ರಾರು ಜನ ಬಡವರ ಹೆಸರಿನಲ್ಲಿ ಪಡೆಯುತ್ತಿರಲಿ ತತ್ವಗಳನ್ನು ಹೇಳುತ್ತ ಯಾವನಿಗೆ ವಿದ್ಯಾಭ್ಯಾಸವಿಲ್ಲವೋ, ಯಾವನಿಗೆ ಸಮಾಜದಲ್ಲಿ ತಿಳವಳಿಕೆ ಇಲ್ಲವೋ, ಯಾವನಿಗೆ ನೀವು ಹೇಳಿದ ವಾದಗಳಿಗೆ ಪ್ರತ್ಯುತ್ತರ ಕೊಟ್ಟು ವಾದಗಳು ಸರಿಯಿಲ್ಲ ಎಂದು ಹೇಳುವ ಶಕ್ತಿ ಇಲ್ಲವೋ, ಅಂಥಾ ಜನತೆಯ ಮೇಲೆ ಇಂಥಾ ತತ್ತ್ವಗಳನ್ನು ಹೇಳಿ, ಅವರನ್ನು ಮೂಕನನ್ನಾಗಿಮಾಡಿ ನಿಷ್ಪ್ರಯೋಜಕರನನ್ನಾಗಿ ಮಾಡುವ ವಾದದಲ್ಲಿ ಹೊರಟಿದ್ದೇವೆ. ಇವೊತ್ತಿನ ದಿವಸ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಲು ಹೊರಟಿರುವ ಕೂಗು ದೇಶಾದ್ಯಂತ ಎದ್ದು ಕುಣಿಯುತ್ತಿದೆ. ಇಷ್ಟು ಹೇಳುತ್ತೇನೆ. ಶ್ರೀ ಮರಿಯಪ್ಪನವರು ಇವರ ಪಾಯಿಂಟ್ ಮತ್ತು ಪ್ರೊಫೆಸರು. ನಮ್ಮ ದೇಶ, ಸ್ವತಂತ್ರ ಆದಾಗ 1948ನೆಯ ಇಸ್ವಿಯಲ್ಲಿ ಶ್ರೀ ಮರಿಯಪ್ಪನವರು ಮಂತ್ರಿಮಂಡಲಕ್ಕೆ ಸೇರಿದರು. ಅವರು ಸೇರಿದಂಥಾ ಕಾಲದಲ್ಲಿ ಅವರಿಗೆ ದೇಶವನ್ನು ಅತ್ಯುತ್ತಮವಾಗಿ ಕಟ್ಟಬೇಕೆಂದು ಇದ್ದಂಥ ಒಂದು ಹುರುಪು, ಉತ್ಸಾಹ, ಕುತೂಹಲ, ಪ್ರೇಮವನ್ನು ಅಳೆಯುವುದಕ್ಕೆ ಆಗುತ್ತಿರಲಿಲ್ಲ. ಅಷ್ಟು ಪ್ರೇಮ, ಉತ್ಸಾಹ, ಕುತೂಹಲ ಅವರ ಮನಸ್ಸಿನಲ್ಲಿ ಇತ್ತು. ಕೋ-ಆಪರೇಟೀವ್ ಫಾರ್ಮಿಂಗ್ ಸೊಸೈಟಿ ಮಾಡಬೇಕು ಎಂದು ಹತ್ತಾರು ಪ್ಲಾಟ್ಸ್‌ಗಳನ್ನು ಅವರು ಸೆಲೆಕ್ಟ್ ಮಾಡಿಕೊಂಡರು. ತಮ್ಮದೇ ಆಗಿರತಕ್ಕಂಥ ಎಲ್ಲಾ ಯೋಜನೆಗಳನ್ನು ಅದಕ್ಕೆ ತುಂಬ ಎಲ್ಲಾ ಸೌಕರ್ಯ ಸೌಲಭ್ಯಗಳನ್ನು ಕೊಟ್ಟು ಜನತೆಯನ್ನು ಒಲಿಸಿಕೊಂಡು ಅವುಗಳನ್ನು ಪ್ರಾರಂಭ ಮಾಡಿದರು. ಕೋ-ಆಪರೇಟಿವ್ ಫಾರ್ಮಿಂಗ್ಸ್‌ನ್ನು ಪ್ರಾರಂಭ ಮಾಡುವಾಗ ಶ್ರೀ ಮರಿಯಪ್ಪನವರು ಹುರುಪಿನಿಂದಲೇ ಮಾಡಿದರು. ಅದನ್ನು ಕೇಳತಕ್ಕಂಥ ನೋಡತಕ್ಕಂಥವರಿಗೂ ಚೆನ್ನಾಗಿತ್ತು. ಎಷ್ಟು ಸೊಗಸಾಗಿ ಬೆಳೆಯುತ್ತದೋ ಅಷ್ಟೂ ಫಲಕಾರಿಯಾಗುತ್ತದೆ ಎನ್ನುವ ನಿರೀಕ್ಷಣೆ ಕೂಡ ಜನತೆಯಲ್ಲಿ ಇತ್ತು. ಎರಡು ವರ್ಷ ಕಳೆಯಿತು. ನಿರುತ್ಸಾಹ!! ಶ್ರೀ ಮರಿಯಪ್ಪನವರು ದೊಡ್ಡವರಿಗೆ ತಲೆಬಾಗಿ ಶರಣಾಗತರಾಗಿ ಉತ್ತರ ಕೊಡುವುದು ಬೇಡ. ನಿಜವಾಗಿ ಅದು ಫಲಕಾರಿಯಾಗಿದೆಯೇ ಎಂದು ಸ್ಪಷ್ಟವಾಗಿ ಹೇಳಬೇಕು. ನಮ್ಮ ಸುತ್ತಮುತ್ತಲೂ ಇರುವ ವಾತಾವರಣ ನಾವು ಇರತಕ್ಕಂಥ ಪರಿಸ್ಥಿತಿಯಿಂದ ಕೋ-ಆಪರೇಟಿವ್ ಫಾರ್ಮಿಂಗ್ ಎನ್ನತಕ್ಕದ್ದು ಸಾಧ್ಯವಾಗುವುದೆ? ಆಗತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆಯೆ? ಆದ್ದರಿಂದ ಚೈನಾ ದೇಶದಲ್ಲಿ ಅಥವಾ ರಷ್ಯಾ ದೇಶದಲ್ಲಿ ಯಾವುದೋ ಒಂದು ಹಿಡಿತದಿಂದ ಯಾವುದೋ ಒಂದು ಬಗುಮಾನದಿಂದ ಕೋ-ಆಪರೇಟೀವ್ ಫಾರ್ಮಿಂಗ್ ಅಲ್ಲಿ ಕಡ್ಡಾಯವಾದ ಸಾಮೂಹಿಕ ಯೂನಿಟ್ ಯಶಸ್ವಿಯಾಗಿ ಕೆಲಸ ಮಾಡಿ ಸಂಪತ್ತು ಹೆಚ್ಚಿಸಿಕೊಂಡರೆ ನಾವು ಡೆಮಾಕ್ರಾಟಿಕ್ ತತ್ತ್ವ ಮತ್ತು ಪ್ರಜಾಪ್ರಭುತ್ವ ತಳಹದಿಯ ಮೇಲೆ ಕೋ-ಆಪರೇಟೀವ್ ಫಾರ್ಮಿಂಗನ್ನು ಅಷ್ಟು ಯಶಸ್ವಿಯಾಗಿಸಾಧಿಸಲು ಸಾಧ್ಯವಿದೆಯೇ ಎನ್ನುವುದನ್ನು ನೋಡಬೇಕು ಎಂದು ಸರ್ಕಾರವನ್ನು ಪ್ರಶ್ನಿಸುತ್ತೇನೆ. ಸೋಷಿಯಾಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯ ವಾದವನ್ನು ನಮ್ಮ ಮುಂದೆ ಇಟ್ಟು ಇವೊತ್ತಿನ ದಿವಸ ಅವನಿಗೆ ಇರತಕ ಸರ್ವಸ್ವಾತಂತ್ರ್ಯವನ್ನು ಎಲ್ಲವನ್ನೂ ಕಸಿದುಕೊಂಡು ಇವೊತ್ತು ನಿನಗೆ ಯಾವುದರ ಮೇಲೂ ಹಕ್ಕು ಇಲ್ಲ, ಸ್ವಾತಂತ್ರ್ಯವಿಲ್ಲ ಎನ್ನುವ ಒಂದು ಆಟಮ್ ಹಾಕತಕ್ಕ ಪರಿಸ್ಥಿತಿಯಲ್ಲಿ ತತ್ತ್ವವನ್ನು ಹೊರಿಸುವುದಕ್ಕೆ ಹೋಗಿದ್ದೀರಿ. ಹಾಗಾದರೆ ಸಮಾಜದ ಎಲ್ಲರಿಗೂ ಎಲ್ಲ ಕ್ಷೇತ್ರಗಳಲ್ಲೂ ಕೋ-ಆಪರೇಟೀವ್ ಫಾರ್ಮಿಂಗ್ ಪದ್ಧತಿಯನ್ನು ತನ್ನಿ. ಔದ್ಯೋಗಿಕ ಕ್ಷೇತ್ರದಲ್ಲೂ ತರಬೇಕು. ಲಾಯರ್‌ಗಳು ಇದ್ದಾರೆ. ಅವರಿಗೂ ಕೋ-ಆಪರೇಟೀವ್ ಫಾರ್ಮಿಂಗ್ ಏರ್ಪಾಡು ಮಾಡಲಿ. ದೇಶದಲ್ಲಿ ಎಷ್ಟೋ ನ್ಯಾಯ ಉಳಿಯುತ್ತದೆ, ದೇಶದಲ್ಲಿ ಸಮಾಜ ಉದ್ಧಾರವಾಗುತ್ತದೆ.

ಶ್ರೀ ಎಸ್. ಶರಣಗೌಡ (ಜೇವರಗಿ).—ಈ ವಿಚಾರದ ಬಗ್ಗೆ ಪಂಡಿತ್‌ಜೀ ಬೊಂಬಾಯಿಯಲ್ಲಿ ಹೇಳಿದ್ದಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ವ್ಯಾಪಾರ ಇದೆ. ವಾಣಿಜ್ಯ ಇದೆ. ಪ್ರತಿಯೊಂದು ಕ್ಷೇತ್ರಕ್ಕೂ ಕೋ-ಆಪರೇಟೀವ್ ಪದ್ಧತಿ ಅನ್ವಯಮಾಡಿ. ಯಾವನಿಗೆ ಎದುರಿಗೆ ನಿಂತು ನೀವು ಮಾಡುವುದು ತಪ್ಪು ಸರಿಯಿಲ್ಲ, ಎಂದು ಹೇಳುವುದಕ್ಕೆ ಧೈರ್ಯ, ವಿವೇಕ ಮತ್ತು ವಿದ್ಯೆ ಇಲ್ಲವೋ ಅವನ ಮೇಲೆ ಬಲಾತ್ಕಾರವಾಗಿ ಹೇರಿ, ಹೀನಪರಿಸ್ಥಿತಿಗೆ ತರುವುದು ಬೇಡ. ಸರ್ವಥಾ ನ್ಯಾಯವಲ್ಲ, ಸಾವಧಾನವಾಗಿ ಯೋಚನೆ ಮಾಡತಕ್ಕದ್ದು ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಸಮಾಜದ ಎಲ್ಲಾ ಭಾಗಗಳಿಗೂ ಕೋ-ಆಪರೇಟಿವ್ ಫಾರ್ಮಿಂಗ್ ಮೇಲೆ ನಡೆಯತಕ್ಕ ಪದ್ಧತಿಯನ್ನು ತೆಗೆದುಕೊಂಡು ಬನ್ನಿ, ವ್ಯವಸಾಯಕ್ಕೆ ಮಾತ್ರ ತರಬೇಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವನಿಗೆ ಎಲ್ಲಾ ಸ್ವಾತಂತ್ರ್ಯವನ್ನೂ ಕಿತ್ತುಹಾಕಿ ಮತ್ತೆ ಇತರರಿಗೆ ಅನ್ವಯಿಸದೆ ಇರುವುದು ಸರಿಯಲ್ಲ ಎಂದು ಹೇಳುತ್ತೇನೆ. ದೇಶವನ್ನು ಕಟ್ಟತಕ್ಕ ಕಾಲದಲ್ಲಿ ಧೈರ್ಯ-ಸ್ಥೈರ್ಯಗಳಿಂದ ನಾವು ದೇಶವನ್ನು ಕಟ್ಟಲಿಕ್ಕೆ ಹೊರಟಿದ್ದೇವೆ; ಧಕ್ಕೆ ಬರಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮ್ಮ ಭಾಷಣದಲ್ಲಿ disposal of Government lands ವಿಚಾರವಾಗಿ ಹೇಳುತ್ತೀರಿ. ನನ್ನ ಲೆಜಿಸ್ಲೇಚರ್ ಅನುಭವದಿಂದ ದೇಶದ ಆಡಳಿತದ ಅನುಭವದಿಂದ ಹೇಳಬೇಕಾದರೆ ದೇಶದಲ್ಲಿ ಜಮೀನನ್ನು ಕೊಡಿ ಎಂದು ಕೇಳಿದರೆ ಜಮೀನನ್ನು ಹಂಚುವ ವಿಧಾನವನ್ನು ಹೊಸ ರೀತಿಯಾಗಿ ಏರ್ಪಾಟುಮಾಡುತ್ತೇವೆಂದು ಎರಡು ವರ್ಷಗಳವರೆಗೆ ಬಚ್ಚಿಟ್ಟುಕೊಂಡು ಬುಟ್ಟಿಯಿಂದ ಹಾವನ್ನು ಬಿಡುವಹಾಗೆ, ಜಮೀನು ಇರುವ ಕಡೆ ಒಂದೆರಡು ಎಕರೆಯಂತೆ ಕೊಡದೆ ಆಫೀಸರನ್ನು ಕಳುಹಿಸುತ್ತೇವೆ, ಕಮಿಷನ್ ಕಳುಹಿಸುತ್ತೇವೆ, ಅವರು ಯೋಚನೆ ಮಾಡಿ ತೀರ್ಮಾನ ಮಾಡುತ್ತಾರೆ ಎಂದು

ಹೇಳಿದರೆ, ಐದು ಹತ್ತು ವರ್ಷ ಆದರೂ ಕೂಡ ಈ ಕಾರ್ಯ ಪೂರ್ತಿ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಆ ವಿಷಯದಲ್ಲಿ ಒಂದು ಕಟ್ಟುನಿಟ್ಟಾದ ನೀತಿಯನ್ನು ಹಾಕಿ, ಆ ಅಧಿಕಾರವನ್ನು ಅಧಿಕಾರಿಗಳಿಗೆ ಬಿಟ್ಟುಬಿಡಿ.

Sri T. MARIAPPA.—Fifteen days back we have passed orders. Perhaps officers will be appointed. They will go round and find out the surplus land and immediately dispose it of ; that is my point.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಲ್ಯಾಂಡ್‌ಲೆಸ್ ಆಗಿರುವವರಿಗೆ ಫಸ್ಟ್ ಪ್ರಿಫರೆನ್ಸ್ ಕೊಡಬೇಕು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಲ್ಯಾಂಡ್‌ಲೆಸ್ ಜನರಿಗೇ ಕೊಡಬೇಕೆಂದು ನನ್ನ ಉದ್ದೇಶವು ನಹ. ಸರ್ಕಾರದ ಉದ್ದೇಶವೂ ಅದಾಗಿದೆಯೆಂದು ಈ ಯೋಚನೆಯನ್ನು ಸದುದ್ದೇಶದಿಂದ ಮಾಡಿದ್ದಾರೆ. ಗ್ರೋಮೋರ್ ಫುಡ್ ಕಾಲದಿಂದ 1942ನೆಯ ಇಸವಿಯಿಂದ ಯಾರು ಒಂದೇ ಸಮನಾಗಿ ಜಮೀನು ಹೊಡೆದುಕೊಂಡು ವ್ಯವಸಾಯ ಮಾಡುತ್ತೇವೆಂದು ಹೇಳುತಾರೋ ಅಂತಹವರು ಅನೇಕರು ತಮ್ಮ ಲ್ಯಾಂಡುಗಳನ್ನು ಡಿಸ್‌ಪೋಜ್ ಮಾಡಿಕೊಂಡು, ಇವೊತ್ತಿನ ದಿವಸ ಲ್ಯಾಂಡ್‌ಲೆಸ್ ಆಗಿಬಿಟ್ಟಿದ್ದಾರೆ. ಬೇರೆಯವರ ಹೆಸರಿನಲ್ಲಿ ಜಮೀನುಗಳನ್ನು ಮಾಡಿಕೊಂಡಿರುವವರು ಎಲ್ಲಾ ಕ್ಷೇತ್ರದಲ್ಲೂ ಇದ್ದಾರೆ. ಅವರು ಈಗ ಖದೀಮರಾಗಿಬಿಟ್ಟಿದ್ದಾರೆ. ಈಗಲೂ ಇನ್ನೂ ಅಂತಹ ಖದೀಮರಿಗೆ ಅವಕಾಶ ಸಿಕ್ಕುತ್ತಾ ಇದೆಯೇ ಹೊರತು ಯಾರು ನಿಜವಾಗಿ ಬೇರೆಯವರ ಜಮೀನನ್ನು ವರ್ಷಾನುಗಟ್ಟಲೆ ಉಳುಮೆಮಾಡಿಕೊಂಡು ಅದರಲ್ಲಿ ಹೆಚ್ಚಿನ ಆಸಕ್ತಿಯನ್ನಿಟ್ಟುಕೊಂಡು ಜಮೀನು ಸಾಗು ಮಾಡುತ್ತಿದ್ದಾರೋ ಅಂತಹವರಿಗೆ ಅವಕಾಶ ಸಿಕ್ಕಿಲ್ಲ. ಅಂತಹವರಿಗೆ ಜಮೀನು ಸಿಕ್ಕಿದರೆ ವರಪ್ರಸಾದವೆಂದು ಹೇಳುತ್ತಾರೆ. ಅದಕ್ಕಾಗಿ ಒಂದು ದಿವಸವೋ, ಎರಡು ದಿವಸಗಳೋ ಆಫೀಸರುಗಳು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಲ್ಲಿಯೇ ಇದ್ದು ರೈತರ ನಿಷಾಂಶವನ್ನು ತಿಳಿದು ಜಮೀನುಗಳನ್ನು ಜಮೀನು ಇಲ್ಲದವರಿಗೆ ಹಂಚಬೇಕು. ಜಮೀನು ಅವರಲ್ಲಿದೆಯೋ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಬೇಕು. ರಿಕಾರ್ಡ್ಸ್ ಅವರು ಇಟ್ಟುಕೊಂಡಿರಬಹುದು. ಕಣ್ಣಿಗೆ ಮೆಣಸಿನಪುಡಿ ಹಾಕುವಹಾಗೆ ಆಫೀಸರುಗಳಿಗೂ ಆಗುವುದುಂಟು ಕೆಲವು ಸಾರಿ. ಅವನ್ನೆಲ್ಲಾ ಚೆನ್ನಾಗಿ ಪರಿಶೀಲನೆ ಮಾಡಬೇಕು. ಜಮೀನು ಇಲ್ಲದೇ ಇರುವವರು ಸರ್ಕಾರದಿಂದ ಜಮೀನುಗಳನ್ನು ಪಡೆಯಬೇಕು. ಸರ್ಕಾರದಲ್ಲಿರುವ ಉಳುಮೆ ಮಾಡತಕ್ಕ ಜಮೀನುಗಳನ್ನು ಜಮೀನು ಇಲ್ಲದವರಿಗೆ ಕೂಡಲೆ ಹಂಚಬೇಕು. ನಾಳೆಯಿಂದಲೇ ಪ್ರಾರಂಭಮಾಡಿ. ಅದು ಎಷ್ಟರಮಟ್ಟಿಗೆ ಸಕ್ಸೆಸ್ ಆಗುತ್ತದೆಂಬುದನ್ನು ನೋಡಬೇಕು. ಸರ್ಕಾರದವರು ಒಂದೊಂದು ಎಕರೆಗೆ 400, 500, 1,000 ರೂಪಾಯಿಗಳವರೆಗೂ ಖರ್ಚುಮಾಡಬೇಕೆಂದಿರುವಾಗ, ಎಷ್ಟರ ಮಟ್ಟಿಗೆ ಜನಗಳಿಗೆ ಸೌಕರ್ಯವನ್ನು ಒದಗಿಸಿದ್ದೀರಿ, ಅಂತಹ ಒಂದು ಮನೋಭಾವವನ್ನು ಬೆಳೆಸಿದ್ದೀರಿ ಎಂಬುದನ್ನು ತಿಳಿಸಬೇಕು. ಉಳುಮೆ ಮಾಡತಕ್ಕ ಜಮೀನು ಒಂದು ಇಂಚು ಕೂಡ ಸರ್ಕಾರದಲ್ಲಿ ಇಲ್ಲವೇ ಇಲ್ಲವೆಂಬುದಾಗಿ ಮುಂದಿನ ಅಧಿವೇಶನದಲ್ಲಿ ಹೇಳಬೇಕು. ಲಕ್ಷಾಂತರ ಎಕರೆಗಳಷ್ಟು ಸಾಗುವಳಿ ಜಮೀನು ಇಟ್ಟುಕೊಂಡು, ಬೇರೆಯವರಲ್ಲಿರತಕ್ಕ ಜಮೀನುಗಳಿಂದಲೂ ಯಾವೊಂದು ಪ್ರಯೋಜನವಿಲ್ಲದೆ ಈಗಿರತಕ್ಕ ಆಹಾರ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸಿ ಜನರನ್ನು ಕಷ್ಟಕ್ಕೀಡಾಗತಕ್ಕ ಪರಿಸ್ಥಿತಿಗೆ ತರಬೇಡಿ ಎಂಬುದಾಗಿ ನಾನು ಸಲಹೆ ಮಾಡುತ್ತೇನೆ.

ಇನ್ನು ಗ್ರೋ ಮೋರ್ ಫುಡ್ ವಿಚಾರವಾಗಿ ಅಗ್ರಿಕಲ್ಚರಲ್ ಇಲಾಖೆಯವರು ಲಕ್ಷಾಂತರ ಹಣವನ್ನು ಖರ್ಚುಮಾಡುತ್ತಿದ್ದಾರೆ. ಒಂದಾನೊಂದು ಕಾಲದಲ್ಲಿ ವ್ಯವಸಾಯದ ಇಲಾಖೆಯನ್ನು ಮುಚ್ಚಬೇಕೆಂದು ಶ್ರೀ ಮರಿಯಪ್ಪನವರೇ ಹೇಳಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಅದು ಸರಿಯಾಗಿ ಕೆಲಸ ಮಾಡದೇ ಹೋದರೆ, ಮುಚ್ಚಬೇಕಾಗುತ್ತದೆಂದು ಹೇಳಿದ್ದೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಣಕಾಸಿನ ಮಂತ್ರಿಗಳು ಒಂದು ಚಾಟ್ ಹಿಡಿದುಕೊಂಡು ಪ್ರತಿಯೊಂದು ಜಮೀನಿನಿಂದ ಎಷ್ಟು ಪರ್ಸಂಟೇಜ್ ಉತ್ಪತ್ತಿ ಬಂತು, ಎಷ್ಟು ಪರ್ಸಂಟೇಜ್ ಖರ್ಚಾಗುತ್ತಿದೆ, ವ್ಯವಸಾಯದ ಇಲಾಖೆ ಈ ಬಗ್ಗೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬುದಾಗಿ ವಿಚಾರ ಮಾಡುವುದು ಬಹಳ ಮುಖ್ಯವಾಗಿದೆ. ಟಾಪ್ ಪ್ರಯಾರಿಟಿ ವ್ಯವಸಾಯ ಇಲಾಖೆಗೆ ಕೊಡಬೇಕು. ಆ ಇಲಾಖೆ ಎಲ್ಲಾ ಇತರ ಇಲಾಖೆಗಳಿಗಿಂತ ಕನಿಷ್ಟವೆಂದು ಭಾವಿಸಬಾರದು. ಈಗಾಗಲೇ ಈ ಇಲಾಖೆಯನ್ನು ರಿ-ಆರ್ಗನೈಜೇಷನ್ ಮಾಡಿಕೊಂಡಿದ್ದೇವೆ, ಇನ್ನೇನು ಅಭಿವೃದ್ಧಿ ಮಾಡುವುದಿದೆ ಎಂಬ ಭಾವನೆಯಿಂದ ಕೆಲಸ ಮಾಡಿದ್ದಾರೆ, ನಮ್ಮ ದೇಶವನ್ನು ಇನ್ನೆಷ್ಟರ ಮಟ್ಟಿಗೆ ಮುಂದಕ್ಕೆ ತರಬೇಕೆಂದು ಹೇಳಿದರೂ ಕೂಡ ಆಗುವುದಿಲ್ಲ. ಮಿಲಿಟರಿ ಡ್ರೈವ್ ಮಾಡಿದರೆ ಯಾವ ರೀತಿ ಪ್ರೋಗ್ರೆಸ್ ಆಗುತ್ತದೆಂಬುದನ್ನು ನೋಡಬಹುದು. ಆ ರೀತಿಯಾದಂಥ ಒಂದು ಅಚೀವ್‌ಮೆಂಟ್ ಮಾಡಿ ಕೆಲಸ ಮಾಡಬೇಕು. ಅಂತಹ ಬೈಲಾಗಳನ್ನು ಹಾಕಬೇಕು. ಈ ರೀತಿಯಾಗಿ ವ್ಯವಸಾಯದ ಇಲಾಖೆಯನ್ನು ಪುಲ್‌ಅಪ್ ಮಾಡಬೇಕು. ಮೂರು ವರ್ಷಗಳೊಳಗೇ ಅಲ್ಲಿನ ನೌಕರರನ್ನು ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ. ಇದರಿಂದಲೇ ಕರಪ್ಷನ್, ಇನ್‌ಎಫಿಷಿಯನ್ಸಿ ಆ ಇಲಾಖೆಯಲ್ಲಿ ಹೆಚ್ಚಾಗುತ್ತಿದೆ. ಆ ಮೂರು ವರ್ಷಗಳೊಳಗೆ ನೌಕರರ ಸ್ಥಿತಿ ಯಾವ ರೀತಿ ಬದಲಾಯಿಸುತ್ತದೆಂಬುದನ್ನು ವಿಚಾರ ಮಾಡಬೇಕು.

ಶ್ರೀ ಟಿ. ಮರಿಯಪ್ಪ.—ಆರ್ಡರ್‌ನಲ್ಲಿ ಮೂರು ವರ್ಷಗಳೊಳಗೆ ಯಾರನ್ನೂ ಬದಲಾವಣೆ ಮಾಡುವುದಿಲ್ಲವೆಂದು ಇದೆ. ಮೂರು ವರ್ಷಗಳಾದ ಅನಂತರ ಒಂದು ತಿಂಗಳೂ ಇಟ್ಟುಕೊಳ್ಳಕೂಡದು ಎಂದೂ ಹೇಳಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಿಂದೆ ಏನಾದರೂ ಇನ್‌ಎಫಿಷಿಯನ್ಸಿ ಯಾವ ಇಲಾಖೆಯಲ್ಲಿಯಾದರೂ ಕಂಡುಬಂದರೆ, ಬ್ಯೂರಾಕ್ರಾಟಿಕ್ ಗೌರ್ನ್‌ಮೆಂಟ್ ಇದ್ದ ಕಾಲದಲ್ಲಿ ಅನೇಕರು ಗಡ ಗಡ ಎಂದು ನಡುಗುತ್ತಿದ್ದರು. ಈಗ ಪ್ರಜಾಪ್ರಭುತ್ವ ಸರ್ಕಾರ ಬಂದಮೇಲೆ ಅವೆಲ್ಲವೂ ಮಾಯವಾಗಿಹೋಗಿವೆ. ಆಫೀಸಿನಲ್ಲಿ ಇನ್‌ಎಫಿಷಿಯನ್ಸಿ ಕಂಡುಬಂದ ತಕ್ಷಣ, ಅದು ಯಾರಿಂದ ಉಂಟಾಯಿತು ಎಂಬುದನ್ನು ತಿಳಿದು ಅದಕ್ಕೆ ತಕ್ಕ ಶಿಕ್ಷೆ ಕೊಡಿ. ಇಂಕ್ರಿಮೆಂಟ್ ಮತ್ತೊಂದೋ ಮಗದೊಂದೋ ಅವನಿಗೆ ಕೊಡದೆ ಇರುವ ಹಾಗೆ ಏನಾದರೂ ಒಂದು ಪನಿಷ್‌ಮೆಂಟ್ ಕೊಡದೇ ಹೋದರೆ, ಎಫಿಷಿಯನ್ಸಿ ಎಲ್ಲಿಂದ ಬರುತ್ತದೆ ! ದೇಶವನ್ನು ಕಟ್ಟುವುದಕ್ಕಾಗುವುದಿಲ್ಲ. ನಾನು ಎಫಿಷಿಯೆಂಟ್ ಇದ್ದೇನೆಂದು ಆತನು ಪ್ರೂವ್ ಮಾಡಿಕೊಂಡರೆ ಮಾತ್ರ ಆತನಿಗೆ ಪ್ರೋತ್ಸಾಹ,

(ಶ್ರೀ ಟಿ. ಎಸ್. ಮೂಡಲಗಿರಿಗೌಡ)

ಪ್ರಮೋಷನ್ ಇರಬೇಕು. ಆ ರೀತಿ ಏರ್ಪಾಡುಗಳನ್ನು ಮಾಡಬೇಕು. ಈ ವಿಷಯದಲ್ಲಿ ಹಣಕಾಸಿನ ಸಚಿವರು ತಲೆ ಕೆಡಿಸಿಕೊಂಡಿದ್ದಾರೆಯೋ ಹೊರತು ಅವರಿಗೆ ಆರೋಗ್ಯಕೆಟ್ಟಿಲ್ಲ. ಕಾನ್ಸ್ಟಿಟ್ಯೂಷನ್ನಿನಲ್ಲಿ ಇದಕ್ಕೆಲ್ಲಾ ತಕ್ಕ ಗಮನ ಕೊಡದೇ ಹೋದರೆ ಡೆಮಾಕ್ರಸಿ ಹೋಗಿಬಿಡುತ್ತದೆ. ಆದ್ದರಿಂದ ಇಂಥಾದ್ದನ್ನೆಲ್ಲಾ ಆಡಳಿತದ ಕಾನೂನು ಕಟ್ಟಳೆಗಳಲ್ಲಿ ಏರ್ಪಾಡು ಮಾಡುವುದರಿಂದ ಆಡಳಿತದ ದಕ್ಷತೆಯು ಮಟ್ಟವೇರುತ್ತದೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕೈಗಾರಿಕಾ ಇಲಾಖೆಯ ವಿಷಯ. ಬಡ್ಜೆಟ್ಟನ್ನು ಯಾವೊಂದು ದೃಷ್ಟಿಕೋನಕ್ಕೆ ಹೋಲಿಸಬಹುದು ಎಂದರೆ, ಚಲೋ ಹುಡುಗನಿಗೆ ಸೀರೆ ಉಡಿಸಿ ಹುಡುಗಿ ಎಂದು ಹೇಳಿದ ಹಾಗಿದೆ ಬಡ್ಜೆಟ್.

ಶ್ರೀ ಟಿ. ಮರಿಯಪ್ಪ.—ಅದು ಅಷ್ಟು ಆಕರ್ಷಣೀಯವಾಗಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಶ್ರೀ ಮರಿಯಪ್ಪನವರು ಸಾಧಾರಣವಾಗಿ ಎರಡು-ಎರಡೂವರೆ ವರ್ಷಗಳಿಂದ ಮಂತ್ರಿಮಂಡಲದಲ್ಲಿದ್ದಾರೆ. ಅವರು ಕೈಗಾರಿಕೆಯ ಶಾಖೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಅದಕ್ಕಾಗಿ ಹೆಚ್ಚು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಬೇಕು. ಈಗ ಇಂಡಸ್ಟ್ರೀಸ್ ಕೇವಲ ಮೈಸೂರು, ಬೆಂಗಳೂರಿನಲ್ಲಿ ಮಾತ್ರ ಬೆಳೆದಿವೆಯೆಂದು ಹೇಳುತ್ತಾರೆ. ಕೆಲವು ರೆಮ್ಯೂನರೇಟಿವ್ ಅಲ್ಲ, ಅದರಿಂದ ಲಾಸ್ ಆಗುತ್ತಿದೆ ಎಂದು ಕೆಲವು ಕೈಗಾರಿಕೆಗಳನ್ನು ಖೋತಾ ಮಾಡಿದಿರಿ. ಇದರಿಂದ ಇನ್ನೊಬ್ಬ ಇಂಡಿವಿಜುಯಲ್ ಅವೇ ಕೈಗಾರಿಕೆಗಳನ್ನು ಬಿಲ್ಡ್ ಅಪ್ ಮಾಡಿ ಲಾಸ್ ಇಲ್ಲವೆಂದು ಪ್ರೂವ್ ಮಾಡಿಕೊಂಡರೆ, ಆಗ ಸರ್ಕಾರದ ಕೈಯ್ಯಲ್ಲಿ ಆ ಕೈಗಾರಿಕೆಗಳನ್ನು ಎಫಿಷಿಯೆಂಟಾಗಿ ಬೆಳೆಸುವುದಕ್ಕಾಗಲಿಲ್ಲ ವೆಂಬುದನ್ನು ಪ್ರೂವ್ ಮಾಡಿಕೊಟ್ಟಂತಾಗುತ್ತದೆ. ಆ ಮಟ್ಟಕ್ಕೆ ಸರ್ಕಾರ ಹೋಗಬಾರದು. ಎಷ್ಟೋ ಕೈಗಾರಿಕೆಗಳನ್ನು ನ್ಯಾಷನಲೈಜ್ ಮಾಡಿ ಎನ್ನುವಕಾಲ ಬಂದಿರುವಾಗ ಸರ್ಕಾರದವರು ಕೈಗಾರಿಕೆಗಳನ್ನು ಸರಿಯಾದ ರೀತಿಯಲ್ಲಿ ಬಿಲ್ಡ್ ಅಪ್ ಮಾಡುವ ಪರಿಸ್ಥಿತಿಗೆ ಹೆಚ್ಚಿನ ಗಮನ ಕೊಡುವುದು ಆದ್ಯ ಕರ್ತವ್ಯವಾಗಿದೆ. ಮುದುಕರಾದರೂ ಇಷ್ಯೂಸ್ ಇಲ್ಲವೆಂದು ಹೇಳಿದ ಹಾಗೆ ಕೈಗಾರಿಕೆಗಳನ್ನು ಡೆವಲಪ್ ಮಾಡುವುದಕ್ಕೆ ಸಾಧ್ಯವಿಲ್ಲವಲ್ಲಾ ಎಂದು ಈ ಸರ್ಕಾರ ಹೇಳಬಹುದೇ! ಇವೊತ್ತಿನ ದಿವಸ ಹೊಸರಾಜ್ಯವಾದ ಮೇಲೆ ನಮಗೆ ಯಥೇಚ್ಛವಾಗಿ ಐರನ್ ಓರ್ ಸಿಕ್ಕುತ್ತಿರುವಾಗ, ಜಪಾನ್, ಜರ್ಮನಿ ದೇಶಗಳಲ್ಲಿ ಇದಕ್ಕೆ ವಿಶೇಷವಾದ ಪ್ರೋತ್ಸಾಹ ಸಿಕ್ಕುತ್ತಿರುವಾಗ, ನಮ್ಮ ನೆರೆಹೊರೆಯ ರಾಜ್ಯಗಳಲ್ಲಿ ರಾತ್ರಿಹಗಲು ನಿದ್ರೆ ಇಲ್ಲದೆ ಐರನ್ ಓರ್ ಎಲ್ಲೆಲ್ಲಿ ಸಿಕ್ಕುತ್ತದೆಂದು ಕಂಡುಹಿಡಿಯುತ್ತಿರುವಾಗ, ವಿತರ್ಕೋಸ್ಕರ ನಮ್ಮ ಸರ್ಕಾರದವರಿಗೆ ಕೇಂದ್ರ ಸರ್ಕಾರದ ಸಹಾಯ ತೆಗೆದುಕೊಂಡು ಈ ಒಂದು ಯೋಜನೆಯನ್ನು ಹಾಕಿ ಪರದೇಶಗಳಿಗೆ ಈ ಐರನ್ ಓರನ್ನು ಕಳುಹಿಸುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೋ ನನಗಂತೂ ಅರ್ಥವಾಗಲಿಲ್ಲ. ಈ ಬಗ್ಗೆ ಬೇಕಾದಷ್ಟು ಸಲಹೆಗಳು ಬರುತ್ತಿವೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಡೆವಲಪ್ ಮಾಡುವ ಅವಕಾಶವಿರುವಾಗ ಇವೊತ್ತಿನ ದಿವಸ ಕೇಂದ್ರ ಸರ್ಕಾರಕ್ಕೆ ಈ ಪ್ಲಾನನ್ನು ಕಳುಹಿಸಿದ್ದೇವೆ, ಅವರು ಸಾಲ ಕೊಡುತ್ತಿದ್ದಾರೆ. ನಾವು ಈ ಪ್ಲಾನಿಂಗ್ ಸ್ಕೀಮ್‌ನಲ್ಲಿ ಖರ್ಚು ಹಾಕುತ್ತೇವೆ ಎಂದು ಹೇಳುವ ಮಟ್ಟದಲ್ಲಿ ಈ ಸರ್ಕಾರ ಇರುವ ಒಂದು ವೈಖರಿಯನ್ನು ನಾನು ಖಂಡಿತ ಒಪ್ಪುವುದಿಲ್ಲ. ಆದಷ್ಟು ಮಟ್ಟಿಗೆ ನಮ್ಮ ಸರ್ಕಾರದವರು ಕೈಗಾರಿಕೆಗಳಿಗೆ ಬೇಕಾದ ಹೆಚ್ಚಿನ ಹಣವನ್ನು ಇಲ್ಲಿಯೇ ಒದಗಿಸಿಕೊಳ್ಳುವ ವ್ಯವಸ್ಥೆ ಮಾಡಬೇಕು. ಇನ್ನೂ ಕೊಂಚ ವರ್ಷಗಳಾದರೂ ದೊಡ್ಡ ದೊಡ್ಡ ಕೈಗಾರಿಕೆಗಳು ಅಭಿವೃದ್ಧಿಹೊಂದುವಂತೆ ಸರ್ಕಾರ ಮನಸ್ಸು ಮಾಡಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—Small scale blast furnace ಸ್ಕೀಮನ್ನು ಆಲ್ ಓವರ್ ಇಂಡಿಯಾ ಮಾಡಬೇಕೆಂಬ ಪ್ರೊಪೋಸಲ್ ಇದೆ. In fact, they are sending a team to China and after their return, the Government will sponsor it. We have taken up the matter with the Government of India.

2-30 P.M.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಸ್ವಾಮಿ, ಬಹುಮುಖ್ಯವಾದ ವಿಚಾರಗಳಲ್ಲಿ ಆಹಾರದ ವಿಷಯವನ್ನು ಬಿಟ್ಟರೆ ಇನ್ನು ಎರಡನೆಯದು ವಿದ್ಯಾಭ್ಯಾಸದ ವಿಷಯ. ವಿದ್ಯಾಭ್ಯಾಸದ ವಿಚಾರವನ್ನು ತೆಗೆದುಕೊಂಡರೆ, ರಾಜ್ಯಾಂಗದಲ್ಲಿ ಹೇಳಿರುವುದೇನೆಂದರೆ, ದೇಶದಲ್ಲಿರತಕ್ಕ 14 ವರ್ಷ ವಯಸ್ಸಿನೊಳಗಿರತಕ್ಕ ಎಲ್ಲ ಮಕ್ಕಳಿಗೂ ಕಡ್ಡಾಯವಾಗಿ ವಿದ್ಯಾಭ್ಯಾಸವನ್ನು ಕೊಡಬೇಕೆಂಬ ನೇಮವಿದೆ. ಹಾಗೆ ರಾಜ್ಯಾಂಗದಲ್ಲಿ ವಿಧಿತವಾಗಿರತಕ್ಕ ವಿದ್ಯೆಯನ್ನು ದೇಶದಲ್ಲಿರತಕ್ಕ ಎಲ್ಲಾ ಮಕ್ಕಳುಗಳಿಗೂ ಒದಗುವಂತೆ ಮಾಡಲು ಸರ್ಕಾರದವರು ತಮ್ಮ ಬಡ್ಜೆಟ್ಟಿನಲ್ಲಿ ಯಾವ ಅಂಥ ಒಂದು ತೀವ್ರವಾದ ಯೋಜನೆಯನ್ನು ಅಳವಡಿಸಿಕೊಂಡಿದ್ದಾರೆ? ಪ್ರಾಥಮಿಕ ಶಾಲೆಗಳನ್ನು ಹೊಸದಾಗಿ ಸ್ಥಾಪಿಸತಕ್ಕ ಬಗ್ಗೆ ಮತ್ತು ಶಾಲಾಕಟ್ಟಡಗಳನ್ನು ಕಟ್ಟಿಸತಕ್ಕ ಬಗ್ಗೆ ಎಷ್ಟು ಹಣವನ್ನು ತೆಗೆದಿಟ್ಟಿದ್ದಾರೆ? ಬಡ್ಜೆಟ್ಟಿನಲ್ಲೇನೋ ಈ ವಿದ್ಯಾಭ್ಯಾಸಕ್ಕಾಗಿ ಹನ್ನೊಂದು ಚಿಲ್ಲರೆ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಆದರೆ ನಮ್ಮ ಸರ್ಕಾರದವರು ಇನ್ನೂ ಆ ಕಾಲೇಜ್ ವಿದ್ಯಾಭ್ಯಾಸವನ್ನು ಹಳೆಯ ಮೈಸೂರು ಪ್ರದೇಶದಲ್ಲಿ ತಾವೇ ಕಟ್ಟಿಕೊಂಡು ಒದ್ದಾಡುತ್ತಿದ್ದಾರೆ. ಹೊಸ ಮೈಸೂರು ಪ್ರದೇಶದಲ್ಲಿ ಕಾಲೇಜುಗಳನ್ನೂ ಮತ್ತು ಟೆಕ್ನಿಕಲ್ ಕಾಲೇಜು ಇತ್ಯಾದಿಗಳನ್ನೆಲ್ಲ ಸಾರ್ವಜನಿಕರಿಂದ ಬರತಕ್ಕ ಉದಾರ ಸಹಾಯದ ಮೇಲೆ ನಡೆಸಿಕೊಂಡು ಹೋಗುತ್ತಿರುವುದನ್ನು ನೋಡಿದರೆ ನಾವು ನಿಜವಾಗಿಯೂ ತಲೆ ಎತ್ತಿಕೊಂಡು ತಿರುಗಾಡುವ ಪರಿಸ್ಥಿತಿಯಲ್ಲಿನ್ನೂ ಇದ್ದೇವೆಯೋ ಎಂದು ಕೇಳಬೇಕಾಗಿದೆ. ಈ ದಿವಸ ಶ್ರೀಮಾನ್ ಟಿ. ಮರಿಯಪ್ಪನವರ ಮಕ್ಕಳಿಗೂ ಅದೇ ವಿದ್ಯಾಭ್ಯಾಸ, ಅದೇ ಫೀಜು ಮತ್ತು ಬಡ ಬೋರೇಗೌಡನ ಮಗನಿಗೂ ಅದೇ ವಿದ್ಯಾಭ್ಯಾಸ, ಅದೇ ಫೀಜು. ದೇಶದಲ್ಲಿ ವರ್ಷಕ್ಕೆ 10-20 ಸಾವಿರ ರೂಪಾಯಿಗಳ ಆದಾಯವಿರತಕ್ಕವರ ಮಕ್ಕಳಿಗೂ ಅದೇ ವಿದ್ಯೆ, ಅದೇ ಫೀಜು. ಇದು ಸರಿಯಾದ ನೀತಿಯೇ? ನ್ಯಾಯವಾಗಿ ಬಡವನ ಮಕ್ಕಳು ವಿದ್ಯಾವಂತರಾಗಬೇಕೆಂಬ ಕುತೂಹಲ ಸರ್ಕಾರಕ್ಕಿದ್ದರೆ ಅವರು ತಿಂಗಳಿಗೆ 300 ರೂಪಾಯಿಗಳಿಂದ 500 ರೂಪಾಯಿಗಳ ಆದಾಯವಿರತಕ್ಕವರಿಗೆಲ್ಲ ಒಂದು ಮಟ್ಟದಲ್ಲಿ ವಿದ್ಯಾಶುಲ್ಕವನ್ನು ವಸೂಲ್ಮಾಡಿ, ತಿಂಗಳಿಗೆ 500 ರೂಪಾಯಿಗಳಿಂದ 800 ರೂಪಾಯಿಗಳ ಒಳಗೆ ಆದಾಯವಿರತಕ್ಕವರಿಂದ ಇನ್ನೂ ಸ್ವಲ್ಪ ಹೆಚ್ಚಿನ

ಫೀಜನ್ನು ವಸೂಲ್ಮಾಡಿ, ತಿಂಗಳಿಗೆ 300 ರೂಪಾಯಿಗಳ ಕೆಳಗಿನ ಆದಾಯ ಅಥವಾ ಉತ್ಪತ್ತಿ ಇರತಕ್ಕವರ ಮಕ್ಕಳಿಗೆಲ್ಲಾ ವಿದ್ಯಾಶುಲ್ಕವನ್ನು ಮನ್ನಾಮಾಡಿ, ಹೀಗೆ ಸರ್ಕಾರದವರು ಯಾವುದಾದರೂ ಒಂದು ರೀತಿಯ ವ್ಯವಸ್ಥೆಯನ್ನು ಮಾಡಿಕೊಳ್ಳದೆ ಹೋದರೆ ಅವರು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಕಟ್ಟುತ್ತಾರೆಯೇ ಎಂದು ಕೇಳುತ್ತೇನೆ. ಆದರೆ ಸರ್ಕಾರದವರು ಈ ದಿವಸ ದೇಶದಲ್ಲಿರತಕ್ಕ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಒದಗಿಸಿರತಕ್ಕ ಬಡ್ಜೆಟ್ ಮೊಬಲಗನ್ನು ನೋಡಿದರೆ ನಾವು ನಿಜವಾಗಿಯೂ ತಲೆ ತಗ್ಗಿಸಬೇಕೆಂದು ಕಾಣುತ್ತದೆ. ಆದರೆ ಏನೋ ಒಂದು ನಮ್ಮ ಸುದೈವ, ನಮ್ಮ ವಿರೋಧಪಕ್ಷದವರು ಸರಿಯಾದ ವಿರುತ್ತಿದ್ದರೆ ನಾವು ಇಲ್ಲಿಯುತನಕ ಖಂಡಿತ ಉಳಿಯುತ್ತಿರಲಿಲ್ಲ. ಆ ಪಕ್ಷವು ಅಷ್ಟು ಪರಿಣಾಮಕಾರಿಯಾಗಿರದೆ ಇರುವುದರಿಂದಲೇ ನಾವಿನ್ನೂ ಇಲ್ಲಿ ಉಳಿದಿರುತ್ತೇವೆ. ಆದುದರಿಂದ ನಾನು ಹೇಳುತ್ತೇನೆ: ಈಗಾದರೂ ನಮ್ಮ ಸರ್ಕಾರದವರು ಎಚ್ಚೆತ್ತುಕೊಂಡು ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ದೇಶದಲ್ಲಿ ಒಂದು ತೀವ್ರತರವಾದ ಆಕರ್ಷಣೆ ಬರುವಂತೆ ಈ ಬಾಬಿಗೆ ವಿಶೇಷ ಹಣವನ್ನೊದಗಿಸಬೇಕು ಎಂದು ಹೇಳುತ್ತೇನೆ. ಸರ್ಕಾರದವರು ಬೇಕಾಗಿದ್ದರೆ ಈ ಬಗ್ಗೆ ನಮ್ಮ ಮೇಲೆ ಒಂದು ಸ್ಪೆಷಲ್ ತೆರಿಗೆಯನ್ನೂ ಹಾಕಲಿ; ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಈ ದಿವಸ ಈ ವಿದ್ಯಾಭ್ಯಾಸದ ವಿಚಾರದಲ್ಲಿ ರಾಜ್ಯಾಂಗದಲ್ಲಿ ಏನು ಹೇಳಿದೆಯೋ ಅದನ್ನು ಉಳಿಸಿಕೊಳ್ಳಬೇಕಾಗಿದ್ದರೆ ಸರ್ಕಾರದವರೇನು ಜನತೆಗೊಂದು ಆಶ್ವಾಸನ ನೀಡಿದ್ದಾರೋ ಅದನ್ನು ಈಗ ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ರಾಜ್ಯ ಸರ್ಕಾರದವರ ಹಾಗೂ ಕೇಂದ್ರ ಸರ್ಕಾರದವರದಾಗಿದೆ. ಇದಕ್ಕೆ ತಪ್ಪಿದರೆ ಮುಂದೆ ಸರ್ಕಾರಕ್ಕೆ ದೇಶದ ಜನರ ಬೆಂಬಲ ಕಡಮೆಯಾಗುವುದು.

ಇನ್ನು ವೈದ್ಯಶಾಖೆಯ ವಿಚಾರದಲ್ಲಿ ಎರಡು ಮಾತುಗಳನ್ನಾಡಬೇಕಾಗಿದೆ. ನಾನು ಹೋದ ಸೆಷನ್ನಿನಲ್ಲೂ ಈ ವಿಚಾರವನ್ನೇ ಪ್ರಸ್ತಾಪಮಾಡಿದ್ದೆನು. ಈ ವಿಚಾರ ಹೀಗೆಯೇ ಎಷ್ಟೋ ಸಾರಿ ಚರ್ಚೆಗೆ ಬಂದಿದೆ. ಈ ದಿವಸ ನಾವು ಬಡ್ಜೆಟ್ ತೆಗೆದು ನೋಡಿದರೆ ಹಿಂದೆ 10—15 ವರ್ಷಗಳ ಕೆಳಗೆ ಆಸ್ಪತ್ರೆಗಳಿಗಾಗಿ ಔಷಧಿ ಮತ್ತು ಇತರ ಎಕ್ವಿಪ್‌ಮೆಂಟ್ ಇತ್ಯಾದಿಗಳಿಗೆಲ್ಲ ಏನು ಹಣ ಒದಗಿಸಲಾಗುತ್ತಿತ್ತೋ ಈಗಲೂ ಅಷ್ಟೇ ಹಣವನ್ನು ಒದಗಿಸಲಾಗುತ್ತಿದೆ. ಇಲ್ಲಿಗೆ 15 ವರ್ಷಗಳ ಕೆಳಗೆ ಒಂದು ಆಸ್ಪತ್ರೆಗೇನು ಗ್ರ್ಯಾಂಟ್ ಒದಗಿಸುತ್ತಿದ್ದರೋ ಈಗಲೂ ಆ ಗ್ರ್ಯಾಂಟ್ ಅಷ್ಟೇ ಇದೆ. ಆಗ 500 ರೂಪಾಯಿಗಳಿದ್ದರೆ ಈಗಲೂ 500 ರೂಪಾಯಿಗಳೇ ಇವೆ. ಇತ್ತೀಚೆಗೆ ಔಷಧಿಗಳ ಹಾಗೂ ಸಲಕರಣೆಗಳ ಬೆಲೆ ಒಂದಕ್ಕೆ ಹತ್ತರಷ್ಟು ಜಾಸ್ತಿ ಆಗಿದೆ. ನಾನೀಗ ತುಮಕೂರು ಟೌನಿನಲ್ಲಿ ಜನರಲ್ ಆಸ್ಪತ್ರೆಯ ಮುಂಭಾಗದಲ್ಲೇ ವಾಸಮಾಡುತ್ತಿದ್ದೇನೆ. ಪ್ರತಿದಿನವೂ ಅಲ್ಲಿ ಆ ಆಸ್ಪತ್ರೆಗೆ ಬರತಕ್ಕ ಬಡಜನರಿಗೆ ಆಸ್ಪತ್ರೆಯವರು ಬರೆದುಕೊಡತಕ್ಕ ಔಷಧಿಗಳ ಖರೀದಿಯನ್ನು ಆ ರೋಗಿಗಳು ಕೇಳಿದಕೂಡಲೇ, ನಾವು ಸತ್ತರೂ ಚಿಂತೆಯಿಲ್ಲ. ಔಷಧಿ ಕೊಳ್ಳಲು ಇಷ್ಟೊಂದು ಹಣವನ್ನು ನಾವೆಲ್ಲಿ ತರೋಣ ಎಂದು ಹಾಗೆಯೇ ಹೋಗುತ್ತಿದ್ದಾರೆ. ಇಂಥ ಬಡಪಾಯಿಗಳ ಸೌಕರ್ಯಕ್ಕಾಗಿ ಸರ್ಕಾರದವರು ಏನು ಏರ್ಪಾಡು ಮಾಡಿದ್ದಾರೆ? "ಪೂರ್‌ಫಂಡ್" ಎಂದು ಏನಾದರೂ ಒಂದು ಫಂಡನ್ನು ನಿರ್ಮಿಸಲು ಏರ್ಪಾಡು ಮಾಡಿದ್ದಾರೇನು? ಬಡವರ ಉದ್ಧಾರಕ್ಕಾಗಿ ಸರ್ಕಾರದವರು ಏನು ತಲೆ ಕೆಡಿಸಿಕೊಂಡಿದ್ದಾರೆ, ಅದನ್ನು ಹೇಳಲಿ. ದೇಶದಲ್ಲಿ ಇಂಥ ಒಂದು ಉತ್ತಮ ಕಾರ್ಯಮಾಡುವುದಕ್ಕೆ ಏನು ಪ್ರಯತ್ನಮಾಡಿದ್ದಾರೆ? ಹಿಂದೆ ಆಸ್ಪತ್ರೆಗಳಲ್ಲಿ ಏನೊಂದು ನೀರೌಷಧಿಯನ್ನು ಕೊಡುತ್ತಿದ್ದರೋ ಈಗಲೂ ಆ ನೀರೌಷಧಿಯನ್ನೇ ಕೊಡುತ್ತಿದ್ದಾರೆ. ಅದಕ್ಕಾಗಿ ತಾನೇ ನಾಲ್ಕೈದು ಆಣೆ ಹೋದರೂ ಚಿಂತೆಯಿಲ್ಲ ಸರ್ಕಾರಿ ಆಸ್ಪತ್ರೆಗಳ ಸಹವಾಸ ಬೇಡಪ್ಪ— ಆ ಡಾಕ್ಟರ್ ಪಾರ್ಥಸಾರಥಿಯವರ ಹತ್ತಿರಕ್ಕೇ ಹೋಗೋಣ, ಒಳ್ಳೆಯ ಔಷಧಿಯನ್ನು ಕೊಡುತ್ತಾರೆ, ಎಂದು ಜನ ಹೋಗುತ್ತಿರುವುದು. ಇಂಥ ಆಸ್ಪತ್ರೆಗಳನ್ನಿಟ್ಟರೇನು ಪ್ರಯೋಜನ? ಇಲ್ಲಿ ಮಂತ್ರಿಗಳು ಕುಳಿತು ಸುಮ್ಮನೆ ತಲೆ ಅಲ್ಲಾಡಿಸಿದರೆ ಪ್ರಯೋಜನವಿಲ್ಲ. ಅವರು ನನ್ನ ಜೊತೆಯಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಬರಲಿ. ನಾನು ಕೆಲವು ಆಸ್ಪತ್ರೆಗಳಿಗೆ ಅವರನ್ನು ಕರೆದುಕೊಂಡು ಹೋಗುತ್ತೇನೆ. ಅಲ್ಲಿನ ನಿಜಪರಿಸ್ಥಿತಿ ಏನೆಂಬುದು ಆಗ ಅವರಿಗೆ ಗೊತ್ತಾಗುತ್ತದೆ.

ಶ್ರೀ ಟಿ. ಮರಿಯಪ್ಪ.—ನಾವು ಹೆಚ್ಚು ಹಣ ಒದಗಿಸಿದ್ದೇವೆ. ಆಗಲೆ ಔಷಧಿಗಳ ಬೆಲೆ ಸಹ ಇತ್ತೀಚೆಗೆ ಬಹಳ ಜಾಸ್ತಿಯಾಗಿದೆ.

ಶ್ರೀ ಟಿ. ಎನ್. ಮುಡಲಗಿರಿಗೌಡ.—ನಿಜ. ನಾನೂ ಕೇಳಿದ್ದೇನೆ. ಆದರೆ ತಾವು ಸಂದರ್ಭಕ್ಕೆ ತಕ್ಕ ಹಾಗೆ ಹೇಳುತ್ತೀರಿ. ಶ್ರೀಮಾನ್ ಮರಿಯಪ್ಪನವರನ್ನು ಲಾಲ್ ಬಾಗ್ ಪ್ರದರ್ಶನಕ್ಕೆ ಬರಮಾಡಿಕೊಂಡಿದ್ದರೆ ಅಲ್ಲಿ ತಾವು ದೇಶದಲ್ಲಿ ಆಹಾರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ರೈತರು ಹಣ್ಣು ಹಂಪಲುಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯಬೇಕೆಂದು ಆ ಸನ್ನಿವೇಶಕ್ಕೆ ತಕ್ಕಂತೆ ಹೇಳುತ್ತೀರಿ. ಅದೇ ಶ್ರೀಮಾನ್ ಮರಿಯಪ್ಪನವರನ್ನು ಒಂದು ಕುರಿ, ದನ ಅಥವಾ ಕೋಳಿ ಸಮಾರಂಭ ನಡೆಸುವ ಸ್ಥಳಕ್ಕೆ ಬರಮಾಡಿಕೊಂಡಿದ್ದರೆ ಅಲ್ಲಿ ತಾವು ಏನು ಹೇಳುತ್ತೀರೆಂದರೆ, ದೇಶದಲ್ಲಿ ರೈತರು ಆಹಾರದ ಕೊರತೆಯನ್ನು ಭರ್ತಿಮಾಡಿಕೊಳ್ಳಲು ಹೆಚ್ಚುಹೆಚ್ಚಾಗಿ ಕೋಳಿಗಳನ್ನು ಸಾಕಬೇಕೆಂದು ಆ ಸನ್ನಿವೇಶಕ್ಕೆ ತಕ್ಕಂತೆ ಹೇಳುತ್ತೀರಿ. ಹೀಗೆ ಅವರು ಸಂದರ್ಭಕ್ಕೆ ತಕ್ಕಂತೆ ಮಾತನಾಡುತ್ತಿದ್ದಾರೆ. ಆದರೆ ನಾನು ಈಗ ಒಂದು ವಿಚಾರವನ್ನು ಅವರ ಗಮನಕ್ಕೆ ತರಬೇಕಾಗಿದೆ. ಎಲ್ಲೆಲ್ಲಿ ಆಹಾರದ ಕೊರತೆಯನ್ನು ನೀಗಲು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಳ್ಳುತ್ತಿಲ್ಲವೆಂದು ತಿಳಿಸಲು ವಿಷಾದವಾಗುತ್ತದೆ. ನಾನು ಮೊನ್ನೆ ತಾನೆ ಅಕಸ್ಮಾತ್ತಾಗಿ ಮಂಗಳೂರು ಮತ್ತು ಮಲೆಗಳಕಡೆ ಹೋಗಿದ್ದೆನು. ಅಲ್ಲಿ ಸಮುದ್ರದ ಅಂಚು ನಮಗೇನೋ ಬಹಳ ಅಪಾರವಾಗಿಯೆ ದೊರೆತಿದೆ. ಆದರೆ ಆ ಸೀ ಕೋಸ್ಟನ್ನು ಅಭಿವೃದ್ಧಿಮಾಡಲು ಸರ್ಕಾರದವರೇನು ಕಾರ್ಯಕ್ರಮ ಕೈಗೊಂಡಿದ್ದಾರೆ? ಹಿಂದೆ ಅನೇಕರು ಕರ್ಣಾಟಕ ರಾಜ್ಯಸ್ಥಾಪನೆಯಾದರೆ ನಮಗೆ 200 ಮೈಲಿಗಳಷ್ಟು ಸಮುದ್ರ ಸಿಕ್ಕುತ್ತದೆ, ಅದರಿಂದ ನಮ್ಮ ದೇಶಕ್ಕೆ ಅಷ್ಟೊಂದು ಅನುಕೂಲವಾಗುತ್ತದೆ, ಇಷ್ಟೊಂದು ಅನುಕೂಲವಾಗುತ್ತದೆಂದು ಹೇಳಿದ್ದರು. ಸಮುದ್ರ ತೀರವನ್ನು ಅಭಿವೃದ್ಧಿ ಮಾಡಿ ದೇಶದ ಉತ್ಪನ್ನವನ್ನು ಹೆಚ್ಚಿಸುತ್ತೇವೆಂದು ಹೇಳಿದ್ದರು. ಆದರೆ ನಾನು ಮೊನ್ನೆ ಅಲ್ಲಿಗೆ ಹೋಗಿದ್ದಾಗ ನೋಡಿದರೆ ಅಲ್ಲಿ ಯಾವ ಅಂಥ ಅಭಿವೃದ್ಧಿ ಕಾರ್ಯಗಳನ್ನೂ ನಡೆಸಿಲ್ಲ. ರಾಜ್ಯ ಪುನರ್ವಿಂಗಡಣೆಯಾಗುವುದಕ್ಕೆ ಮೊದಲು ಅಲ್ಲಿ ಹೇಗಿತ್ತೋ ಈಗಲೂ ಹಾಗೆಯೆ ಇದೆ. ಸಮುದ್ರ ತೀರವನ್ನು ಅಭಿವೃದ್ಧಿಮಾಡಲು ಕಾರ್ಯಕ್ರಮಗಳನ್ನು ಕೈಗೊಂಡಿದ್ದರೆ ಅದರಿಂದ ನಮಗೆ ಇಂದು ಡಾಲರ್ ಎಕ್ಸ್‌ಛೇಂಜಿನ ಕಷ್ಟ ಎಷ್ಟೋ ಕಡಮೆಯಾಗುತ್ತಿತ್ತು. ಫಿಷರೀಸನ್ನು ಡೆವಲಪ್ ಮಾಡಿದ್ದರೆ ದೇಶದ ಉತ್ಪನ್ನ

(ಶ್ರೀ ಟಿ. ಎಚ್. ಮೂಡಲಗಿರಿಗೌಡ)

ಹೆಚ್ಚಾಗುತ್ತಿತ್ತು. ಈ ದಿವಸ ಅಲ್ಲಿ ದೊರೆಯತಕ್ಕ ಮೀನುಗಳೇನಿವೆ ಅವುಗಳನ್ನು ಅಯಾ ದಿವಸವೇ ಅವು ಬೆಂಗಳೂರು—ತುಮಕೂರುಗಳಲ್ಲಿ ಜನರಿಗೆ ದೊರೆ ಯುವಂತೆ ಮಾಡಬೇಕು. ಮೀನು ಪ್ರಿಜರ್ವ್ ಮಾಡತಕ್ಕ ವ್ಯವಸ್ಥೆಯನ್ನೂ ಸಹ ಮಾಡಿರುವುದಿಲ್ಲ. ಈ ದಿವಸ ಆ ಮಂಗಳೂರಿನಲ್ಲಿ ಏನೊಂದು ಅನುಕೂಲತೆಗಳನ್ನು ಮಾಡಲಾಗಿದೆಯೋ ಅವೇ ಅನುಕೂಲತೆಗಳನ್ನು ಆ ಮಾರ್ಗೆಯಲ್ಲೂ ಮಾಡಬೇಕು. ರಸ್ತೆಗಳ ಸೌಕರ್ಯವಿಲ್ಲ ವೆಂದು ಹೇಳುವುದು ಸರಿಯಲ್ಲ. ಹೀಗೆ ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ನಮ್ಮ ರೈತಾಪಿಜನರು ತಾವು ಬೆಳೆದ ದವಸವನ್ನು ಬೇರೆಕಡೆಗೆ ಸಾಗಿಸಲು ರಸ್ತೆಗಳ ಸೌಕರ್ಯವಿಲ್ಲದೆ ಈ ದಿವಸ ಹಾಳಾಗುತ್ತಿದ್ದಾರೆ. ಇನ್ನಾದರೂ ಸರ್ಕಾರದವರು ಫಿಷರೀಸುಗಳನ್ನು ಡೆವಲಪ್‌ಮಾಡದಿದ್ದರೆ ಮುಂದೆ ದೇಶಕ್ಕೆ ಒದಗಿಸ ಬೇಕಾದ ಆಹಾರಸರಬರಾಯಿಯ ಬಗ್ಗೆ ಬಹಳ ತೊಂದರೆಗೊಳಗಾಗಬೇಕಾಗುತ್ತದೆ. ಈ ದಿವಸ ಈ ಬಾಬಿಗಾಗಿ ಸರ್ಕಾರದವರು ಬಡ್ಜೆಟ್ಟಿನಲ್ಲಿ ಒದಗಿಸಿರುವುದು ಖಂಡಿತ ಸಾಲದು. ಸರ್ಕಾರದವರು ತಮ್ಮ ವರ್ಷದ ಓಪನಿಂಗ್ ಬ್ಯಾಲೆನ್ಸನ್ನು ತೋರಿಸ ದಿದ್ದರೂ ಚಿಂತೆ ಇಲ್ಲ. ನಾಮಕಾವಾಸ್ತೆಗಾಗಿ ಐದು ನಯಾಪೈಸೆಗಳಿರುತ್ತದೆಂದು ಹೇಳಿದರೂ ಪರವಾಇಲ್ಲ. ದೇಶಾಭಿವೃದ್ಧಿ ಕಾರ್ಯಗಳಿಗಾಗಿ ಒದಗಿಸಿರತಕ್ಕ ಹಣವೇನಿದೆ ಅದನ್ನು ಪೂರ್ತಿಯಾಗಿ ಖರ್ಚು ಮಾಡಬೇಕೆಂದು ಹೇಳುತ್ತೇನೆ, ಈ ದಿವಸ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣವೇನಿದೆ ಅದರಲ್ಲಿ ಖರ್ಚಾಗತಕ್ಕ ಭಾಗದಲ್ಲಿ ಕೇವಲ ನಾಲ್ಕಾಣೆಯಷ್ಟು ಮಾತ್ರ ಆ ಕೆಲಸಕ್ಕೆ ಸೇರಿದ್ದು; ಇನ್ನುಳಿದ ಸೇಕಡ 75 ಭಾಗದಷ್ಟು ಹಣ ಬೇರೆ ವ್ಯವಹಾರಗಳಿಗಾಗಿ ಖರ್ಚಾಗಿರುತ್ತದೆ. ಆದುದರಿಂದ ಸರ್ಕಾರಕ್ಕೆ ನಾನು ಒತ್ತಾಯಪೂರ್ವಕ ವಾಗಿ ಹೇಳಬೇಕಾದ್ದಿಷ್ಟೇ: ಬಡ್ಜೆಟ್ಟಿನಲ್ಲಿ ಕಾಣಿಸಿದ ಅನಂತರ ಆ ಹಣ ಆ ವರ್ಷದಲ್ಲೇ ಪೂರ್ತಿ ಖರ್ಚಾಗು ವಂತೆ ಅಷ್ಟನ್ನಾದರೂ ಮಾಡಲೇಬೇಕೆಂದು ಹೇಳು ತ್ತೇನೆ.

ರೂರಲ್ ಕಮ್ಯೂನಿಕೇಷನ್ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. 1954-55ನೆಯ ಸಾಲನ್ನು ಬಿಟ್ಟರೆ ಈಚೇಗೆ Rural Communication ಆಗಿದೆ ಎಂದು ಯಾರಾದರೂ ಹೇಳುತಾರೆಯೇ? ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಏನಾದರೂ ಅಲ್ಪ ಸ್ವಲ್ಪ ಕೆಲಸಗಳಾಗಿರಬಹುದು. ಎಚ್. ಇ. ಎಸ್. ವಿಷಯವಾಗಿ ಹೇಳಬೇಕಾದರೆ ಅದಕ್ಕೆ ಪ್ರತ್ಯೇಕವಾದ ಒಂದು ದಿನವನ್ನು ಇಟ್ಟರೆ ಮಾತನಾಡುತ್ತೇನೆ. ಈಗ ಆ ವಿಷಯ ವನ್ನು ಹೇಳುವುದಿಲ್ಲ ಆದುದರಿಂದ ದಯವಿಟ್ಟು ಪ್ರತಿಜಿಲ್ಲೆಗೂ ಅಲ್ಪ ಸ್ವಲ್ಪವಾದರೂ ಗ್ರಾಂಟ್‌ಗಳನ್ನು ರೂರಲ್ ಕಮ್ಯೂನಿಕೇಷನ್ ಬಾಬಿಗೆ ಕೊಡಬೇಕು. ನಾನು ಮೊನ್ನೆ ಹೋಗಿ ವಿಚಾರಿಸಿದರೆ ಹೋದ ತಿಂಗಳು 20ನೆಯ ತಾರೀಖಿನ ದಿವಸ ಗ್ರಾಂಟ್ ಬಂತು ಎಂದು ಹೇಳುತ್ತಾರೆ. ಇದರಲ್ಲಿ ಏನು ತಪ್ಪು ಇದೆಯೋ ಅದನ್ನು ತಾವೇ ಯೋಚನೆಮಾಡಬೇಕು. ಮಾರ್ಚಿ 31 ನೆಯ ತಾರೀಖಿನ ಹೊತ್ತಿಗೆ ಬಡ್ಜೆಟ್ ಪಾಸಾಗು ತ್ತದೆ. ಏಪ್ರಿಲ್ 30ನೆಯ ತಾರೀಖಿನೊಳಗೆ ಜಿಲ್ಲಾ ಹೆಡ್‌ಕ್ವಾರ್ಟರಿಗೆ ಬಡ್ಜೆಟ್ ಗ್ರಾಂಟ್‌ಗಳನ್ನು ಕಳುಹಿಸು ವುದಕ್ಕೆ ಏರ್ಪಾಡು ಮಾಡಿದರೆ ಒಳ್ಳೆಯದು. ಆಗ ಮೂರು ತಿಂಗಳು ಕಳುಹಿಸುವುದಕ್ಕೆ, ಮೂರು ತಿಂಗಳು ಅಡ್ವಾನ್ಸ್ ಮಾಡುವುದಕ್ಕೆ ಹಣ ಮೂರು ತಿಂಗಳಲ್ಲಿ ಪ್ರೋಗ್ರೆಸ್ ತೋರಿಸಲು ಸಾಧ್ಯವಾಗುತ್ತದೆ— ಗ್ರಾಂಟ್‌ಗಳು ತಕ್ಷಣ ಜಿಲ್ಲೆಗಳಿಗೆ ಹೋಗತಕ್ಕ ಏರ್ಪಾಡನ್ನು ಮಾಡದೆಹೋದರೆ ಗ್ರಾಂಟ್ ಆದ ಹಣವನ್ನು ಖರ್ಚುಮಾಡುವುದಕ್ಕಾಗುವುದಿಲ್ಲ. ಆದರಿಂ ದಲೇ ಇಂಡಿಯಾ ಸರ್ಕಾರದವರು ಕೊಟ್ಟ ಹಣವನ್ನ ಖರ್ಚುಮಾಡುವುದಕ್ಕಾಗದೆ 1956-57 ಮತ್ತು 1957-58ನೆಯ ವರ್ಷಗಳಲ್ಲಿ ಹಣವನ್ನು ಲ್ಯಾಪ್ಸ್ ಮಾಡಿ, ಇಂಡಿಯಾ ಸರ್ಕಾರದಿಂದ ನಿಮ್ಮಿಂದ ಹಣವನ್ನು ಖರ್ಚುಮಾಡುವುದಕ್ಕಾಗುವುದಿಲ್ಲವೆಂದು ಎನ್ನಿಸಿ ಕೊಂಡದ್ದು. ಕೊಟ್ಟಂಥ ಹಣ ಸಾಲದು, ಹೆಚ್ಚು ಹಣವನ್ನು ಕೊಡಿ ನಮಗೆ ಖರ್ಚುಮಾಡುವ ಶಕ್ತಿ ಇದೆ ಎಂದು ಹೇಳುವಸ್ಥಿತಿಯಲ್ಲಿ ನಾವು ಇರಬೇಕು. ಇಷ್ಟನ್ನು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*Smt. V. V. MIRJANKAR (Kumta).—Mr. Speaker, Sir, while welcoming the surplus budget placed before the House by the Finance Minister, I wish to make a few remarks on the same. What struck me most is the statement made by the Finance Minister regarding the development of ports and communications in the State. He has assured us that the State Government is urging on the Centre to provide proper communications from the mining areas to the sea ports and also for better railway communications in the State. *How far is it a justifying statement?* If I am permitted to express my views on the same, I would say that the State is still undecided on the question of priorities of the ports and the railways in the State. The Government has not fixed the criterion for such developments based on economic justification, but is merely led away by favouritism. I would categorically mention the name of Karwar which has got strategic importance of becoming one of the major ports of the State. Due to its strategic importance and its location, it has all the potentialities of becoming one of the major ports. Various surveys conducted during the last 100 years show that it is the most convenient place for shipment of ore, both iron and manganese. This place is hardly 225 miles from one of the richest ore producing centres of the State and there are other minor ports also which serve the purpose. So the question of improving and developing Karwar Port and linking it with Hubli by rail is very important, but this question has not been pursued by the Government to the fullest extent and it has not received priority. In the light of these circumstances, I would call upon the Government to fix the criterion for such

development based on economic justification. The only thing that I justly want the Government to do is to remove the various restrictions they have imposed upon the transport of ore that is now being carried by trucks to these ports and thus allow the free flow of ore to these ports.

SRI T. MARIAPPA.—The Hubli-Karwar road is taken up.

SMT. V. V. MIRJANKAR.—Agriculture is the fundamental occupation of the people of my district. Nearly 50 per cent of the working class depend on agriculture for earning their living. The main crop is rice and it forms 50 per cent of the net cultivated area in my district. My district is rich in natural resources like mineral wealth. There are extensive areas covered with thick forests, promising fishing grounds, and also famous spice gardens. The basic industry of the people is deteriorating. The famous garden wealth and the export of rice have all become things of the past in spite of the various measures taken by Government for stepping up food production. Mere paper schemes or plans do not produce the required result unless the fundamental problems of the district are sought to be solved squarely.

Almost 85 per cent of my district is covered with forests and if I may express my reflections on this question, I feel that it is of utmost importance to distribute the available land resources as between agriculture and forests. There is sufficient proof to show that a large number of devastated villages which are now completely covered by forests are scattered all over the district in the coastal areas. Such of those strips should be immediately released to the Revenue Department for bringing them under cultivation. Early in the century this District produced surplus rice. This coastal strip had a population of more than 10 lakhs, but in the 1951 census the population was only a little more than 5 lakhs and the production also was much less in spite of the serious efforts by Government in increasing the production of food.

There are two major problems facing this district. One is khar lands and the other is the forest policy. There are vast extents of these khar lands on the coast of North Kanara which are completely submerged in salt water and which have become unfit for cultivation, the total area being more than 11,000 acres in the whole of the District. These require huge investment for building dykes. The yield from these lands is so much that it will not be an exaggeration if I were to say that these dykes are worth building with bricks of gold. I lay great emphasis on improving these lands by constructing dykes at the responsibility of the Government itself.

Coming to the forest policy, it looks as though the Government is more interested in the development of forests and preservation of games rather than the advancement of agriculture in my district. Sometimes I feel that the Government is looking upon this district as a Government estate. Several measures for the protection of crop are on hand, but there is no safety for the farmer and his belongings like cattle from the wild animals. I can with full confidence say that more than 30 per cent of the crops are destroyed by wild animals. The lives of cattle are always at stake. The figures recently collected from one circle reveal that more than 50 animals have fallen a prey to these wild animals. This loss is not replenished either by the Forest or the Agriculture Departments. The farmers lose not only the cattle, but their entire year's income is affected. Therefore in the interests of the agriculturists, I would request the Government to appoint a panel of shikars in order to overcome the technical and legal difficulties arising out of the Wild Animals Preservation Act.

Sir, in his speech the Finance Minister enumerated the various steps taken by Government to bring about the emotional integration of the State. But I believe that evolution of a common pay scale would alone not promote a psychological change. There are more issues to be tackled. For example, in the field of education there are a number of disparities. Great hardships are caused to students coming from the integrated areas of North

(SMT. V. V. MIRJANKAR)

Karnatak in the allotment of seats to Medical Colleges, except the one at Hubli. The seats here are limited. This difficulty could be overcome by lifting the University restrictions laid down this year.

Coming to the marine resources, Hon'ble Member Sri Baliga has dealt with it in minute detail and presented a true picture of the situation. I can only add that the resources have not been explored to the fullest extent. The fishermen living in the North Karnatak area are extremely backward socially, economically and culturally as compared to the fishermen in other parts of the State. It is high time that Government extended the facilities given to other areas to the fishermen of North Karnatak also.

*ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ 1959-60ನೆಯ ಸಾಲಿನ ಬಡ್ಜೆಟ್ಟಿನ ಅಂಕಿಅಂಶಗಳನ್ನು ನೋಡಿದರೆ ಇದು ಯಾವ ತರದ ಆಶಾದಾಯಕವಾದ ಸರ್ಪಲಸ್ ಬಡ್ಜೆಟ್ಟು ಎನ್ನುವದು ಅರ್ಥವಾಗುವುದಿಲ್ಲ. ಇದರಲ್ಲಿರುವ ಅನೇಕ ಲೋಪದೋಷಗಳನ್ನು ಈಗ ತಮ್ಮ ಮುಂದೆ ಇಡುತ್ತೇನೆ.

ಶ್ರೀ ಟಿ. ಮರಿಯಪ್ಪ.—ತಮ್ಮ ತಿದ್ದುಪಡಿಗಳನ್ನು ತಿಳಿಸಿ; ಅದರಂತೆ ತಿದ್ದಿಕೊಳ್ಳೋಣ.

ಶ್ರೀ ಎನ್. ಜಿ. ನರಸಿಂಹೇಗೌಡ.—ಅಂತಹ ತಿದ್ದುಪಡಿಗಳನು ಹೇಳುವುದಕ್ಕೆ ಸಾಧ್ಯವಿದೆ. ಬಡ್ಜೆಟ್ಟಿನ ಅಂಕಿ ಅಂಶಗಳನ್ನು ಕುರಿತು ವಿಸ್ತಾರವಾಗಿ ಹೇಳಲು ನನಗೆ ಸ್ಪೀಕರ್‌ರವರು ಕೊಟ್ಟ ರತಕ್ಕ ಟೈಮು ಸಾಕಾಗುವುದಿಲ್ಲ. ಸಮರ್ಪಕವಾದ ವಿವರಗಳನ್ನು ಕೊಡಲು ಸುಮಾರು ಎರಡು ಗಂಟೆಗಳಷ್ಟು ಕಾಲಾವಕಾಶವನ್ನಾದರೂ ಕೊಡಬೇಕಾಗುತ್ತದೆ. ಈಗ ಇಲ್ಲ ಕೆಲವು ವಿಷಯಗಳನ್ನೂ ಮಾತ್ತು ಕೆಲವು ಅಂಕಿಅಂಶಗಳನ್ನೂ ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ.

ಮಿಸಲೇನಿಯಸ್ ಡಿಪಾರ್ಟ್‌ಮೆಂಟುಗಳು ಎಂದಿರುವ 47ನೆಯ ಬಾಬಿನಲ್ಲಿ ರೀಸರ್ಚ್‌ಗಾಗಿ ಒದಗಿಸಿರುವ ಹಣವನ್ನು ನೋಡಿದರೆ ಅದು ಬಹಳ ಕಡಿಮೆ ಎಂದು ಹೇಳಬೇಕಾಗುತ್ತದೆ. ಆ ವಿಷಯದಲ್ಲಿ ನಮ್ಮ ದೇಶ ಬಹಳ ಹಿಂದುಳಿದಿದೆ. ರಿಸರ್ಚ್ ಬಾಬಿಗಾಗಿ ಅಮೇರಿಕ, ರಷ್ಯಾ ಮತ್ತು ಇತರ ರಾಷ್ಟ್ರಗಳಲ್ಲಿ ಒದಗಿಸುತ್ತಿರುವ ಹಣವನ್ನು ನೋಡಿದರೆ ಆ ರಾಷ್ಟ್ರಗಳಲ್ಲಿ ಅದಕ್ಕಾಗಿ ಸಿಕ್ಕುತ್ತಿರುವಷ್ಟು ಪ್ರೋತ್ಸಾಹ, ಅವಕಾಶಗಳು ಇಲ್ಲಿ ಸಿಕ್ಕುತ್ತಿಲ್ಲ. ಅದರಲ್ಲಿಯೂ, ಮೈಸೂರು ರಾಜ್ಯದಲ್ಲಂತು ಈ ಬಾಬಿಗಾಗಿ ಸರ್ಕಾರದವರು ಏನನ್ನೂ ಹೆಚ್ಚಾಗಿ ಒದಗಿಸಿಲ್ಲ. ಆದರಿಂದ ನಾನು ಸೂಚಿಸುವುದೇನೆಂದರೆ ಈ ರೀಸರ್ಚ್ ಬಾಬಿಗೆ ಇನ್ನೂ ಹೆಚ್ಚಿನ ಹಣವನ್ನು ನಾವು ಖರ್ಚು ಮಾಡಿದರೆ ನಮ್ಮ ದೇಶದಲ್ಲಿ ಇದರಿಂದ ಹೆಚ್ಚಿನ ಪ್ರಯೋಜನ ದೊರಕುತ್ತದೆ. ಆದರಿಂದ ಈ ರೀಸರ್ಚಿನ ಬಾಬಿಗೆ ಇನ್ನು ಹೆಚ್ಚಿನ ಹಣವನ್ನು ಇಡಬೇಕೆಂದು ನಾನು ಕೋರುತ್ತೇನೆ.

ಶ್ರೀ ಟಿ. ಮರಿಯಪ್ಪ.—ಇನ್ನೆಷ್ಟು ಹೆಚ್ಚಿಗೆ ಇಡಬೇಕು ಎನ್ನುವುದನ್ನು ಹೇಳಿ.

ಶ್ರೀ ಎನ್. ಜಿ. ನರಸಿಂಹೇಗೌಡ.—ಸುಮಾರು 25 ಲಕ್ಷ ರೂಪಾಯಿಗಳಷ್ಟನ್ನಾದರೂ ಈ ರೀಸರ್ಚ್ ಬಾಬಿಗೆ ಇಡಬೇಕು.

ಶ್ರೀ ಟಿ. ಮರಿಯಪ್ಪ.—ಎಲ್ಲಿಂದ ತೆಗೆದು ಯಾವ ಹೆಡ್ಡಿಗೆ ಹಾಕಬೇಕು ಎನ್ನುವುದನ್ನೂ ಸ್ವಲ್ಪ ತಿಳಿಸಿ.

ಶ್ರೀ ಎನ್. ಜಿ. ನರಸಿಂಹೇಗೌಡ.—ಈಗ ತಾವು ಉಳಿತಾಯ ಮಾಡಿದ್ದೇವೆ ಎಂದು ಹೇಳಿದ್ದೀರಲ್ಲ. ಆ ಬಾಬಿನಿಂದ 25 ಲಕ್ಷ ರೂಪಾಯಿಗಳನ್ನು ತೆಗೆದು ಬಿಟ್ಟು ಈ ರೀಸರ್ಚ್ ಬಾಬಿಗಾಗಿ ಹಾಕಿ.

ಇನ್ನು Loans to Municipalities ಎಂಬ ಬಾಬಿನಲ್ಲಿ ಪಟ್ಟಣಗಳಲ್ಲಿರುವ ಮುನಿಸಿಪಾಲಿಟಿಗಳನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಸುಮಾರು 80 ಲಕ್ಷ ರೂಪಾಯಿಗಳನ್ನು ಪ್ರೊವೈಡು ಮಾಡಿದ್ದಾರೆ. ಆದರೆ ಇತರ ಸಣ್ಣ ಸ್ಥಳೀಯ ಸಂಸ್ಥೆಗಳನ್ನು ಅಭಿವೃದ್ಧಿ ಮಾಡಲು ಏನನ್ನೂ ಈ ಬಡ್ಜೆಟ್ಟಿನಲ್ಲಿ ಪ್ರೊವೈಡು ಮಾಡಿಲ್ಲ. ಹಳ್ಳಿಗರ ವೋಟಿನ ಬಲದಿಂದಲೇ ಇಲ್ಲಿಗೆ ಬಂದು ಹಳ್ಳಿಗಾಡಿನ ಜನರನ್ನು ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾದ ಯಾವ ಕಾರ್ಯಕ್ರಮಗಳನ್ನೂ ಕೈಕೊಳ್ಳದಿರುವುದು ಅಥವಾ ಕೈಕೊಂಡಿದ್ದರೆ ಮುಂದುವರಿಸದಿರುವುದನ್ನು ಕಂಡು ನನಗೆ ಬಹಳ ಸಂಕಟವಾಗುತ್ತದೆ. ಮುನಿಸಿಪಾಲಿಟಿಗಳಿಗೆ ಈ ಸಾಲವಷ್ಟು ಅಲ್ಲದೆ ಆಕ್ಟ್ರಾಯಿ ಮತ್ತು ಇನ್ನಿತರ ಬಾಬುಗಳಿಂದ ಅವುಗಳಿಗೆ ಹಣ ದೊರೆಯುತ್ತದೆ. ಈಗ ಈ ಪಟ್ಟಣಗಳಲ್ಲಿರುವ ಮುನಿಸಿಪಾಲಿಟಿಗಳಿಗೆ 80 ಲಕ್ಷ ರೂಪಾಯಿಗಳನ್ನು ಕೊಡುವುದರ ಜೊತೆಗೆ ಸುಮಾರು ನಲವತ್ತು ಲಕ್ಷ ರೂಪಾಯಿಗಳನ್ನಾದರೂ ಹಳ್ಳಿಯವರಿಗಾಗಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಇಲ್ಲಿ ನಾನು ಸಲಹೆಯನ್ನು ಮಾಡುತ್ತೇನೆ.

ಇನ್ನು Advances to Cultivators ಎಂಬ ಬಾಬಿನಲ್ಲಿ 77ಲಕ್ಷದ 50,800 ರೂಪಾಯಿಗಳನ್ನು ಒದಗಿಸಿದ್ದಾರೆ. ಇದು ವ್ಯವಸಾಯಗಾರರಿಗೆ ಸಾಕಾಗುವುದಿಲ್ಲ. ಇದನ್ನು ಸುಮಾರು ಒಂದು ಕೋಟಿಯಷ್ಟಕ್ಕಾದರೂ ಹೆಚ್ಚಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಆ ರೀತಿಯಾಗಿ ಮುಂದಿನ ವರ್ಷವಾದರೂ ಒಂದು ಕೋಟಿ ರೂಪಾಯಿಗಳಷ್ಟಾದರೂ ಈ ಬಾಬಿಗೆ ಒದಗಿಸುತ್ತಾರೆಂದು ನಂಬಿದ್ದೇನೆ.

ಶ್ರೀ ಟಿ. ಮರಿಯಪ್ಪ.—ಷಾರ್ಟ್ ಟರ್ಮ್ ಕ್ರೆಡಿಟ್ಟೆಂದು ಇದೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಅದು ಸಾಲುವುದಿಲ್ಲ. ಅದರಿಂದ ಈ ಬಾಬಿಗೆ ಒಂದು ಕೋಟಿ ರೂಪಾಯಿಗಳವರೆಗೆ ಹಣ ಒದಗಿಸಬೇಕು.

ಅನಂತರ ಹೌಸು ಬಿಲ್ಡಿಂಗು ಅಡ್ವಾನ್ಸೆಸ್ ಎಂಬ ಬಾಬು. ಈ ವಿಚಾರದ ಬಗ್ಗೆ ನಾನು ಹೋದ ಸಾರಿಯ ಬಡ್ಜೆಟ್ ಅಧಿವೇಶನದಲ್ಲಿಯೂ ಹೇಳಿದ್ದೆ. ಈ ರೀತಿಯಾಗಿ ಸಾಲಗಳನ್ನು ಮನೆಕಟ್ಟಲು ಬರಿಯ ಪಟ್ಟಣಗಳ ಕಡೆಗೇ ಎಂದರೆ ಅಧಿಕಾರವರ್ಗದಲ್ಲಿರುವವರಿಗೇ ಹೆಚ್ಚಾಗಿ ಕೊಡುತ್ತಿದ್ದಾರೆಯೇ ಹೊರತು ಉಳಿದ ಭಾಗಗಳಲ್ಲಿ ಎಂದರೆ ರೂರಲ್ ಭಾಗಗಳಿಗೆ ಕೊಡುತ್ತಿಲ್ಲ. ಹಳ್ಳಿಯವರಾಗಿಯೇ ಇದ್ದು ಅವರ ಕಷ್ಟ ಸುಖಗಳನ್ನು ಅರಿತ ನಮ್ಮ ಮಾನ್ಯ ಹಣಕಾಸಿನ ಸಚಿವರಿಗೂ ಈ ವಿಚಾರದಲ್ಲಿ ಎಷ್ಟೋ ಬಾರಿ ನಾನು ಹೇಳಿದ್ದೇನೆ. ಅಲ್ಲದೆ ಮಾನ್ಯ ಭೀಮಪ್ಪನಾಯಕರವರಿಗೂ ಹಳ್ಳಿಯ ಜನಗಳ ಪುರೋಭಿವೃದ್ಧಿಗೋಸ್ಕರ ಈ ಸಲದ ಬಡ್ಜೆಟ್ಟಿನಲ್ಲಿ ಗ್ರಾಮಾಂತರ ಪ್ರದೇಶಗಳ

ಗೋಸ್ಕರ ಸಾಕಷ್ಟು ಹಣವನ್ನು ಒದಗಿಸಬೇಕೆಂದು ಕೇಳಿಕೊಂಡರೂ ಏನನ್ನೂ ಒದಗಿಸಿಲ್ಲ. ಈಗಿರತಕ್ಕ 30,25,000 ರೂಪಾಯಿಗಳಲ್ಲಿ ಅರ್ಧ ಭಾಗದಷ್ಟನ್ನಾದರೂ ಹಳ್ಳಿಗಳಿಗೋಸ್ಕರ ಮೀಸಲಾಗಿ ಇಡುವುದು ಅಗತ್ಯ ಎಂದು ಇಲ್ಲಿ ನಾನು ಹೇಳುತ್ತೇನೆ.

೫೦೬ನೆಯ ಪುಟದಲ್ಲಿ Advances to cultivators: Land Improvement Loans (New Rules) ಎಂಬ ಬಾಬಿನಲ್ಲಿ ೪,೫೦,೦೦೦ ರೂಪಾಯಿಗಳಷ್ಟು ಹಣವನ್ನು ಒದಗಿಸಿದ್ದಾರೆ. ಇಷ್ಟರಿಂದ ರೈತರಿಗೆ ಅನುಕೂಲವಾಗುವುದಿಲ್ಲ. ದೈನ್ಯನೇಜು, ಮತ್ತಿತರ ಬಾಬುಗಳಿಗಾಗಿ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚುಮಾಡುತ್ತಿರುವಾಗ ದೇಶದಲ್ಲಿ ಶೇಕಡ ಎಪ್ಪತ್ತೈದು ಮಂದಿ ಇರುವ ರೈತರಿಗೆ ಇವೊತ್ತಿನ ದಿವಸ ಇಷ್ಟೇ ಹಣವನ್ನು ಮಾತ್ರ ಖರ್ಚುಮಾಡಿದರೆ ಸಾಕಾಗುವುದೇ ಎನ್ನುವುದನ್ನು ಯೋಚನೆ ಮಾಡಬೇಕು. ರೈತನೇ ದೇಶದ ಬೆನ್ನುಮೂಳೆ ಎಂದು ಹೇಳತಕ್ಕ ಜನರು ಇವೊತ್ತಿನ ಮಂತ್ರಿಮಂಡಲದಲ್ಲಿಲ್ಲ. ನಮ್ಮ ಹಣಕಾಸಿನ ಮಂತ್ರಿಗಳು ಹಳ್ಳಿಗಳಿಂದ ಬಂದಿದ್ದರೂ ಕೂಡ ರೈತರ ಕಡೆಗೆ ಅಷ್ಟಾಗಿ ಲಕ್ಷ್ಯವಹಿಸುತ್ತಿಲ್ಲ. ಇದು ನಿಜವಾಗಿಯೂ ಬಹಳ ಅನ್ಯಾಯವಾದ ವಿಚಾರ. ಆದುದರಿಂದ ಈ ಬಾಬಗೋಸ್ಕರ ಮುಂದಿನ ವರ್ಷದ ಬಡ್ಜೆಟ್ಟಿನಲ್ಲಾದರೂ ಸುಮಾರು ಎಪ್ಪತ್ತೈದು ಲಕ್ಷ ರೂಪಾಯಿಗಳನ್ನಾದರೂ ಒದಗಿಸಬೇಕೆಂದು ಹೇಳುತ್ತೇನೆ. ಆ ರೀತಿಯಾಗಿ ಜಾಸ್ತಿ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಟಿ. ಮರಿಯಪ್ಪ.—ಲ್ಯಾಂಡು ಮಾರ್ಟ್‌ಗೇಜು ಬ್ಯಾಂಕುಗಳಿಗಾಗಿ ಬೇರೆ ನಲವತ್ತು ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಇನ್ನು ಈ ಕೋ-ಆಪರೇಷನ್ ಇಲಾಖೆಗಾಗಿ ಕೊಟ್ಟಿರುವುದು ಕಡಮೆ. ಇದನ್ನೂ ಜಾಸ್ತಿ ಮಾಡಬೇಕೆಂದು ಸಲಹೆಯನ್ನು ಮಾಡುತ್ತಿದ್ದೇನೆ. ಮತ್ತೊಂದು ವಿಚಾರವೇನೆಂದರೆ, ತಾವು ಡಾಕ್ಟರುಗಳ ಸಂಬಳಗಳನ್ನು ಸರಿಯಾಗಿ ರಿವೈಸ್‌ಮಾಡಿ, ಡಾಕ್ಟರುಗಳನ್ನು ಕೆಲಸಕ್ಕೆ ಕರೆಯಿರಿ. ನಾನು ಬೇಕಾದರೆ ಈ 420 ಸ್ಥಾನಗಳನ್ನು ಈ ಕ್ಷಣ ಭರ್ತಿಮಾಡಿಸುತ್ತೇನೆ. ಇಲ್ಲದಿದ್ದರೆ ನನ್ನ ಸದಸ್ಯತ್ವಕ್ಕೇ ರಾಜಿನಾಮೆ ಕೊಡುತ್ತೇನೆ.

3 P. M.

ಶ್ರೀ ಟಿ. ಮರಿಯಪ್ಪ.—ಅದನ್ನು ಮಾತ್ರ ಮಾಡಬೇಡಿ. ತಮ್ಮ ಅಮೂಲ್ಯ ಸಲಹೆಗಳು ನಮಗೆ ಬೇಕು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಇನ್ನು ಪ್ರಾಜೆಕ್ಟುಗಳ ವಿಷಯ. ಈಗ ಸುಮಾರು 50 ವರ್ಷಗಳಿಂದಲೂ ಗೊರೂರು ಅಣೆಕಟ್ಟು ಆಗಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಇದರಿಂದಾಗಿ 35,000 ಎಕರೆಗಳು ನೇರವಾಗಿಯೂ, 30,000 ಎಕರೆಗಳು indirect ಆಗಿಯೂ ಸಾಗಿಗೆ ಬರುತ್ತವೆ.

ಶ್ರೀ ಟಿ. ಮರಿಯಪ್ಪ.—Indirect ಎಂದರೆ ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಎಂದರೆ, ಆ ಅಣೆಯಿಂದ ಬೇರೆ ಬೇರೆ ಕೆರೆಗಳಿಗೆ ನೀರು ಹಾಯಿಸಿಕೊಂಡರೆ, ಅದರ ಕೆಳಗೆ ಅನೇಕ ಜಮೀನುಗಳನ್ನು ಸಾಗುಮಾಡಬಹುದು. ಈ ಅಣೆಕಟ್ಟು ಕಟ್ಟುವುದರಿಂದ ಸುಮಾರು ಏಳು-ಎಂಟು ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಈ ವಿಚಾರದಲ್ಲಿ ಹಿಂದೆ ನಮ್ಮ ಡಿಸ್ಟ್ರಿಕ್ಟಿನ ಕೆಲವು ಸದಸ್ಯರುಗಳಿಗೂ ಪಕ್ಕದ ಡಿಸ್ಟ್ರಿಕ್ಟಿನ ಕೆಲವು ಸದಸ್ಯರುಗಳಿಗೂ ಅಣೆಯ ಜಾಗದ ವಿಷಯದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿತ್ತು. ಈಗ ಅದೆಲ್ಲಾ ಬಗೆಹರಿದಿದೆ. ತಜ್ಞರು ಎಲ್ಲಿ ಕಟ್ಟಬೇಕೆಂದು ಸಲಹೆ ಮಾಡುತ್ತಾರೋ ಅಲ್ಲಿ ಕಟ್ಟಲಿ. ಮುಖ್ಯವಾಗಿ ಅಣೆ ಆಗಬೇಕು. ಈ ಪ್ರಾಜೆಕ್ಟನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಖಂಡಿತ ಸೇರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅನೇಕ ಸಾರಿ P.W.D. ಮಂತ್ರಿಗಳಲ್ಲಿ ಕೂಡ ಇದನ್ನು ನಾವು ಮನವಿ ಮಾಡಿಕೊಂಡಿದ್ದೇವೆ.

ಮೈನರ್ ಇರಿಗೇಷನ್ ಕಾಮಗಾರಿಗಳನ್ನು ಕೈಕೊಳ್ಳುವ ವಿಷಯದಲ್ಲಿ ಸರ್ಕಾರದ ನೀತಿ ಸಂಸ್ಥಾನಾದ್ಯಂತ [illegible] ಏಕರೀತಿಯಾಗಿರಬೇಕು. ಈಗ ಕೆಲವು ಸಂದರ್ಭಗಳಲ್ಲಿ ಎಗ್ಸಿಕ್ಯೂಟಿವ್ ಎಂಜಿನಿಯರು ಪೀಸ್ ವರ್ಕ್ ಮೇಲೆ ಕೊಟ್ಟು ಮಾಡಿಸುತ್ತಾರೆ; ಇನ್ನು ಕೆಲವು ಸಂದರ್ಭಗಳಲ್ಲಿ ಎಂಜಿನಿಯರು ಟೆಂಡರುಗಳನ್ನು ಕರೆದು ಕಂಟ್ರಾಕ್ಟರುಗಳಿಂದ ಮಾಡಿಸುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಅರಸೀಕೆರೆಯಲ್ಲಿ ಪೀಸ್ ವರ್ಕ್ ಮೇಲೆ ಕೆಲಸಗಳನ್ನು ಕೊಡುತ್ತಾರೆ. ಅದೇ ನಮ್ಮ ಕಡೆಯಲ್ಲಿ ಹಾಗೆ ಅಚ್ಚುಕಟ್ಟುದಾರರಿಗೆ ಮಾಡಲಿಕ್ಕೆ ಕೊಡಿ ಎಂದರೆ ಎಗ್ಸಿಕ್ಯೂಟಿವ್ ಎಂಜಿನಿಯರು ಟೆಂಡರು ಕರೆಯಬೇಕೆಂದು ಹೇಳುತ್ತಾರೆ. ಹುಳಿಯಾರ ಬೋವಿನಕಟ್ಟೆಯನ್ನು ಕಟ್ಟುವುದರಲ್ಲಿ ರೈತರು ಮುಂದೆ ಬಂದು ಕೆಲಸ ಮಾಡುತ್ತೇವೆಂದು ಹೇಳಿದರೂ ಎಗ್ಸಿಕ್ಯೂಟಿವ್ ಎಂಜಿನಿಯರು ಟೆಂಡರು ಕರೆಯುತ್ತೇವೆಂದು ಹೇಳಿದರು. ಹೀಗೆ ಮಾಡಕೂಡದು. ಸಂಸ್ಥಾನದಾದ್ಯಂತ ಎಲ್ಲ ಕಡೆಯಲ್ಲೂ ಅಚ್ಚುಕಟ್ಟುದಾರರಿಗೆ ಕೊಡಬೇಕೆಂದು ಸಲಹೆ ಮಾಡುತ್ತೇನೆ.

Coir Industry ವಿಷಯವಾಗಿ ಒಂದು ಮಾತು. ಇವೊತ್ತಿನ ದಿವಸ ಮೈಸೂರು ಸಂಸ್ಥಾನದಲ್ಲಿ ಉತ್ಪನ್ನವಾಗತಕ್ಕ ತೆಂಗಿನನಾರಿನಿಂದ ಏನು ಹೆಚ್ಚಿನ ಪ್ರಯೋಜನ ಹೊಂದಬಹುದೋ ಅದು ಇಲ್ಲವಾಗಿದೆ. ಸಿಲೋನಿನಲ್ಲಿ ತೆಂಗಿನ ಓಟೆಮಟ್ಟೆಯಿಂದ ಕೆಲಸ ನಡೆಸತಕ್ಕ 306 ಮಿಲ್ಲುಗಳಿವೆ, 76,000 ಟನ್ನುಗಳಷ್ಟು ತೆಂಗಿನ ನಾರಿನ ಸಾಮಾನುಗಳನ್ನು ಅವರು ವರ್ಷ ವರ್ಷ ರಫ್ತು ಮಾಡುತ್ತಿದ್ದಾರೆ. ಡಾಲರುಗಳನ್ನು ಸಂಪಾದಿಸುವುದಕ್ಕೆ ಇದೊಂದು ಮಾರ್ಗವಾಗಿದೆ, ಅವರಿಗೆ. ನಮ್ಮಲ್ಲಿ ಲೆಕ್ಕಹಾಕಿದರೆ 20,000 ಟನ್ನಿಗಿಂತ ಹೆಚ್ಚಿಗೆ ತೆಂಗಿನ ನಾರು ಸಿಕ್ಕುತ್ತದೆ. ಈ ಬಗ್ಗೆ ಒಂದು ಮಿಲ್ಲನ್ನು ಪ್ರಾರಂಭಿಸಲು ಹೆಚ್ಚಿನ ಬಂಡವಾಳ ಕೂಡ ಬೇಕಾಗಿಲ್ಲ. ಎರಡು ತೆರದ ಯಂತ್ರೋಪಕರಣಗಳು ಸಾಮಾನ್ಯವಾಗಿ ಬಳಕೆಯಲ್ಲಿವೆ. ಒಂದು ಕೇವಲ ಐದಾರು ಸಾವಿರ ರೂಪಾಯಿಗಳಲ್ಲಿ ಆಗತಕ್ಕಂಥಾದ್ದು. ಇನ್ನೊಂದು ತೆರದ ಮಿಲ್ಲನ್ನು ಪ್ರಾರಂಭಿಸಲು ಸುಮಾರು 30,000 ರೂಪಾಯಿಗಳು ಬೇಕಾಗಬಹುದು, ಆದ್ದರಿಂದ ಸರ್ಕಾರದವರು ಒಂದು ಕಂಪೆನಿಯನ್ನು ಏರ್ಪಡಿಸುವುದರ ಮೂಲಕವೋ ಅಥವಾ ಒಂದು ಕೋ-ಆಪರೇಟಿವ್ ಮಿಲ್ಲನ್ನು ಸ್ಥಾಪಿಸುವುದರ ಮೂಲಕವೋ 100 ಮಿಲ್ಲುಗಳನ್ನು ಸ್ಥಾಪನೆ ಮಾಡುವ ಏರ್ಪಾಡುಮಾಡಿ ಈ ಕೈಗಾರಿಕೆಯನ್ನು ನಮ್ಮ ದೇಶದಲ್ಲಿ ಪ್ರಾರಂಭಿಸಬೇಕೆಂದು ನಾನು ಹೇಳುತ್ತೇನೆ. ರೈತರಿಗೂ ಬೇಕಾದಷ್ಟು ಅನುಕೂಲವಾದಿದಂತಾಗುತ್ತದೆ. ಅಲ್ಲದೆ ಇಂಡಿಯಾ ದೇಶದ ದೃಷ್ಟಿಯಿಂದ ಡಾಲರುಗಳನ್ನು ಸಂಪಾದಿಸಲು ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಬೆಳಗಾಂ ಜಿಲ್ಲೆಯ ವಿಷಯದಲ್ಲಿ ನಮ್ಮ ಮಹಾರಾಷ್ಟ್ರದ ಸದಸ್ಯರು ಮಾತನಾಡಿದುದರ ಬಗ್ಗೆ ನಾನು ಸ್ವಲ್ಪ ಕಟುವಾಗಿಯೇ ಹೇಳಬೇಕೆಂದಿದ್ದೇನೆ. ನಾವು ಎಸ್. ಆರ್. ಸಿ. ರಿಪೋರ್ಟಿನಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ, ಅನೇಕ ರೀತಿಯ ವಾದವಿವಾದಗಳು

(ಶ್ರೀ ಎನ್. ಜಿ. ನರಸಿಂಹೇಗೌಡ)

ನಡೆದುವು. ಒಂದು ಪ್ರದೇಶದಲ್ಲಿ ಕನ್ನಡಿಗರೂ ಇರಬಹುದು, ತಮಿಳರೂ ಇರಬಹುದು, ತೆಲುಗರೂ ಇರಬಹುದು, ಮರಾಠಿಗರೂ ಇರಬಹುದು; ಮುಖ್ಯವಾಗಿ ಯಾವ ಭಾಗದಲ್ಲಿ ಕನ್ನಡ ಜನ ಹೆಚ್ಚಾಗಿದ್ದು ಆಡಳಿತ ದೃಷ್ಟಿಯಿಂದ ಅನುಕೂಲವಾಗಿದ್ದರೆ ಅವೆಲ್ಲ ಪ್ರದೇಶಗಳೂ ಕನ್ನಡ ರಾಜ್ಯದಲ್ಲಿ ಸೇರಿರಬೇಕೆಂದು ಒಂದು ತೀರ್ಮಾನಕ್ಕೆ ಬಂದೆವು. ಈ ಸಂದರ್ಭದಲ್ಲಿ ಎಲ್ಲ ಅಂಕಿಅಂಶಗಳನ್ನು ಶೇಖರಿಸಿ, ನಾನಾ ರೋಪದೋಷಗಳನ್ನು ಹಿಡಿದು ಪರಿಶೀಲಿಸಿ ಇಂಥಿಂಥ ಮಹಾರಾಷ್ಟ್ರದ ಪ್ರದೇಶಗಳು ಕನ್ನಡ ದೇಶಕ್ಕೆ ಸೇರಿ ಕನ್ನಡ ರಾಜ್ಯವಾಗಬೇಕೆಂದು ಆಗ ತೀರ್ಮಾನ ಮಾಡಿದ್ದಾಗಿದೆ. ಹೀಗಿರುವಲ್ಲಿ ಈಗ ಮತ್ತೆ ವಿಷಯಗಳನ್ನು ಎತ್ತಿ ನಮ್ಮ ಮಹಾರಾಷ್ಟ್ರದ ಸದಸ್ಯರು ನಡೆಸುತ್ತಿರುವ ವಾದ ಸರಿಯಲ್ಲ. ದೇಶದ ಹಿತದೃಷ್ಟಿಯಿಂದ ಇದು ಸರಿಯಲ್ಲ. ಅವರು ನಮ್ಮೊಡನೆ ಒಡಗೂಡಿ ನೆಮ್ಮದಿಯಿಂದ ಬಾಳಬೇಕು. ಅವರಿಗೆ ನಮಗೆ ಕೊಡತಕ್ಕ ಸೌಲಭ್ಯಕ್ಕಿಂತಲೂ ಹೆಚ್ಚಿಗೆ ಸೌಲಭ್ಯಗಳನ್ನು ಕೊಡಿ ಎಂದು ಹೇಳತಕ್ಕವರಲ್ಲಿ ನಾನೂ ಒಬ್ಬ. ನಾವು ನಿಜವಾಗಿಯೂ ಬೆಳಗಾಂ ಜಿಲ್ಲೆಯವರಿಗೆ ಎಲ್ಲ ತರಹ ಸೌಲಭ್ಯಗಳನ್ನು ಕೊಡುತ್ತಿದ್ದರೂ ಕೂಡ ಅವರು ಕನ್ನಡಿಗರನ್ನು ಹೀಯಾಳಿಸುವುದಕ್ಕೆ, ಮೈಸೂರು ದೇಶದವರನ್ನು ಹೀಯಾಳಿಸುವುದಕ್ಕೆ ಪ್ರಯತ್ನಿಸುತ್ತಿರುವುದು ನ್ಯಾಯವೂ ಅಲ್ಲ, ಧರ್ಮವೂ ಅಲ್ಲ. ಅವರು ನ್ಯಾಯವಾಗಿ ನಮ್ಮೊಡನೆ ಸಹಕರಿಸಬೇಕು. ನಮ್ಮಲ್ಲಿ ರೋಪದೋಷಗಳಿದ್ದರೆ ಅದನ್ನು ಸರಿಪಡಿಸುವುದಕ್ಕೆ ಸಲಹೆ ಕೊಡಲಿ. ಅದನ್ನು ಬಿಟ್ಟು ಹೋರಾಟ ನಡೆಸುವುದಕ್ಕೆ ಪ್ರಚೋದಿಸುವುದು ತಪ್ಪು. ಆದ್ದರಿಂದ ನಾನು ಮಾನ್ಯ ಸದಸ್ಯರನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಈ ರೀತಿಯಾಗಿ ಹೆದರಿಕೆ ಬೆದರಿಕೆಗಳನ್ನು ತೋರತಕ್ಕ ವರ್ತನೆಯನ್ನು ಬಿಟ್ಟು ಇನ್ನು ಮೇಲಾದರೂ ಸೌಹಾರ್ದ ದೃಷ್ಟಿಯಿಂದ ವರ್ತಿಸರೆಂದು ಹೇಳುತ್ತೇನೆ.

ಎರಡನೆಯದಾಗಿ, ನಮ್ಮ ಕರ್ಣಾಟಕದ ಹೊರಗಡೆ ಸಂಪೂರ್ಣವಾಗಿ ಕನ್ನಡ ಮಾತನಾಡತಕ್ಕ ಪ್ರದೇಶಗಳಾದ ನೀಲಗಿರಿ ಮುಂತಾದ ಜಿಲ್ಲೆಗಳಿವೆ. 100ಕ್ಕೆ 80 ಜನ ಅಲ್ಲಿನವರು ಕನ್ನಡಿಗರು. ಅವರು ಮೈಸೂರಿನೊಡನೆ ಸೇರಬೇಕೆಂದು ಸಂಪೂರ್ಣ ಇಚ್ಛೆಯುಳ್ಳವರಾಗಿದ್ದಾರೆ. ಈ ಭಾಗಗಳು ಮೈಸೂರಿಗೆ ಸೇರುವಂತೆ ಮಾಡಲು ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಇತರ ಮಂತ್ರಿಗಳೂ ವಿಶ್ವ ಪ್ರಯತ್ನ ನಡೆಸಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ರಾಜ್ಯಾಡಳಿತದ ವಿಷಯವಾಗಿ ಒಂದು ಮಾತು. ನಮ್ಮ ಮುಂದೆ ದೇಶದ ಆಗುಹೋಗುಗಳನ್ನು ಸರಿಯಾಗಿ ಸಮತಾವಾದ ದೃಷ್ಟಿಯಿಂದ ನಾವು ರಾಜ್ಯವಾಳುತ್ತೇವೆ ಎಂದು ಹೇಳತಕ್ಕ ಕಾಂಗ್ರೆಸ್ಸಿನ ಕೆಲವು ನಾಯಕರುಗಳು ನಮ್ಮ ದೇಶದಲ್ಲಿನ ರೈತರ ಇಂದಿನ ಆರ್ಥಿಕ ಸ್ಥಿತಿಯನ್ನು ಅವರ ಪುರೋಭಿವೃದ್ಧಿಯನ್ನು ಪೂರ್ಣವಾಗಿ ಮರೆತಿದ್ದಾರೆಂದು ಕಾಣುತ್ತದೆ. ನಗರದ ಅಭಿವೃದ್ಧಿ, ಪಟ್ಟಣದ ಅಭಿವೃದ್ಧಿಯ ಕಡೆಗೇ ಅವರ ಲಕ್ಷ್ಯವೆಲ್ಲಾ ಇದೆಯೆಂದು ಕಾಣುತ್ತದೆ. ಹಾಗೆಯೇ ಬಡ ಜನರ ರಕ್ಷಣೆಯ ದೃಷ್ಟಿ ಅವರಿಗಿಲ್ಲ. ಇಂದು ದೇಶದಲ್ಲಿ ಎನ್. ಜಿ. ಓ.ಗಳ ಸ್ಥಿತಿ ತೀರ ಚಿಂತಾಜನಕವಾಗಿದೆ. ಅವರಿಗೆ ಕೊಡತಕ್ಕ ಹಣವನ್ನು ಅತ್ಯಗತ್ಯವಾಗಿ ಈಗ ವಿಮರ್ಶೆ ಮಾಡಬೇಕಾಗಿದೆ. ಮೂರೂವರೆ ಸಾವಿರ ರೂಪಾಯಿಗಳ ಸಂಬಳ ನಮ್ಮ ದೇಶದಲ್ಲಿ ಯಾರಿಗೂ ಕೊಡಬೇಕಾದ ಅವಶ್ಯಕತೆಯಿಲ್ಲ. ಇಡಿಯ ಇಂಡಿಯಾ ದೇಶಕ್ಕೇ ಬೇಕಾಗಿಲ್ಲ. ಒಂದೆಡೆ, ಎನ್.ಜಿ.ಓ.ಗಳಿಗೆ ಕೇವಲ 50 ರೂಪಾಯಿಗಳನ್ನು ಕೊಟ್ಟು ಕೆಲಸ ಮಾಡು ಎನ್ನುವುದು. ಇನ್ನೊಂದು ಕಡೆ 3,000 ರೂಪಾಯಿ 3,500 ರೂಪಾಯಿಗಳನ್ನು ಕೊಟ್ಟು ಐ.ಎ.ಎಸ್. ಅಧಿಕಾರಿಗಳನ್ನು ಸೃಷ್ಟಿಮಾಡುವುದು ಎಂದರೆ, ಆ ಬಡಜನರಿಗೇನೂ human feelings ಇರುವುದಿಲ್ಲವೇ?

ಶ್ರೀ ಟಿ. ಮರಿಯಪ್ಪ.—3,500 ರೂಪಾಯಿಗಳೆಂಬುದು ಐ.ಸಿ.ಎಸ್. ಆಫೀಸರುಗಳಿಗೆ. ಐ.ಎ.ಎಸ್.ನವರಿಗೆ ಇನ್ನೂ ಕಡಮೆ ಸಂಬಳ ಇದೆ, ಒಂದು ಜೂನಿಯರ್ ಸ್ಕೇಲು 1,800 ರೂಪಾಯಿನವರೆಗಿದೆ. ಇನ್ನೊಂದು ಸೀನಿಯರ್ ಸ್ಕೇಲು—ಅದೂ ಸೆಲೆಕ್ಷನ್ ಪೋಸ್ಟ್‌ಗಳಿಗೆ 2,250, ರೂಪಾಯಿಗಳವರೆಗಿದೆ, ಅಷ್ಟೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಹಣ್ಣುಗಳನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಎಷ್ಟು ಲೋನನ್ನು ಕೊಟ್ಟಿದ್ದಾರೆ? ನಮ್ಮ ಫೈನಾನ್ಸ್ ಮಿನಿಸ್ಟರು ಪ್ರತಿದಿವಸವೂ ಹಣ್ಣುಗಳನ್ನು ತೆಗೆದುಕೊಳ್ಳುತ್ತಿರುವುದರಿಂದ ಉಳಿದುಕೊಂಡಿದ್ದಾರೆ. ಇವೊತ್ತಿನ ದಿವಸ ಆರೋಗ್ಯಭಾಗ್ಯ ಜಾಸ್ತಿಯಾಗಬೇಕಾದರೆ ಫ್ರೂಟ್ಸ್ ಹೆಚ್ಚಾಗಿ ತೆಗೆದುಕೊಳ್ಳಬೇಕು. ಅಂತಹುದರಲ್ಲಿ ಅದಕ್ಕೆ ಸಾವಿರ ರೂಪಾಯಿ ಮಾತ್ರ ಪ್ರೊವೈಡ್ ಮಾಡಿದ್ದಾರೆ. ಇಡಿಯ ಕರ್ನಾಟಕದಲ್ಲಿ ಫ್ರೂಟ್ ಕಲ್ಟಿವೇಟ್ ಮಾಡುವುದಕ್ಕೆ ಮತ್ತು ರಿಸರ್ಚ್ ಮಾಡುವುದಕ್ಕೆ ಸಾವಿರ ರೂಪಾಯಿ ಪ್ರೊವೈಡ್ ಮಾಡಿದರೆ ಯಾವ ಧರ್ಮ? ಸೇವಿಂಗ್ಸ್ ಬ್ಯಾಂಕ್ ಉಳಿತಾಯವಾಗುವ ದುಡ್ಡಿನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಫ್ರೂಟ್ ಕಲ್ಟಿವೇಷನ್ನಿಗೋಸ್ಕರ ಸಹಾಯ ಮಾಡುತ್ತೇವೆಂದು ಹೇಳುತ್ತೀರಿ.

ಲೋನ್ಸ್ ಟು ಅಗ್ರಿಕಲ್ಚರಿಸ್ಟ್ ಫಾರ್ ಪರ್ಚೇಸ್ ಆಫ್ ನ್ಯೂ ಟ್ರ್ಯಾಕ್ಟರ್ಸ್‌ಗೆ ಒಂದು ಲಕ್ಷ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೀರಿ. ನಿಜವಾಗಿ ನಮ್ಮಲ್ಲಿರತಕ್ಕ ಭೂಮಿಯಲ್ಲಿ, ಇವೊತ್ತಿನ ದಿವಸ ಕರ್ಣಾಟಕಕ್ಕೆ ಸೇರಿರತಕ್ಕ ಭೂಮಿಯಲ್ಲಿ, ನಾಲ್ಕೈದು ಸಾವಿರ ಎಕರೆ ಭೂಮಿ ಇದೆ. ನಮ್ಮಲ್ಲಿ ದೊಡ್ಡ ಭೂಮಿಗಳಿವೆ. ಆದರೆ ನಮ್ಮಲ್ಲಿ ಎಪ್ಪತ್ತೈದು ಟ್ರ್ಯಾಕ್ಟರುಗಳಿವೆ. ಟ್ರ್ಯಾಕ್ಟರುಗಳು ಕೆಟ್ಟುಹೋಗಿವೆ. ಅನೇಕ ಜನರು ಅವುಗಳನ್ನು ಡಿಮ್ಯಾಂಡ್ ಮಾಡುತ್ತಾ ಇದ್ದಾರೆ. ಸ್ವತಃ ಹೋಗಿ ಮಿನಿಸ್ಟರನ್ನೂ ಡೈರೆಕ್ಟರನ್ನೂ ನೋಡಿದೆ. ನಮ್ಮಲ್ಲಿರುವ ಟ್ರ್ಯಾಕ್ಟರುಗಳು ಸಾಕಾಗುವುದಿಲ್ಲ, ಹೆಚ್ಚಿಗೆ ಟ್ರ್ಯಾಕ್ಟರುಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದೆ. ಒಂದು ಲಕ್ಷ ಇಪ್ಪತ್ತೆರಡುಸಾವಿರ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೀರಿ. ಈ ಮೊಬಲಗಿಗೆ ಎಷ್ಟು ಟ್ರ್ಯಾಕ್ಟರುಗಳು ಬರುತ್ತವೆ? ಎಂಟು-ಹತ್ತು ಟ್ರ್ಯಾಕ್ಟರುಗಳು ಬರಬಹುದು. ನಮ್ಮ ದೇಶ ಮುಂದಕ್ಕೆ ಬರಬೇಕು, ಆಹಾರ ಸಾಮಗ್ರಿಗಳನ್ನು ಹೆಚ್ಚಿಗೆ ಬೆಳೆಯಬೇಕು ಎಂಬುದು ಸರ್ಕಾರದ ಮನಸ್ಸಿನಲ್ಲಿದ್ದರೆ, ಈ ಮೊಬಲಗನ್ನು ಕನಿಷ್ಠಪಕ್ಷ ಹತ್ತು ಲಕ್ಷ ಇಪ್ಪತ್ತೆರಡು ಸಾವಿರ ರೂಪಾಯಿಗಳವರೆಗೆ ಏರಿಸಿಕೊಳ್ಳುತ್ತೀರೆಂದು ನಂಬಿದ್ದೇನೆ. ಟ್ರ್ಯಾಕ್ಟರುಗಳು ಅತ್ಯಾವಶ್ಯಕವಾಗಿ ಬೇಕಾಗಿವೆ. ಜಾಸ್ತಿ ಭೂಮಿ ಇರುವವರು ಸಂಸ್ಥಾನದಲ್ಲಿ ಲಾರ್ಜ್-ಸ್ಕೇಲ್ ಅಗ್ರಿಕಲ್ಚರ್ ಮಾಡುವುದಕ್ಕಾಗುವುದಿಲ್ಲ. ಲಾರ್ಜ್-ಸ್ಕೇಲಿನಲ್ಲಿ ಮಾಡಬೇಕಾದರೆ ಮೆಷಿನರಿ ಬೇಕೇ ಬೇಕು. ಅಮೇರಿಕದೊಡನೆ ಕಂಪೇರ್ ಮಾಡಿಕೊಂಡು ನೋಡುವುದಾದರೆ, ಇಂಡಿಯ ಅಮೇರಿಕ ನಮಗೆ ಕೊಡತಕ್ಕ

ಮೆಷಿನರಿಯಿಂದ ಮುಂದಕ್ಕೆ ಬಂದಿದೆ. ೫೦೭ ನೆಯ ಪೇಜ್‌ನ್ನು ನೋಡಿ. ಟ್ರ್ಯಾಕ್ಟರುಗಳನ್ನು ತೆಗೆದುಕೊಳ್ಳುವುದನ್ನು ಜಾಸ್ತಿ ಮಾಡಬೇಕು. ಒಂದು ದೃಷ್ಟಿಯಲ್ಲಿ ಟ್ರ್ಯಾಕ್ಟರ್ ಕೊಳ್ಳತಕ್ಕದ್ದರಲ್ಲಿ ಲಾಸ್ ಆಗುತ್ತದೆ.

ಶ್ರೀ ಟಿ. ಮರಿಯಪ್ಪ.—೫೦೭ ನೆಯ ಪೇಜನ್ನು ನೋಡಿ. ರೆಸೀಟ್ ಕಾಲಮ್‌ನಿಂದ ಹೇಳುತ್ತಾ ಇದ್ದೀರಿ. ಎಕ್ಸ್‌ಪೆಂಡಿಚರ್ ಕಾಲಮ್ ನೋಡಿ. ಜಾಸ್ತಿ ಪ್ರೊವೈಡ್ ಮಾಡಿದ್ದೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಆ ಹಿಡ್ಡಿನಲ್ಲಿ ನೋಡಿದರೆ ಸಾಕಾಗುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ನೀವು ಸಲಹೆ ಕೊಟ್ಟಿರುವುದರಲ್ಲಿ ಸ್ವಲ್ಪ ಸ್ವಲ್ಪ ಬರುತ್ತದೆ. ೫೦೭ ನೆಯ ಪುಟದಲ್ಲಿ ಖರ್ಚು ಎಲ್ಲಾ ಇದೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—Expenditure ಲಿಸ್ಟ್ ನೋಡಿದರೆ ಲಾಸ್ ಆಗುತ್ತದೆ. ಇದನ್ನು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲವೆಂದು ಡಿಪಾರ್ಟ್‌ಮೆಂಟಿನಲ್ಲಿ ಅನೇಕರು ಹೇಳುತ್ತಾರೆ.

ಶ್ರೀ ಟಿ. ಮರಿಯಪ್ಪ.—ಅಜಗಜಾಂತರ ವ್ಯತ್ಯಾಸ. ರೆಸೀಟ್ಸ್ ನೋಡಿಕೊಂಡು ಕಡಮೆ ತೆಗೆದುಕೊಂಡಿದ್ದೀರಿ. ತಕಾವಿ ಲೋನಿಗೆ ಹತ್ತು ಲಕ್ಷ, Irrigation to wells 7 lakhs, Diesel Engines 5 lakhs, loans to agriculturists 5 lakhs, ಟ್ರ್ಯಾಕ್ಟರಿಗೆ ಐದು ಲಕ್ಷ ಪ್ರೊವೈಡ್‌ಮಾಡಿದ್ದೇವೆ.

ಶ್ರೀ ಎಚ್. ಜಿ ನರಸಿಂಹೇಗೌಡ.—Expenditure ಗಾಗಿ provide ಮಾಡಿದ್ದೀರಿ. ಆದರೆ ಕಾರ್ಯತಃ ಏನೂ ಮಾಡುತ್ತಾ ಇಲ್ಲ. ಹೋದ ವರ್ಷ ಎಷ್ಟು ಮಾಡಿದ್ದೀರಿ?

ಶ್ರೀ ಟಿ. ಮರಿಯಪ್ಪ.—ಇನ್ನೂ ಸ್ವಲ್ಪ ಓದಬೇಕಾಗಿತ್ತು. ಇದು ಕಟ್ಟಣದ ಕಡಲೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹೋದ ವರ್ಷ ಎಷ್ಟು ಟ್ರ್ಯಾಕ್ಟರುಗಳನ್ನು ಪರ್ಚೇಸ್‌ಮಾಡಿದ್ದೀರಿ ಎಂದು ಹೇಳಿದರೆ, 'ನಿಲ್'.

ಶ್ರೀ ಟಿ. ಮರಿಯಪ್ಪ.—ಐದು ಲಕ್ಷ ಪ್ರೊವೈಡ್ ಮಾಡಿದ್ದೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹೋದವರ್ಷ ಯಾವ ಟ್ರ್ಯಾಕ್ಟರುಗಳನ್ನೂ ತೆಗೆದುಕೊಂಡಿಲ್ಲ.

ಶ್ರೀ ಟಿ. ಮರಿಯಪ್ಪ.—ಮೂರು ಲಕ್ಷ ಪ್ರೊವೈಡ್ ಮಾಡಿ, ಮೂರು ಲಕ್ಷ ಕೊಟ್ಟಿದ್ದೇವೆ. ಜಾಸ್ತಿ ಜನ ಬರುತ್ತಾರೆಂದು ಐದು ಲಕ್ಷ ರೂಪಾಯಿ ಪ್ರೊವೈಡ್ ಮಾಡಿದ್ದೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹೋದವರ್ಷ ನೀವು ಯಾವ ಟ್ರ್ಯಾಕ್ಟರುಗಳನ್ನೂ ತೆಗೆದುಕೊಂಡಿಲ್ಲವೆಂದು ಹೇಳುತ್ತೇನೆ. ಟ್ರ್ಯಾಕ್ಟರ್ ವಿಷಯದಲ್ಲಿ ಏನೂ ಮಾಡಿಲ್ಲ. ಸರ್ಕಾರದವರೇ ನೇರವಾಗಿ ತೆಗೆದುಕೊಂಡು, ಹೈರ್ ಪರ್ಚೇಸಿಗೆ ಕೊಟ್ಟಿರುವುದು ಆ ಭಾಗದಲ್ಲಿಯೇ ಇಲ್ಲ.

ಹಿಂದೆ ಫೈನಾನ್ಸ್ ಮಿನಿಸ್ಟರುಗಳು ಸಂಪ್ರದಾಯದ ಪ್ರಕಾರ ಬಜೆಟ್ ಮಂಡಿಸುವುದಕ್ಕೆ ಮುಂಚಿತವಾಗಿ, ಏನಾದರೂ ಅನುಮಾನವಿದ್ದರೆ ಎಲ್ಲಾ ಪಾರ್ಟಿಯವರನ್ನೂ ಕರೆದುಬಿಟ್ಟು ಹೇಳತಕ್ಕಂಥ ನಿಯಮವಿತ್ತು. ಹೀಗೆ ಹೇಳತಕ್ಕಂಥ ಒಂದು ಸಂಪ್ರದಾಯವಿತ್ತು. ನಾವು ತಪ್ಪು ಹೇಳಿದಲ್ಲಿ ತಪ್ಪನ್ನು ತಿದ್ದಿಕೊಳ್ಳಲು, ಅವರನ್ನು ಕ್ರಾಸ್ ಎಕ್ಸಾಮಿನ್ ಮಾಡುವ ಅವಕಾಶವಿತ್ತು. ಆ ಸಂಪ್ರದಾಯ ತಪ್ಪಿಹೋಗಿದೆ.

ಶ್ರೀ ಟಿ. ಮರಿಯಪ್ಪ.—ತಾವು ಒಪ್ಪಿಕೊಳ್ಳುವುದಾದರೆ ಈಗಲೂ ಕ್ರಾಸ್ ಹೋಲ್ಡ್ ಮಾಡುವುದಕ್ಕೆ ರೆಡಿ ಇದ್ದೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಕ್ಲಾಸ್ ಅಲ್ಲ. ಅಪೊಸಿಷನ್ ಸೆಕ್ರೆಟೇರಿಯಟ್ಟಿಗೆ ಸ್ಟ್ಯಾಫ್ ಕೊಡಿ ಎಂದು ಅವರು ಹೇಳಿದ್ದು.

ಶ್ರೀ ಟಿ. ಮರಿಯಪ್ಪ.—ಫೈನಾನ್ಸ್ ಸೆಕ್ರೆಟರಿಗಳು ಅಸೆಂಬ್ಲಿಯ ಮೆಂಬರುಗಳನ್ನು ಕರೆಯುತ್ತಿದ್ದರು; ಎಕ್ಸ್‌ಪ್ಲೇನ್ ಮಾಡುತ್ತಿದ್ದರು. ತಾವು ಅಭಿಪ್ರಾಯಪಟ್ಟರೆ, ಈಗಲೂ ಎಕ್ಸ್‌ಪ್ಲೇನ್ ಮಾಡುತ್ತೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಪಾರ್ಲಿಮೆಂಟಿನಲ್ಲಿ ಈ ಪದ್ಧತಿ ಇದೆ.

ಮಕ್ಕಳ ವಿಷಯದಲ್ಲಿ ಈ ದಿವಸ ಬಜೆಟ್ಟಿನಲ್ಲಿ ಏನೂ ಪ್ರೊವೈಡ್‌ಮಾಡಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಆರೋಗ್ಯವನ್ನು ಕಾಪಾಡಬೇಕಾಗಿದ್ದರೆ ಡಾಕ್ಟರುಗಳನ್ನು ಮುಂದಕ್ಕೆ ತರಬೇಕು. ಇವೊತ್ತಿನ ದಿವಸ ಮೆಡಿಕಲ್ ಇಲಾಖೆಯಲ್ಲಿ ನಾಲ್ಕುನೂರು ಇಪ್ಪತ್ತು ಜನ ಡಾಕ್ಟರು ಕಡಮೆ ಇದ್ದಾರೆ. ಏನುಕಾರಣವೆಂದು ಈ ಸಭೆಯಲ್ಲಿ ಕೇಳುತ್ತೇನೆ. L.M.P. ಮತ್ತು M.B.B.S. Degree ಹೋಲ್ಡರುಗಳಿಗೆ ಬೊಂಬಾಯಿನಲ್ಲಿ ಇನ್ನೂರು ಇಪ್ಪತ್ತೈದರಿಂದ ನಾನ್ನೂರು ಐವತ್ತು ರೂಪಾಯಿಗಳವರೆಗೆ ಸಂಬಳವನ್ನು ಕೊಡುತ್ತಾರೆ. ನಮ್ಮ ಮೈಸೂರಿನಲ್ಲಿ ನೂರೈವತ್ತು ರೂಪಾಯಿ ಹಿಂದೆ ಇತ್ತು. ಈಗ ನೂರು ಇಪ್ಪತ್ತೈದಕ್ಕೆ ಇಳಿಸಿದ್ದಾರೆ. ಇದು ಏನು ಅನ್ಯಾಯ? ಬೊಂಬಾಯಿ ಸ್ಕೇಲಿನಲ್ಲಿ ಇನ್ನೂರ ಇಪ್ಪತ್ತೈದು ರೂಪಾಯಿ ಸ್ಟಾರ್ಟಿಂಗ್ ಕೊಡಿ.

ಶ್ರೀ ಟಿ. ಮರಿಯಪ್ಪ.—100—150—450 ಇದ್ದುದನ್ನು ಈಗ 100—10—300—450—600 ಮಾಡಿದೆ. ಆದ್ದರಿಂದ ಎರಡನ್ನೂ ಮಿಕ್ಸ್‌ಮಾಡಬೇಡಿ. ಸ್ಟ್ಯಾಫಿಗೇ ನಾವು ದುಡ್ಡು ಖರ್ಚುಮಾಡಿಬಿಡುತ್ತೇವೆಂದು ಹೇಳುತ್ತಾರೆ. ಸ್ಟ್ಯಾಫಿಗೆ ಖರ್ಚು ಮಾಡಬಹುದೆಂದು ಬಹುಮತದ ಅಭಿಪ್ರಾಯ ಬಂದರೆ, ಸ್ಟ್ಯಾಫಿಗೆ ಖರ್ಚುಮಾಡೋಣ. ಆದರೆ ದುಡ್ಡು ಔಷಧಿಗೆ ಬೇಕೋ, ಡಾಕ್ಟರಿಗೆ ಬೇಕೋ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಈಗ ಏನಾಗಿದೆಯೆಂದರೆ, ಹೊರ ಪ್ರದೇಶಗಳ ಸ್ಕೇಲಿಗೂ ನಮ್ಮ ಸ್ಕೇಲಿಗೂ ವ್ಯತ್ಯಾಸವಿರುವುದರಿಂದ, ನಮಗೆ ಡಾಕ್ಟರುಗಳು ಸಿಕ್ಕುವುದಿಲ್ಲ. ೪೨೦ ಜನ ಡಾಕ್ಟರು ಹೆಲ್ತ್ ಯೂನಿಟ್‌ಗಳಿಗೆ ಹಾಸ್ಪಿಟಲ್ಲುಗಳಿಗೆ ಕಡಮೆಯಾಗಿದೆಯೆಂದರೆ, ಸರ್ಕಾರ ಏನು ಮಾಡುತ್ತಾ ಇದೆ? ಡಾಕ್ಟರುಗಳಿಲ್ಲದೆ ಜನಗಳ ಅನಾರೋಗ್ಯ ಹೆಚ್ಚುತ್ತಿದೆ. ಡಾಕ್ಟರುಗಳಿಲ್ಲದೆ ಎಷ್ಟೋ ಹಳ್ಳಿಗಾಡಿನ ಆಸ್ಪತ್ರೆಗಳನ್ನು ಮುಚ್ಚಿದ್ದಾರೆ. ಒಂದು ಸಿಟಿ ಆಸ್ಪತ್ರೆಯನ್ನಾದರೂ ಮುಚ್ಚಿಲ್ಲ. ಮಿನಿಸ್ಟರಿಗೂ, ಸಂಬಂಧಪಟ್ಟ ಡೈರೆಕ್ಟರಿಗೂ ಹೇಳಿದ್ದೇನೆ. ೪೨೦ ಡಾಕ್ಟರುಗಳು ಇರಬೇಕಾದ ಪ್ರದೇಶಯಾವುದೆಂದರೆ ಹಳ್ಳಿಗಳು. ಅದಕ್ಕೋಸ್ಕರ ಯೋಜನೆ ಹಾಕಿದ್ದೀರಿ? ಮೆಡಿಕಲ್ ಡಿಪಾರ್ಟ್‌ಮೆಂಟು ರಿಆರ್ಗನೈಜ್ ಆಗಿಯೇ ತೀರಬೇಕು. ಈಗಿರತಕ್ಕ ಪದ್ಧತಿ ಹೋಗಬೇಕೆಂದು ನಾನು ಹೇಳುತ್ತೇನೆ.

ಶ್ರೀ ಜಿ. ಕೆ. ಹೆಗ್ಡೆ (ಆರೋಗ್ಯ ಶಾಖೆಯ ಮಂತ್ರಿಗಳು). ಅದನ್ನು ಒಪ್ಪಿಕೊಂಡಿದ್ದೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ನಮ್ಮಲ್ಲಿರತಕ್ಕಂಥ ವಿದ್ಯಾರ್ಥಿಗಳು ಹೊರಗಡೆ ಪ್ರದೇಶಗಳಿಗೆ ಹೋಗಿ ಸ್ಟಡಿಮಾಡುತ್ತಾರೆ. ಸ್ವಂತ ದುಡ್ಡಿನಲ್ಲಿ ಕಾಲೇಜಿಗೆ ಸೇರುತ್ತೇವೆಂದರೆ ಪರ್ಮಿಷನ್ ಕೊಡುವ ಪದ್ಧತಿ ಇಲ್ಲ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನೂರಿಪ್ಪತ್ತು ಡಾಕ್ಟರುಗಳು ಇದ್ದಾರೆ. ಕೆಲವು ಆಸ್ಪತ್ರೆಗಳಲ್ಲಿ ಹತ್ತು-ಹದಿನೈದು ಜನ ಡಾಕ್ಟರುಗಳು ಇದ್ದಾರೆ. ವಿಕ್ಟೋರಿಯಾ ಆಸ್ಪತ್ರೆಗೆ ನೂರಿಪ್ಪತ್ತು ಡಾಕ್ಟರು ಏಕೆ? ಐವತ್ತು ಡಾಕ್ಟರು ಸಾಕು. ಬಾಕಿಯವರನ್ನು ಹಳ್ಳಿಗಾಡಿನ ಆಸ್ಪತ್ರೆಗಳಿಗೆ ಕಳುಹಿಸಿಬಿಡಿ. ಸಿವಿಲ್ ಸ್ಪೇಷಲ್ ಆಸ್ಪತ್ರೆಗೆ ಇಪ್ಪತ್ತು-ಇಪ್ಪತ್ತೈದು ಜನರು ಏಕೆ? ಧಾರವಾಡ ಆಸ್ಪತ್ರೆಯಲ್ಲಿ ಆರು ಜನ ಡಾಕ್ಟರುಗಳು ಕೆಲಸ ಮಾಡುತ್ತಿದ್ದಾರೆ. ಮೆಥಡ್ಸ್ ಆಫ್ ವರ್ಕನ್ನು ಬದಲಾಯಿಸಬೇಕು. ೪೨೦ ಡಾಕ್ಟರುಗಳ ಸ್ಥಾನ ಖಾಲಿ ಬಿದ್ದಿರುವುದು ನ್ಯಾಯವಲ್ಲ. ಹೊರಗಡೆ ಹೋಗಿ, ಔಟ್ ಆಫ್ ಇಂಡಿಯಾದಲ್ಲಿ, ಎರಡು ವರ್ಷದ ಅವಧಿಯಲ್ಲಿ ಮೆಡಿಕಲ್ ಡಿಗ್ರಿ ಕೋರ್ಸನ್ನು ಮುಗಿಸಿ ಡಿಗ್ರಿಯನ್ನು ತರುತ್ತೇವೆಂದು ಹೇಳುವವರಿಗೆ ಅವಕಾಶ ಕೊಡಬೇಕು. ಇಂಡಿಯಾ ಸರ್ಕಾರವೇ ಈ ರೀತಿ ವೇತನ ವ್ಯತ್ಯಾಸದಲ್ಲಿ ಒಂದು ಹೆಜ್ಜೆ ತಪ್ಪುಹಾಕಿದೆ. ಅಲ್ಲಿರತಕ್ಕ ಪ್ಲಾನಿಂಗ್ ಕಮಿಷನ್ನಿನವರು ಇತರ ಸಮಾಜದವರು ಏನಾದರೂ ಮುಂದಕ್ಕೆ ಬರಬೇಕೆಂಬ ದೃಷ್ಟಿಯಿಂದ ಮಾಡುತ್ತಿದ್ದಾರೋ ಅಥವಾ ಅವರಲ್ಲಿ ಕೆಲವರಿಗೆ ಮಾತ್ರ ಎಂಕರೇಜ್‌ಮೆಂಟ್ ಕೊಡಬೇಕೆಂದು ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ. ಇದು ನ್ಯಾಯವಲ್ಲ. ಸರ್ಕಾರದಲ್ಲಿ ಯಾವ ಅಧಿಕಾರಿಯ ಪರಮಾವಧಿ ಸಂಬಳವೂ ಒಂದು ಸಾವಿರಕ್ಕಿಂತ ಹೆಚ್ಚಾಗಿಯೂ ಕನಿಷ್ಠ ಸಂಬಳ ನೂರಕ್ಕೆ ಕಡಮೆಯಾಗಿಯೂ ಇರಕೂಡದು ಎಂದು ನಾನು ಹೇಳುತ್ತೇನೆ. ಈ ವಿಷಯದಲ್ಲಿ ಈ ಸಭೆಯು ಈ ಸಲಹೆಯನ್ನು ಸ್ಪೆಷಲ್ ಆಗಿ ಇಲ್ಲಿ ಹೀಗೆ ಇದು ತೀರ್ಮಾನವಾಗಿದೆ ಎಂಬ ಅಂಶವನ್ನೂ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ನಾನು ಆಡಳಿತ ಪಕ್ಷದವರನ್ನು ಕೇಳುತ್ತೇನೆ. ಈ ಸಂಬಳ ಸಾರಿಗೆಯ ವಿಷಯದಲ್ಲಿ ಏನೇ ಆಗಲಿ ಇನ್ನು ಮುಂದಾದರೂ ಜಾಗ್ರತೆಯಾಗಿ ಎಲ್ಲ ನೌಕರರಿಗೂ ಯೂನಿಫಾರಂ ಸ್ಕೇಲನ್ನು ಕೊಡಬೇಕು. ಹಳೆಯ ಮೈಸೂರಿನ ನೌಕರನಿಗೆ ಎಪ್ಪತ್ತೈದು ರೂಪಾಯಿ ಸಂಬಳ, ಹೊಸ ಮೈಸೂರಿನ ನೌಕರನಿಗೆ ನಾಲ್ಕುನೂರು ರೂಪಾಯಿ ಸಂಬಳ ಇದ್ದುಕೊಂಡು ಒಂದೇ ಬೆಂಚಿನಲ್ಲಿ ಕುಳಿತು ಕೆಲಸಮಾಡುತ್ತಿರುವಾಗ ಎಫಿಷಿಯನ್ಸಿ ಹೇಗೆ ಬರುತ್ತದೆ? ಹೋದ ವರ್ಷವೇ ಹಣಕಾಸಿನ ಸಚಿವರು ಸರ್ಕಾರದ ನೌಕರರಿಗೆಲ್ಲರಿಗೂ ಯೂನಿಫಾರಂ ಸ್ಕೇಲ್ಸ್ ಆಫ್ ಪೇ ಮಾಡುವುದಕ್ಕೆ ಸಕಲ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆಂದು ಇದೇ ಸಭೆಯಲ್ಲಿ ಹೇಳಿದರು.

ಶ್ರೀ ಟಿ. ಮರಿಯಪ್ಪ.—ನಾನು ಆ ರೀತಿ ಹೇಳಲಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—ತಾವು ಆಫಿಷಿಯಲ್ ಕಮಿಟಿಮಾಡಿ, ಎಲ್ಲ ವಿಚಾರಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ, ನೌಕರರ ಸಂಬಳ ಸಾರಿಗೆಗಳನ್ನು ರಿವೈಜ್‌ಮಾಡುತ್ತೇವೆಂದು ಹೇಳಿದ್ದೀರಿ.

ಶ್ರೀ ಟಿ. ಮರಿಯಪ್ಪ.—ಮೂರು ತಿಂಗಳೊಳಗೆ ಹೊಸ ಸಂಬಳ ಸಾರಿಗೆಗಳನ್ನು ಜಾರಿಗೆ ಕೊಡಲಾಗುತ್ತದೆಂದು ಹೇಳಿದ್ದೇನೆ. ಇನ್ನೂ ಹೇಳುವುದಾದರೆ, we were the earliest to evolve new scales of pay and many have opted to it.

ಶ್ರೀ ಎಚ್. ಜಿ. ನರಸಿಂಹೇಗೌಡ.—ನೀವು ನಿಧಾನ ಮಾಡುತ್ತಿದ್ದೀರಿ. ಯೂನಿಫಾರಂ ಸ್ಕೇಲ್ಸ್ ಆಫ್ ಪೇ ಮಾಡಿದರೆ ಮಾತ್ರ ನಮ್ಮ ದೇಶ ಮುಂದಕ್ಕೆ ಬರುತ್ತದೆ. ಈ ಬಗ್ಗೆ ಇರತಕ್ಕ ತಾರತಮ್ಯವನ್ನು ಕೂಡಲೆ ತೊಡೆದು ಹಾಕಬೇಕು. ಕಡ್ಡಾಯವಾಗಿ ಇದನ್ನು ಮಾಡುತ್ತೀರೆಂದು ನಾನು ನಂಬಿದ್ದೇನೆ.

ಮೊದಲನೆಯದಾಗಿ ಆಡಳಿತದ ವಿಷಯದಲ್ಲಿ ಬಹಳ ಕಟುವಾಗಿ ಟೀಕಿಸಬೇಕಾಗಿದೆ. ನಾನು ಬರೆದ ಕಾಗದಪತ್ರಗಳು ಸರ್ಕಾರದಲ್ಲಿ ಎಲ್ಲಿ ಹೋದುವೋ ಏನಾದುವೋ ಎಂಬುದು ಈ ಮಾನ್ಯ ಸಭೆಯ ಸದಸ್ಯನಾಗಿರುವ ನನಗೇ ಗೊತ್ತಿಲ್ಲ. ನಾವು ಮಾಡುವ ಕೆಲಸವೇನು? ನಾವು ಏತಕ್ಕಾಗಿ ಇಲ್ಲಿಗೆ ಬಂದಿರುವುದು? ದೇಶದ ಏಳಿಗೆಗೆ, ದೇಶದ ಜನಗಳ ಹಿತಸಾಧನೆಗೋಸ್ಕರ ನಾವು ಏನಾದರೂ ಕಾಗದಗಳನ್ನು ಬರೆದರೆ, ಸಂಬಂಧಪಟ್ಟ ಇಲಾಖೆಯಿಂದ ಏತಕ್ಕೋಸ್ಕರ ಅಕ್‌ನಾಲೆಡ್ಜ್‌ಮೆಂಟ್ ಬರುವುದಿಲ್ಲವೋ ಗೊತ್ತಿಲ್ಲ. ನಾವು ಈ ಸಭೆಯಲ್ಲಿ ಪ್ರಮಾಣಪತ್ರವನ್ನು ತೆಗೆದುಕೊಂಡು ಈ ಸಭಾ ಸದಸ್ಯರಾಗಿದ್ದೇವೆ. ಆದರೂ ಇದು ಹೇಗಿದೆಯೆಂದರೆ, ನಮ್ಮಿಂದ ಸಹಿಹಾಕಿಸಿಕೊಂಡು ರೈತನ ದುಡ್ಡನ್ನು ನಾವು ಉಪಯೋಗಿಸಿಕೊಂಡು ಅವನಿಗೆ ದ್ರೋಹವೆಸಗುವುದಕ್ಕೆ ಅವಕಾಶ ಮಾಡುವಂತಾಗಿದೆ. ಇದು ಸರಿಯಲ್ಲ. ನಾವು ದೇಶದ ಏಳಿಗೆಯನ್ನೇ ಮುಖ್ಯ ಗುರಿಯೆಂಬುದಾಗಿ ತಿಳಿದಿರುವಾಗ, ಯಾವ ರೈತನೇ ಆಗಲಿ, ಯಾರೇ ಸದಸ್ಯರಾಗಲಿ, ಇತರರು ಯಾರೇ ಆಗಲಿ, ಅಧಿಕಾರಿಗಳಿಗೆ, ಮಂತ್ರಿಗಳಿಗೆ, ಹೈಕೋರ್ಟ್ ಜಡ್ಜಿಗೆ ಕಾಗದಗಳನ್ನು ಬರೆದರೆ, ಕೂಡಲೆ ಅಕ್‌ನಾಲೆಡ್ಜ್‌ಮೆಂಟನ್ನು ಕಡ್ಡಾಯವಾಗಿ ಕಳುಹಿಸಬೇಕು. ಬೊಂಬಾಯಿ ಪದ್ಧತಿ ಈ ವಿಷಯದಲ್ಲಿ ಬಹಳ ಚೆನ್ನಾಗಿದೆ. ನಾವು ಬುದ್ಧಿವಂತರು ಎಂದು ಅವರೇ ಹೇಳುತ್ತಾರೆ. ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿಲ್ಲ. ಆದ್ದರಿಂದ ನನಗೆ ಕಾಲ ಹೆಚ್ಚಿಗೆಬೇಕು. ಮುಖ್ಯವಾಗಿ ಆಡಳಿತ ವಿಷಯದಲ್ಲಿ ರಿ-ಆರ್ಗನೈಜ್‌ಮಾಡಬೇಕು. ಪ್ರತಿಯೊಂದು ಇಲಾಖೆಯಲ್ಲೂ ಪ್ರಜೆಗಳಿಂದ ಬರತಕ್ಕ ಎಲ್ಲ ಕಾಗದಪತ್ರಗಳಿಗೂ ಅಕ್‌ನಾಲೆಡ್ಜ್‌ಮೆಂಟ್ ಕೊಡುವುದನ್ನು ಕಡ್ಡಾಯವಾಗಿ ಮಾಡಬೇಕು. ಪ್ರತಿಯೊಂದು ಕಾಗದವು ಯಾವಯಾವ ಸ್ಟೇಜಿನಲ್ಲಿ ಏನಾಗಿದೆ, ಇನ್ನೆಷ್ಟು ದಿವಸಗಳಲ್ಲಿ ಪ್ರತಿಯೊಂದು ಕಾಗದಪತ್ರವನ್ನು ಡಿಸ್‌ಪೋಸ್‌ಮಾಡಬೇಕು ಎಂಬುದಕ್ಕೆ ಆರು ತಿಂಗಳೋ, ಒಂದು ವರ್ಷವೋ—ಹೀಗೆ ಒಂದು ಟೈಂ ಲಿಮಿಟ್‌ಮಾಡುವುದಕ್ಕೆ ಒಂದು ಸರ್ಕಾರೀ ಆಜ್ಞೆಯನ್ನು ಹೊರಡಿಸಿ. ಆ ರೀತಿ ಮಾಡದಿದ್ದರೆ ಜನಗಳು ಮಂತ್ರಿಗಳಲ್ಲಿಟ್ಟಿರತಕ್ಕ ನಂಬಿಕೆ ಹೊರಟುಹೋಗುತ್ತದೆ.

ಎರಡನೆಯದಾಗಿ ನಮ್ಮಲ್ಲಿ ಎಫಿಷಿಯನ್ಸಿ ಕಡಮೆಯಾಗುತ್ತಿದೆ. ಹಿಂದಿನ ವರ್ಷಕ್ಕಿಂತಲೂ ಈ ವರ್ಷ ಅಧಿಕಾರೀ ವರ್ಗದವರು, ಇತರ ಸ್ಟಾಫುಗಳು, ಡೆಪ್ಯುಟಿ ಸೆಕ್ರೆಟರಿಗಳು ಹೀಗೆ ಜಾಸ್ತಿಯಾಗುತ್ತಿದ್ದಾರೆಯೇ ವಿನಾ ಕಾಗದಪತ್ರಗಳು ಶೀಘ್ರವಾಗಿ ಡಿಸ್‌ಪೋಜ್ ಆಗುತ್ತಿಲ್ಲ. ಶೇಕ್‌ದಾರನಿಂದ ಹಿಡಿದು ನಿಜವಾಗಿ ಪಕ್ಷಪಾತ ನಡೆಯುತ್ತಿದೆ. ಈ ಮಾತನ್ನು ನಾನು ಮನಬಿಟ್ಟು ಹೇಳುತ್ತಿದ್ದೇನೆ ಇವರು ಕಾಂಗ್ರೆಸ್ಸಿನವರು, ಇವರು ನಾನ್ ಕಾಂಗ್ರೆಸ್ಸಿನವರು ಎಂಬ ಭೇದ ಭಾವನೆಯನ್ನಿಟ್ಟು ಸರ್ಕಾರದವರು ಕೆಲಸ

ಮಾಡಿಕೊಡಬೇಕೆನ್ನುವ ಕಡೆಗೆ ಪ್ರವೇಶಮಾಡುತ್ತಿದ್ದಾರೆ. ಕಾಂಗ್ರೆಸ್ ನಾಯಕರು ಯಾವ ಕಾನ್ಸ್ಟಿಟ್ಯೂಯೆನ್ಸಿಗೆ ಬಂದರೂ ಅಲ್ಲಿ ಅವರಿಗೆ ಪ್ರಾತಿನಿಧ್ಯ ಕೊಟ್ಟು, ನಾನ್-ಕಾಂಗ್ರೆಸ್ ಆಗಿ ಇತರ ಪಕ್ಷದ ನಾಯಕರೇನಾದರೂ ಯಾವುದಾದರೂ ಕಾನ್ಸ್ಟಿಟ್ಯೂಯೆನ್ಸಿಗೆ ಬಂದರೆ ಅವರ ಮಾತು ಹಾಗಿರಲಿ ಎಂದು ಹೇಳಿ ಅಲ್ಲಗಳೆದುಬಿಡುತ್ತಾರೆ. ಇದು ಸರಿಯಲ್ಲ. ದೇಶದಲ್ಲಿ ಮಂತ್ರಿಗಳಾಗತಕ್ಕದ್ದು ಅಥವಾ ಒಂದು ಪಕ್ಷದ ಸದಸ್ಯನಾಗಿರತಕ್ಕದ್ದು ಇಡಿಯ ಎರಡು ಕೋಟಿ ಜನಗಳಿಗೆ ಎಂಬುದನ್ನು ಸರ್ಕಾರ ಮರೆಯಬಾರದು. ಚುನಾವಣೆಗಳ ಕಾಲದಲ್ಲಿ ಜನಗಳ ಹತ್ತಿರ ಹೋಗುವಾಗ ನಾವೇನು ದೇಶದ ಹಿತಕ್ಕಾಗಿ ಮಾಡಿದ್ದೇವೆ ಎಂಬುದನ್ನು ತಿಳಿಸಬೇಕಾಗುತ್ತದೆ. ಸುಮಾರು ಹದಿನೆಂಟು ಜನ ಮಂತ್ರಿಗಳಿಗೋಸ್ಕರವಾಗಿಯೇ ನಿಜವಾಗಿ ಆಡಳಿತ ನಡೆಸತಕ್ಕದಿದ್ದರೆ ನಮ್ಮ ನಾಯಕರು ಹೇಳಿದ ಹಾಗೆ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳಿಗೆ ಸನ್ಮಾನ್ಯತೆಕೊಟ್ಟು ವಿರೋಧ ಪಕ್ಷಗಳ ಸದಸ್ಯರ ಎಲ್ಲಾ ಕಾಗದಪತ್ರಗಳೂ ಜಾಗ್ರತೆಯಾಗಿ ಡಿಸ್‌ಪೋಜ್ ಆಗುವುದಕ್ಕೆ ಒಂದು ನಿಯಮವನ್ನಿಡಬೇಕು. ಆಡಳಿತ ಪಕ್ಷದವರಿಗೆ ಪಾಠಕಲಿಸುವುದಕ್ಕೆ ವಿರೋಧ ಪಕ್ಷಗಳಿರುವುದು. ನಮ್ಮ ಪುಢಾರಿಗಳು ಇದ್ದಾರೆ, ನಮ್ಮ ಮಂತ್ರಿಗಳಿದ್ದಾರೆ ಎಂದು ಹೇಳಿಕೊಂಡು ರಾಜ್ಯಾಡಳಿತದಲ್ಲಿ ದುರುಪಯೋಗಪಡಿಸಿಕೊಳ್ಳಬೇಕೆಂಬ ನಿಯಮವಿರುವುದನ್ನು ಕೂಡಲೆ ಕಡ್ಡಾಯವಾಗಿ ತೆಗೆದುಹಾಕಬೇಕು. ಕೆಲವು ಮಂತ್ರಿಗಳಲ್ಲಿ ನಿಜವಾಗಿ ಸಾಂಪ್ರದಾಯಿಕವಾಗಿ ಪಕ್ಷಪಾತವಿದೆ. ಅದು ಹೋಗಬೇಕು. ಕಾಂಗ್ರೆಸ್ ಸದಸ್ಯರ ಹೇಳಿಕೆಗೆ ಹೆಚ್ಚಿನ ಮನ್ನಣೆಕೊಡುವುದು, ನಾನ್‌ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಪಕ್ಷಪಾತ ತೋರಿಸುವುದು ಸರಿಯಲ್ಲ. ನಾನು ಈ ಸಭೆಯ ಹಳೆಯ ಸದಸ್ಯ. ಮೊದಲಿನಿಂದಲೂ ವಿರೋಧ ಪಕ್ಷದಲ್ಲಿಯೇ ಇದ್ದವನು. ಇವೊತ್ತಿನ ದಿವಸ ಯಾರೋ ಒಬ್ಬ ಕಾಂಗ್ರೆಸ್ ಸದಸ್ಯ ತನ್ನ ಕಾನ್ಸ್ಟಿಟ್ಯುಯನ್ಸಿಯಲ್ಲಿ ಏನೋ ಒಂದು ಕೆಲಸಮಾಡಿಸಲು ಎಲ್. ಎಸ್. ಜಿ. ಮಂತ್ರಿಗಳ ಹತ್ತಿರ ಒಂದು ಎಸ್ಟಿಮೇಟನ್ನು ಕಳುಹಿಸಿದರು. ಅದನ್ನು ಕೂಡಲೆ ಸ್ಕ್ರೂಟಿನಿಮಾಡಿ ನೇರವಾಗಿ ಡೆಪ್ಯುಟಿ ಕಮೀಷನರಿಂದಲೇ ಎಸ್ಟಿಮೇಟನ್ನು ತರಿಸಿ ಅದನ್ನು ಮಂಜೂರು ಮಾಡಿದರು. ಇವೊತ್ತಿನ ದಿವಸ ನಾನ್‌ಕಾಂಗ್ರೆಸ್ ಸದಸ್ಯನ ಒಂದು ಕಾರ್ಯವನ್ನೂ ಆ ರೀತಿ ಮಂಜೂರು ಮಾಡಲಿಲ್ಲ. ಇಯರ್ ಎಂಡಿಂಗ್‌ನಲ್ಲಿ ಮಾಡುತ್ತಿದ್ದಾರೆ. ಗ್ರಾಮಾಂತರ ನೀರಿನ ಸರಬರಾಜಿಗೋಸ್ಕರ ಹದಿನೆಂಟುಸಾವಿರದ ಐನೂರು ರೂಪಾಯಿಗಳ ಗ್ರಾಂಟು ಕೊಡಬೇಕೆಂದು ಹಿಂದೆಯೇ ಕೇಳಿದ್ದರೂ ಇಯರ್ ಎಂಡ್ ಆದರೂ ಗ್ರಾಂಟಿಗೆ ಸೊನ್ನೆ. ಇನ್ನೂ ಎಸ್ಟಿಮೇಟ್ ಮಂಜೂರಾಗಿಲ್ಲ ಎಂದು ಹೇಳುತ್ತಾರೆ. ಹೀಗೆ ನಾಲ್ಕು ಸಾವಿರ ಪ್ರಜಾಸಂಖ್ಯೆ ಇರುವ ಹಳ್ಳಿಗೆ ಈ ಗ್ರಾಂಟು ಕೊಡದೆ ಏನೋ ಒಂದು ಪಕ್ಷಪಾತದ ಮನೋಭಾವವನ್ನಿಟ್ಟುಕೊಂಡು ಇವೊತ್ತಿನವರೆಗೂ ಅದನ್ನು ಮಂಜೂರುಮಾಡಲಿಲ್ಲ. ಇಂತಹ ನೂರಾರು ಉದಾಹರಣೆಗಳನ್ನು ಕೊಡುತ್ತೇನೆ. ನನಗೆ ಕಾಲ ಹೆಚ್ಚಾಗಿಲ್ಲ. ಕಾಂಗ್ರೆಸ್ ನಾಯಕರಿಗೆ ಅವರು ಕಾಂಗ್ರೆಸ್ ಮಂತ್ರಿಮಂಡಲದಲ್ಲಿರಬಾರದೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಇನ್ನು ಪೋಲೀಸ್ ಸಿಬ್ಬಂದಿಯ ವಿಷಯ. ಅವರ ವಿಷಯದಲ್ಲಿ ವಿರೋಧಪಕ್ಷದ ಸದಸ್ಯರಿಗೆ ಎಷ್ಟು ಪಕ್ಷಪಾತದ ಮನೋಭಾವನೆಯನ್ನು ಸರ್ಕಾರದವರು ತೋರಿಸುತ್ತಿದ್ದಾರೆಂಬುದನ್ನು ನಾನು ಹೆಚ್ಚಿಗೆ ಹೇಳುವುದಿಲ್ಲ. ಗೌರಿಬಿದನೂರ್ ತಾಲ್ಲೂಕಿನಲ್ಲಿ ಒಬ್ಬ ಸಬ್‌ಇನ್ಸ್ಪೆಕ್ಟರ್ ವಿರೋಧಪಕ್ಷದ ಸದಸ್ಯರಿಗೆ ಕಿರುಕುಳಕೊಡಬೇಕೆಂದು ಕಾಂಗ್ರೆಸ್ ನಾಯಕರೊಡನೆ ಸೇರಿ ಇಲ್ಲದ ಸಲ್ಲದ ಕೇಸುಗಳನ್ನು ಯೋಗ್ಯರಾದಂಥವರ ಮೇಲೆ ಹಾಕುತ್ತಿದ್ದಾರೆ. ಇದನ್ನು ಕಂಡು ಈ ಇನ್ಸ್ಪೆಕ್ಟರನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್‌ಮಾಡಬೇಕೆಂದು ಮುಖ್ಯ ಮಂತ್ರಿಗಳಿಗೆ ಮನವಿ ಹೋಯಿತು. ಇದುವರೆಗೂ ಆತನನ್ನು ಬೇರೆ ತಾಲ್ಲೂಕಿಗೆ ವರ್ಗಮಾಡದೆ ಅದೇ ಕಾನ್ಸ್ಟಿಟ್ಯೂಯನ್ಸಿಯಲ್ಲಿಟ್ಟುಕೊಂಡು ಅವನಿಂದ ಏನೋ ಬಹಳ ಸಹಾಯವಾಗುತ್ತಿದೆಯೆಂದು ತಿಳಿದು ಗೌರಿಬಿದನೂರ್ ತಾಲ್ಲೂಕಿಗೆ ಪುನಃ ಟ್ರಾನ್ಸ್‌ಫರ್ ಮಾಡಿದರೆ, ವಿರೋಧ ಪಕ್ಷದ ಸದಸ್ಯರಿಗೆ ಏನು ಮನ್ನಣೆ ಕೊಟ್ಟಂತಾಯಿತು? ಇಂತಹವರನ್ನು ತಾಲ್ಲೂಕಿನಿಂದ ತಾಲ್ಲೂಕಿಗೆ ಅಲ್ಲ, ಬೇರೆ ಡಿಸ್ಟ್ರಿಕ್ಟಿಗೆ ಟ್ರಾನ್ಸ್‌ಫರ್ ಮಾಡಿ. ನಿಮ್ಮಲ್ಲಿ ಪಕ್ಷಪಾತ ಮನೋಭಾವವಿಲ್ಲದಿದ್ದರೆ, ಇಂತಹವರನ್ನು ಅಲ್ಲಿ ಏಕೆ ಇನ್ನೂ ಇಡಬೇಕಾಗಿತ್ತು?

3-30 P.M.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮಾನ್ಯ ಸದಸ್ಯರು ಈ ವಿಚಾರಗಳನ್ನೆಲ್ಲಾ ಡಿಮ್ಯಾಂಡಿನ ಮೇಲೆ ಚರ್ಚೆ ನಡೆಸುವಾಗ ಹೇಳಿದ್ದರೆ ಚೆನ್ನಾಗಿತ್ತು. ಬಜೆಟ್ ಮೇಲೆ ಸಾಮಾನ್ಯ ಚರ್ಚೆಯಾಗುತ್ತಿರುವಾಗ ಈ ವಿಚಾರಗಳನ್ನೆಲ್ಲಾ ಹೇಳುವುದು ಅಷ್ಟು ಯುಕ್ತವಾದುದಲ್ಲವೆಂದು ಸೂಚಿಸಬಯಸುತ್ತೇನೆ.

ಶ್ರೀ ಎನ್. ಡಿ. ನರಸಿಂಹೇಗೌಡ.—ನಿಜ. ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಸರ್ಕಾರದವರಲ್ಲಿ ಪಕ್ಷಪಾತ ಭಾವನೆ ಇದೆಯೋ ಇಲ್ಲವೋ ಎಂಬುದನ್ನು ತಿಳಿಸಲು ಈ ಒಂದು ಉದಾಹರಣೆಯನ್ನು ಕೊಟ್ಟೆನು. ಸ್ವಾಮಿ, ದೇಶದ ಮುಂದೆ ಬರಲಿರತಕ್ಕ ಬಹುಮುಖ್ಯವಾದ ವಿಷಯಗಳಲ್ಲಿ ಲ್ಯಾಂಡ್ ರಿಫಾರಂಸ್ ಬಿಲ್ಲು ಬಹಳ ಮುಖ್ಯವಾದದ್ದು. ಆದರೆ ಈ ವಿಚಾರದಲ್ಲಿ ಸರ್ಕಾರದವರು ಈಗ ಹಳ್ಳಿಯ ಜನರಿಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆ. ದೇಶದಲ್ಲಿ ದೊಡ್ಡ ಸಂಪಾದನೆಯಿರತಕ್ಕ I.A.S. ಇತ್ಯಾದಿ ಅಧಿಕಾರಿಗಳಿಗೆ ಯಾವ ಒಂದು ಸೀಲಿಂಗ್ ಮಿತಿಯನ್ನು ಹಾಕದೆ ಕೇವಲ ಹಳ್ಳಿಗಳಲ್ಲಿರತಕ್ಕ ಬಡರೈತರ ಮೇಲೆ ಈಗ ಒಂದು ಸೀಲಿಂಗನ್ನು ಹಾಕಲು ಪ್ರಯತ್ನಮಾಡುತ್ತಿದ್ದಾರೆ. ರೈತನ ಮಕ್ಕಳು ವಿದ್ಯಾವಂತರಾಗಬಾರದು; ಅವರು ಮುಂದಕ್ಕೆ ಬಾರದಂತೆ ಹಾಳಾಗಿ ಹೋಗಲಿ, ನಗರಗಳಲ್ಲಿರತಕ್ಕವರ ಮಕ್ಕಳು ಮಾತ್ರ ಅಭಿವೃದ್ಧಿಗೆ ಬಂದರೆ ಸಾಕೆಂದು ಹೇಳುತ್ತಿದ್ದಾರೆ. ಈ ದಿವಸ ಹಳ್ಳಿಗಳಲ್ಲಿರತಕ್ಕವರ ಕಷ್ಟ ನಿಷ್ಠೂರಗಳೇನೆಂಬುದು ನಗರಗಳಲ್ಲಿ ಹುಟ್ಟಿ ಬೆಳೆದ ಆ ನೆಹರೂರವರಿಗಾಗಲಿ ರಾಷ್ಟ್ರಾಧ್ಯಕ್ಷರಿಗಾಗಲಿ ಖಂಡಿತ ಗೊತ್ತಿಲ್ಲ. ಹಳ್ಳಿಯ ಜನರಿಗೆ ಯಾವ ವಿದ್ಯಾಸೌಕರ್ಯಗಳನ್ನೂ ಒದಗಿಸಿಲ್ಲ. ಆರೋಗ್ಯ ಸೌಕರ್ಯಗಳಿಲ್ಲ. ಹೀಗಿದ್ದರೂ ಮೂರು ಸಾವಿರ ವರಮಾನಕ್ಕಿಂತ ಹೆಚ್ಚಿನ ಹಿಡುವಳಿ ಹಳ್ಳಿಯ ರೈತನಿಗಿರಬಾರದೆಂದು ಹೇಳಿದ್ದಾರೆ. ಹಿಂದುಳಿದ ಪಂಗಡಗಳವರು ಅಭಿವೃದ್ಧಿಗೆ ಬರಬಾರದೆಂಬುದೇ ಇದರ ಒಳಮೂಲತತ್ವ. ಸಾವಿರಾರು ರೂಪಾಯಿಗಳ ಸಂಬಳ ಪಡೆಯುತಕ್ಕವರ ಮೇಲೆ ಯಾವ ಸೀಲಿಂಗನ್ನೂ ಹಾಕಿಲ್ಲ. ಹತ್ತಾರು ಮನೆಗಳನ್ನಿಟ್ಟುಕೊಂಡಿರತಕ್ಕವರಿಗೆ ಇಂಥ ಒಂದು ಸೀಲಿಂಗಿನ ನಿರ್ಬಂಧವಿಲ್ಲ. ಹೀಗೆಯೇ ಇನ್ನೂ ತಿಂಗಳಿಗೆ ಸಹಸ್ರಾರು ರೂಪಾಯಿಗಳ ಸಂಪಾದನೆಮಾಡತಕ್ಕವರ್ಯಾರಿಗೂ ಹಾಕದಂಥ ಒಂದು ನಿರ್ಬಂಧವನ್ನು ಆ ಬಡರೈತನ ಮೇಲೆ ಹಾಕುವಂತೆ ಆ ಪ್ಲಾನಿಂಗ್ ಕಮಿಷನ್ನಿನವರು

(ಶ್ರೀ ಎಚ್. ಡಿ. ನರಸಿಂಹೇಗೌಡ)

ಹೇಳಿರತಕ್ಕದ್ದು ತೀರ ಅನ್ಯಾಯ. ಅವರಿಗೆ ತಲೆಯಲ್ಲಿ ಇಷ್ಟು ಬುದ್ಧಿಶಕ್ತಿಯಿಲ್ಲ, ಜ್ಞಾನಶಕ್ತಿಯಿಲ್ಲ. ಈ ದಿವಸ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದವರು ದೇಶದಲ್ಲಿ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಜಾರಿಗೆ ತರುತ್ತೇವೆಂದು ಏನು ಹೇಳಿಕೊಳ್ಳುತ್ತಿದ್ದಾರೋ ಅದರಲ್ಲಿ ಏನಾದರೂ ತಿರುಳಿದ್ದರೆ ಅವರು ಮೊದಲು ದೇಶದಲ್ಲಿರತಕ್ಕ ಅಧಿಕ ಲಾಭಸಂಪಾದನೆ ಮಾಡತಕ್ಕವರ ಮೇಲೆ ಇಂಥ ಸೀಲಿಂಗನ್ನು ಹಾಕುತ್ತಾರೆ; ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತೇನೆ. ಈಗಲಾದರೂ ಅದಷ್ಟು ಬೇಗ ಕಾಂಗ್ರೆಸ್ ಸರ್ಕಾರದವರು, ಅವರಿಗೆ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯ ಮೇಲೆ ಅಭಿಮಾನವಿದ್ದರೆ ಅದರ ಧೋರಣೆ ಬಗ್ಗೆ ಅವರೇನು ಮಾಡುತ್ತಿದ್ದಾರೆಂಬುದಕ್ಕೆ ಒಂದು ಹೇಳಿಕೆಯನ್ನು ಬಹಿರಂಗವಾಗಿ ಹೊರಡಿಸಲಿ. ಆದರೆ ಈಗೇನಾದರೂ ಸರ್ಕಾರದವರು ದುಡುಕಿ ರೈತನೊಬ್ಬನ ಮೇಲೆ ಇಂಥ ಸೀಲಿಂಗನ್ನು ಹಾಕಿದ್ದೇ ಆದರೆ ಅವರು ಇದರ ಪರಿಣಾಮ ಏನಾಗುವುದೆಂಬುದನ್ನು ಮುಂದಕ್ಕೆ ನೋಡಿಕೊಳ್ಳಬೇಕಾಗುತ್ತದೆ.

ಇನ್ನು ಷೆಡ್ಯೂಲ್ಡ್ ಕ್ಯಾಸ್ಟ್ಸಿನವರ ಮತ್ತು ಷೆಡ್ಯೂಲ್ಡ್ ಟ್ರೈಬ್ಸಿನವರ ಅಭಿವೃದ್ಧಿಯ ವಿಚಾರವನ್ನು ಕಾಂಗ್ರೆಸ್ ಸರ್ಕಾರದವರು ಏಕೆ ಪದೇ ಪದೇ ಇಷ್ಟು ಹೇಳುತ್ತಿದ್ದಾರೆಂದರೆ ಅವರ ಹಿಂದುಳಿದಿರತಕ್ಕ ಅವಸ್ಥೆಯನ್ನೇನೂ ನೋಡಿ ಅಲ್ಲ. ಅವರ ಒಂದು ಓಟಿನ ಬೇಟೆಗಾಗಿ ಈ ನಾಮಕಾವಸ್ತೆ ಮಾತುಗಳನ್ನಾಡುತ್ತಿದ್ದಾರೆ. ಅವರೇನಾದರೂ ನಿಜವಾಗಿಯೂ ಈ ಪಕ್ಷದವರಲ್ಲಿ ಆಸೆಯನ್ನಿಟ್ಟುಕೊಂಡಿದ್ದರೆ ಅವರಿಂದ ಪ್ರಯೋಜನವೇನೂ ಆಗುವುದಿಲ್ಲ. ಈ ದಿವಸ ಸರ್ಕಾರದವರು ಏನು ಅಷ್ಟಿಷ್ಟು ಹಣವನ್ನು ಆ ಹರಿಜನರ ಮನೆಗಳಿಗಾಗಿ ಕೊಡುತ್ತಿದ್ದಾರೆಯೋ ಅದೆಲ್ಲಾ ಮಧ್ಯೇ ಇರತಕ್ಕ ದಲ್ಲಾಳಿಗಳ ಕೈಗೆ ಹೋಗುತ್ತಿದೆ. ಹರಿಜನರಿಗೇನೂ ಪ್ರಯೋಜನವಾಗುತ್ತಿಲ್ಲ. ಷೆಡ್ಯೂಲ್ಡ್ ಜಾತಿಯ ಜನರನ್ನು ನಿಜವಾಗಿಯೂ ಅಭಿವೃದ್ಧಿಗೆ ತರಬೇಕೆಂಬ ಆಸೆ ಸರ್ಕಾರದವರಿಗಿದ್ದರೆ ಅವರಿಗೆ ಮೊದಲು ಕಡ್ಡಾಯ ಶಿಕ್ಷಣವನ್ನು ಕೊಡಿ. ಪ್ರೈಮರಿ ಶಾಲೆಗಳಲ್ಲಿ ಅಭ್ಯಾಸಮಾಡತಕ್ಕ ಷೆಡ್ಯೂಲ್ಡ್ ಪಂಗಡಗಳವರ ಬಾಲಕರಿಗೆ ಐದು ರೂಪಾಯಿಗಳಂತೆಯೂ, ಮಾಧ್ಯಮಿಕ ಶಾಲೆಗಳಲ್ಲಿ ಓದತಕ್ಕವರಿಗೆ ಹತ್ತು ರೂಪಾಯಿಗಳಂತೆಯೂ, ಹೈಸ್ಕೂಲಿನಲ್ಲಿ ಓದತಕ್ಕ ಹುಡುಗರಿಗೆ 15 ರೂಪಾಯಿಗಳಂತೆಯೂ ಮತ್ತು ಕಾಲೇಜಿನಲ್ಲಿ ಓದತಕ್ಕವರಿಗೆ 20 ರೂಪಾಯಿಗಳಂತೆಯೂ ವಿದ್ಯಾರ್ಥಿವೇತನವನ್ನು ಕೊಡಿ. ಆಗ ನೀವು ಅವರಿಗೆ ನೀಡತಕ್ಕ ಸಹಾಯ ನೇರವಾಗಿ ಆ ಜನರಿಗೆ ಲಭಿಸುತ್ತದೆ. ಆದರೆ ಈಗ ನೀವು ಏನು ಈ ಸೀಟುಗಳನ್ನು ರಿಜರ್ವ್ ಮಾಡುತ್ತಿದ್ದೀರಿ ಇದನ್ನೆಲ್ಲಾ ತೆಗೆದುಹಾಕಿ. ಇಂಥ ಒಂದು ವ್ಯವಸ್ಥೆಯನ್ನು ಕೈಗೊಳ್ಳದಿರುವುದರಿಂದಲೇ ಈ ದಿವಸ ಯಾವ ಹುದ್ದೆಗೆ ನೋಡಿದರೂ ಬ್ರಾಹ್ಮಣರೋ ಅಥವಾ ಮಹಮ್ಮದೀಯರೋ ಬರುತ್ತಿದ್ದಾರೆ. ಆದರೆ ಅವರು ಹಾಗೆ ಮುಂದಕ್ಕೆ ಬರಬಾರದೆಂಬುದು ನನ್ನ ಅಭಿಪ್ರಾಯವಲ್ಲ. ಆದರೆ ಹಿಂದುಳಿದ ಪಂಗಡಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡಬೇಕೆಂದು ಹೇಳುತ್ತಿದ್ದೇನೆ. ಈಗ ನಮ್ಮ ಅಕ್ಕಪಕ್ಕದ ರಾಜ್ಯಗಳನ್ನು ತೆಗೆದುಕೊಂಡರೆ ಮದ್ರಾಸ್ ಮತ್ತು ಕೇರಳ ರಾಜ್ಯಗಳಲ್ಲಿ ದೇಶದ ಉತ್ಪತ್ತಿಯಲ್ಲಿ ಅರ್ಧಹಣವನ್ನು ವಿದ್ಯಾಭ್ಯಾಸಕ್ಕಾಗಿ ವೆಚ್ಚಮಾಡಲಾಗುತ್ತಿದೆ. ಈ ಹಿಂದುಳಿದ ಪಂಗಡಗಳವರ ಅಭಿವೃದ್ಧಿಗೆ ಅಲ್ಲಿ ಅಷ್ಟೊಂದು ಹೆಚ್ಚಿನ ಮಟ್ಟದಲ್ಲಿ ಖರ್ಚುಮಾಡುತ್ತಿರುವಾಗ ನೀವು ಇಲ್ಲಿ ಏನು ಮಾಡುತ್ತಿದ್ದೀರಿ! ಆದುದರಿಂದಲೇ ನಮ್ಮ ರಾಜ್ಯದಲ್ಲಿ ಹಿಂದುಳಿದ ಪಂಗಡಗಳು ಮುಂದೆ ಬರಲು ಸಾಧ್ಯವಾಗುತ್ತಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲಿಯ ತನಕ ಸರ್ಕಾರ ದೇಶದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವುದಿಲ್ಲವೋ ಅಲ್ಲಿಯವರೆಗೂ ಬಡವರ ಮಕ್ಕಳು ಅಭಿವೃದ್ಧಿಗೆ ಬರುವುದಿಲ್ಲ; ಅವರು ಅಭಿವೃದ್ಧಿಗೆ ಬಾರದ ವಿನಾ ದೇಶಕ್ಕೆ ಏಳಿಗೆ ಇಲ್ಲ. ನಮ್ಮಲ್ಲಿ ಈ ವರ್ಷ ವಿದ್ಯಾಬಾಬಿಗೆ 11 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಪ್ರೈಮರಿ ಶಾಲೆಗಳಿಂದ ಹಿಡಿದು ಮಿಡಲ್ ಮತ್ತು ಹೈಸ್ಕೂಲು ಈ ಎಲ್ಲ ಶಾಲೆಗಳಿಗೂ ಮೇಲಾಡಳಿತ ನೋಡಿಕೊಳ್ಳಲು ಒಬ್ಬ ಡಿ. ಪಿ. ಐ.ಗೆ ಬಹಳ ಕಷ್ಟವಾಗುತ್ತದೆ. ಈಗ ರಾಜ್ಯವಿನ್ನೂ ದೊಡ್ಡದಾಗಿದೆ. ನಾನು ಈ ಹಿಂದೆಯೇ ಈ ವಿದ್ಯಾಭ್ಯಾಸದ ಇಲಾಖೆಯನ್ನು ರೀ-ಆರ್ಗನೈಜ್ ಮಾಡಬೇಕೆಂದು ಹೇಳಿದ್ದೆನು. ಈಗ ಈ ಇಲಾಖೆಗೆ ಒಬ್ಬ ಜಾಯಿಂಟ್ ಡಿ.ಪಿ.ಐ. ಅವರನ್ನು ನೇಮಿಸಬೇಕೆಂಬುದಾಗಿ ಹೇಳಿದ್ದೆ. ಈಗ ಮತ್ತೆ ಅದೇ ವಿಚಾರವನ್ನು ಹೇಳಬೇಕಾಗಿದೆ. ಇಂಜನಿಯರಿಂಗ್ ಇಲಾಖೆ, ಸಹಕಾರ ಸಂಘದ ಇಲಾಖೆ, ವ್ಯವಸಾಯದ ಇಲಾಖೆ- ಈ ಇಲಾಖೆಗಳಲ್ಲೆಲ್ಲಾ ಅಡಿಷನಲ್ ಮೊಖ್ತೇಸರರುಗಳಿದ್ದಾರೆ. ಅದೇ ರೀತಿ ಈ ಇಲಾಖೆಯಲ್ಲೂ ಇನ್ನೊಬ್ಬ ಅಧಿಕಾರಿಗಳಿರಬೇಕಾದದ್ದು ಅತ್ಯಗತ್ಯ. ಅದಕ್ಕಾಗಿ ಈ ಇಲಾಖೆಯಲ್ಲಿ ರೀ-ಆರ್ಗನೈಸೇಷನ್ ಆಗಲೇ ಬೇಕು. ಆ ಒಂದು ಸರಿಯಾದ ವ್ಯವಸ್ಥೆಯಿಲ್ಲದೆ ಈ ದಿವಸ ನಾವು ಈ ಬಾಬಿನಲ್ಲಿ ಖರ್ಚುಮಾಡತಕ್ಕ ಹಣವೆಲ್ಲ ನಿರರ್ಥಕ ಹೋಗುತ್ತಿದೆ. ಹೀಗೆ ಯಾವ ಬಾಬನ್ನೇ ತೆಗೆದುಕೊಂಡರೂ ನಮ್ಮ ರಾಜ್ಯದಲ್ಲಿ ಅಭಿವೃದ್ಧಿಯ ಚಿಹ್ನೆಗಳೇ ಕಾಣುತ್ತಿಲ್ಲ. ಹಳ್ಳಿಗಾಡಿನವರ ಮಕ್ಕಳು ಮುಂದೆ ಬರಲು ಅವಕಾಶವಿಲ್ಲ. ಆದರಿಂದಲೇ ದೇಶದಲ್ಲಿ ಕಡ್ಡಾಯ ಶಿಕ್ಷಣವನ್ನು ಕೂಡಲೇ ಜಾರಿಗೆ ತರಬೇಕೆಂದು ಹೇಳುತ್ತಿದ್ದೇನೆ. ನಮ್ಮ ಸರ್ಕಾರ ಈ ದಿವಸ ಕೇವಲ ಪಟ್ಟಣಗಳಲ್ಲಿರತಕ್ಕವರಿಗೆ ಎಲ್ಲಾ ವಿದ್ಯಾ ಸೌಕರ್ಯಗಳನ್ನೂ ಒದಗಿಸುತ್ತಿರುವುದು ಸರಿಯಾದುದಲ್ಲವೆಂದು ಹೇಳುತ್ತೇನೆ. ಸ್ವಾಮಿ, ಶಾಲಾ ಫೀಜಿನ ವಿಚಾರದಲ್ಲಿ ಆಗಲೇ ಶ್ರೀ ಮೂಡಲಗಿರಿಗೌಡರು ಹೇಳಿದ್ದನ್ನು ನಾನೂ ಸಹ ಬಹಳ ಸಂತೋಷದಿಂದ ಅನುಮೋದಿಸುತ್ತೇನೆ. ಯಾರಿಗೇ ಆಗಲಿ ಅವರ ಆದಾಯದ ಮೇಲೆ ಈ ಫೀಜನ್ನು ನಿಗದಿಮಾಡುವುದು ಒಳ್ಳೆಯದು. ಆದರೆ ಈ ದಿವಸ ಟೆಕ್ನಿಕಲ್ ವಿದ್ಯಾಭ್ಯಾಸವೇನಿದೆ ಅದೆಲ್ಲಾ ನಗರವಾಸಿಗಳ ಮಕ್ಕಳಿಗೆ ಮಾತ್ರವೇ ಮೀಸಲಾಗಿದೆ. ಹಳ್ಳಿಗಾಡಿನ ಮಕ್ಕಳಿಗೆ ಈ ವಿದ್ಯಾಭ್ಯಾಸ ಎಷ್ಟರಮಟ್ಟಿಗೆ ದೊರೆತಿದೆ ಎಂಬುದರ ಬಗ್ಗೆ ನೀವು ಈ ದಿವಸ ಈ ಟೆಕ್ನಿಕಲ್ ಬಾಬಿನಲ್ಲಿ ಮುಂದೆ ಬಂದಿರತಕ್ಕವರ ಸಂಖ್ಯೆಯಲ್ಲಿ ಹಳ್ಳಿಗಾಡಿನವರ ಶೇಕಡಾವಾರು ಸಂಖ್ಯೆ ಎಷ್ಟಿದೆ ಎಂಬುದನ್ನು ಎದೆಮುಟ್ಟಿ ಹೇಳುತ್ತೀರಾ? ಇಂತಹದನ್ನೆಲ್ಲ ತಡೆಗಟ್ಟಬೇಕಾದರೆ ನೀವು ನಾವು ಹೇಳಿದಂತೆ ಶಾಲಾಫೀಜನ್ನು ಅವರ ತಂದೆ ತಾಯಿಗಳ ಆದಾಯಕ್ಕೆ ಅನುಗುಣವಾಗಿ ನಿಗದಿಮಾಡುವುದರ ಜೊತೆಗೆ ಹಳ್ಳಿಗಾಡಿನಿಂದ ಬರತಕ್ಕವರಲ್ಲಿ ಯಾರಿಗೆ ವರ್ಷಕ್ಕೆ 1,200 ರೂಪಾಯಿಗಳಿಗಿಂತಲೂ ಆದಾಯ ಕಡಮೆ ಇರುತ್ತದೋ ಅಂಥವರಿಗೆ ಅವರು ಅವರ ಸ್ಥಳೀಯ ರೆವಿನ್ಯೂ ಅಧಿಕಾರಿಗಳಿಂದ ಒಂದು ಸರ್ಟಿಫಿಕೇಟನ್ನು ತಂದ ಪಕ್ಷದಲ್ಲಿ ಫೀಜನ್ನು ಸಂಪೂರ್ಣವಾಗಿ ಮನ್ನಾಮಾಡಬೇಕೆಂದು ಹೇಳುತ್ತೇನೆ. ಹೀಗೆ ಮಾಡಿದರೆ ಆಗ ನೀವು ವಿದ್ಯಾಭಿವೃದ್ಧಿಯ ಬಗ್ಗೆ ಬಡವನ ಮಕ್ಕಳಿಗೆ ಸ್ವಲ್ಪ ಅನುಕೂಲಮಾಡಿದಂತಾಗುವುದು. ಸರ್ಕಾರ ಈ ವಿಚಾರದಲ್ಲಿ ಇಲ್ಲಿಯವರೆಗೂ

ಹಿಂದೆ ಬಿದ್ದಿದೆ. ಈಗಲಾದರೂ ಇದನ್ನು ಕೂಡಲೇ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ದೇಶದ ಆಹಾರಾಭಿವೃದ್ಧಿಯ ಬಗ್ಗೆ ಹೇಳುವುದಾದರೆ ದೇಶದಲ್ಲಿ ಆಹಾರೋತ್ಪನ್ನ ಹೆಚ್ಚುವಂತೆ ಮಾಡಬೇಕಾಗಿದ್ದರೆ ಸರ್ಕಾರಕ್ಕೆ ಹಣ ಬೇಕು. ಅಂಥ ಹಣವನ್ನು ದೇಶದ ರೈತರಿಂದ ಶೇಖರಣೆಮಾಡಬೇಕಾಗಿದ್ದರೆ ಪರದೇಶಕ್ಕೆ ಹೋಗತಕ್ಕ ಗೇರುಬೀಜದ ರವಾನೆಯನ್ನು ಹೆಚ್ಚಿಸಬೇಕು. ಈಗ ನಮ್ಮಲ್ಲಿ ಉತ್ಪತ್ತಿಯಾಗತಕ್ಕ ಗೇರುಬೀಜದಲ್ಲಿ ಶೇಕಡ 75ರಷ್ಟು ಪರದೇಶಕ್ಕೆ ರವಾನೆಯಾಗುತ್ತದೆ. ಇದರಿಂದ ನಮಗೆ ಫಾರಿನ್ ಎಕ್ಸ್‌ಛೇಂಜಿಗೆ ಅನುಕೂಲವಿದೆ. ಆದಕಾರಣ ನಮಗೆ ಅಂಥ ಡಾಲರಿನ ಅನುಕೂಲತೆ ತರುವ ಈ ಗೇರುಬೀಜದ ವ್ಯವಸಾಯವನ್ನು ದೇಶದಲ್ಲಿ ಹೆಚ್ಚು ಹೆಚ್ಚಾಗಿ ಅಭಿವೃದ್ಧಿಗೊಳಿಸಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

[SRI ALUR HANUMANTHAPPA in the Chair].

*ಶ್ರೀ ರಾಮಕೃಷ್ಣ ಹೆಗ್ಗಡೆ (ಸಿರಸಿ).—ಅಧ್ಯಕ್ಷರೇ, ಉಳಿತಾಯದ ಬಜೆಟ್ಟನ್ನು ನಮಗೆ ಒದಗಿಸಿದ ಬಗ್ಗೆ ಮಾನ್ಯ ಅರ್ಥಿಕ ಸಚಿವರನ್ನು ಮೊಟ್ಟಮೊದಲು ನಾನು ಅಭಿನಂದಿಸುತ್ತೇನೆ. ಮಾನ್ಯ ಅರ್ಥಿಕ ಸಚಿವರು ತಮ್ಮ ಲಲಿತವಾದ, ಸುಂದರವಾದ ಶೈಲಿಯ ಭಾಷಣದಲ್ಲಿ ಅನೇಕ ವಿಷಯಗಳನ್ನು ವಿವರಿಸಿದ್ದಾರೆ. ಆ ಭಾಷಣ ನೋಡಲಿಕ್ಕೆ ಬಹಳ ಸೊಗಸಾಗಿ ಕಂಡರೂ ಅದನ್ನು ಪರಾಂಬರಿಸಿ ನೋಡಿದರೆ ಅದು ವಾಸನೆ ಇಲ್ಲದ ಮತ್ತು ಮಕರಂದವಿಲ್ಲದ ಹೂವಿನಂತಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಿಕ್ಕಿಲ್ಲ.

ನಾನು ಬಜೆಟ್ಟಿನ ಮೇಲೆ ನನ್ನ ವಿಚಾರಗಳನ್ನು ಹೇಳುವುದಕ್ಕಿಂತ ಮೊದಲು ಕೆಲವು ಸಮಯದ ಹಿಂದೆ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ಮೂಡಲಗಿರಿಗೌಡರು ವ್ಯಕ್ತಪಡಿಸಿದ ಅಭಿಪ್ರಾಯದ ಬಗೆಗೆ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಶ್ರೀ ಮೂಡಲಗಿರಿಗೌಡರು ಸಹಕಾರಿ ಜಂಟೀ ಪದ್ಧತಿಯ ವ್ಯವಸಾಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಿದರು. ಆ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಸಂದರ್ಭ ಹೇಗಿತ್ತು ಎಂದು ಹೇಳುವುದಕ್ಕೆ ನನಗೆ ಇಷ್ಟವಿಲ್ಲ. ಆದರೆ ಅವರು ಹೇಳಿದ ಮಾತಿಗೆ ನನ್ನ ಭಿನ್ನಾಭಿಪ್ರಾಯವಿರುವುದರಿಂದ ಅದನ್ನು ನಾನು ವ್ಯಕ್ತಪಡಿಸಲಿಕ್ಕೆ ಇಚ್ಛೆಪಡುತ್ತೇನೆ. ಸಹಕಾರಿ ಪದ್ಧತಿಯ ಮೇಲೆ ವ್ಯವಸಾಯ ಮಾಡುವುದು ನಮ್ಮ ಕಾಂಗ್ರೆಸ್ ತಳೆದಿರುವಂಥ ಯೋಜನೆಯಲ್ಲಿ ಒಂದು ನಿಶ್ಚಿತವಾದ ಹೆಜ್ಜೆಯೇ ಹೊರತು ಅದು ಹೊಸದಾದ ಹೆಜ್ಜೆ ಏನೂ ಅಲ್ಲ. Co-operative Commonwealth ಮತ್ತು ಸಮಾಜವಾದೀ ಪದ್ಧತಿಯ ಮೇಲೆ ಸಮಾಜ ರಚನೆ ಇವೆರಡೂ ನಮ್ಮ ಕಾಂಗ್ರೆಸ್ಸಿನ ಮತ್ತು ಕಾಂಗ್ರೆಸ್ ಸರ್ಕಾರಗಳ ಮೂಲಭೂತವಾದ ಗುರಿ ಎಂದು ಕೆಲವು ವರ್ಷಗಳಿಂದ ನಿಶ್ಚಿತವಾಗಿದೆ, ಕಳೆದ ನಾಗಪುರದ ಅಧಿವೇಶನದಲ್ಲಿ ಕಾಂಗ್ರೆಸ್ ಮಹಾ ಸಂಸ್ಥೆಯು ಈ ದಿಸೆಯಲ್ಲಿ ಒಂದು ನಿರ್ದಿಷ್ಟವಾದ ಮಾರ್ಗದರ್ಶನವನ್ನು ಮಾಡಿದೆ. ಅದು ಯಾವ ಪದ್ಧತಿಯ ಮೇಲೆ ಹೋಗಬೇಕು, ನಮ್ಮ ಗುರಿ ಯಾವುದಿರಬೇಕು, ಎಂಬು ಹೇಳುವುದೇ ಆಗಿದೆ. ಶ್ರೀ ಮೂಡಲಗಿರಿಗೌಡರು ರೈತರ ಮೇಲೆ ಈ ತರಹದ ಹೊಸ ಪದ್ಧತಿಯನ್ನು ಹೇರುವುದು ಒಳ್ಳೆಯದಲ್ಲವೆಂದು ತಮ್ಮ ಅಭಿಪ್ರಾಯವನ್ನು ಹೇಳಿದರು. ಯಾವುದನ್ನು ಸಹಕಾರಿ ಪದ್ಧತಿ ಎಂದು ಕರೆಯುತ್ತೇವೆಯೋ ಅದರಲ್ಲಿ ಒತ್ತಾಯ ಮಾಡಲಿಕ್ಕಿಲ್ಲ. ಯಾವ ಒಂದು ವಿಷಯವನ್ನೂ ಹೇರುವ ಪ್ರಶ್ನೆ ಉದ್ಭವಿಸುವುದಿಲ್ಲ. ಒತ್ತಾಯದ ಮೂಲಕ ಹೇರುವಂಥ ಧೋರಣೆಯನ್ನು ನಾವು ಹೇಳಿಲ್ಲ. ಎಲ್ಲೆಲ್ಲಿ ವ್ಯವಸಾಯ ನಡೆಯುತ್ತಿದೆಯೋ ಅಲ್ಲೆಲ್ಲ ಸಹಕಾರಿ ಪದ್ಧತಿಯಿಂದ ಮಾಡಬೇಕು ಎಂದು ಹೇಳುವಂಥ ಧೋರಣೆಯನ್ನು ನಾವು ತಳೆದಿಲ್ಲ. ಯಾವ ಯಾವ ಹಳ್ಳಿಗಳಲ್ಲಿ, ಯಾವ ಯಾವ ಕ್ಷೇತ್ರಗಳಲ್ಲಿ ಸಹಕಾರೀ ಮನೋವೃತ್ತಿ ಇದೆಯೋ ಎಲ್ಲಿ ಜನರು ತಾವಾಗಿಯೇ ಆ ತತ್ತ್ವವನ್ನು ತಿಳಿದುಕೊಂಡು ಮುಂದೆ ಬರುತ್ತಾರೆಯೋ ಅಲ್ಲಿ ಅದಕ್ಕೆ ಪ್ರೋತ್ಸಾಹಕೊಟ್ಟು ಆ ಪದ್ಧತಿಯ ಮೇಲೆ ಮಾಡಬೇಕು ಎಂಬುದೇ ನಮ್ಮ ಉದ್ದೇಶವಾಗಿದೆ. ಈ ತರಹ ಸಹಕಾರೀ ಪ್ರವೃತ್ತಿಗೆ ಪ್ರಚೋದನೆ ಕೊಡಬೇಕು, ಪ್ರೋತ್ಸಾಹ ಕೊಡಬೇಕು ಮತ್ತು ಸರ್ಕಾರದ ಧೋರಣೆಯು ಅತ್ತಕಡೆ ಆಗಬೇಕೆಂಬುದೇ ಮತ್ತೊಂದು ಅರ್ಥ. ನಾವು ಒಂದು ಕಡೆ Communism ಮತ್ತೊಂದು ಕಡೆ Capitalism ಅಥವಾ ಬಂಡವಾಳಶಾಹಿ ಇವೆರಡರ ದಿಸೆಯನ್ನೂ ಬಿಟ್ಟು ಮಧ್ಯಮಾರ್ಗವನ್ನನುಸರಿಸುತ್ತ ಕಳೆದ 10-12 ವರ್ಷಗಳಿಂದಲೂ ಸಾಗಿದ್ದೇವೆ. ಈ ಮಾರ್ಗ ಅತ್ಯಂತ ಉತ್ತಮವಾದ ಮಾರ್ಗವೆಂಬುದನ್ನು ನಮ್ಮ ಇಡಿಯ ರಾಷ್ಟ್ರ ಒಪ್ಪುತ್ತದೆ. ಕಾಂಗ್ರೆಸ್ ಪಕ್ಷವಷ್ಟೇ ಅಲ್ಲ. ಇತರ ರಾಜಕೀಯ ಪಕ್ಷಗಳೂ ಇದನ್ನು ಒಪ್ಪುತ್ತವೆ. ಆದುದರಿಂದ ಈ ಮಧ್ಯಮ ಮಾರ್ಗವಾದ ಸಹಕಾರೀ ಪದ್ಧತಿ ಕೇವಲ ವ್ಯವಸಾಯಕ್ಕಷ್ಟೇ ಅಲ್ಲ, ಕ್ರಮೇಣವಾಗಿ, ಕಾಲ ಕಳೆಯುತ್ತ ಹೋದಹಾಗೆ ಇತರ ಕ್ಷೇತ್ರಗಳಲ್ಲಿಯೂ ಸಾವಧಾನವಾಗಿ ಇದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದರಲ್ಲಿ ಯಾವ ರೀತಿಯ ಸಂದೇಹವೂ ಇಲ್ಲ. ಆದುದರಿಂದ ನಾನು ಈ ವಿಷಯದಲ್ಲಿ ಇಷ್ಟೇ ಹೇಳಬಯಸುತ್ತೇನೆ; ಶ್ರೀ ಮೂಡಲಗಿರಿಗೌಡರು ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಕ್ಕೆ ಆಶ್ಚರ್ಯ ಮತ್ತು ವಿಷಾದವಾಗುತ್ತದೆ ಎಂದು ಹೇಳಬಯಸುತ್ತೇನೆ.

ಮಾನ್ಯ ಅರ್ಥಿಕ ಮಂತ್ರಿಗಳ ಭಾಷಣವನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ನಾನಾಗಲೇ ಹೇಳಿದಂತೆ ಅವರ ಭಾಷಣವು ಹೂವಿನ ಹಾಗೆ ಮೃದುವಾಗಿದ್ದರೂ ಅದನ್ನು ಪರಾಂಬರಿಸಿ ನೋಡಿದರೆ ಅದರಲ್ಲಿ ಮಕರಂದವೂ ಕಡಮೆ, ವಾಸನೆಯೂ ಇಲ್ಲ. ಮುಖ್ಯವಾಗಿ ಎರಡು ಮೂರು ವಿಷಯಗಳ ಕಡೆಗೆ ತಮ್ಮ ಗಮನವನ್ನು ಸೆಳೆಯ ಬಯಸುತ್ತೇನೆ.

ಮೊದಲನೆಯದು ಶಿಕ್ಷಣ, ಶಿಕ್ಷಣದ ಬಾಬಿನಲ್ಲಿ ಹನ್ನೊಂದು ಕೋಟಿಯಷ್ಟು ಹಣವನ್ನು ಒದಗಿಸಲಾಗಿದ್ದರೂ ಕೂಡ ನಾವೆಲ್ಲ ತಿಳಿದಂತೆ ಈ ಹಣದಲ್ಲಿ ಬಹು ದೊಡ್ಡ ಮೊತ್ತ ಉಚ್ಚ ಶಿಕ್ಷಣಕ್ಕಾಗಿ ವಿನಿಯೋಗವಾಗುತ್ತಿದೆ. ನಾವು ನಮ್ಮ ರಾಷ್ಟ್ರದ ರಾಜ್ಯಾಂಗದಲ್ಲಿ ಯಾವ ಒಂದು ತತ್ತ್ವವನ್ನು ಒಪ್ಪಿಕೊಂಡಿದ್ದೇವೆ? ನಮ್ಮ ದೇಶದ ಯಾವತ್ತೂ ಮಕ್ಕಳಿಗೆ ಕಡ್ಡಾಯವಾದ ಉಚಿತವಾದ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವಂತಹುದು ಪ್ರತಿಯೊಂದು ಸರ್ಕಾರದ ನಿರ್ದಿಷ್ಟವಾದ ಉದ್ದೇಶವಾಗಿರಬೇಕು ಎನ್ನುವ ವಿಷಯವನ್ನು ಒಪ್ಪಿಕೊಂಡು ಈಗಾಗಲೇ ಎಂಟು ಒಂಬತ್ತು ವರ್ಷಗಳಾದುವು. ಆದರೂ ನಾವು ಅದನ್ನು ಸಂಪೂರ್ಣವಾಗಿ ಕಾರ್ಯಗತಮಾಡುವುದಕ್ಕೆ ಸಮರ್ಥರಾಗಿಲ್ಲ. ಶ್ರೀ ಮರಿಯಪ್ಪ ಅವರು ತಮ್ಮ ಭಾಷಣದಲ್ಲಿ ಭಾವಾತ್ಮಕ ಸಮೀಕರಣದ ವಿಷಯವನ್ನು ಕೂಡ ಪ್ರಸ್ತಾಪಿಸಿದ್ದಾರೆ. ನಮ್ಮ ಮೈಸೂರು ರಾಜ್ಯದ ಕೆಲವು ಭಾಗಗಳಲ್ಲಿ ಉಚಿತ ಪ್ರಾಥಮಿಕ ಶಿಕ್ಷಣವು ಮಕ್ಕಳಿಗೆ ದೊರೆಯುತ್ತಿದೆ. ಕೆಲವು ಭಾಗಗಳಲ್ಲಿ ಅದು ಇನ್ನೂ ದೊರೆಯು

(ಶ್ರೀ ರಾಮಕೃಷ್ಣ ಹೆಗ್ಗಡೆ)

ತ್ತಿಲ್ಲ. ಈ ರೀತಿಯಾಗಿ ಮಕ್ಕಳಿಂದ ಪ್ರಾಥಮಿಕ ಶಿಕ್ಷಣದ ಬಗ್ಗೆ ಫೀಯನ್ನು ವಸೂಲ್ಮಾಡುವುದರಿಂದ ನಮಗೆ ಭಾರಿ ಉತ್ಪನ್ನವಾಗುತ್ತಿಲ್ಲ. ಈ ಒಂದು integration ಅಥವಾ ಸಮೀಕರಣದ ದಿಸೆಯಲ್ಲಿ ಹೋಗಬೇಕಾಗಿದೆ. ಇಂಥ ಸಣ್ಣ ಪುಟ್ಟ ವಿಷಯಗಳಲ್ಲಿ ಅತ್ಯಂತ ತೀವ್ರಗತಿಯಿಂದ ನಮ್ಮ ಕೆಲಸಗಳನ್ನು ಮಾಡಬೇಕು. ಮುಂಬೈ ಕರ್ಣಾಟಕದಲ್ಲಿ, ಬಳ್ಳಾರಿ ಜಿಲ್ಲೆಯಲ್ಲಿ ಈಗಲೂ ಕೂಡ ಪ್ರಾಥಮಿಕ ಶಿಕ್ಷಣದ ಮೇಲೆ ಫೀಯನ್ನು ವಸೂಲ್ಮಾಡರಾಗುತ್ತಿದೆ. ಈ ವಿಷಯದಲ್ಲಿ ಈ ವರ್ಷವಾದರೂ ನಮ್ಮ ಅರ್ಥಿಕ ಸಚಿವರು ಒಂದು ಭರವಸೆಯನ್ನು ಕೊಡುತ್ತಾರೆ, ಉಚಿತ ಶಿಕ್ಷಣದ ಬಗ್ಗೆ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಬಗ್ಗೆ ಭರವಸೆಯನ್ನು ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಆ ರೀತಿಯ ಬರವಸೆ ಇಲ್ಲದ ರಿಂದ ನನಗೆ ನಿರಾಶೆಯಾಗಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಆಮೇಲೆ ಕಾಲೇಜುಗಳ ವಿಷಯವಾಗಿ ನನಗಿಂತ ಮೊದಲು ಮಾತನಾಡಿದ ಶ್ರೀ ಮೂಡಲಗಿರಿಗೌಡರು ಒಂದು ಮಾತನ್ನು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಅದೇನೆಂದರೆ ಉಚ್ಚ ಶಿಕ್ಷಣವನ್ನು ಕೊಡುವಂಥ ಕಾಲೇಜುಗಳು ಇತರ ಭಾಗಗಳಲ್ಲಿ ಬಹುಶೇಕವಾಗಿ ಸಂಘ ಸಂಸ್ಥೆಗಳಿಂದ ನಡೆಸಲ್ಪಡುವಂಥವುಗಳಾಗಿವೆ. ಹಳೆಯ ಮೈಸೂರಿನಲ್ಲಿ ಎಲ್ಲ ಕಾಲೇಜುಗಳನ್ನೂ ಸರ್ಕಾರದವರೇ ನಡೆಸಿಕೊಂಡು, ಅವುಗಳ ಎಲ್ಲ ವೆಚ್ಚವನ್ನೂ ಸರ್ಕಾರ ವಹಿಸಿಕೊಂಡು ಬರುವಂಥ ಒಂದು ಪದ್ಧತಿ ಇದೆ. ಈಗ ಇದರಿಂದ ಎರಡು ಭಾಗಗಳ ಜನರಲ್ಲಿಯೂ ಒಂದು ತರಹ ವೈಮನಸ್ಯ ಪಕ್ಷಪಾತ ಭಾವನೆ ಉತ್ಪನ್ನವಾಗುವುದಕ್ಕೆ ಅವಕಾಶವಾಗುತ್ತದೆ. ಯಾವ ಸಂಘ ಸಂಸ್ಥೆಗಳು ಇಂಥ ಕಾಲೇಜುಗಳನ್ನು ಬಹಳ ವರ್ಷಗಳಿಂದ ನಡೆಸಿಕೊಂಡು ಬಂದಿವೆಯೋ ಅಂಥ ಅನೇಕ ಸಂಘ ಸಂಸ್ಥೆಗಳು ad hoc-grant, building grant ವಗೈರೆ ಕೇಳಿದರೆ ಅವುಗಳಿಗೆ ಕೊಡುವುದಕ್ಕೆ ಬರುವುದಿಲ್ಲವೆಂದು ಸರ್ಕಾರದಿಂದ ಉತ್ತರ ಹೋಗುತ್ತದೆ. ಅದರಿಂದ ಅವರು ಬೆರಳು ತೋರಿಸುತ್ತಾರೆ. ಹಳೆಯ ಮೈಸೂರು ಭಾಗದಲ್ಲಿ ಎಲ್ಲ ವೆಚ್ಚವನ್ನೂ ಸರ್ಕಾರದವರು ವಹಿಸುತ್ತಿರುವಾಗ, ನಾವು ಬಹುತರವಾದ ವೆಚ್ಚವನ್ನು ವಹಿಸುತ್ತಿದ್ದಾಗ್ಯೂ, ಏನಾದರೂ ಗ್ರ್ಯಾಂಟ್ ಕೇಳಿದರು ನಕಾರಾತ್ಮಕವಾದ ಉತ್ತರ ಬರುತ್ತದೆ, ಇದರಿಂದ ಬಹಳ ತೊಂದರೆಯಾಗುತ್ತವೆ ಎಂದು ಹೇಳುತ್ತಾರೆ. ಆದುದರಿಂದ ಆದಷ್ಟುಮಟ್ಟಿಗೆ ಹಳೆಯ ಮೈಸೂರಿನ ಭಾಗದಲ್ಲಿ ಉಚ್ಚ ಶಿಕ್ಷಣದ ಹೊರೆಯನ್ನು ಸಂಘ ಸಂಸ್ಥೆಗಳಿಗೆ ವಹಿಸಲಿಕ್ಕೆ ಸರ್ಕಾರ ತಯಾರಾಗಬೇಕು; ಮತ್ತು ಇತರ ಕಡೆಗಳಲ್ಲಿರುವಂತೆ ಸಂಘ ಸಂಸ್ಥೆಗಳು ನಡೆಸುವಂಥ ಕಾಲೇಜುಗಳನ್ನು ಕೆಲವು ಮಟ್ಟಿಗಾದರೂ ಪ್ರತ್ಯೇಕವಾಗಿ ಮಾಡಬೇಕೆಂದು ಸೂಚಿಸಬಯಸುತ್ತೇನೆ.

ಇದೇ ಸಂದರ್ಭದಲ್ಲಿ ಮತ್ತೊಂದು ಮಾತನ್ನು ಹೇಳಬಯಸುತ್ತೇನೆ. ನಾವು ಜಾತಿಯ ವಿಷಯವಾಗಿ ಈ ಸಭೆಯಲ್ಲಿಯೂ ಮತ್ತು ಹೊರಗಡೆಯೂ ಬಹಳವಾಗಿ ಮಾತನಾಡುತ್ತೇವೆ. ಒಂದೊಂದು ಸಲ ನಾವು ಇದ್ದ ಪರಿಸ್ಥಿತಿಗಿಂತ ಹೆಚ್ಚಿಗೆ ಅವಶ್ಯವಾಗಿರುವುದಕ್ಕಿಂತ ಹೆಚ್ಚಿಗೆ ಮಾತನಾಡುತ್ತೇವೆ. ಈ ದಿಸೆಯಲ್ಲಿ ಏನಾದರೂ ಕಿಂಚಿತ್ತಾದರೂ ಕ್ರಮವನ್ನು ತೆಗೆದುಕೊಂಡಿರುವುದು ಗೊತ್ತಾಗುತ್ತಿಲ್ಲ. ಈ ಸಂದರ್ಭದಲ್ಲಿ ಇಷ್ಟು ಮಾತ್ರ ಸೂಚಿಸಬಯಸುತ್ತೇನೆ. ಅನೇಕ ಕಡೆಗಳಲ್ಲಿ, ಅದರಲ್ಲಿಯೂ ಮುಖ್ಯವಾಗಿ ಹಳೆಯ ಮೈಸೂರಿನ ಭಾಗಗಳಲ್ಲಿ ವಿದ್ಯಾರ್ಥಿಗಳು ವಾಸಿಸುವಂಥ ಹಾಸ್ಟಲುಗಳಿಗೆ ಜಾತಿಯ ಹೆಸರನ್ನಿಟ್ಟಿರುವುದು ಕಂಡುಬರುತ್ತಿದೆ.

ಜಾತಿಯ ಹೆಸರಿನಲ್ಲಿರುವ ಹಾಸ್ಟಲುಗಳಿಗೆ ಸರ್ಕಾರದಿಂದ ಅನೇಕ ಬಗೆಯ, ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾದ ಸಹಾಯ ಒಂದಲ್ಲ ಒಂದು ಬಗೆಯಾಗಿ ಸಿಕ್ಕುತ್ತದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಹೋಟೇಲುಗಳ ಮೇಲೆ ಇನ್ನೂ ಜಾತಿಯ ಹೆಸರುಗಳು ಇದ್ದೇ ಇವೆಯಲ್ಲ!

ಶ್ರೀ ರಾಮಕೃಷ್ಣ ಹೆಗ್ಗಡೆ.—ವಿದ್ಯಾರ್ಥಿಗಳ ಮನಸ್ಸಿನಲ್ಲಿ ಒಂದು ರೀತಿಯಾದ ಕೋಮುವಾರು ಭಾವನೆ ಇಲ್ಲದಹಾಗೆ ಆಗಬೇಕು. ಆ ರೀತಿ ಕೆಟ್ಟ ವಾತಾವರಣ ಮುಂದಿನ ಪೀಳಿಗೆಯ ಮೇಲೆ ಬೀಳಬಾರದು. ಆದ್ದರಿಂದ ಕೂಡಲೇ ಸರ್ಕಾರದವರು ಹಾಸ್ಟಲುಗಳ ಮೇಲೆ ಜಾತಿಯ ಹೆಸರು ಇದ್ದರೆ ಅದನ್ನು ತೆಗೆದುಹಾಕಬೇಕು ಎಂದು ಹೇಳುತ್ತೇನೆ. ಹೋಟೇಲುಗಳೂ ಕೂಡ ಯಾವುದಾದರೂ ಜಾತಿಯ ಹೆಸರಿನ ಮೇಲೆ ನಡೆಯುತ್ತಿದ್ದರೆ, ಅಂಥವುಗಳಿಗೆ ಲೈಸನ್ಸ್ ಕೊಡಬಾರದು ಎಂದು ಸೂಚಿಸುತ್ತೇನೆ. ಮಾನ್ಯ ಅರ್ಥಿಕಸಚಿವರ ಭಾಷಣದಲ್ಲಿ ಹೊಸ ಕಾರ್ಖಾನೆ, ಹೊಸ ಇಂಡಸ್ಟ್ರಿಗಳ ಬಗ್ಗೆ ಯಾವುದಾದರೂ ಆಶ್ವಾಸನೆಯನ್ನು ನೀಡಿದ್ದಾರೆಂದರೆ ಅಲ್ಲೂ ಕೂಡ ನಿರಾಶೆ ಆಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಕಾಗದದ ಕಾರ್ಖಾನೆಯೊಂದನ್ನು ಮಂಡ್ಯ ಜಿಲ್ಲೆಯಲ್ಲಿ ತೆರೆಯುವ ಏರ್ಪಾಡು ಇದೆಯೆಂದು ಹೇಳಿದ್ದಾರೆ. ಅದನ್ನು ಬಿಟ್ಟು ಬೇರೆ ಯಾವ ಇಂಡಸ್ಟ್ರಿ, ಉದ್ಯಮವಾಗಲಿ ತೆರೆಯುವ ಲಕ್ಷಣ ಕಂಡುಬರುವುದಿಲ್ಲ. ಬೆಳಗಾವಿನ ಹತ್ತಿರ ಹೋದ ವರ್ಷ ಅಲ್ಯೂಮಿನಿಯಮ್ ಕಾರ್ಖಾನೆಯನ್ನು ತೆರೆಯುವ ಬಗ್ಗೆ ಪತ್ರವ್ಯವಹಾರ ನಡೆಯುತ್ತಿತ್ತು. ಆ ವಿಷಯದಲ್ಲಿ ಸರ್ಕಾರ ಎಷ್ಟರಮಟ್ಟಿಗೆ ಪ್ರಗತಿಯನ್ನು ಸಾಧಿಸಿದೆ ಎಂಬುದು ಗೊತ್ತಿಲ್ಲ. ಅಲ್ಯೂಮಿನಿಯಮ್ ಕಾರ್ಖಾನೆ ನಮ್ಮ ದೇಶದಲ್ಲಿ ಬೇರೆ ಕಡೆ ಇದೆ. ಮತ್ತೆ ಒಂದೆರಡು ಕಾರ್ಖಾನೆಗಳು ಹೊಸದಾಗಿ ಸ್ಥಾಪನೆಯಾಗುತ್ತವೆ ಎನ್ನುವ ಸಮಾಚಾರ ಕೇಳುತ್ತೇನೆ. ನಮ್ಮ ಬೆಳಗಾವಿನ ಭಾಗದಲ್ಲಿ ಇದರ ಜೊತೆಗೆ ಅನೇಕ ಸಣ್ಣ ಪುಟ್ಟ ಕಾರ್ಖಾನೆಗಳು ಸ್ಥಾಪನೆ ಆಗಲು ಬೇಕಾದಂಥ ಕಚ್ಚಾ ಸಾಮಾನುಗಳು ವಿಪುಲ ಪ್ರಮಾಣದಲ್ಲಿ ಇವೆ. ಆದ್ದರಿಂದ ಸರ್ಕಾರದವರು ನಿಶ್ಚಿತವಾದ ಧೋರಣೆಯನ್ನು ತೆಗೆದುಕೊಂಡು ಸಂಬಂಧಪಟ್ಟ ಉದ್ಯಮಗಾರರ ಜೊತೆಗೆ ಮತ್ತು ವಿದೇಶಿ ವ್ಯಾಪಾರಗಾರರ ಜೊತೆಗೆ ಒಪ್ಪಂದ ಮಾಡಿಕೊಂಡು ಇದನ್ನು ಸ್ಥಾಪನೆ ಮಾಡಲು ಇನ್ನಾದರೂ ಕೂಡ ಪ್ರಯತ್ನ ಮಾಡಬೇಕು ಎಂದು ಸೂಚನೆ ಮಾಡಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ವಿಪುಲವಾದ ಕಚ್ಚಾ ಸಾಮಾನುಗಳು ಅನೇಕ ಕಡೆ ಇವೆ ಎನ್ನುವುದು ಪ್ರತಿಯೊಬ್ಬರಿಗೂ ಗೊತ್ತು. ಅದರ ವಿಚಾರ ಪ್ರತಿಯೊಬ್ಬರೂ ಮಾತನಾಡಿದ್ದಾರೆ. ಅದನ್ನು ಶೋಧಿಸುವ ಮತ್ತು ಉಪಯೋಗಿಸುವ ಬಗ್ಗೆ ಯಾವ ಹೊಸ ಪಾಲಸಿಯಾಗಲೀ ಧೋರಣೆಯಾಗಲೀ ಈಗಿನ ಬಜೆಟ್ ಭಾಷಣದಲ್ಲಿ ಕಂಡುಬರುವದಿಲ್ಲ. ಇದು ಬಹಳ ಖೇದಕರವಾಗಿದೆ. ರಾ ಫಿಲಂ ಇಂಡಸ್ಟ್ರಿ ಬಗ್ಗೆ ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಿದರು. ನಮಗೆ ಅದರಲ್ಲಿ ಯಶಸ್ಸು ಸಿಕ್ಕಬಹುದೇ ಎಂದು ಸಂದೇಹವಿದೆ. ನಮಗೆ ಸಿಕ್ಕಬೇಕಾದಂಥ ಮತ್ತು ನಿರೀಕ್ಷಣೆ ಮಾಡಿದಂಥ ಒಂದು ಕಚ್ಚಾಫಿಲಂ ಕಾರ್ಖಾನೆಯನ್ನು ನೀಲಗಿರಿಯಲ್ಲಿ ಸ್ಥಾಪನೆ ಮಾಡುವುದರಲ್ಲಿ ಇದ್ದಾರೆ. ನಮ್ಮ ಮೈಸೂರು ರಾಜ್ಯದವರು ಇದಕ್ಕಾಗಿ ಹೆಚ್ಚು ಶ್ರಮ

ವಹಿಸದಿದ್ದರೆ ಇಂಥಾ ಒಂದು ಕಾರ್ಖಾನೆ ನಮಗೆ ಸಿಕ್ಕಲಾರದು. ಆದ್ದರಿಂದ ಹೆಚ್ಚು ಪ್ರಯತ್ನ ಮಾಡಿ ಆ ಕಾರ್ಖಾನೆ ನಮಗೆ ದೊರಕಿಸಿಕೊಡಲಿಕ್ಕೇಬೇಕು. ಎಂದು ನಾನು ಆಗ್ರಹಪೂರ್ವಕವಾಗಿ ಹೇಳುತ್ತೇನೆ. ಸ್ಟೈನ್‌ಲೆಸ್ ಸ್ಟೀಲ್ ಕಾರ್ಖಾನೆಯ ವಿಷಯ ಈಗ ಒಂದೆರಡು ವರ್ಷಗಳಿಂದ ನೆಗೋಷಿಯೇಷನ್ ನಡೆಯುತ್ತಿದೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಅದು ಏನಾಯಿತು ಎಂಬುದು ಕಂಡುಬರುವುದಿಲ್ಲ. ಅದರ ಮಟ್ಟಿಗೆ ವಿವರವನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಆಹಾರ ಧಾನ್ಯಗಳ ಬಗ್ಗೆ ಕೊರತೆ ಇದೆ. ಆದ್ದರಿಂದ ಕಳೆದ ಎರಡು ತಿಂಗಳ ಹಿಂದೆ ಅಕ್ಕಿಯ ವಿಚಾರದಲ್ಲಿ ಒಂದು ಆರ್ಡರನ್ನು ಹೊರಡಿಸಿದ್ದರು. ನಿಜವಾಗಿ ನಮ್ಮ ಮೈಸೂರು ರಾಜ್ಯದಲ್ಲಿ ಇರುವ ನೀರಾವರಿ ಸೌಕರ್ಯ ಮತ್ತು ಉತ್ಕೃಷ್ಟವಾದ ಜಮೀನು ಇವುಗಳ ಜೊತೆಗ ನಮ್ಮ ಅವಶ್ಯಕತೆಗಳನ್ನು ತೂಗಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಆಹಾರದ ಅಭಾವ ಆಗಲೇಬಾರದು. ನೀರಾವರಿ ಸೌಕರ್ಯಗಳನ್ನು ಅನೇಕ ಕಡೆ ಉಪಯೋಗಿಸಿಕೊಂಡಿಲ್ಲ. ಉದಾಹರಣೆಗೆ ತುಂಗಭದ್ರಾ ಯೋಜನೆಯಲ್ಲಿ ಸಹ ಸಾವಿರಾರು ಎಕರೆ ಯಾವುದೇ ರೀತಿಯ ಉತ್ಪನ್ನಕ್ಕಾದರೂ ಉಪಯೋಗಕ್ಕೆ ಬರುತ್ತಿಲ್ಲ. ಕಳೆದ ಒಂದು ವರ್ಷದಿಂದ ಈ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತಿದ್ದರೂ ಯಾವ ವಿಧವಾದ ಪ್ರಗತಿಯನ್ನೂ ಸಾಧಿಸಿಲ್ಲ. ಹೆಚ್ಚು ವಿವರವನ್ನು ಅದರ ಬಗ್ಗೆ ಕೊಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಅದರ ಜೊತೆಗೆ ಸರ್ಕಾರದ ವಶದಲ್ಲಿರುವ ಜಮೀನನ್ನು ವ್ಯವಸಾಯಕ್ಕೆ ಬಿಟ್ಟುಕೊಡಬೇಕು ಎಂದು ಅನೇಕ ಜನ ಸದಸ್ಯರು ಸೂಚನೆ ಮಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 50-60 ಸಾವಿರ ಎಕರೆಗಳಷ್ಟು ಬಂಜರು ಜಮೀನು ಇವೊತ್ತು ಸಿಕ್ಕುವುದು ಶಕ್ಯವಿದೆ. ಈ ಬಂಜರು ಜಮೀನು ಸಾಗುವಳಿ ಮಾಡುವ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ ಎಂದು ಹೇಳಬೇಕಾಗಿದೆ.

ಇನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಖಾತೆಯ ಧೋರಣೆ ಯಾವ ರೀತಿ ಇದೆಯೆಂದು ಎರಡು ಮೂರು ಮಾತುಗಳಲ್ಲಿ ಹೇಳುತ್ತೇನೆ. ಅರಣ್ಯ ಖಾತೆಯ ಧೋರಣೆಯ ಪರಿಣಾಮವಾಗಿ ಹೊಸ ಜಮೀನನ್ನು ವ್ಯವಸಾಯಕ್ಕೆ ತರುವುದು ಅಸಂಭವ. ಅಷ್ಟೇ ಅಲ್ಲ. ವ್ಯವಸಾಯ ಮಾಡುವ ಜಮೀನು ಕೂಡ ಬಂಜರು ಬೀಳುವ ಪರಿಸ್ಥಿತಿಯಲ್ಲಿದೆ. ನಮ್ಮ ರಾಜ್ಯದಲ್ಲಿ ಅನೇಕ ರೀತಿಯ ಮಿನರಲ್ ಪೆಲ್ತ್ ಬಹಳ ಇವೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಒಂದೂವರೆ ವರ್ಷದಿಂದ ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಸ್ಥಾಪನೆ ಮಾಡಬೇಕೆಂದಿದ್ದಾರೆ. ಆದರೆ ಅದರ ಬಗ್ಗೆ ಯಾವ ಕ್ರಮವನ್ನೂ ಇದುವರೆಗೆ ಕೈಗೊಂಡಿಲ್ಲ. ಮಿನರಲ್ ಬೋರ್ಡ್ ಸ್ಥಾಪನೆ ಅದಹೊರತು ಸರ್ವೆ ಮಾಡುವುದು ಅದಹೊರತು ಮತ್ತು ಅದನ್ನು ಯಾವ ರೀತಿ ಶೋಧಿಸಬೇಕು ಮತ್ತು ಉಪಯೋಗಿಸಬೇಕು ಎಂದು ತಿಳಿದ ಹೊರತು ನಾವು ನಮ್ಮ ಖನಿಜ ಸಂಪತ್ತನ್ನು ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಕೂಡಲೇ ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯ್ಕನಹಳ್ಳಿ).- ಮಿನರಲ್ ಬೋರ್ಡ್ ಸ್ಥಾಪನೆಯಾಗಿ ಎರಡು ವರ್ಷಗಳಾದವು. ಆದರೆ ಇನ್ನೂ ಕೆಲಸ ಪ್ರಾರಂಭವಾಗಿಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ಟೇಟ್ ಟ್ರಾನ್ಸ್‌ಪೋರ್ಟ್ ಬಗ್ಗೆ ಕೂಡ ಯಾವ ಫಂಡೂ ಇಲ್ಲ. ಕೂಡಲೇ ಅದರ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಬಯಸುತ್ತೇನೆ.

ಸಾಮಾನ್ಯವಾಗಿ ಇಷ್ಟು ವಿಷಯ ಹೇಳಿದನಂತರ ಇನ್ನು ಉತ್ತರ ಕನ್ನಡ ಜಿಲ್ಲೆಯ ವಿಷಯವನ್ನು ಹೇಳಿದರೆ ಅಪ್ರಕೃತವಾಗಲಾರದು ಎಂದು ನನ್ನ ಭಾವನೆ. ಮೊದಲನೆಯದಾಗಿ ಅಲ್ಲಿ ಅರಣ್ಯ ಖಾತೆಯ ಧೋರಣೆಯ ಸಂಬಂಧವಾಗಿ ಒಂದೆರಡು ಮಾತನ್ನು ಹೇಳುತ್ತೇನೆ. ಮೊದಲು ಮಾತನಾಡಿದ ಶ್ರೀಮತಿ ಮಿರ್ಜಾಂಕರ್ ಅವರು ಹೇಳಿದಂತೆ 100ಕ್ಕೆ 85 ರಷ್ಟು ಭಾಗ ಅರಣ್ಯ ಪ್ರದೇಶ ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಅದು ಯಾವ ಆಡಳಿತದಲ್ಲಿದೆ ಎಂದರೆ ಅದು ಜಂಗಲ ಆಡಳಿತದಲ್ಲಿ ಇದೆ ಎಂದರೆ ಅದು ಉತ್ಪ್ರೇಕ್ಷೆಯಾಗಲಾರದು. 50-60 ವರ್ಷಗಳ ಹಿಂದಿನ ಉತ್ತರಕನ್ನಡ ಜಿಲ್ಲೆಯ ಚಿತ್ರವನ್ನು ನೋಡಿದರೆ ಹತ್ತು ಲಕ್ಷ ಪ್ರಜಾ ಸಂಖ್ಯೆ ಇದ್ದದ್ದು ಈಗ ನಾಲ್ಕು ಲಕ್ಷಕ್ಕೆ ಬಂದಿದೆ. ಅಲ್ಲಿ ಒಳ್ಳೆಯ ಹೈನು ಉತ್ಪನ್ನವಾಗುತ್ತಿತ್ತು. ಒಂದು ಡಬ್ಬ ತುಪ್ಪ ಕೊಟ್ಟು ಒಂದು ಡಬ್ಬ ಜೇನು ತರುತ್ತಿದ್ದರು. ಈಗ ಆಕಳುಗಳನ್ನು ಅಲ್ಲಿಗೆ ಬೇರೆ ದೇಶದಿಂದ ತೆಗೆದುಕೊಂಡು ಬರಬೇಕಾಗಿದೆ. ತಲೆಗೆ ಒಂದು ಔನ್ಸ್ ಹಾಲೂ ಕೂಡ ನಮ್ಮ ಹಳ್ಳಿಯವರಿಗೆ ಸಿಕ್ಕುತ್ತಾ ಇಲ್ಲ. ಅರಣ್ಯ ಖಾತೆಯ ಧೋರಣೆಯ ಪರಿಣಾಮವಾಗಿ ಈ ಸ್ಥಿತಿಗೆ ಬಂದಿದೆ. ಈಗ 50 ವರ್ಷಗಳ ಹಿಂದೆ 30 ಸಾವಿರ ಎಕರೆ ತೋಟ ನಮ್ಮ ಜಿಲ್ಲೆಯಲ್ಲಿ ಇತ್ತು. ಅದು ಈಗ 12 ಸಾವಿರ ಎಕರೆಗೆ ಬಂದಿದೆ. ಬತ್ತ ಮತ್ತು ಕಬ್ಬು ಇವನ್ನು ಬೆಳೆಯುವುದು 100ಕ್ಕೆ 70 ರಷ್ಟು ಕಡಿಮೆಯಾಗಿದೆ. ಅದಕ್ಕೆಲ್ಲಾ ಕಾರಣ ಅರಣ್ಯ ಶಾಖೆಯ ಪ್ರವೃತ್ತಿ. ಅವರಿಗೆ ಬೇಕಾದಷ್ಟು ಅರಣ್ಯವಿದೆ. ಅಲ್ಲಿ ಪಶುಗಳ ಸಂಗೋಪನೆ ಆದ ಹೊರತು ಅಲ್ಲಿ ಜನಸಾಮಾನ್ಯರ ಪ್ರಗತಿ ಆಗುವುದಿಲ್ಲ. ಅರಣ್ಯ ಜನರಿಗೋಸ್ಕರ ಇದೆ. ಆದರೆ ಈಗ ಜನರು ಅರಣ್ಯಕ್ಕೋಸ್ಕರ ಇದ್ದಾರೆ ಎಂದು ಹೇಳಬೇಕಾಗಿದೆ. ಆದ್ದರಿಂದ ಇವೆಲ್ಲವನ್ನು ಸರ್ಕಾರದವರು ಪರಿಶೀಲನೆಮಾಡಿ ಏನಾದರೂ ಒಂದು ಕ್ರಮವನ್ನು ಕೈಗೊಂಡು ಜನರಿಗೆ ಜಮೀನು ಸಿಕ್ಕುವಂತೆ ಮಾಡಬೇಕು; ಮತ್ತು ಅರಣ್ಯ ಶಾಖೆಯವರ ಉಪಟಳ ಕಡಿಮೆಯಾಗುವಂತೆ ಯಾವ ಕ್ರಮವನ್ನಾದರೂ ತೆಗೆದುಕೊಳ್ಳದಿದ್ದರೆ ಉಗ್ರವಾದ ಪರಿಣಾಮ ಜನರಲ್ಲಿ ಆಗುತ್ತದೆ ಎಂದು ಸೂಚಿಸಬಯಸುತ್ತೇನೆ.

ಈಗಾಗಲೇ ಮಲೆನಾಡು ಸಮ್ಮೇಳನವು ನಡೆದಾಗ ಅಲ್ಲಿ ಕೆಲವು ವಿಷಯಗಳನ್ನು ಚರ್ಚಿಸಿ ನಿರ್ಣಯಗಳನ್ನು ಮಾಡಿ ಸರಕಾರಕ್ಕೆ ಕಳುಹಿಸಲಾಗಿತ್ತು. ಅದರಲ್ಲಿ ಅರ್ಧದಷ್ಟನ್ನಾದರೂ ಸರಕಾರ ಗಮನಕ್ಕೆ ತೆಗೆದುಕೊಂಡಿದ್ದರೆ ಮಲೆನಾಡಿಗೆ ಅನುಕೂಲವಾಗುತ್ತಿತ್ತು. ಅವು ಇಲ್ಲಿಯವರೆಗೂ ಕಾರ್ಯಗತವಾಗಿಲ್ಲ. ಈ ರೀತಿಯಾಗಿ ಮಾಡಿದ್ದರೆ ಈ ಜಿಲ್ಲೆಗಳಲ್ಲಿದ್ದ ಅರಣ್ಯಗಳ ಉತ್ಪನ್ನ ಸುಮಾರು ಎರಡು, ಎರಡೂವರೆ ಕೋಟಿ ರೂಪಾಯಿಗಳಷ್ಟಾದರೂ ಹೆಚ್ಚುತ್ತಿತ್ತು. ಹೀಗೆ ಎರಡು ಕೋಟಿ ರೂಪಾಯಿಗಳ ಉತ್ಪನ್ನ ಬಂದಿದ್ದರೆ ದೇಶದ ಅಭಿವೃದ್ಧಿ ಕೆಲಸಗಳಿಗೆ ಸಹಾಯವಾಗುತ್ತಿತ್ತು. ನಮ್ಮ ಭಾಗದಲ್ಲಿರುವ ಅರಣ್ಯ ಖಾತೆಯ ಅಧಿಕಾರಿಗಳು ಸರಿಯಾಗಿ ಕೆಲಸಗಳನ್ನು ಮಾಡುತ್ತಿಲ್ಲ. ಅವರಿಗೆ, ಜಿಲ್ಲೆಗೆ ಸಂಬಂಧಪಟ್ಟ ವಿಚಾರಗಳ ಬಗೆಗೆ ಯಾವ ವಿಧವಾಗಿ ಕಾಗದ ಬರೆದರೂ ಅದರಿಂದ ಯಾವ ಫಲವೂ ದೊರಕದೆ ಅದು ಹಾಗೆಯೇ ವಾಪಸು ಹೋಗುತ್ತದೆ. ಇದರ ಪರ್ಸೆಂಟೇಜನ್ನು ನೋಡಿದರೆ ನೂರಕ್ಕೆ ನಾಲ್ಕರಷ್ಟು, ಐದರಷ್ಟು ಕೂಡ ಇಲ್ಲ.

(ಶ್ರೀ ರಾಮಕೃಷ್ಣ ಹೆಗ್ಗಡೆ)

ಇಲ್ಲಿರುವ ಅರಣ್ಯ ಖಾತೆಗಳ ಅಧಿಕಾರಿಗಳು ಏನು ಮಾಡುತ್ತಾರೆಂದರೆ ರೈತನ ಮೇಲೆ ಪಂಚನಾಮ ಹಾಕಿ ಒಂದು ಕೇಸನ್ನು ಹಾಕುತ್ತಾರೆ.

4 P.M.

ಇನ್ನು ಈ ಕಮ್ಯೂನಿಟಿ ಡೆವಲೆಪ್‌ಮೆಂಟ್ ಬ್ಲಾಕುಗಳಲ್ಲಿ ಸ್ಕೂಲುಗಳಿಗಾಗಿ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ಆದರೆ ಇದಕ್ಕೆ ಬೇಕಾಗುವ ಕಟ್ಟಿಗೆಗಳನ್ನು ಹುಬ್ಬಳ್ಳಿ, ಧಾರವಾಡ ಈ ಕಡೆಗಳಿಂದ ತರಲಾಗುತ್ತಿದೆ. ನಮ್ಮ ಶಿರಸಿಯಲ್ಲೇ ಮನೆಯನ್ನು ಕಟ್ಟಬೇಕಾದರೆ ಇದಕ್ಕೆ ಬೇಕಾಗುವ ಕಟ್ಟಿಗೆಗಳನ್ನು ನಮ್ಮ ಜಿಲ್ಲೆಯ ಹೊರಗಿನಿಂದ ತರಬೇಕಾಗಿದೆ. ಅದರಿಂದಾಗಿ ಮನೆ ಕಟ್ಟುವ ಸಾಮಾನುಗಳಿಗಾಗಿ ಇಷ್ಟೊಂದು ಬೆಲೆಯನ್ನು ಕೊಟ್ಟು ಇಷ್ಟು ಶ್ರಮಪಡಬೇಕಾಗಿದೆ. ಮಲೆನಾಡಿನ ಕೆಲವು ಪ್ರಾಂತಗಳಲ್ಲಿ ಇದೇ ರೀತಿಯಾದ ಪರಿಸ್ಥಿತಿ ಇದೆ.

ಇನ್ನು ಕಳೆದ ವರ್ಷ ಮಂಜೂರುಮಾಡಿದಂತಹ ಗವರ್ನಮೆಂಟಿನ ರೆಸಲ್ಯೂಷನ್ನನ್ನು ಕೂಡ ಅಧಿಕಾರಿಗಳು ಕಾರ್ಯಗತ ಮಾಡುತ್ತಿಲ್ಲ. ಅಷ್ಟೇ ಅಲ್ಲ, ಮೊದಲಿದ್ದಂತಹ ಸೌಲಭ್ಯಗಳನ್ನೂ ತೆಗೆದುಹಾಕುವಂತೆ ಬೇರೆ ರೀತಿಯಾದ ಆರ್ಡರುಗಳನ್ನು ಕೊಟ್ಟಿದ್ದಾರೆಂದು ಹೇಳುತ್ತ ಯಾವುದೂ ಕಾರ್ಯಗತವಾಗುತ್ತಿಲ್ಲ. ಹೀಗಿದ್ದರೂ ಇವು ಯಾವುವು ಸರಕಾರದ ಗಮನಕ್ಕೆ ಬಾರದ ಸ್ಥಿತಿಯಲ್ಲಿವೆ.

ಸ್ವಾಮಿ, ಕರಾವಳೀ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ 13 ಸಾವಿರ ರೂಪಾಯಿಗಳ ಒಂದು ಸ್ಕೀಮನ್ನು ಮಾಡಬೇಕೆಂದು ಅದರಂತೆ ಏನಾದರೂ ಕಾರ್ಯಗಳು ನಡೆದಿವೆಯೇ ಎಂದು ಪರಿಶೀಲನೆ ಮಾಡಿದರೆ ಇಲ್ಲಿಯವರೆಗೆ ಯಾವ ಕಾರ್ಯಕ್ರಮಗಳೂ ನಡೆದಂತೆ ತೋರಲಿಲ್ಲ. ಆಹಾರದ ಅಭಾವವಿರುವ ಈಗಿನ ಸ್ಥಿತಿಯಲ್ಲಿ ಹೆಚ್ಚು ಹೆಚ್ಚಾಗಿ ಉತ್ಪನ್ನವನ್ನು ಮಾಡುತ್ತೇವೆಂಬ ಮಾತನ್ನು ಹೇಳುತ್ತಿದ್ದರೆ ಅರಣ್ಯಗಳಿಂದ ಕ್ಯಾಪಿಟಲ್ಲು ಬರುವುದಿಲ್ಲ, ಗ್ರಾಮಾಂತರಗಳಿಂದ ಬರುವುದಿಲ್ಲ, ಏಕೆಂದರೆ ಬೆಳೆದಂತಹ ಪದಾರ್ಥಗಳನ್ನು ಮಾರುವುದಕ್ಕೆ ಸರಿಯಾದ ಸೌಲಭ್ಯಗಳಿರುವುದಿಲ್ಲ. ಇದನ್ನೆಲ್ಲ ಸರಕಾರ ಗಮನಕ್ಕೆ ತೆಗೆದುಕೊಂಡು ಈ ಆಹಾರದ ಉತ್ಪಾದನೆಗಳ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕಾದುದು ಅಗತ್ಯ. ಇದರ ಜೊತೆಗೆ ನಮ್ಮ ಜಿಲ್ಲೆಯಲ್ಲಿರುವ ಸಣ್ಣ ಕೆರೆಗಳನ್ನು ಅಭಿವೃದ್ಧಿಗೆ ತರಬೇಕಾದುದು ಅವಶ್ಯಕವಾಗಿದೆ. ನಮ್ಮ ಕಡೆಯಲ್ಲಿ ಉಪ್ಪನ್ನು ಅಭಿವೃದ್ಧಿ ಮಾಡುವ ಉದ್ಯಮವಿದೆ. ಅದಕ್ಕಾಗಿ ಅಲ್ಲಿನ ಒಬ್ಬರು ವರ್ತಕರು ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸರಕಾರವನ್ನು ನಾಲ್ಕು ಲಕ್ಷ ರೂಪಾಯಿಗಳಷ್ಟು ಸಾಲವನ್ನು ಕೇಳುತ್ತಿದ್ದಾರೆ. ಅದನ್ನು ಸರಕಾರ ಇಲ್ಲಿಯವರೆಗೂ ಮಂಜೂರುಮಾಡಿಲ್ಲ. ಈ ಉದ್ಯಮಕ್ಕೆ ಸಹಾಯ ದೊರೆತರೆ ಸುಮಾರು ಇದರ ಉತ್ಪನ್ನ ಹತ್ತು ಲಕ್ಷ ಟನ್ನಿನಷ್ಟು ಬರುತ್ತದೆ; ಮತ್ತು ನಮ್ಮ ರಾಜ್ಯಕ್ಕೆ ಬೇಕಾಗುವಷ್ಟು ಹೆಚ್ಚಿನ ಪ್ರಮಾಣದಲ್ಲಿ ಉಪ್ಪನ್ನು ಒದಗಿಸಬಹುದು. ಇದರ ಬಗ್ಗೆ ಸರಕಾರ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇದು ಕೂಡ ಬಹು ವಿಷಾದಕರವಾದ ಅಂಶ.

ಇನ್ನು cashew cultivation ನಿಂದ ಡಾಲರು ಸಿಕ್ಕುತ್ತದೆ ಎಂದು ಹೇಳಿ ಸರಕಾರ ಹಿಂದೆ ಒಂದು ಸ್ಕೀಮನ್ನು ತಂದಿತ್ತು. ಇದರಿಂದ ನಮ್ಮ ಭಾಗಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಇನ್ನು ಕೆಲವು ಭಾಗಗಳಿಗೆ ಅನುಕೂಲವಾಗುತ್ತಿತ್ತು. ಇದರ ಬಗೆಗೆ ಯಾವ ಏರ್ಪಾಡನ್ನೂ ಮಾಡಿದ ಹಾಗೆ ತೋರುತ್ತಿಲ್ಲ. ಈ ವ್ಯವಸಾಯದ ಬಗ್ಗೆ, ಫಾರೆಸ್ಟು ಇಲಾಖೆಯವರು, ಇದಕ್ಕಾಗಿ ರಿಸರ್ವ್ ಫಾರೆಸ್ಟು ಭಾಗವನ್ನು ಮಾಡಿ, ಇದರ ಬೆಳೆಗೆ ಉತ್ತೇಜನವನ್ನು ಕೊಡದೆ ಇರುವುದು ವಿಷಾದಕರವಾದ ಅಂಶವಾಗಿದೆ. ಇಂತಹ ಉತ್ತಮವಾದ Dollar earning Industry ಗಾಗಿ ಅರಣ್ಯ ಖಾತೆಯ ಅಧಿಕಾರಿಗಳು ಯಾವ ವಿಧವಾದ ಕ್ರಮವನ್ನೂ ತೆಗೆದುಕೊಳ್ಳದೆ ಇರುವುದು ತುಂಬ ವ್ಯಸನವನ್ನುಂಟುಮಾಡಿದೆ. ಈ ಬಗ್ಗೆ ಮೂರು ತಿಂಗಳಿನಿಂದಲೂ ಈ ಇಲಾಖೆಗೆ ಕಾಗದ ಬರೆದರೂ ಇದನ್ನು ಕಾರ್ಯಗತ ಮಾಡದೆ ಇರುವುದಕ್ಕೆ ಕಾರಣಗಳನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಂದು ನಂಬಿದ್ದೇನೆ.

ನಮ್ಮ ಶಿರಸಿಯಲ್ಲಿ ಒಂದು ಅಡಕೆ ಸಂಶೋಧನಾ ಕೇಂದ್ರ ಆಗಬೇಕೆಂದು ನಾಲ್ಕೈದು ವರ್ಷಗಳಿಂದಲೂ ಇತ್ತು. ಇದಕ್ಕಾಗಿ ಕಳೆದ ವರ್ಷ ನಲವತ್ತೈದು ಸಾವಿರ ರೂಪಾಯಿಗಳನ್ನು ಒದಗಿಸಿದ್ದರು. ಆದಾಗಿ ಒಂದು ವರ್ಷವಾದರೂ ಯಾವ ಕೆಲಸವೂ ಆಗಿಲ್ಲ. ಈ ಸಾರಿಯ ಬಡ್ಜೆಟ್ಟಿನಲ್ಲಿ ಅಂದಾಜನ್ನು ಮಂಡಿಸುವಾಗ ಈ ನಲವತ್ತೈದು ಸಾವಿರ ರೂಪಾಯಿಗಳನ್ನು ಒದಗಿಸಿಲ್ಲ. ಇದನ್ನು ಏಕೆ ತೆಗೆದುಬಿಟ್ಟರು. ಎನ್ನುವ ಬಗ್ಗೆ ಯಾವ ವಿವರಗಳನ್ನೂ ಕೊಟ್ಟಿಲ್ಲ. ಇದರ ಬಗ್ಗೆ ಕಾರಣಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಫಿ ಬೆಳೆ ತಜ್ಞರು ಬಂದಿದ್ದರು. ಆಗ ಅವರು ಇಲ್ಲಿಯ ಜಮೀನುಗಳನ್ನು ಪರಿಶೀಲಿಸಿದಾಗ ಒಂದು ಎಕರೆಗೆ ಬೇರೆ ಕಡೆಗಿಂತ ಐದರಷ್ಟು ಉತ್ಪನ್ನ ಬರುತ್ತದೆ ಎಂದು ಹೇಳಿದರು. ಆದುದರಿಂದ ಇಲ್ಲಿರುವ ಜಮೀನನ್ನು ಸರಿಯಾಗಿ ಉಪಯೋಗಿಸಿಕೊಂಡು ಕಾಫಿ ಬೆಳೆ ಬೆಳೆದರೆ ಬಾಕಿ ಜಮೀನಿನಿಂದ ಒಂದು ಎಕರೆಗೆ ಹದಿನಾಲ್ಕರಷ್ಟು ಬಂದರೆ ಇಲ್ಲಿ ಒಂದು ಎಕರೆಗೆ ಇಪ್ಪತ್ತೈದರಷ್ಟು ಕಾಫಿ ಬೆಳೆ ಬರಬಹುದು ಎನ್ನುವ ಅಂದಾಜು ಮಾಡಲಾಯಿತು. ಇಲ್ಲಿರುವ ಶೇಕಡಾ ಎಂಬತ್ತೈದರಷ್ಟು ತೋಟದ ಐವತ್ತರಷ್ಟು ಭಾಗದಲ್ಲಿ ಕಾಫಿ ಬೆಳೆಯನ್ನು ಮಾಡಿ ಉಳಿದ ಭಾಗಗಳಲ್ಲಿ ಭತ್ತ ಮತ್ತು ಇತರ ಬೆಳೆಗಳನ್ನು ಬೆಳೆಯಬಹುದು. ಆ ರೀತಿ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಇಲ್ಲಿ ಆಗ್ರಹದಿಂದ ಕೇಳುತ್ತೇನೆ.

ಇಷ್ಟೊಂದು ಉತ್ಪನ್ನವಿರುವ ನಮ್ಮ ಜಿಲ್ಲೆಗಳ ಕಡೆಗೆ ಒದಗಿಸುತ್ತಿರುವ ಕಾಮಗಾರಿಯನ್ನು ನೋಡಿದರೆ ನಿಜವಾಗಿಯೂ ನಮಗೆ ಬಹಳ ನಿರಾಶೆಯಾಗುತ್ತದೆ. ಕೇವಲ ನೂರು ಮೈಲಿಗಳಷ್ಟು ರೋಡು ಕೂಡ ಟಾರಾಗಿಲ್ಲ. ನಮ್ಮ ಕಡೆಯಲ್ಲಿರುವ ರಸ್ತೆ ಮುಗಳಿಯಿಂದ ಧಾರವಾಡದವರೆಗೆ ಹೋಗುವ ರಸ್ತೆಯಲ್ಲಿ ಒಂದು ಇಂಚಿನಷ್ಟು ಸಿಮೆಂಟು ರಸ್ತೆ ಕೂಡ ಆಗಿಲ್ಲ. ನಮ್ಮ ಕಡೆಗಳಲ್ಲಿ ಇಷ್ಟೊಂದು ಸಾಗಾಣಿಕೆಯಿರುವುದರಿಂದ ಬೇರೆ ಬೇರೆ ಊರುಗಳಿಗೆ ಹೋಗಬೇಕಾದ ರಸ್ತೆಗಳನ್ನು ಜಿಲ್ಲಾ ಬೋರ್ಡಿನವರು ಮಾಡುತ್ತಿಲ್ಲ. ಈ ರಸ್ತೆಗಳನ್ನೆಲ್ಲ ಕೂಡಲೇ ಮಾಡಿಸಿಕೊಡಬೇಕಾದುದು ಅತ್ಯಾವಶ್ಯಕ. ಅದರ ಬಗ್ಗೆ ಕಳೆದ ಎರಡು ವರ್ಷಗಳಿಂದಲೂ ನಮ್ಮ ಕಡೆಯಿಂದ ಇಲ್ಲಿಗೆ ಬಂದಿರುವ ಸುಮಾರು ಐದು ಜನ ಸದಸ್ಯರೂ ಪ್ರಯತ್ನ ಮಾಡುತ್ತಿದ್ದಾರೆ. ಹಾಗಿದ್ದರೂ ಕೂಡ ಇಲ್ಲಿಯವರೆಗೂ ಈ ಕೆಲಸ ತೃಪ್ತಿಕರವಾಗಿಲ್ಲ.

ಮಲೆನಾಡಿನಲ್ಲಿರುವ ಜನರ ಕಷ್ಟಗಳು ಮತ್ತು ಮಲೇರಿಯಾ ರೋಗದ ಹಾವಳಿಯನ್ನು ತಡೆಗಟ್ಟಲು

ಇಲ್ಲರುವ ಮಲೆನಾಡ ಸೇವಾ ಸಮಿತಿಯಲ್ಲಿ ಈ ವಿಚಾರಗಳನ್ನೆಲ್ಲ ಕೂಲಂಕಷವಾಗಿ ಚರ್ಚೆಮಾಡಿ ಅನೇಕ ಸೂಚನೆಗಳನ್ನು ಸರಕಾರಕ್ಕೆ ಕಳುಹಿಸಿಕೊಡಲಾಗಿತ್ತು. ಆದರೆ ಹಾಗೆ ಕಳುಹಿಸಿದ ಕೆಲವು ಸೂಚನೆಗಳು ಕೂಡ ಇನ್ನೂ ಮಂಜೂರಾಗಿಲ್ಲ ಎಂದು ನಾನು ಇಲ್ಲಿ ಖೇದದಿಂದ ಹೇಳಬೇಕಾಗಿದೆ.

ಸ್ವಾಮೀ, ನಮ್ಮ ಜಿಲ್ಲೆಯಲ್ಲೇ ಮೂರು ಕಾಗದದ ಕಾರ್ಖಾನೆಗಳನ್ನು ತೆರೆಯುವಷ್ಟು ಸೌಕರ್ಯಗಳು ಮತ್ತು ಅಷ್ಟು ಮಟ್ಟಿನ ಕಚ್ಚಾ ಸಾಮಗ್ರಿಗಳು ಸಿಕ್ಕುತ್ತವೆ. ಇವಕ್ಕೆ ತಕ್ಕಷ್ಟು ಸರಕಾರ ಪ್ರಯತ್ನ ಮಾಡಿದರೆ ಇಂತಹ ಕಾರ್ಖಾನೆಗಳನ್ನು ತೆರೆಯಬಹುದು. ನಮ್ಮ ಕಡೆಗಳಲ್ಲಿ ಭಾರಿ ಭಾರಿಯಾದ ಕಾರ್ಖಾನೆಗಳೆಲ್ಲ ಪರದೇಶದವರ ಎಂದರೆ, ಮಾರವಾಡಿಗಳು, ಗುಜರಾತಿಗಳು ಹೀಗೆ ಅವರ ಕೈಸೇರಿವೆ. ನಮ್ಮ ಕನ್ನಡಿಗರ ಕೈಯಲ್ಲಿ ಯಾವ ಕಾರ್ಖಾನೆಯೂ ಇಲ್ಲ. ನಮ್ಮ ಕಡೆಯ ಭಾಗಗಳಲ್ಲಿ ಯಾವ ರೀತಿಯಾದ ಡೆವಲೆಪ್‌ಮೆಂಟ್ ಕಾರ್ಯಕ್ಷೇತ್ರವನ್ನೂ ವಿಸ್ತರಿಸದೆ ಇರುವಂತಾಗಿದೆ ಮತ್ತು ಯಾವ ಯೋಜನೆಗೂ ಅಂಗೀಕಾರವನ್ನು ಕೊಟ್ಟಿಲ್ಲ. ಇದು ನಿಜವಾಗಿಯೂ ಬಹಳ ಅನ್ಯಾಯದ ಪ್ರಸಂಗವಾಗಿದೆ. ಇದು ಒಂದು ಜಿಲ್ಲೆಯ ಪ್ರಶ್ನೆಯಾದರೂ ರಾಜ್ಯದ ಬಡ್ಜೆಟ್ಟಿನಲ್ಲಿ ಇದರ ಬಗ್ಗೆ ಸಾಕಷ್ಟು ಕ್ಯಾಪಿಟಲ್ಲನ್ನು ಕೊಟ್ಟು ವಿಸ್ತರಿಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನಾನು ಸೂಚನೆ ಮಾಡಬಯಸುತ್ತೇನೆ.

ಅನಂತರ ಮೈನರು ಇರಿಗೇಷನ್ನಿನ ವಿಚಾರ. ಇದರಲ್ಲಿಯೂ ಕೂಡ ಕಳೆದ ನಾಲ್ಕೈದು ತಿಂಗಳಿನಿಂದೀಚೆಗೆ ಕೆಲಸ ನಡೆಯುತ್ತಿದೆ ಎಂದು ಸಂಬಂಧಪಟ್ಟ ಮಂತ್ರಿಗಳೇನೋ ಹೇಳುತ್ತಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಮತ್ತು ಶಿರಸಿಯಲ್ಲಿ ಯಾವ ವಿಧವಾದ ಮೈನರು ಇರಿಗೇಷನ್ನು ಕೆಲಸಗಳೂ ಆಗಿಲ್ಲ. ಏನಾಗಿದೆ ಎಂದರೆ ಕೆಲವು ಸಬ್ ಡಿವಿಜನ್ನುಗಳ ವರ್ಗಾವರ್ಗಿಯಾಗಿದೆ. ಕಾರವಾರದಿಂದ ಹಳಿಯಾಲಕ್ಕೆ ಒಂದು ಸಬ್ ಡಿವಿಜನ್ನು, ಶಿರಸಿಯಿಂದ ಧಾರವಾಡಕ್ಕೆ ಒಂದು ಸಬ್ ಡಿವಿಜನ್ನು ಹೀಗೆ ಮಾಡಲಾಗಿದೆ. ಶಿರಸಿ, ಕುಮಟಾ ಈ ಭಾಗಗಳಲ್ಲಿ ಏನಾದರೂ ಮೈನರು ಇರಿಗೇಷನ್ನಿನ ವಿಚಾರ ಮಾಡಬೇಕಾದರೆ ಮತ್ತು ಅವುಗಳನ್ನು ಸರಿಯಾಗಿ ನೋಡಿಕೊಳ್ಳಬೇಕಾದರೆ ಇಲ್ಲಿಗೆ ಎರಡು ಸಬ್ ಡಿವಿಜನ್ನುಗಳನ್ನಾದರೂ ಖಾಯಮ್ಮಾಗಿ ಮಂಜೂರು ಮಾಡಬೇಕಾದುದು ಅಗತ್ಯ. ಆ ರೀತಿ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದರೂ ತೆಗೆದುಕೊಳ್ಳದೇ ಇರುವುದು ನಿಜವಾಗಿಯೂ ಬಹಳ ವಿಷಾದಕರವಾದ ಅಂಶ. ಮೈನರು ಇರಿಗೇಷನ್ನಿಗೆ ಅನುಕೂಲವಾಗುವಂತೆ ನಮ್ಮ ಒಂದು ಹಳಿಯಾಲ ತಾಲ್ಲೂಕಿನಲ್ಲಿ ಐನೂರು ಕೆರೆಗಳಿವೆ, ಶಿರಸಿಯಲ್ಲಿ ನಾನೂರು ಕೆರೆಗಳಿವೆ. ಇವುಗಳ ಅಭಿವೃದ್ಧಿಗೆ ಅನುಕೂಲವಾದ ಕಾರ್ಯಕ್ರಮವನ್ನು ತೆಗೆದುಕೊಳಬೇಕೆಂದು ಹೇಳುತ್ತೇನೆ.

ಫಾರೆಸ್ಟ್ ಉತ್ಪನ್ನದಲ್ಲಿ ನಮ್ಮ ಜಿಲ್ಲೆಯಲ್ಲಿ ಲೋಕಲ್ ಬೋರ್ಡ್ ಫಂಡಿಗೆ ಬೊಂಬಾಯಿ ಸರ್ಕಾರವಿದ್ದಾಗ ಶೇಕಡ ಎರಡರಷ್ಟನ್ನು ಕೊಡುತ್ತಿದ್ದರು. ಏಕೆಂದರೆ, ನಮ್ಮ ಕಡೆ ಭೂ ಕಂದಾಯ ಬಹಳ ಕಡಮೆ ಇದೆ ಅರಣ್ಯ ಪ್ರದೇಶವೇ ನಮ್ಮಲ್ಲಿ ಜಾಸ್ತಿಯಿರುವುದು. ಆದರಿಂದಾಗಿ ರಸ್ತೆ ಮುಂತಾದ ಸಾರ್ವಜನಿಕ ಕೆಲಸಗಳು ತೀವ್ರಗತಿಯಲ್ಲಿ ನಡೆಯಬೇಕಾದರೆ ಫಾರೆಸ್ಟ್ ಉತ್ಪನ್ನದಲ್ಲಿ ಸ್ವಲ್ಪ ಭಾಗ ಕೂಡಬೇಕೆಂದು ಹೇಳಿ ಶೇಕಡ ಎರಡು ಕೊಡುವುದೆಂದು ಮಾಡಿದ್ದರು. ನಾವು ಇದನ್ನು ಶೇಕಡ ಐದಕ್ಕೆ ಜಾಸ್ತಿ ಮಾಡಬೇಕೆಂದು ಈಗ್ಗೆ ಎರಡು ವರ್ಷಗಳಿಂದ ಕೇಳುತ್ತಿದ್ದರೂ ಅದನ್ನು ಕೊಟ್ಟಿಲ್ಲ. ಭೂಕಂದಾಯದಷ್ಟನ್ನು ನಮಗೆ ಕೊಡುವುದಾದರೆ ಆ ಜಿಲ್ಲಾ ಬೋರ್ಡ್ ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ. ಯಾವ ಕೆಲಸವನ್ನೂ ಅದು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಶೇಕಡ ಐದು ಕೊಡದೆ ಇದ್ದರೆ ನಿಜವಾಗಿಯೂ ನಮ್ಮ ಜಿಲ್ಲೆಗೆ ಅನ್ಯಾಯ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಫಾರೆಸ್ಟ್ ಬಗ್ಗೆ ನಾನಿನ್ನು ಹೆಚ್ಚಿಗೆ ಹೇಳುವುದಿಲ್ಲ. ಒಂದು ವಿಷಯ ಮಾತ್ರ ಹೇಳಿ ಮುಗಿಸುತ್ತೇನೆ. ನಮ್ಮ ಕಡೆ ಆಹಾರಧಾನ್ಯ ಬೆಳೆಯುವುದಕ್ಕೇ ಹೆಚ್ಚು ಜಾಗವಿಲ್ಲ. ಇರುವ ಅಲ್ಪ ಸ್ವಲ್ಪ ಜಮೀನೂ ಅರಣ್ಯದ ಪಕ್ಕದಲ್ಲೇ ಇದೆ. ಇದರಿಂದಾಗಿ ಅರಣ್ಯದ ಮೃಗಗಳು ಬಂದು ಅಲ್ಲಾಗುವ ಪೈರನ್ನೆಲ್ಲಾ ತಿಂದುಹಾಕಿ ಬಿಡುತ್ತವೆ. ತನ್ನ ಪೈರನ್ನು ತಿನ್ನುವುದಕ್ಕೆ ಬಂದರೂ ಆ ರೈತ ಆ ಕಾಡುಮೃಗಗಳನ್ನು ಕೋವಿಯಿಂದ ಹೊಡೆಯುವ ಹಾಗಿಲ್ಲ. ಹೊಡೆಯಬೇಕಾದರೆ ಸಾಕ್ಷಿ ಇಟ್ಟುಕೊಂಡು ಹೊಡೆಯಬೇಕಂತೆ ; ಇಲ್ಲದಿದ್ದರೆ ಅವನಮೇಲೆ ಕೇಸು ಹಾಕಿಬಿಡುತ್ತಾರೆ. ಹೀಗಾದರೆ ಆ ಜಿಲ್ಲೆಯಲ್ಲಿ ಯಾವ ರೀತಿ ವ್ಯವಸಾಯ ಮಾಡುವುದು ? ಸರ್ಕಾರದವರು ಇನ್ನುಮುಂದೆಯೂ ಇದೇ ಧೋರಣೆಯನ್ನು ಮುಂದುವರಿಸುವುದಾದರೆ ಅಲ್ಲಿರುವ ನಾಲ್ಕು ಜನರನ್ನು ಬೇರೆ ಕಡೆಗೆ ಕಳುಹಿಸಿ ಬಿಟ್ಟು ಆ ಇಡೀ ಭಾಗವನ್ನು ಅರಣ್ಯವೆಂದು ಘೋಷಿಸಿಬಿಡಲಿ. ನೀವು ರೈತರನ್ನು ಷಿಕಾರಿ ಮಾಡುವುದಕ್ಕೆ ಎಲ್ಲ ಅಡಚಣೆಯನ್ನೂ ಹಾಕಿದ್ದೀರಿ. ಅದೇ ಸರ್ಕಾರಿ ಆಫೀಸರಾದರೆ ಅವರಿಗೆ ಷಿಕಾರಿಗೆ ಯಾವ ಅಡ್ಡಿಯೂ ಇಲ್ಲ. ಸಿರಸಿ ತಾಶೀಲ್‌ದಾರರು ಯಾವಾಗಲೂ ಕೋವಿ ಇಟ್ಟುಕೊಂಡೇ ತಿರುಗುತ್ತಿರುತ್ತಾರೆ. ಹಿಂದೆ ಅಕ್ಕಿ ಶೇಖರಣೆ ಮಾಡುವಾಗಲೂ ಅವರು ಕೋವಿ ತೋರಿಸಿ ಅಕ್ಕಿ ವಸೂಲಮಾಡುತ್ತಿದ್ದರೆಂದು ಜನ ಹೇಳುತ್ತಾರೆ. ಅವನು ಷಿಕಾರಿ ಮಾಡುತ್ತಾ, ಒಬ್ಬ ಹಳ್ಳಿಯವನ ಜೀವವನ್ನೇ ತೆಗೆದುಬಿಟ್ಟ. ಜನರಲ್ಲಿ ಗಲಭೆಯಾಗಿ ಯಾವಾಗ ಡೆಪ್ಯುಟಿ ಕಮಿಷನರಿಗೆ ದೂರು ಹೋಯಿತೋ ಆಗ ಆತ ಆತ್ಮಹತ್ಯ ಮಾಡಿಕೊಂಡುಬಿಟ್ಟ. ಅಂತೂ, ಅಲ್ಲಿ ಷಿಕಾರಿ ಮಾಡುವುದಕ್ಕೆ ಅಧಿಕಾರಗಳಿಗೆ ಮಾತ್ರ ಯಾವ ಅಡ್ಡಿಯೂ ಇಲ್ಲ; ಆದರೆ ಅದೇ ಹಳ್ಳಿಯ ರೈತನೊಬ್ಬ ತನ್ನ ಫಸಲನ್ನು ನಾಶಮಾಡಲು ಬಂದ ಒಂದು ಮೃಗವನ್ನು ಕೊಲ್ಲಬೇಕಾದರೆ ಅವನ ಮೇಲೆ ಎಲ್ಲಾ ನಿಬಂಧ ಹಾಕಿ ಅವನನ್ನು ಶಿಕ್ಷೆಗೆ ಒಳಪಡಿಸುತ್ತೀರಿ. ಇದು ತಪ್ಪು. ಇದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಆಮೇಲೆ ಶರಾವತಿ ಪ್ರಾಜೆಕ್ಟಿನಿಂದ ಯಾವಯಾವ ಭಾಗ ಮುಳುಗಡೆಯಾಗುತ್ತದೆಯೋ ಆ ಬಗ್ಗೆ ಪರಿಹಾರವೇನು. ಎಷ್ಟು ಭಾಗ ಮುಳುಗಡೆಯಾಗುತ್ತದೆ ಎಂಬುದನ್ನು ಇಷ್ಟು ದಿವಸಗಳಾದರೂ ಹೇಳಿಲ್ಲ. ಅಷ್ಟೇ ಅಲ್ಲದೆ, ಹೀಗಿದ್ದರೂ, ಅನೇಕರ ಜಮೀನನ್ನು ಒತ್ತಾಯದಿಂದಕಿತ್ತು ಕೊಳ್ಳುತ್ತಿದ್ದಾರೆ. ಪರಿಹಾರವನ್ನು ಕೊಟ್ಟಿಲ್ಲ, ಅವರ ಜಮೀನನ್ನು ತೆಗೆದುಕೊಳ್ಳುತ್ತಾರೋ ಇಲ್ಲವೋ ಎಂಬುದೂ ಕೂಡ ಗೊತ್ತಿಲ್ಲ. ಆ ರೈತರಿಗೆ ಯಾವರೀತಿಯ ಸೌಲಭ್ಯಗಳನ್ನು ಕೊಡುತ್ತಾರೆಂಬುದೂ ಇನ್ನೂ ಗೊತ್ತಾಗಿಲ್ಲ. ಹೀಗಾಗಿ ಇತ್ತ ಅವರಿಗೆ ಜಮೀನನ್ನು ಸಾಗುಮಾಡುವುದಕ್ಕೂ ಬಿಡುವುದಿಲ್ಲ, ಅತ್ತ ಸರ್ಕಾರಕ್ಕೂ ತೆಗೆದುಕೊಳ್ಳುವುದಿಲ್ಲ. ಸರ್ಕಾರದವರು ಈಗಾಲಾದರೂ ಕೂಡಲೆ 100ಕ್ಕೆ ಹತ್ತರಷ್ಟಾದರೂ ಪರಿಹಾರವನ್ನು ಕೊಟ್ಟು ತಮ್ಮ ನೀತಿಯೇನೆಂಬುದನ್ನು ಕೂಡಲೆ ಸ್ಪಷ್ಟಪಡಿಸಬೇಕು ; ಮತ್ತು ಈಗ ಒತ್ತಾಯದಿಂದ ಜಮೀನು

(ಶ್ರೀ ರಾಮಕೃಷ್ಣ ಹೆಗ್ಗಡೆ)

ಬಿಡಿಸುತ್ತಿರುವುದನ್ನು ಎಲ್ಲವೂ ಸರಿಯಾಗಿ ತೀರ್ಮಾನವಾಗುವವರೆಗೂ ನಿಲ್ಲಿಸಬೇಕೆಂದು ಹೇಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಕಾಳಿನದಿಯ ವಿಚಾರವಾಗಿ ಒಂದು ಮಾತು ಹೇಳಬಯಸುತ್ತೇನೆ. ಶರಾವತಿ ಯೋಜನೆಯನ್ನು ಬಿಟ್ಟರೆ ನಮ್ಮ ಇಡೀ ದೇಶದಲ್ಲೇ ಅದಷ್ಟು ಕಡಮೆ ಖರ್ಚಿನಲ್ಲಿ ವಿದ್ಯುಚ್ಛಕ್ತಿಯನ್ನು ತಯಾರುಮಾಡಬಹುದಾದ ಯೋಜನೆ ಯೆಂದರೆ ಕಾಳಿನದಿಯ ಪ್ರಾಜೆಕ್ಟು. ಬ್ರಿಟಿಷ್ ಸರ್ಕಾರದವರು ಇದ್ದಾಗಲೇ ಇದರ ಬಗ್ಗೆ ಸರ್ವೆ ಕೂಡ ನಡೆದಿದೆ. ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಾದರೂ ಇದನ್ನು ಸೇರಿಸಲೇಬೇಕೆಂದು ಹೇಳುತ್ತೇನೆ. ಇದನ್ನು ಮಾಡದೆ ಇದ್ದರೆ, ನಮ್ಮ ಜಿಲ್ಲೆಗೆ ಅಲ್ಲ, ನಮ್ಮ ರಾಜ್ಯಕ್ಕೇ ಬಹಳ ನಷ್ಟಮಾಡಿಕೊಂಡಂತಾಗುತ್ತದೆಂದು ನಾನು ಹೇಳುತ್ತೇನೆ.

ಇಷ್ಟೆಲ್ಲಾ ಆದಮೇಲೆ, ಕೊನೆಯದಾಗಿ ನಮ್ಮ ಆಡಳಿತದ ವಿಷಯದಲ್ಲಿ ಒಂದೆರಡು ಮಾತು ಹೇಳಲೇಬೇಕು. ಕಳೆದ ಒಂದು ವರ್ಷದಿಂದೀಚೆಗೆ ದಕ್ಷತೆಯಿಂದ ಆಡಳಿತದ ಯಂತ್ರ ಸಾಗುತ್ತದೆಂದು ಮಾನ್ಯ ಸದಸ್ಯರನೇಕರು ಏನು ನಿರೀಕ್ಷಣೆ ಮಾಡುತ್ತಿದ್ದರೋ ಆ ನಿರೀಕ್ಷಣೆ ಫಲಿಸಲಿಲ್ಲವೆಂದು ನಾನು ಹೇಳಬೇಕಾಗಿದೆ. ಹರಪನಗೋಡಿನಲ್ಲಿ ಈಗ ಆರು ತಿಂಗಳಿನಿಂದಲೂ ಒಬ್ಬ ತಾಶೀಲ್‌ದಾರರಿಲ್ಲ. ಕಾರ್ಪೊರೇಷನ್ನಿಗೆ ಒಬ್ಬ ಕಮಿಷನರನ್ನು, ಎಂಜಿನಿಯರನ್ನು ಕಳುಹಿಸಿ ಕೊಡಿ ಎಂದು ಕೇಳಿ ಕೇಳಿ ಸಾಕಾಯಿತು. ಅದರಂತೆಯೇ ಟ್ರಸ್ಟ್ ಬೋರ್ಡಿಗೆ ಒಬ್ಬ ಚೇರ್ಮನ್ನರ ನೇಮಕವಾಗಬೇಕು; ಇದುವರೆಗೂ ಆಗಿಲ್ಲ. ಅಲ್ಲಿರತಕ್ಕ ಒಬ್ಬ ಆಫೀಸರನ್ನೇ ಚೇರ್ಮನ್ನರಾಗಿ ಮಾಡುತ್ತಾರೆಂದು ಹೇಳುತ್ತಿದ್ದಾರೆ. ಹೀಗೆ ಮಾಡಿದರೆ partiality ಉಂಟಾಗುತ್ತದೆ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಜನರ ಈ ಅಭಿಪ್ರಾಯಕ್ಕೆ ತಾವು ಮನ್ನಣೆ ಕೊಡುತ್ತೀರೆಂದು ನಂಬಿದ್ದೇನೆ. ಕುಮಟಕ್ಕೆ ಕೇಂದ್ರ ಸರ್ಕಾರದವರು ಕೋಳಿ ಸಾಕುವ ಕೇಂದ್ರವನ್ನು ಮಂಜೂರು ಮಾಡಿದ್ದಾರೆ. ಹಾಗೆಯೇ ಶಿರಸಿಗೆ Key village Scheme ಅನ್ನು ಜಾರಿಮಾಡಿರುವುದಾಗಿ ತಿಳಿಸಿದ್ದಾರೆ. ಇದಾಗಿ ಅನೇಕ ತಿಂಗಳುಗಳಾದರೂ ಇದುವರೆಗೂ ಅಲ್ಲಿ ಒಂದು ಕೋಳಿಯಾಗಲಿ, ಮತ್ತೊಂದು ಸಾಮಾನು ಸಲಕರಣೆ ಯಾವುದಾಗಲಿ ಇಲ್ಲ. ಹೀಗೆ ಯಾವುದೊಂದು ಏರ್ಪಾಡು ಅಲ್ಲಿ ಇಲ್ಲದಿದ್ದರೆ ನೀವು ಇಂಥ ಯೋಜನೆಗಳನ್ನು ಸ್ಯಾಂಕ್ಷನ್ ಮಾಡಿಯೂ ಏನೂ ಪ್ರಯೋಜನವಿಲ್ಲ. ಕೂಡಲೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಈಗ ಒಂದು ವರ್ಷದಿಂದ ನಮ್ಮ ಜಿಲ್ಲೆಯಲ್ಲಿ ಡಿವಿಜನಲ್ ಫಾರೆಸ್ಟ್ ಆಫೀಸರ್‌ಗಳೆಂದು ನಮ್ಮ ಉತ್ತರ ಕೆನರಾದ ಅರಣ್ಯ ಪ್ರದೇಶವನ್ನು ನೋಡಿಕೊಳ್ಳುವುದಕ್ಕೆಂದು ಮೂರು ಜನರನ್ನು ನೇಮಿಸಿದ್ದೀರಿ. ಆದರೆ, ಈ ಆಫೀಸರುಗಳಲ್ಲಿ ಇಬ್ಬರು ಬೆಳಗಾವಿಯಲ್ಲಿದ್ದಾರೆ, ಇನ್ನೊಬ್ಬರು ಧಾರವಾಡದಲ್ಲಿದ್ದಾರೆ. ಯಾವುದೇ ಒಂದು ಟಿಂಬರಿಗೆ ಲೈಸೆನ್ಸ್‌ಗೆ ಅರ್ಜಿಹಾಕಿ ಕೊಂಡರೂ ಇಲ್ಲವೇ ಬೆಳಗಾವಿಗೆ ಹೋಗಿಬರಬೇಕು ಇಲ್ಲದಿದ್ದರೆ ಧಾರವಾಡಕ್ಕೆ ಹೋಗಿಬರಬೇಕು. ವ್ಯಥಾ ಕಾಲಹರಣಕ್ಕೆ ಇದೆಷ್ಟು ಕಾರಣವಾಗುತ್ತದೆಂದು ಹೇಳಬೇಕಾಗಿಲ್ಲ. ಇನ್ನು ಮೇಲೆ ಈ ಆಫೀಸರುಗಳು ನಮ್ಮ ಜಿಲ್ಲೆಯಲ್ಲೇ ಇರುವಂತೆ ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟೊಂದು ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಸನ್ಮಾನ್ಯ ಸಭಾಪತಿಗಳೇ, ಈ ಅಧಿವೇಶನ ಪ್ರಾರಂಭವಾದ ಮೇಲೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕೆಂದು ಪ್ರಯತ್ನಪಟ್ಟರೂ ಅವಕಾಶವಿಲ್ಲದೆ ಹೋಗಿದ್ದು ಈ ದಿವಸ ಬಡ್ಜೆಟ್ಟಿನ ಮೇಲಾದರೂ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ನಾನು ತಮಗೆ ಕೃತಜ್ಞತೆಯನರ್ಪಿಸುತ್ತೇನೆ. 1959-60ನೆಯ ಸಾಲಿನ ಆಯವ್ಯಯದ ಅಂದಾಜನ್ನು ಹಣಕಾಸಿನ ಸಚಿವರು ಈ ಸಭೆಯ ಮುಂದೆ ಮಂಡಿಸಿದಾಗ ಮಾಡಿದಂಥ ಭಾಷಣದ ಪ್ರತಿಗಳು ಈಗಾಗಲೇ ನಮ್ಮೆಲ್ಲರ ಕೈಸೇರಿವೆ. ಶ್ರೀ ರಾಮಕೃಷ್ಣ ಹೆಗ್ಗಡೆಯವರು ಹೇಳಿದಹಾಗೆ, ಒಳ್ಳೊಳ್ಳೆಯ ಪದಗಳನ್ನು ಆರಿಸಿ ಅಚ್ಚುಮಾಡಿಸಿ ನಮ್ಮ ಮುಂದಿಟ್ಟಿದ್ದಾರೆ. ಆ ಪದಗಳ ಅರ್ಥ ಬಹಳ ಆಳವಾಗಿದೆ. ಪದಗಳ ಮೂಲ ತತ್ವವನ್ನು ಅನುಸರಣೆ ಮಾಡಿಕೊಂಡು ಬಾಳಬೇಕೆಂದರೆ ಬಹಳ ಕಷ್ಟವಿದೆ. ಆದರೆ ಉಚ್ಚಾರಣೆ ಮಾಡುವುದಕ್ಕೆ ಅಡ್ಡಿ ಆತಂಕಗಳೇನೂ ಇಲ್ಲ. ಇದು ನಮ್ಮ ಅರ್ಥ ಮಂತ್ರಿಗಳ ದಿನಚರಿ ಮೂಲಮಂತ್ರವಾಗಿರುವುದರಿಂದ ಅವರು ಯಾವ ರೀತಿ ಒಳ್ಳೊಳ್ಳೆಯ ಪದಗಳನ್ನು ಆರಿಸಿ ಹೇಳಬೇಕೋ ಆ ರೀತಿ ಆರಿಸಿ ಭಾಷಣ ಮಾಡಿದ್ದಾರೆ. ತತ್ವ ನೀತಿಗಳನ್ನು ಅನುಸರಿಸಿ ಬಾಳಿ ಅದರಂತೆ ಕಾರ್ಯಭಾರ ನಡೆಸುವುದರಲ್ಲಿ ಮಾತ್ರ ವಿಮುಖತೆ ಇದೆ. ಈ ಸಾರಿ ಆಯವ್ಯಯ ಅಧಿವೇಶನದಲ್ಲಿ ಪ್ರಥಮದಿನ ಸರ್ ಮಿರ್ಜಾರವರ ನಿಧನದಿಂದ ಉಂಟಾದ ನಷ್ಟವನ್ನು ನೆನೆದುಕೊಂಡು ಅವರ ಸೇವೆಯನ್ನು ಸ್ಮರಿಸಿ ಸಂತಾಪ ಸೂಚಿಸಿದ್ದೇವೆ. ಸರ್ ಮಿರ್ಜಾರವರ ಕಾಲದಲ್ಲಿ ದೇಶದಲ್ಲಿ ಇದ್ದಂಥ ಪ್ರಕೃತಿ ಸಂಪತ್ತನ್ನು, ಅವರು ಯಾವ ರಾಜಕೀಯ ಸೋಂಕಿಗೂ ಅಂಟಿಕೊಳ್ಳದೆ, ಜನಜೀವನಕ್ಕೆ ಅಳವಡಿಸಿ ದೇಶದ ಪ್ರಗತಿಯನ್ನು ಸಾಧಿಸಿದ್ದಾರೆ ಇಂಥ ದಕ್ಷರನ್ನೂ ದೇಶಪ್ರೇಮಿಯನ್ನೂ ಸ್ಮರಿಸಿಕೊಳ್ಳುವುದು ಮಾನವೀಯತೆ ದೃಷ್ಟಿಯಿಂದ ಅಗತ್ಯ. ಮಹಾತ್ಮಾ ಗಾಂಧೀಜಿಯವರಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿತು. ನಾವು ಯಾವ ರೀತಿ ನಡೆದುಕೊಳ್ಳಬೇಕು, ನಮ್ಮ ಗುರಿ ಏನು ಎಂದು ಸಾರಿ ಸಾರಿ ಹೇಳತಕ್ಕಂಥ ನಮ್ಮ ಆರ್ಥಿಕ ಸಚಿವರು ತಾವು ಹೇಳಿದಂತೆ ಮಾಡುತ್ತಾರೆಯೇ ಅನ್ನುವುದನ್ನು ಈ ಸಭೆಯ ಮುಂದಿಡುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ.

ಶ್ರೀ ಮರಿಯಪ್ಪನವರು ಬಹಳ ಅನುಭವಸ್ಥರು. ಬಹಳಕಾಲ ಮಂತ್ರಿಗಳ ಕೆಲಸ ಮಾಡಿಕೊಂಡು ಬಂದಿದ್ದಾರೆ. ಯಾವ ಮಂತ್ರಿಮಂಡಲ ಬರಲಿ, ಇವರ ಅನುಭವ ಅವರಿಗೆ ಅತ್ಯಾವಶ್ಯಕವಾಗಿ ಬೇಕು ಎಂದು ಇವರನ್ನು ತೆಗೆದುಕೊಳ್ಳುತ್ತಾರೆ. ಆದರೆ ಅವರು ಅಂಥ ಅನುಭವಸ್ಥರಿದ್ದರೂ, ಐದು-ಆರು ವರ್ಷಗಳಾದರೂ ಒಂದು ಅರ್ಜಿ ತೀರ್ಮಾನವಾಗುತ್ತಿಲ್ಲ. ಅವರೇ ಹೇಳಿದಂತೆ ಶೇಕಡ 75ರಷ್ಟು ಜನ ಹಳ್ಳಿಗಾಡಿನಲ್ಲಿ ವಾಸಮಾಡುತ್ತಿದ್ದಾರೆ. ಹಳ್ಳಿಯ ರೈತಜನಾಂಗ ತನಗೆ ಒದಗಿದ ತೊಂದರೆಯನ್ನು ಬಗೆಹರಿಸಿಕೊಳ್ಳಲು ಸರ್ಕಾರಕ್ಕೆ ಅರ್ಜಿ ಹಾಕಿದಮೇಲೆ ಅರ್ಜಿ ಹಾಕಿದ ರೈತನಿಗೆ ತನ್ನ ಅರ್ಜಿಯ ವಿಷಯದಲ್ಲಿ ಈ ರೀತಿ ತೀರ್ಮಾನವಾಗಿದೆ ಎಂಬುದು ಅರ್ಜಿಹಾಕಿದ ಒಂದು ತಿಂಗಳೊಳಗೆ ಗೊತ್ತಾಗುವಂತೆ ವ್ಯವಸ್ಥೆ ಮಾಡಿರುವುದಿಲ್ಲ. ಒಂದು ತಿಂಗಳು ಎರಡು ತಿಂಗಳಾದರೂ ತೀರ್ಮಾನವಾಗದೆ ಇದ್ದರೆ, ಅರ್ಥ ಮಂತ್ರಿಗಳ

ಅನುಭವವನ್ನು ಏನೆಂದು ಭಾವಿಸಬೇಕೋ ಗೊತ್ತಾಗುವುದಿಲ್ಲ. ಹಣಕಾಸಿನ ಸಚಿವರು ತಾವು ಒದಗಿಸಿದ ಹಣ ಎಷ್ಟರಮಟ್ಟಿಗೆ ಖರ್ಚಾಗಿದೆ ಎಂಬುದನ್ನು ಆಫೀಸಿನಲ್ಲೇ ನೋಡಬಹುದು. ಅದು ಬಿಟ್ಟು ನಮ್ಮ ಶ್ರೀ ಪುಟ್ಟಣ್ಣನವರು ಹೇಳಿದಹಾಗೆ, ಅವರು ಹೊರಗಡೆ ಕಂಡಿಷನ್ನುಗಳನ್ನು ಸ್ಟಡಿಮಾಡುವುದಕ್ಕೆ ಟೂರ್ ಹೋಗುತ್ತಾರೆ. ಯಾವ ಕಂಡಿಷನ್? ನಮ್ಮ ಪಾರ್ಟಿಯವರು ಯಾರಿದ್ದಾರೋ ಅವರಿಗೆ ಬೇಕಾದ ಹಣ ಒದಗಿದೆಯೇ, ತಮಗೆ ಆಗದವರಿಗೆ ಏನಾದರೂ ಹಣ ಖರ್ಚಾಗಿದೆಯೇ ಎಂದು ಅಧಿಕಾರಿಗಳನ್ನು ಕರೆಸಿ ಕೇಳುವುದು, ತಮಗೆ ಬೇಕಾದವರಿಗೆ ಕೇಳಿದ ಕಲಸವನ್ನು ಮಾಡಿಸಿಕೊಡಿಸುವುದು, ತಮಗೆ ಆಗದವರಿಗೆ, ಅವರ ಕಲಸದ ವಿಚಾರದಲ್ಲಿ ತಕರಾರು ಇದೆ, ಸ್ವಲ್ಪ ನಿಧಾನಮಾಡಿ ಎಂದು ಅಧಿಕಾರಿಗಳಿಗೆ ಹೇಳುವುದು. ಮಂತ್ರಿಗಳಾಗಿರುವವರು ಅಧಿಕಾರಿಗಳನ್ನು ಕರೆಸಿ, ಕೆರೆ ಕೆಲಸ ನಿಲ್ಲಿಸಿ, ಅದರ ವಿಚಾರದಲ್ಲಿ ಕಂಪ್ಲೇಂಟ್ ಇದೆ ಎಂದು ಹೇಳಿದರೆ, ಯಾವ ಅಧಿಕಾರಿಗಳಿಗೆ ಮಂತ್ರಿಗಳು ಹೇಳಿದಮೇಲೂ ಮಾಡಿಬಿಡುತ್ತೇವೆಂದು ಹೇಳುವ ಶಕ್ತಿ ಇದೆ? ಮಂಡ್ಯ ಜಿಲ್ಲೆಯ ನಾಗಮಂಗಲ ಅರ್ಥಮಂತ್ರಿಯವರ ಕ್ಷೇತ್ರ. ಅಲ್ಲಿಯೂ ಬಹಳ ಕಷ್ಟ ಇದೆ. ಎಲ್ಲಾ ಕಲಸ ನನ್ನ ತಾಲ್ಲೂಕಿನಲ್ಲಿಯೇ ಆಗಬೇಕೆಂದು ನಾನು ಹೇಳುವುದಿಲ್ಲ. ಯಾರಾದರೂ ಆರಿಸಿ ಬರಲಿ. ದೇಶದಲ್ಲಿ ಎಲ್ಲೆಲ್ಲಿ ಕಷ್ಟ ಇದೆಯೋ ಅಲ್ಲಿರುವ ಜನಗಳಿಗೆ ಸಹಾಯ ಮಾಡಬೇಕು. ನಾವು ಯಾವ ಪಾರ್ಟಿಯವರಾದರೂ ಇರಲಿ, ಕೊಳ್ಳಲಿ. ದೇಶದ ಜನ ಯಾವ ಪಕ್ಷಕ್ಕೂ ಸೇರಿದವರಲ್ಲ. ಅವರಿಗೆ ಅನ್ಯಾಯವಾಗಬಾರದು. ಇದು ಎಂಥ ದ್ವೇಷ ಕೆರೆ ಕಟ್ಟೆಗಳ ಕಲಸ ನಿಧಾನಮಾಡಿ ಅನ್ನುವುದು!

Sri H. M. CHANNABASAPPA.—It will be very good if the Hon'ble Member gives me particular cases. Otherwise it will have no value if simply passing remarks are made.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಹೇಳುವವರೆಗೆ ನಿಧಾನಮಾಡಬೇಕು ಮಾನ್ಯ ಸಚಿವರು. ಯಾವುದಾದರೂ ಇಲ್ಲದ್ದನ್ನು ತೆಗೆದುಕೊಂಡುಬಂದು ಹೇಳುವುದು ನನ್ನ ಜಾತಕದಲ್ಲಿ ಬರೆದಿಲ್ಲ. ಪೂರ್ಣವಾಗಿ ವಿಮರ್ಶೆಮಾಡಿ ನನಗೆ ಒಂದು ವಿಷಯದಲ್ಲಿ ನಂಬಿಕೆ ಬಂದರೇ ಹೇಳುವುದು. ನಮ್ಮ ಜಿಲ್ಲೆಯ ಮಂತ್ರಿಗಳಿಗೆ ಎಲ್ಲಾ ವಿಷಯವೂ ಗೊತ್ತು. ನಾಗಮಂಗಲಕ್ಕೆ ಅರ್ಥಸಚಿವರು ಭೇಟಿ ಕೊಟ್ಟ ಕಾಲದಲ್ಲಿ ಮರಾಮತ್ ಇಲಾಖೆಯ ಅಧಿಕಾರಿಗಳು ಹೋದರೆ ಮಂಡ್ಯ ತಾಲ್ಲೂಕಿನ ಕೆಲಸ ತಿಳಿದು ನಿಲ್ಲುವಂತೆ ಸಂಜ್ಞೆ ಮಾಡುವುದೂ ಸಹ ಅವರ ಭಾಗಕ್ಕೆ ಸೇರಿದೆ. ಸರ್ಕಾರದ ಮಂತ್ರಿಗಳು ಯಾರು ಏನು ಹೇಳಿದರೂ ಅಧಿಕಾರಿಗಳು ಕೇಳಲೇಬೇಕು.

Sri H. M. CHANNABASAPPA.—That is not a correct statement of fact. Engineers are not expected to manoeuvre statistics and technical details. So Hon'ble Member would not be correct in making a sweeping remark of that kind. I shall be very grateful if the Hon'ble Member were to point out particular cases. Then I will ascertain the details and furnish them to the House.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಏತಕ್ಕಾಗಿ ಇಷ್ಟು ಅವಸರಪಡುವಿರಿ; ದಯಮಾಡಿ ನಿದಾನಮಾಡಿ. ಸ್ವಾಮಿ, ಹೊನ್ನೆಮಡು ಮಂಡ್ಯ ತಾಲ್ಲೂಕಿನಲ್ಲಿ ಒಂದು ಕೆರೆ. ಆ ಕೆರೆಗೆ ಗ್ರಾಮಸ್ಥರು ಒಂದು ಅರ್ಜಿ ಸಲ್ಲಿಸಿದರು. ಸಂಬಂಧಪಟ್ಟ ಇಲಾಖೆಯವರು ಆ ಕೆರೆ ಕಟ್ಟಿಕೊಡುವುದಕ್ಕೆ ಒಂದು ಎಸ್ಟಿಮೇಟ್ ಮಾಡಿದರು. ಅದರಂತೆ 44 ಸಾವಿರ ರೂಪಾಯಿಗಳ ಅಂದಾಜು ಮತ್ತು 75 ಎಕರೆ ತರಿ ಸಾಗುವಳಿಯಾಗುವಂತೆ ತಿಳಿದುಬಂತು. ಆ ರೀತಿ ಅಂದಾಜಾಗಿ ಸುಮಾರು ನಾಲ್ಕು ವರ್ಷಗಳಾದರೂ ಈವರೆಗೂ ಇಲ್ಲಸಲ್ಲದ ಕಾರಣಗಳನ್ನು ಕೊಡುತ್ತಲೇನಿಧಾನವಾಗಿದೆ.ಅನಂತರ ಮೇಲ್ಭಾಗದಲ್ಲಿ ಪಾಂಡವಪುರ ತಾಲ್ಲೂಕಿನ ಆರಕನಕೆರೆ ಗ್ರಾಮಸ್ಥರು ಅರ್ಜಿ ಕೊಟ್ಟು ಹೊನ್ನೆಮಡುಕೆರೆ ಮೇಲ್ಭಾಗದಲ್ಲಿ ತಮಗೆ ಒಂದು ಕೆರೆಯನ್ನು ಕಟ್ಟಿಕೊಡಬೇಕೆಂದು ಹೇಳಿದರು. ಇದರಮೇಲೆ ಚೀಫ್ ಇಂಜನಿಯರ್‌ರವರು ಮಂಡ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಮತ್ತು ಮಳವಳ್ಳಿ ಡಿವಿಜನ್ ಎಗ್ಸಿಕ್ಯುಟೀವ್ ಇಂಜನೀಯರ್‌ರವರು ಗಿಡ ಸ್ಥಳ ಪರಿಶೀಲನೆಮಾಡಿ ಯಾವ ಕೆರೆ ತೆಗೆದುಕೊಳ್ಳಬೇಕೆಂಬುದನ್ನು ಶಿಫಾರಸ್ಸು ಮಾಡುವಂತೆ ತಿಳಿಸಿದರು. ಅದರಂತೆ ಮೇಲ್ಕಂಡ ಎಲ್ಲಾ ಅಧಿಕಾರಿಗಳೂ ಸ್ಥಳ ಪರಿಶೀಲನೆಮಾಡಿ ಹೊನ್ನೆಮಡುಕೆರೆ ತೆಗೆದುಕೊಳ್ಳುವಂತೆ ಅಭಿಪ್ರಾಯ ಕೊಟ್ಟರು. ಆರಕನ ಕೆರೆಗೂ ರಿಪೋರ್ಟ್ ಕೊಟ್ಟಿದ್ದಾರೆ. ಹೊನ್ನೆಮಡುಕೆರೆ ಕಟ್ಟಿದರೆ ಸಾಕು ಎಂದು ಮೂರು ಜನರೂ unanimous opinion ಕೊಟ್ಟರು. ಈಗ ನಾಲ್ಕನೆಯ ವರ್ಷ ನಡೆಯುತ್ತಾ ಇದೆ. ಇವತ್ತಿನವರೆಗೂ ಕೆರೆ ಸ್ಯಾಂಕ್ಷನ್ ಆಗಿಲ್ಲ. ಅದಕ್ಕೆ ಸಂಬಂಧಪಟ್ಟ ಕಾಗದ ಕೆಳಕ್ಕೆ ಮೇಲಕ್ಕೆ ಬರುತ್ತಾ ಇದೆ. ನಾನು ಈ ವಿಚಾರಕ್ಕೆ ರಾಜಕೀಯ ಬಣ್ಣ ಕಟ್ಟಿ ಹೇಳುತ್ತಿಲ್ಲ. ಅದು ನನ್ನ ಸ್ವಭಾವವೂ ಅಲ್ಲ, ಆದರೆ ನಡೆದಿರುವುದನ್ನು ಮುಚ್ಚುವುದಕ್ಕೆ ತಯಾರಿಲ್ಲ. ಈ ರೀತಿ ಆಗಬಾರದು. ಈ ಜಗತ್ತಿನಲ್ಲಿ ಭೂಮಿಯಮೇಲೆ ಶಾಶ್ವತವಾಗಿ ಯಾರೂ ಇರುವುದಿಲ್ಲ. ಮರಿಯಪ್ಪನವರೂ ಇರುವುದಿಲ್ಲ. ಯಾರೇ ಆಗಲಿ ಪ್ರಕೃತಿ ಸಂಪತ್ತನ್ನು ಜನಜೀವನಕ್ಕೆ ಅಳವಡಿಸಿ ಪುಣ್ಯಶಾಲಿಗಳಾಗಬೇಕು. ಇವರು ಬಿಟ್ಟು ಹೋದರೆ, ಯಾರಾದರೂ ಪುಣ್ಯ ಕೆಲಸ ಮಾಡುವ ಸ್ವಭಾವವುಳ್ಳವರು ದೇಶದ ಕಲ್ಯಾಣ ಸಾಧಿಸಿಯೇ ಸಾಧಿಸುವರು.

ಶ್ರೀ ರಾಮಕೃಷ್ಣ ಹೆಗ್ಗಡೆಯವರು ಮಂಡ್ಯದಲ್ಲಿ ಕಾಗದದ ಕಾರ್ಖಾನೆ ಆಗಬೇಕೆಂದು ಹೇಳಿದರು. ಹೊರಗಡೆ ಕಂಪನಿಯವರೊಬ್ಬರು ಬಂದು ಈ ವಿಚಾರವನ್ನು ಪರಿಶೀಲಿಸಿಯೂ ಆಯಿತು. ಆಗ ಮಂತ್ರಿಮಂಡಲದಲ್ಲಿದ್ದ ಕೆಲವು ಸ್ನೇಹಿತರು ಈಗ ಇಲ್ಲ ಇದ್ದಾರೆ. ಇವತ್ತು ಆ ಕಾರ್ಖಾನೆ ಮಂಡ್ಯ ಬಿಟ್ಟು ಮೈಸೂರು ಪಕ್ಕಪಕ್ಕಕ್ಕೆ ಹೋಗಿದೆ. ಸಿಕ್ಕತಕ್ಕ ಕಚ್ಚಾಮಾಲು ಮಂಡ್ಯದಲ್ಲಿ, ಕಾರ್ಖಾನೆ ಮೈಸೂರಿನ ಹತ್ತಿರ! ಇದು ಯಾವ ತೀರ್ಮಾನವೋ ಗೊತ್ತಿಲ್ಲ. ಒಬ್ಬ ರಾಜಕೀಯ ಮುಂಖಡರು ಮೈಸೂರಿನಲ್ಲಿ ಜಗಜ್ಜೀವನ್‌ರಾಮ್‌ರವರು ಬಂದಿದ್ದಾಗ ಸಭೆಯಲ್ಲಿ ಅಧ್ಯಕ್ಷ ಪೀಠದಿಂದ ಹೇಳಿದ ಕೆಲವು ಮಾತುಗಳನ್ನು ಇಲ್ಲಿ ಹೇಳುವುದು ಅಗತ್ಯ. ಮಂಡ್ಯದಲ್ಲಿ ಸ್ಥಾಪಿಸಲಿದ್ದ ಕಾಗದದ ಕಾರ್ಖಾನೆಯನ್ನು ನಿಮಗಾಗಿ ಅಲ್ಲಿ ತಪ್ಪಿಸಿ ಬೆಳಗೊಳಕ್ಕೆ ಬರುವಂತೆ ಮಾಡಿದ್ದೇನೆ, ನಿಮಗಾಗಿ ಭುಜಕ್ಕೆ ಭುಜ ಕೊಟ್ಟು ಎದೆಗೆ ಎದೆ ಕೊಟ್ಟು ಹೋರಾಡುವುದೇ ನನ್ನ ಗುರಿ ಎಂದು ಕೂಗಿ ಕೂಗಿ ಹೇಳಿದ ವಿಷಯವನ್ನು ಸರ್ಕಾರ ತೀವ್ರವಾಗಿ ಯೋಚಿಸಬೇಕು. ಕೈಗಾರಿಕೆಯನ್ನು ಸ್ಥಾಪಿಸುವಾಗ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಕಚ್ಚಾ ಮಾಲು ಸಿಕ್ಕುವ ಸ್ಥಳವನ್ನು ನೋಡಬೇಕೇ ಹೊರತು ಕೆಲವರ ದಾಕ್ಷಿಣ್ಯಕ್ಕೆ ಸಿಕ್ಕಿ ಮುಂದೆ ಕೈಗಾರಿಕೆ ನಾಶವಾಗುವ ಮಾರ್ಗವನ್ನು ಹಿಡಿಯಬಾರದು. ಮಂಡ್ಯದಲ್ಲಿ ಸ್ಥಾಪಿಸಬೇಕಾಗಿದ್ದ ಕಾಗದದ ಕಾರ್ಖಾನೆಯ ವಿಷಯದಲ್ಲಿ ರಾಜಕೀಯವಿಲ್ಲವೆಂಬುದು ಗೊತ್ತಾಗಬೇಕಾದರೆ ಈ ಮಂತ್ರಿಮಂಡಲ ಒಂದು ವಿಚಾರ ಸಮಿತಿಯನ್ನು ನೇಮಿಸಲಿ. ಎಲ್ಲ ಗುಟ್ಟೂ ಹೊರಬೀಳುವುದು.

Sri H. M. CHANNABASAPPA.—I would like to say that Government is not the only participant in this industry. I am sure the Hon'ble Member will agree that people interested in the industry and who have put in lots of money and who are specialists in the line will never agree to shift the industry from a place to a place where it is uneconomical or not profitable to work. It is only when experts in the field are of the opinion that shifting is more advantageous, that such a decision will be taken, and even though influences may be brought to bear still people interested in the industry will not agree to such a thing.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ರೈಸನ್ಸಿಂಗ್ ಅಥಾರಿಟಿ ಯಾರು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರಾದರೂ ಆಗಲಿ. ನಾನು ಹೇಳುವ ವಿಷಯ ಬೇರೆ. ಕೈಗಾರಿಕೆಗೆ ದುಡ್ಡು ಹಾಕುವ ಜನರು ಸುಮ್ಮನೆ ಹೇಳಿಬಿಟ್ಟರೆ, ಬಡಪಟ್ಟಿಗೆ ಒಪ್ಪುವುದಿಲ್ಲ. ಎಲ್ಲವನ್ನೂ ಪರಿಶೀಲನೆ ಮಾಡುತ್ತಾರೆ. ಇಂಥ ಕಡೆ ಮಾಡುವುದರಿಂದ ಪ್ರಯೋಜನ ಇದೆ ಎಂದು ಮನಸ್ಸಿಗೆ ಕಂಡರೆ, ಆ ತೀರ್ಮಾನ ತೆಗೆದುಕೊಳ್ಳುತ್ತಾರೆ. ಸರ್ಕಾರ ಹೇಳಿಬಿಟ್ಟರೆ ತೆಗೆದುಕೊಳ್ಳುವುದಿಲ್ಲ. ಪರಿಸ್ಥಿತಿ ಹೀಗಿದೆ.

4-30 P.M.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಹಿಂದೆ ಇದ್ದ ಕೈಗಾರಿಕಾ ಸಚಿವರು ಮಂಡ್ಯಕ್ಕೆ ಬಂದಿದ್ದಾಗ ಕಾಗದದ ಕಾರ್ಖಾನೆಯನ್ನು ಮಂಡ್ಯದಲ್ಲಿ ಸ್ಥಾಪಿಸಲು ತೀರ್ಮಾನವಾಗಿದೆ, ಅವರಿಗೆ ಏನಾದರೂ ಸಹಾಯ ಬೇಕಾಗಿದ್ದಲ್ಲಿ ನೀವೆಲ್ಲರೂ ನೆರವು ಕೊಡಬೇಕೆಂದು ತಿಳಿಸಿದ್ದರು. ಅದು ಏಕೆ ಇತ್ತೀಚೆಗೆ ಮಾಯವಾಯಿತು ?

Sri H. M. CHANNABASAPPA.—They are the better judges. The Committee is not going to pay money. People who invest money and are interested are better judges than ourselves.

ಶ್ರೀ ಜಿ. ಎಸ್. ಬೊಮ್ಮೇಗೌಡ.—ನಾನು ತಿಳಿದುಕೊಂಡಿರುವ ಹಾಗೆ ಮಂಡ್ಯದಲ್ಲಿರುವ ಅನುಕೂಲ ಇನ್ನೆಲ್ಲಿಯೂ ಇಲ್ಲ. ಕೈಗಾರಿಕಾ ಬೋರ್ಡಿನವರೂ ಕೂಡ ಮಂಡ್ಯದಲ್ಲಿ ಕಾಗದದ ಕಾರ್ಖಾನೆ ಹಾಕಬೇಕು ಎಂದು ಅಭಿಪ್ರಾಯ ಕೊಟ್ಟಿದ್ದಾರೆ. ಹೀಗಿದ್ದೂ ಮಂಡ್ಯಕ್ಕೆ ತಪ್ಪಿಹೋಗಿದೆ. ಮತ್ತೊಂದು ವಿಷಯ. ಪಾಂಡವಪುರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಪ್ರಾರಂಭವಾಯಿತು. ಈಗ ಮುಂದಿನ ಜೂನ್‌ನಲ್ಲಿ ಕೆಲಸ ಪ್ರಾರಂಭವಾಗುತ್ತದೆ. ಅದನ್ನು ಪ್ರಾರಂಭಿಸುವಾಗ ಬಹಳ ಕಷ್ಟಪಟ್ಟು ಹಣ ವಸೂಲಮಾಡಿ ಸ್ಥಾಪಿಸಿದರು. ಸ್ನೇಹಿತರು ಎಷ್ಟೇ ಒಳ್ಳೆಯ ಕೆಲಸ ಮಾಡಿದರೂ ಒಂದು ಕಿರುಕುಳ ಕೊಡುವುದು ಕೆಲವರ ಕಸಬು. ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಸಂಘ ರಿಜಿಸ್ಟರು ಮಾಡಿಸಿದ ಕಾಲದಲ್ಲಿ ಕೆಲವರು ಆ ಸಂಘದ ವಿರುದ್ಧ ಬಹಳವಾಗಿ ಹೋರಾಡಿ ಅದರ ಸ್ಥಾಪನೆಗೆ ವಿರೋಧವಾಗಿ ಹೋರಾಡಿದರು. ಅಂತಹ ಸ್ನೇಹಿತರು ಕೆಲವರನ್ನು ಈಗ ಆ ಸಂಘಕ್ಕೆ ನಾಮಕರಣಮಾಡಿ ಕಷ್ಟಪಟ್ಟು ಸ್ಥಾಪಿಸಿದವರ ವಿರುದ್ಧ ಕಿರುಕುಳ ಕೊಡಲು ತಮಗೆ ಬೇಕಾದ ಕೆಲವರನ್ನು ನೇಮಕಮಾಡಲು ಸಚಿವ ಮರಿಯಪ್ಪನವರ ಪ್ರಯತ್ನ ನಡೆಯುತ್ತಿದೆ. ದೇಶದಲ್ಲಿ ಸಹಕಾರ ಚಳುವಳಿ ಬೆಳೆದು ತನ್ಮೂಲಕ ದೇಶದ ಪ್ರಗತಿಯನ್ನು ಸಾಧಿಸಬೇಕೆಂದು ಭಾಷಣ ಮಾಡುವ ಮುಂದಾಳುಗಳು ಒಳಗೊಳಗೆ ಈ ರೀತಿ ಕಿರುಕುಳ ಕೊಟ್ಟು ರಾಜಕೀಯದ ಹಿನ್ನೆಲೆಯಲ್ಲಿ ಸಹಕಾರ ತತ್ವದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತಿದ್ದಾರೆ. ಸುಮಾರು ಹತ್ತು ಲಕ್ಷಕ್ಕೂ ಮೀರಿ ಷೇರು ಮೊಬಲಗನ್ನು ವಸೂಲ್ಮಾಡಿ ಸಂಘವನ್ನು ಸ್ಥಾಪಿಸಿದವರನ್ನು ಕಡೆಗಾಣುವುದು ಯಾವ ಧರ್ಮ ಸ್ವಾಮಿ ? ಮತ್ತೊಂದು ವಿಷಯವೆಂದರೆ, ಮಂಡ್ಯದಲ್ಲಿ ಒಂದು ಸಹಕಾರ ಸಂಘವಿದೆ. ಅದರ ಆಡಳಿತದಲ್ಲಿ ಒಂದು ಬತ್ತದ ಗಿರಣಿ ಮತ್ತು ಎಣ್ಣೆ ತೆಗೆಯುವ ಯಂತ್ರ ಜೋಡಿಸಬೇಕೆಂದು ಪ್ರಯತ್ನಪಟ್ಟೆವು. ಸರ್ಕಾರದ ವ್ಯವಸಾಯ ಸಚಿವರು, ರೆವಿನ್ಯೂ ಸಚಿವರು, ಸಹಕಾರ ಸಚಿವರು ಎಲ್ಲರೂ ನಮ್ಮ ಸಂಘಕ್ಕೆ ಸಾಲ ಕೊಡಲು ಸರ್ಕಾರಕ್ಕೆ ಏನೇನೂ ಯೋಚನೆ ಇಲ್ಲ ಧಾರಾಳವಾಗಿ ಕೊಡುತ್ತೇವೆಂದು ಹೇಳಿದ್ದರವೋರೆ ಎರಡು ಲಕ್ಷ ಸಾಲಕ್ಕಾಗಿ ಮನವಿ ಮಾಡಿಕೊಂಡೆವು. ಹೀಗಿರುವಾಗ ಒಂದು ವಿಚಿತ್ರ ಸಂಗತಿ ತಿಳಿಸಬೇಕಾಗಿದೆ. ಅರ್ಥಶಾಖೆಯ ಕಾರ್ಯದರ್ಶಿಯವರು ಇನ್ನು 15 ನಿಮಿಷಗಳಲ್ಲಿ G.O. ಕಾಪಿಯನ್ನು ಕೊಡುತ್ತೇವೆಂದೂ ಎರಡುಲಕ್ಷ ಮಂಜೂರ್ಮಾಡಿದ್ದೇವೆಂದೂ ಹೇಳಿದರೂ 15 ನಿಮಿಷ ಬಿಟ್ಟು ಹೋಗುವಲ್ಲಿ ಅರ್ಥಶಾಖೆ ಮಂತ್ರಿಗಳು ರಿಕಾರ್ಡನ್ನು ತಮ್ಮ ಮನೆಗೆ ತರಿಸಿಕೊಂಡರು. ಕಾರಣ ಗೊತ್ತಿಲ್ಲವೆಂದರೂ ಆ ರಿಕಾರ್ಡು ಕೆಲವು ದಿನ ಬಿಟ್ಟು ಹಣ ಕೊಡುವಂಥಾದ್ದಕ್ಕೆ ಕೊಕ್ಕೆ ಬಿದ್ದು ವಾಪಸ್ ಬಂತು. ಅರ್ಥ ಸಚಿವ ಶ್ರೀ ಮರಿಯಪ್ಪನವರ ರಾಜಕೀಯ ವ್ಯಭಿಚಾರ ಈ ರೀತಿ ದುರಂತಕ್ಕೊಳಪಡಿಸಿತು. ಸಹಕಾರ ಸಂಘಗಳು ಬೆಳೆಯಬೇಕು ಎಂದು ಬಾಯಲ್ಲಿ ಹೇಳಿ ಕಾಯ ವಾಚಾ ಮನಸ್ಸಿನಿಂದ ನಡೆಯುವುದಕ್ಕೆ ಸರ್ಕಾರಕ್ಕಾಗಲಿಲ್ಲ ; ಮತ್ತು ಸಹಕಾರ ಸಂಘಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಲಿ ಎಂಬ ಮನಸ್ಸು ಸರ್ಕಾರಕ್ಕಿಲ್ಲವಲ್ಲಾ ಎಂದು ನಾನು ದುಃಖದಿಂದ ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಫೈಲಿನ ಜೊತೆಯಲ್ಲಿ ಮಾನ್ಯ ಸದಸ್ಯರು ಹೋಗುತ್ತಿದ್ದರೆಂಬುವು ಇದರಿಂದ ಗೊತ್ತಾಗುತ್ತದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ನಾನು ಸ್ವಂತಕ್ಕಾಗಿ ತೆಗೆದುಕೊಂಡು ಹೋಗತಕ್ಕ ಹಣವಲ್ಲ. ಸೊಸೈಟಿ ಹಣ. ಸಂಘದ ಲೆಕ್ಕಗಳನ್ನು ಆಡಿಟ್ ಮಾಡಬೇಕಾಗಿರುತ್ತದೆ. ಇದರಲ್ಲಿ ಶಾಖಾಯ, ಲವಣಾಯ ಮಾಡುವುದಕ್ಕೆ ಹೇಗಾಗುತ್ತದೆ ? ನಾವು ಸಂಘ ಬೆಳೆಸುವವರು. ದೇಶದಲ್ಲಿ ಇಂತಹ ಸಹಕಾರ ಸಂಘಗಳನ್ನು ಬೆಳೆಸಬೇಕೆಂದು ಅದರ ಏಳಿಗೆಗೆ ಯಾವ ಯಾವ ಸೌಕರ್ಯಗಳು ಬೇಕೋ ಅವನ್ನು ಕಲ್ಪಿಸುತ್ತಿರ

ಬೇಕು. ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳ ವ್ಯವಹಾರ ನೋಡಿಕೊಳ್ಳುವ ಬಗ್ಗೆ ಕೆಲವು ಸಂದರ್ಭಗಳಲ್ಲಿ ಫೈಲುಗಳ ಹಿಂದೆಯೇ ಹೋದರೆ ಏಕೆ ಮಾನ್ಯ ಮಂತ್ರಿಗಳು ಆ ರೀತಿ ತಿಳಿದುಕೊಂಡಿದ್ದಾರೋ ನನಗಂತೂ ಅರ್ಥವಾಗಲಿಲ್ಲ. ನನಗಾದರೂ ಅನ್ನಿಸುತ್ತದೆ ಅವರ ಅಂತರಾಳದಲ್ಲಿ ಏನಿದೆಯೋ ಗೊತ್ತಿಲ್ಲ. ಕುಂಬಳಕಾಯಿ ಕಳ್ಳನೆಂದರೆ ಹೆಗಲುಮುಟ್ಟಿ ನೋಡಿಕೊಂಡಂತೆ.

ಇನ್ನು ವ್ಯವಸಾಯ ಮುಟ್ಟುಗಳ ವಿಚಾರವಾಗಿ ಹೇಳುವುದಾದರೆ, ಸರ್ಕಾರ ವ್ಯವಸಾಯದ ಉಪಕರಣಗಳನ್ನು ರೈತನಿಗೆ ಒದಗಿಸುವ ವಿಷಯದಲ್ಲಿ ತುಂಬ ಅಶ್ರದ್ಧೆಯಿಂದ ಕೂಡಿದೆ ಎಂದು ನಾನು ಹೇಳುತ್ತೇನೆ. ಯಾವಾಗಲೂ ರೈತನಿಗೆ ಮಳೆ ಬೀಳುವಾಗ ಗುಳ ಇರುವುದಿಲ್ಲ. ಕೆಲವು ಕಡೆಗಳಲ್ಲಿ ಈ ಬಗ್ಗೆ ಸರಿಯಾದ ವ್ಯವಸ್ಥೆ ಇದೆ. ಮತ್ತೆ ಕೆಲವೆಡೆಗಳಲ್ಲಿ ಬಹಳ ತೊಂದರೆಯಿದೆ. ವ್ಯವಸಾಯ ಮಾಡುವವನಿಗೆ ಇದರಿಂದ ಬಹಳ ಕಷ್ಟವಾಗುತ್ತದೆ. ವ್ಯವಸಾಯದ ಮರಮುಟ್ಟುಗಳು ಸರ್ಕಾರಕ್ಕೆ ಬಂದಕೂಡಲೆ ರೈತರಿಗೆ ಒದಗಿಸುತ್ತೇವೆಂದು ಹೇಳುತ್ತಾರೆ. ಮಳೆ ಬಿದ್ದಾಗ ಹೊಲ ಉಳಬೇಕೇ ಅಥವಾ ಮಳೆ ಬೀಳದಿದ್ದಾಗ ಹೊಲ ಉಳಬೇಕೆ?! ಮಳೆ ಬರುವುದಕ್ಕೆ ಮೊದಲೇ ಸರ್ಕಾರದವರು ರೈತನಿಗೆ ಬೇಕಾದಂಥ ವ್ಯವಸಾಯ ಸಾಮಾನುಗಳನ್ನು ಮತ್ತು ಮರಮುಟ್ಟುಗಳನ್ನು ರಿಯಾಯಿತಿ ದರದಲ್ಲಿ ಸಾಕಷ್ಟು ದೊರೆಯುವಂತೆ ತಕ್ಕ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಮಂತ್ರಿಗಳು ದೊಡ್ಡ ದೊಡ್ಡದಾಗಿ ಭಾಷಣವೇನೋ ಮಾಡುತ್ತಾರೆ. ವ್ಯವಸಾಯಕ್ಕೆ ಸಂಬಂಧಪಟ್ಟ ಸಾಮಾನುಗಳೇನೋ ರೈತರಿಗೆ ಕಾಲಕ್ಕೆ ಸರಿಯಾಗಿ ಒದಗುತ್ತಿಲ್ಲ. ಅದರಿಂದ ರೈತ ಹತ್ತು ಆಣೆ ಗುಳಕ್ಕಾಗಿ ಒಂದೂಕಾಲು ರೂಪಾಯಿಯನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಕೊಟ್ಟು ಕೊಂಡುಕೊಳ್ಳಬೇಕಾಗುತ್ತದೆ. ಇದು ಎಷ್ಟು ಅನ್ಯಾಯ!

ರೈತನಿಗೆ ಒದಗಿಸುವ ಗೊಬ್ಬರದ ವಿಷಯದಲ್ಲಿ ಶ್ಯಾನುಭೋಗರಿಂದ ಅಪ್ಪಣೆ ಚೀಟಿ ತರಬೇಕೆಂದೂ ಅದಿಲ್ಲದೆ ಗೊಬ್ಬರ ಕೊಡಲಾಗುವುದಿಲ್ಲವೆಂದೂ ತೀರ್ಮಾನ ಮಾಡಿದ್ದಾರೆ. ರೈತನ ಕಷ್ಟವನ್ನು ಅನುಭವಿಸಿರುವ ಹಾಗೂ ಕಣ್ಣಾರ ಕಂಡಿರುವ ಯಾರೇ ಆಗಲಿ ಹೀಗೆ ತೀರ್ಮಾನಮಾಡಲು ಮನಸ್ಸು ಮಾಡುವುದಿಲ್ಲ. ಈ ತೀರ್ಮಾನಕ್ಕೆ ನಾನು ಪೂರ್ಣ ವಿರೋಧಿ ದಯವಿಟ್ಟು ಶ್ಯಾನುಭೋಗರಿಂದ ಜಮೀನು ದಾಖಲೆ ಬಗ್ಗೆ ಅಪ್ಪಣೆ ಚೀಟಿ ತರುವುದನ್ನು ತಪ್ಪಿಸಬೇಕು.

ಸ್ವಾಮಿ, ಆಹಾರಧಾನ್ಯ ಶೇಖರಣೆ ಆಜ್ಞೆಯೊಂದನ್ನು ಕೇಳಿ ಆಶ್ಚರ್ಯವಾಯಿತು. ವಿಶ್ವೇಶ್ವರಯ್ಯ ನಾಲಾ ಬಯಲಿನಲ್ಲಿ ಡಿಸೆಂಬರ್ ಆಖೈರಿಗೆ ಒಕ್ಕಣೆ ಮುಗಿದು ಕಣದಲ್ಲೇ ಧಾನ್ಯ ಮಾರಾಟವಾಗಿರುತ್ತದೆ. ಎಲ್ಲೋ ಕೆಲವು ಜನ ಹಣವಂತರು ಸ್ವಲ್ಪ ದಿನ ತಡೆಯಬಹುದು. ಹೀಗಿರುವಾಗ ಜನವರಿ 13 ರಲ್ಲಿ ಆಹಾರ ಕೊಳ್ಳುವುದಾಗಿ ಹೇಳಿ ಫೆಬ್ರವರಿ 17 ಕ್ಕೆ ದರ ಗೊತ್ತುಮಾಡಿ ರೈತನು ಸರ್ಕಾರಕ್ಕೆ ಧಾನ್ಯ ಕೊಡಬೇಕು ಇಲ್ಲವಾದರೆ ಬತ್ತ ಹಲ್ಲು (hull) ಮಾಡಿಸಲು ಅವಕಾಶವಿಲ್ಲವೆಂದು ಹೇಳುವ ನೀತಿ ಆಶ್ಚರ್ಯಕರವಾಗಿದೆ. ನಮ್ಮ ಜಿಲ್ಲೆಯ ಮಂತ್ರಿ ಮರಿಯಪ್ಪನವರು ಈ ವಿಷಯ ತಿಳಿದಿರಲಿಲ್ಲವೇನು? ಸರ್ಕಾರದ ಅರ್ಥಶೂನ್ಯ ತೀರ್ಮಾನದಿಂದ ರೈತರನ್ನು ಕಿರುಕುಳಕ್ಕೆ ಸಿಕ್ಕಿಸುವುದು ಏನು ನ್ಯಾಯ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳತಕ್ಕದ್ದು ಸರಿಯಿಲ್ಲ. ಒಬ್ಬ ರೈತ ತಾನೇ ಬತ್ತವನ್ನು ಮಾರುವುದಕ್ಕೆ ಇಟ್ಟಿದ್ದರೆ, ಅದರಿಂದ ಸರ್ಕಾರಕ್ಕೆ ಕೊಡಬೇಕಾಗಿಲ್ಲ. ಬತ್ತವನ್ನು ಮಾರಿದ್ದಾನೆಂದು ರುಜುವಾತು ಆದರೆ ಆಗ ಕೊಡಬೇಕು. ಹಾಗೆ ಇಲ್ಲದಿದ್ದರೆ ಅವನಿಂದ ನಾವೇನೂ ನಿರೀಕ್ಷಣೆ ಮಾಡುವುದಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮೊನ್ನೆ ಒಬ್ಬ ರೈತ ಮಗನ ಲಗ್ನಕ್ಕೋಸ್ಕರ ಬತ್ತವನ್ನು ಮಿಲ್ಲಿಗೆ ಹಾಕಿಸುವುದಕ್ಕೆ ಮಿಲ್ಲಿಗೆ ಹೋದಾಗ ಆ ಬತ್ತದಲ್ಲಿ ಅರ್ಧ ಕೊಡಬೇಕು ಕೊಡದಿದ್ದರೆ ಒಪ್ಪುವುದಿಲ್ಲ ಎಂದು ಹೇಳಿದರು. ಮಿಲ್ಲಿಗೆ ಬತ್ತ ಬಂತು ಎಂದರೆ ದಲ್ಲಾಳಿಗಳು ಮುತ್ತಿಕೊಂಡುಬಿಡುತ್ತಾರೆ. ಈ ರೀತಿ ರೈತ ಮಗನ ಲಗ್ನಕ್ಕೆ ಮಿಲ್ ಮಾಡಿಸಲು ತೆಗೆದುಕೊಂಡು ಹೋದ ಬತ್ತದಲ್ಲಿ ಅರ್ಧಕೊಟ್ಟರೆ ಅವನು ಮಗನ ಲಗ್ನಕ್ಕೆ ಬಂದವರಿಗೆ ಊಟಕ್ಕೆ ಅನ್ನ ಹಾಕಬೇಕೇ ಬೇಡವೇ? ಅವನು ಏನುಮಾಡಬೇಕು? ಅದೂ ಅಲ್ಲದೆ ಈಗಾಗಲೇ ಮಾರ್ಕೆಟಿಂಗ್ ಸೊಸೈಟಿಯವರ ಪರ್ಚೇಸ್ ಮಾಡಿದ್ದಾರೆ. ಅವರು ಪ್ರತಿ ದಿವಸ ಇರುವ ರೇಟಿನ ಪ್ರಕಾರ ಎಷ್ಟೆಷ್ಟೋ ವ್ಯಾಪಾರಮಾಡಿ ದವಸ ತೆಗೆದುಕೊಂಡು ಸ್ಟಾಕ್ ಮಾಡಿಕೊಂಡಿರುತ್ತಾರೆ. ಹೀಗಿರುವಾಗ ಆಯಾಯ ಮಾರ್ಕೆಟಿಂಗ್ ಸೊಸೈಟಿಯವರು ಪರ್ಚೇಸ್ ಮಾಡಿದ ರೇಟನ್ನು ಏತಕ್ಕೆ ಕೊಡಬಾರದು? ರೈತರನ್ನು ಉದ್ಧಾರ ಮಾಡುವವರಿಗೆ ಬೋನಸ್ ರೂಪವಾಗಿ ಸಹಾಯ ಮಾಡುತ್ತೇವೆ ಎನ್ನುವ ಉದಾತ್ತ ಧ್ಯೇಯ ಏಕೆ ಇಲ್ಲ?

ಶ್ರೀ ಟಿ. ಮರಿಯಪ್ಪ.—ರೈತರ ಪರವಾಗಿ ಹೇಳುತ್ತೀರೋ ಅಥವಾ ಮಿಲ್ಲಿನವರ ಪರವಾಗಿ ಹೇಳುತ್ತೀರೋ? ಎರಡನ್ನೂ ಕ್ಲಾರಿಫೈ ಮಾಡಿದರೆ ಉತ್ತಮ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ತಮ್ಮ ಹಾಗೆ ನಾನು ಒಂದುಕಡೆ ಮಾತನಾಡುತ್ತಿಲ್ಲ. ನ್ಯಾಯವಿದ್ದ ಕಡೆ ಮಿಲ್ಲಿನವರಿಗೂ ಅನುಕೂಲವಾಗಬೇಕು, ರೈತನಿಗೂ ಅನುಕೂಲವಾಗಬೇಕು ಆ ರೀತಿ ಮಾಡಬೇಕು. ನಾನು ಆಗಲೇ ರೈತರ ವಿಷಯ ಹೇಳಿದೆ. ಮಾರತಕ್ಕಂಥವರು ಸರ್ಕಾರ ಗೊತ್ತುಮಾಡಿರುವ ದರಕ್ಕೆ ಮಿಲ್ಲಿನವರಿಗೆ ಕೊಡಿ ಎಂದು ಹೇಳಿದರೆ ಹೇಗೆ ಸಾಧ್ಯ? ಮಿಲ್ಲಿನಲ್ಲಿ ಸ್ಟಾಕು ಮಾಡಿದರೆ ಸರ್ಕಾರಕ್ಕೆ ಕೊಡಿ ಎಂದು ಹೇಳುತ್ತಿದ್ದಾರೆ. ರೆಗ್ಯುಲೇಟೆಡ್ ಮಾರ್ಕೆಟಿಂಗ್ ಸೊಸೈಟಿಯವರು ಯಾವ ಯಾವ ದಿವಸ ಯಾವ ಯಾವ ದರದಲ್ಲಿ ವ್ಯಾಪಾರ ಮಾಡಿದರು ಎನ್ನುವುದು ಅಧಿಕಾರಿಗಳಿಗೆ ಗೊತ್ತಿದೆ. ಯಾವ ಯಾವ ರೇಟಿನಲ್ಲಿ ಮಿಲ್ಲಿನವರು ಎಷ್ಟು ಸ್ಟಾಕು ಮಾಡಿಕೊಂಡಿದ್ದಾರೋ ಅವರಿಗೆ ಆ ರೇಟ್ ಕೊಡದಿದ್ದರೆ ಸರ್ಕಾರ ಕೊಡುವ ರೇಟು ಕಡಮೆಯಾದರೆ ಅವರಿಗೆ ನಷ್ಟವಾಗುವುದಿಲ್ಲವೇ ಎನ್ನುವುದನ್ನು ಆಲೋಚನೆ ಮಾಡಬೇಕು.

ಆರೋಗ್ಯದ ವಿಷಯದಲ್ಲಿ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ನಮ್ಮ ಮಂಡ್ಯ ಜಿಲ್ಲೆ ಕ್ಷಯರೋಗಕ್ಕೆ ತವರೂರು. 1953-54 ರಲ್ಲಿ ಈ ಸಭೆಯ ಮುಂದೆ ಈ ವಿಚಾರವಾಗಿ ಪ್ರಶ್ನೆ ಕೇಳಿದಾಗ ಆಗಿನ ಮಂತ್ರಿಗಳು ಹೇಳಿದರು, ಶೇಕಡಾ 50 ಜನ ಮಂಡ್ಯ ಜಿಲ್ಲೆಯವರು ಮೈಸೂರು ಆಸ್ಪತ್ರೆಯಲ್ಲಿ ಇದ್ದಾರೆ ಎಂದು. ಈಚೆಗೆ ಏನೋ ಸ್ವಲ್ಪ ಕಡಮೆಯಾಗಿದೆ. ಈಗ ಮಂಡ್ಯ ಜಿಲ್ಲೆಯಲ್ಲಿ ಸರ್ವೆ ಮಾಡಿದರೆ ಕನಿಷ್ಟಪಕ್ಷ ಮೈಸೂರು ದೇಶದಲ್ಲಿ ಇರತಕ್ಕ ಕ್ಷಯರೋಗದ ಆಸ್ಪತ್ರೆಯಲ್ಲಿ ಎಷ್ಟು ಜನ ರೋಗಿಗಳು ಇದ್ದಾರೋ ಅಷ್ಟು ಜನ ರೋಗಿಗಳು ಮಂಡ್ಯ ಜಿಲ್ಲೆ ಒಂದರಲ್ಲೇ ಸಿಕ್ಕುತ್ತಾರೆ. ಈ ವಿಚಾರದಲ್ಲಿ ಮಂಡ್ಯ ಜಿಲ್ಲೆಯ ಎಲ್ಲಾ ಶಾಸನ ಸಭಾ ಸದಸ್ಯರೂ ಹಿಂದೆ ಇದ್ದಂಥ ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಲಿಖಿತ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಮೂಲಕ ಅರಿಕೆ ಮಾಡಿಕೊಂಡೆವು. ಆಗ ಅವರು ನೀವು ಏನಾದರೂ ಮಾಡಿ ಜನಗಳಿಂದ ಒಂದು ಲಕ್ಷ ರೂಪಾಯಿಗಳನ್ನು ವಸೂಲುಮಾಡಿದರೆ ಆದಷ್ಟು ಜಾಗ್ರತೆ ಒಂದು ಸ್ಯಾನಿಟೋರಿಯಂ ಮಾಡುತ್ತೇವೆ ಎಂದು ಹೇಳಿದ್ದರು. ಇವೊತ್ತಿನ ದಿನ ಟಿ. ಬಿ. ಕ್ಲಿನಿಕ್ ಕೊಡುವುದಾಗಿ ಹೇಳಿದ್ದಾರೆ. ಬಹಳ ಜನ ರೋಗಿಗಳಿಗೆ ಜಾಗ ಸಿಕ್ಕದೆ ಇರುವುದರಿಂದ ನಮ್ಮ ಜಿಲ್ಲೆಗೆ ಕೊನೆಯ ಪಕ್ಷ 100 ಜನಗಳಿಗೆ ಅನುಕೂಲವಾಗುವ ಒಂದು ವಾರ್ಡನ್ನು ಕಟ್ಟಿಕೊಟ್ಟರೆ ಎಷ್ಟೋ ಅನುಕೂಲವಾಗುತ್ತದೆ. ಮಾನ್ಯ ಸಚಿವರು ದಯವಿಟ್ಟು ಇದನ್ನು ನೋಡಬೇಕು ಮತ್ತು ಇದನ್ನು ಬಗೆಹರಿಸಬೇಕು ಎಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಷಯದಲ್ಲಿ ಒಂದು ವಿಷಯವನ್ನು ಕೇಳಿದೆ. ಐದು ವರ್ಷದಿಂದ ಮೇಲ್ಪಟ್ಟು 14 ವರ್ಷದ ವಯಸ್ಸಿನಲ್ಲಿ ಇರತಕ್ಕ ಮಕ್ಕಳು ಎಷ್ಟು ಜನ ದೇಶದಲ್ಲಿ ಇದ್ದಾರೆ, ಎಷ್ಟರಮಟ್ಟಿಗೆ ವಿದ್ಯಾಭ್ಯಾಸವನ್ನು ಒದಗಿಸಿಕೊಟ್ಟಿದ್ದಾರೆ ಎಂದರೆ 44 ಲಕ್ಷ ಮಕ್ಕಳ ಪೈಕಿ 23 ಲಕ್ಷ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಒದಗಿಸಿಕೊಟ್ಟಿದ್ದಾರೆ. ರಾಜ್ಯಾಂಗದ ಪ್ರಕಾರ ಐದು ವರ್ಷಕ್ಕೆ ಮೇಲ್ಪಟ್ಟು, 14 ವರ್ಷದವರೆಗೆ ಇರುವ, ಎಲ್ಲಾ ಮಕ್ಕಳಿಗೂ ವಿದ್ಯಾಭ್ಯಾಸವನ್ನು ಒದಗಿಸಲು ಏನು ಪ್ರೋಗ್ರಾಮ್ ಇಟ್ಟುಕೊಂಡಿದ್ದಾರೆ ಎಂಬುದನ್ನು ತಿಳಿಸಿದ್ದರೆ ಚೆನ್ನಾಗಿತ್ತು. ಆದಷ್ಟು ಹಳ್ಳಿಗಾಡಿನ ಮಕ್ಕಳ ವಿಷಯಕ್ಕೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಸಾಮಾನ್ಯವಾಗಿ ಜನಸಂಖ್ಯೆ 300 ಇರುವಕಡೆ ಒಂದು ಪ್ರೈಮರಿ ಸ್ಕೂಲು ಕೊಡಬೇಕು ಎಂದು, ಪ್ರೋಗ್ರಾಮ್ ಪ್ರಕಾರ ಅವುಗಳನ್ನು ತೆರೆಯುತ್ತಿದ್ದೇವೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಐದು ವರ್ಷದಿಂದ ಮೇಲ್ಪಟ್ಟು 14 ವರ್ಷಗಳವರೆಗೆ ಇರುವ ಎಲ್ಲಾ ಮಕ್ಕಳಿಗೂ ವಿದ್ಯಾಭ್ಯಾಸವನ್ನು ಕೊಡಬೇಕು ಎಂದು ರಾಜ್ಯಾಂಗದಲ್ಲಿ ಹೇಳಿದ್ದಾರೆ. ಸ್ವಾತಂತ್ರ್ಯ ಬಂದ ಹತ್ತು ವರ್ಷದೊಳಗಾಗಿ..............

ಶ್ರೀ ಟಿ. ಮರಿಯಪ್ಪ.—ಆದರೂ ಗುರಿ ಮುಟ್ಟುವುದು ಕಷ್ಟ ಎಂದು ಹೇಳಿದ್ದಾರೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಒಟ್ಟು 44 ಲಕ್ಷದಲ್ಲಿ 23 ಲಕ್ಷ ಮಕ್ಕಳಿಗೆ ಮಾತ್ರ ಈಗ ವಿದ್ಯಾಭ್ಯಾಸ ದೊರಕಿದೆ. N.E.S. ವಿಷಯದಲ್ಲಿ ಅನೇಕ ಸ್ನೇಹಿತರು ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಕ್ಷೇತ್ರದಲ್ಲೂ ಕೂಡ ಈ ಬ್ಲಾಕ್ ಕೆಲಸ ಮಾಡುತ್ತಾ ಇರುವುದರಿಂದ ಯಾವ ಯಾವ ಕ್ಷೇತ್ರಗಳಲ್ಲಿ ಲೋಪದೋಷ ಆಗಿವೆಯೋ ಅದು ಆಗಿಲ್ಲ ಎಂದು ವಾದಮಾಡುವುದಕ್ಕೆ ಬದಲಾಗಿ ನಾನು ತಿಳಿದುಕೊಂಡಿರುವ ಹಾಗೆ ನಿಷ್ಠೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳು ಬಂದರೆ ಕೆಲಸ ಚೆನ್ನಾಗಿ ನಡೆಯುತ್ತದೆ. ಸರ್ಕಾರದವರು ಪ್ರಭಾವ ಬೀರಿ ಯಾರು ಯಾರನ್ನು ಸಮಿತಿಗೆ ಹಾಕಬೇಕು ಎಂದು ಯೋಚನೆ ಮಾಡುವುದಕ್ಕೆ ಬದಲಾಗಿ ಕೆಲಸ ಮಾಡುವವರು ಯಾರು ಎಂದು ತಿಳಿದುಕೊಂಡು ಹಣ ಸದ್ವಿನಿಯೋಗವಾಗಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ನಾಮಕರಣ ಮಾಡಿದರೆ ಕೆಲಸ ಚೆನ್ನಾಗಿ ನಡೆಯುತ್ತದೆ. ಅವರ ಪ್ರಭಾವ ಬೀರಿ ಎಲ್ಲೆಲ್ಲಿ ತಮ್ಮವರು ಇರಬೇಕು ಎಂದು ಸರಿಯಾಗಿ ಕೆಲಸ ಮಾಡದೆ ಇರತಕ್ಕ ಖಾಸಗಿಯವರನ್ನು ಹಾಕಿದ್ದಾರೋ ಅಲ್ಲಿ ಕೆಲಸ ಸ್ವಲ್ಪ ಕೆಟ್ಟಿದೆಯೇ ಹೊರತು ನನ್ನ ಕ್ಷೇತ್ರದ ಪರವಾಗಿ ಹೇಳುವುದಾದರೆ ಒಳ್ಳೆಯ ಅಧಿಕಾರಿಗಳು ಇರುವುದರಿಂದ ಮತ್ತು ಅಲ್ಲಿರುವ ಕೆಲವು ಸದಸ್ಯರುಗಳು ಕೂಡ ನಿಷ್ಠೆಯಿಂದ ಕೆಲಸ ಮಾಡಿರುವುದರಿಂದ ಅಲ್ಲಿ ಹೆಚ್ಚಿನ ಕೆಲಸ ಆಗಿದೆ ಎಂದು ಹೇಳಲು ಇಚ್ಛಿಸುತ್ತೇನೆ. ಸರ್ಕಾರದವರು ದೇಶದ ಪ್ರಗತಿಯನ್ನು ಹಾಗೂ ನಿಷ್ಠೆಯ ರಾಜ್ಯಾಡಳಿತವನ್ನು ಮರೆತಿದ್ದಾರೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶವಿತ್ತ ಮಾನ್ಯ ಸಭಾಪತಿಗಳಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

*ಶ್ರೀ ಎ. ವಿ. ನರಸಿಂಹರೆಡ್ಡಿ.—ಮಾನ್ಯ ಸಭಾಪತಿಗಳೇ, 1959-60ನೆಯ ಸಾಲಿನ ಆಯವ್ಯಯ ಅಂದಾಜಿನ ಬಗ್ಗೆ ಕೆಲವು ವಿಷಯಗಳನ್ನು ತಿಳಿಸಲು ಬಯಸುತ್ತೇನೆ. ಮಾನ್ಯ ಹಣಕಾಸಿನ ಸಚಿವರು ನಮ್ಮ ಮುಂದೆ ಉಳಿತಾಯದ ಆಯವ್ಯಯ ಅಂದಾಜಿನ ಒಂದು ಪಟ್ಟಿಯನ್ನು ಇಟ್ಟು ವಿರೋಧಪಕ್ಷದ ಸ್ನೇಹಿತರಿಂದಲೇ ಅಭಿನಂದನೆಗಳನ್ನು ತೆಗೆದುಕೊಂಡಿದ್ದಾರೆ. ಒಂದು ಸಂಸ್ಥಾನದ ಆಯವ್ಯಯ ಪಟ್ಟಿಗಳನ್ನು ನಾವು ಪರಿಶೀಲನೆ ಮಾಡುವಾಗ ನಾವು ಪ್ರತಿನಿಧಿಸತಕ್ಕ ಕ್ಷೇತ್ರದಲ್ಲಿ ಆಗಬೇಕಾದ ಕೆಲಸಗಳ ಹಿನ್ನೆಲೆಯಿಂದ ಅಥವಾ ಒಂದು ಜಿಲ್ಲೆಯಲ್ಲಿ ಆಗಬೇಕಾದ ಕೆಲಸಗಳ ಮತ್ತು ಆಶೋತ್ತರಗಳ ಹಿನ್ನೆಲೆಯಿಂದ ಪರಿಶೀಲನೆಮಾಡಿ ಮಾತನಾಡುವುದಕ್ಕೆ ಹೋದರೆ ನಿಜವಾಗಿ ನಾವು ಯಾವ ಒಂದು ದೃಷ್ಟಿಯಿಂದ ಆಯವ್ಯಯ ಅಂದಾಜಿನ ಬಗ್ಗೆ ಯಾವ ಅಭಿಪ್ರಾಯಗಳನ್ನು ತಿಳಿಸಬೇಕೋ ಅದನ್ನು ತಿಳಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ತಮ್ಮಲ್ಲಿ ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. ದಿನ ದಿನಕ್ಕೂ ಅಭಿವೃದ್ಧಿ ಹೊಂದುತ್ತಾ ಇರತಕ್ಕ ದೇಶದಲ್ಲಿ, ಅದರಲ್ಲೂ ಕೆಲವಾರು ರಾಜಕೀಯ ಚಳುವಳಿಗೆ ಒಳಪಟ್ಟಿರತಕ್ಕ ಜನಗಳ ಮನಸ್ಸಿನಲ್ಲಿ, ಆಶೋತ್ತರಗಳನ್ನು ಕೆರಳಿಸಿದಮೇಲೆ ದೇಶದ ಆರ್ಥಿಕ ವ್ಯಾಪ್ತಿಯಲ್ಲಿ ಅವರ ಆಶೋತ್ತರಗಳನ್ನೆಲ್ಲಾ ಶೀಘ್ರವಾಗಿ ನೆರವೇರಿಸತಕ್ಕದ್ದು ಅಸಾಧ್ಯವಾದ ಮಾತು ಎನ್ನುವುದನ್ನು ನಾವೆಲ್ಲರೂ ಮನಗಾಣಬೇಕು. ನಾವು ಪರಿಶೀಲನೆಮಾಡುವಾಗ ಸಹಾನುಭೂತಿಯಿಂದ ಈ ಆಯವ್ಯಯ ಅಂದಾಜನ್ನು ನೋಡದೆಹೋದರೆ ನಾವು ಪ್ರಾಯಶಃ ಯಾವ ಉದ್ದೇಶವನ್ನು ಸಾಧನೆ ಮಾಡಬೇಕು ಎನ್ನುವದೃಷ್ಟಿಯಿಂದ ಕೆಲವು ಸಲಹೆಗಳನ್ನು ಮಾಡುವುದಕ್ಕೆ ಬಯಸುತ್ತೇವೋ ಅದಕ್ಕೆ ವ್ಯತಿರಿಕ್ತವಾದ ಫಲತಾಂಶ ಉಂಟಾಗಬಹುದೋ ಏನೋ ಎನ್ನುವ ಶಂಕೆಯನ್ನು ಬಹಿರಂಗಪಡಿಸಲು ಬಯಸುತ್ತೇನೆ. 1947 ರಿಂದ ಎಂದರೆ ನಾವು ಎಂದು ದೇಶದಲ್ಲಿ ಪ್ರಜಾಪ್ರಭುತ್ವಾಡಳಿತವನ್ನು ಜಾರಿಗೆ ತಂದೆವೋ ಅಲ್ಲಿಂದ ಇಲ್ಲಿಯವರೆಗೂ ದೇಶದಲ್ಲಿ ಯಾವ ಯಾವ ಮುಖವಾಗಿ ಅಭಿವೃದ್ಧಿಕಾರ್ಯಗಳನ್ನು ಮಾಡಿ ದೇಶವನ್ನು ಮುಂದಕ್ಕೆ ತರಬಹುದೋ ಆ ಎಲ್ಲ ಮಾರ್ಗಗಳಲ್ಲೂ ಸಾಧನೆಯನ್ನು ಯಾವ ಯಾವ ರೀತಿಯಲ್ಲಿ ಮಾಡಬಹುದೋ ಅದೆಲ್ಲವನ್ನೂ ನಮ್ಮ ಸರ್ಕಾರದವರು ಮಾಡುತ್ತಲೇ ಬಂದಿದ್ದಾರೆ. ಆದರೆ ಆ 1947ರಲ್ಲಿ ಆಗಿದ್ದ ನಮ್ಮ ಆಯವ್ಯಯದ ಪರಿಸ್ಥಿತಿಯೊಡನೆ ಮತ್ತು ಈಗ 1959-60ನೆಯ ಸಾಲಿನಲ್ಲಿರತಕ್ಕ ನಮ್ಮ ಆಯವ್ಯಯದ ಪರಿಸ್ಥಿತಿಯನ್ನು ಹೋಲಿಸಿ ಪರಿಶೀಲನೆ ಮಾಡಿ ನೋಡಿದರೆ ನಾವು ನಿಜವಾಗಿಯೂ ವರ್ಷ ವರ್ಷಕ್ಕೂ ಹೆಚ್ಚಿನ ಅಭಿವೃದ್ಧಿಮಾರ್ಗದಲ್ಲಿ ಮುಂದೆ ಹೋಗುತ್ತಿದ್ದೇವೆಯೋ ನಮ್ಮ ಸರ್ಕಾರ ಪ್ರಗತಿಪರ ಮಾರ್ಗದಲ್ಲಿ ನಡೆಯುತ್ತಿದೆಯೇ ಅಥವಾ ಇಲ್ಲವೇ ಎನ್ನುವುದು ಗೊತ್ತಾಗಿಯೇ ಆಗುತ್ತದೆ. ಆದುದರಿಂದ

ಈ ಆಯುವ್ಯಯ ಪಟ್ಟಿಗಳನ್ನು ನಾವು ನೋಡುವಾಗ ಒಟ್ಟಿನಲ್ಲಿ ದೇಶದ ಒಂದು ಆರ್ಥಿಕಪರಿಸ್ಥಿತಿಯನ್ನು ಉತ್ತಮಗೊಳಿಸತಕ್ಕ ಮತ್ತು ಅದನ್ನು ಸಾಧಿಸತಕ್ಕ ಬಗ್ಗೆ ನಾವೆಲ್ಲರೂ ಏನೊಂದು ಆಸೆಯನ್ನಿಟ್ಟುಕೊಂಡಿದ್ದೇವೋ ಆ ಮಾರ್ಗದಲ್ಲಿ ಸರ್ಕಾರ ಮುಂದಕ್ಕೆ ಹೋಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡದೆ, ಸರ್ಕಾರದವರು ನಮ್ಮ ಪ್ರಾಂತ್ಯದ ಜನರಿಗೆ ಅಥವಾ ನಮ್ಮ ಪಕ್ಷದ ಜನರಿಗೆ ಯಾವ ಕೆಲಸಕಾರ್ಯಗಳನ್ನೂ ಮಾಡಿಲ್ಲ, ಆದ್ದರಿಂದ ನೀವು ಯಾವ ಅಭಿವೃದ್ಧಿಕಾರ್ಯಗಳನ್ನೂ ದೇಶದ ಜನರಿಗೆ ಒದಗಿಸಿಲ್ಲ ಎಂದು, ಗೊತ್ತಿದ್ದರೂ ಗೊತ್ತಿಲ್ಲದವರಂತೆ ಮಾತನಾಡುವುದು ಸರಿಯಲ್ಲ. ನಾನಾದರೋ ಅಂಥ ಒಂದು ದೃಷ್ಟಿಯಿಂದ ನೋಡದೆ ಹೇಳುವುದಾದರೆ ಈಗ ನಮ್ಮ ಮುಂದಿಟ್ಟಿರತಕ್ಕ ಆಯುವ್ಯಯಪಟ್ಟಿಯನ್ನು ಪರಿಶೀಲನೆ ಮಾಡಿದರೆ ಸರ್ಕಾರದವರು ಒಂದು ಅಭಿನಂದನಾರ್ಹವಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆಂದು ಹೇಳಬಯಸುತ್ತೇನೆ. ನಮ್ಮ ಸಂಸ್ಥಾನವು ಇತ್ತೀಚೆಗೆ ಪುನರ್ವಿಂಗಡಣೆಯಾದಮೇಲೆ ಐದು ಬೇರೆ ಬೇರೆ ಆಡಳಿತಕ್ಕೊಳಪಟ್ಟ ಭಾಗಗಳು ಒಂದು ಆಡಳಿತಕ್ಕೆ ಸೇರಿ ಉದ್ಭವಿಸಿದಂಥ ಅನೇಕ ಸಮಸ್ಯೆಗಳನ್ನೆಲ್ಲ ಇಷ್ಟು ಬೇಗ ಎದುರಿಸಿದ್ದೂ ಅಲ್ಲದೆ ಅದರ ಜೊತೆಗೆ ಅಭಿವೃದ್ಧಿಕಾರ್ಯಗಳನ್ನೂ ಕೂಡ ಹಿಂದಕ್ಕೆ ಬೀಳದಂತೆ ಅದಕ್ಕೆ ತಕ್ಕಷ್ಟು ಹಣವನ್ನೂ ಸಹ ಒದಗಿಸಿಕೊಂಡು ಆಡಳಿತವನ್ನು ನಡೆಸಿಕೊಂಡು ಬರುತ್ತಿರುವುದನ್ನು ನೋಡಿದರೆ ನಿಜವಾಗಿಯೂ ನಮ್ಮ ಸರ್ಕಾರದವರನ್ನು ಅಭಿನಂದಿಸಲೇಬೇಕು. ಆದರೆ ಈ ವರೆಗೆ ಮಾತನಾಡಿರತಕ್ಕ ಮಾನ್ಯ ಸದಸ್ಯರಲ್ಲಿ ಕೆಲವರು ಹಣಕಾಸಿನ ಸಚಿವರಾದ ಶ್ರೀ ಮರಿಯಪ್ಪನವರು ಬಹಳ ಹಳಬರು—ಅನುಭವಶಾಲಿಗಳೂ ಎಂದು ಹೊಗಳಿದ್ದಾರೆ. ಇನ್ನು ಕೆಲವರು ವ್ಯಂಗ್ಯವಾಗಿಯೂ ಹೇಳಿದ್ದಾರೆ. ಆದರೆ ಅವರು ಏನೇನು ಕೆಲಸಕಾರ್ಯಗಳನ್ನು ಎಷ್ಟು ವಿಚಕ್ಷಣೆಯಿಂದ ನಡೆಸಿಕೊಂಡು ಬಂದಿದ್ದಾರೆಂಬುದನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಅವರಲ್ಲಿ ಎಂಥ ದೇಶಾಭಿಮಾನವಿದೆಯೆಂಬುದು ಆಗ ಅವರಿಗೇ ಗೊತ್ತಾಗುತ್ತದೆ. ಸರ್ಕಾರದವರು ಪಂಚವಾರ್ಷಿಕ ಯೋಜನೆಗಳನ್ನು ಒಂದುಕಡೆ ಕೈಗೊಂಡಿದ್ದರೂ, ಇನ್ನೊಂದುಕಡೆ ದೇಶದಲ್ಲಿ ನಡೆಯಬೇಕಾದ ಸಾಮಾನ್ಯ ಕಾರ್ಯಗಳನ್ನೂ ಕೂಡ ನಡೆಸಿಕೊಂಡು ಹೋಗುತ್ತಿರುವುದನ್ನು ನೋಡಿದರೆ, ಈ ಎರಡು ತರನಾದ ಅಭಿವೃದ್ಧಿ ಕಾರ್ಯಗಳ ಚಟುವಟಿಕೆಗೂ ಹಣಕಾಸನ್ನು ನಮ್ಮ ಹಣಕಾಸಿನ ಸಚಿವರು ಸರಿಯಾಗಿ ಒದಗಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಎನ್ನುವುದನ್ನು ನೋಡಿದರೆ, ಆ ಒಂದು ದೃಷ್ಟಿಯಿಂದ ಈಗ ನಮ್ಮ ಮುಂದಿರತಕ್ಕ ಆಯುವ್ಯಯ ಪಟ್ಟಿಯನ್ನು ಪರಿಶೀಲನೆ ಮಾಡುವುದಾದರೆ, ಈ ಹಿಂದಿನ ಎರಡು-ಮೂರು ವರ್ಷಗಳಲ್ಲಿ ದೇಶದಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳಿಗಾಗಿ ಎಷ್ಟೆಷ್ಟು ಹಣವನ್ನು ಒದಗಿಸುತ್ತಿದ್ದರು ಈಗ ಎಷ್ಟು ಹಣವನ್ನು ಒದಗಿಸಿದ್ದಾರೆಂಬ ವಿಚಾರ ತೆಗೆದುಕೊಂಡರೆ, ಆಗ ಈ ಆಯುವ್ಯಯ ಪಟ್ಟಿಯ ಮಹತ್ವ ಗೊತ್ತಾಗುತ್ತದೆ. ವಿದ್ಯಾಭ್ಯಾಸದ ಬಾಬಿಗೆ 1957-58ರಲ್ಲಿ ಕೇವಲ ಒಂಬತ್ತು ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಲಾಗಿತ್ತು. ಆದರೆ ಈಗ 1959-60ನೆಯ ಸಾಲಿಗೆ 11 ಕೋಟಿ 32 ಲಕ್ಷ ರೂಪಾಯಿಗಳನ್ನೊದಗಿಸಲಾಗಿದೆ. ಅದೇ ರೀತಿ ವೈದ್ಯಶಾಖೆಯನ್ನು ತೆಗೆದುಕೊಂಡರೆ 1957-58ರಲ್ಲಿ ಮೂರು ಕೋಟಿ ಚಿಲ್ಲರೆಯನ್ನು ಮಾತ್ರ ಒದಗಿಸಲಾಗಿದ್ದಿತು. ಈಗ 1959-60ನೆಯ ಸಾಲಿಗೆ ಐದು ಕೋಟಿ ಆರು ಲಕ್ಷ ರೂಪಾಯಿಗಳನ್ನು ಒದಗಿಸಿರುವಂತೆ ಕಾಣುತ್ತದೆ. ವ್ಯವಸಾಯದ ಇಲಾಖೆಗೆ 1957-58ರಲ್ಲಿ ಒಂದು ಕೋಟಿ ಹದಿಮೂರು ಲಕ್ಷ ರೂಪಾಯಿಗಳನ್ನೊದಗಿಸಲಾಗಿದ್ದಿತು. ಈ ಸಾಲಿನಲ್ಲಿ ಎರಡು ಕೋಟಿ ಹದಿಮೂರು ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆಂಬುದು ನಮಗೆಲ್ಲರಿಗೂ ಕಂಡುಬರುತ್ತದೆ. ಇದೇ ರೀತಿ ನಾವು ಯಾವ ಒಂದು ಇಲಾಖೆಯನ್ನೇ ತೆಗೆದುಕೊಂಡರೂ ಆಯಾಯ ಇಲಾಖೆಗೆ ಹಿಂದೆ ಒದಗಿಸಿದ್ದ ಹಣಕ್ಕೂ ಈಗ ಒದಗಿಸಿರುವ ಹಣಕ್ಕೂ ಹೋಲಿಕೆ ಹಾಕಿ ನೋಡಿದರೆ ನಮ್ಮ ಸರ್ಕಾರ ಯಾವ ಒಂದು ವಿಷಯದಲ್ಲೂ ಹಿಂದೆ ಬಿದ್ದಿದೆ ಎಂಬುದು ಕಂಡುಬರುತ್ತಿಲ್ಲ. ಎಲ್ಲ ಬಾಬುಗಳಲ್ಲೂ ನಮ್ಮ ಸರ್ಕಾರ ಈ ಸಾಲಿನಲ್ಲಿ ಹೆಚ್ಚುಹೆಚ್ಚಾಗಿ ಹಣವನ್ನು ಖರ್ಚು ಮಾಡುವುದಕ್ಕೆ ಪ್ರಯತ್ನಮಾಡಿದೆ ಎಂಬುದು ಎಲ್ಲರಿಗೂ ಕಾಣುವಂಥ ವಿಚಾರವಾಗಿದೆ. ಆದರೆ ಈ ವಿಚಾರದಲ್ಲೇ ನಮ್ಮ ಕೆಲವು ಸ್ನೇಹಿತರು ಹೇಳಿದರು—ಹಣವನ್ನೇನೋ ಈಗ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ, ಆದರೆ ಅದನ್ನು ವರ್ಷಾಖೈರಿನವರೆಗೂ ಖರ್ಚುಮಾಡದೆ ಹಾಗೆಯೇ ಕೊನೆಗೆ ಉಳಿಸಿಬಿಡುತ್ತಾರೆ, ಆದಕ್ಕಾಗಿ ನಮ್ಮ ಸರ್ಕಾರದವರಿಗೆ ಅಭಿನಂದನೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಹೀಗೆ ಕೆಲವರು ಕೆಲಕೆಲವು ರೀತಿಯಲ್ಲಿ ಆರೋಪಣೆಮಾಡಿದ್ದಾರೆ. ಆದರೆ ಸಂಸ್ಥಾನದ ಪುನರ್ವಿಂಗಡಣೆಯಾದಮೇಲೆ ನಮ್ಮ ಸರ್ಕಾರ ಆಡಳಿತ ವ್ಯವಸ್ಥೆಯಲ್ಲಿ ಏನೇನು ತೊಂದರೆಗಳನ್ನು ಎದುರಿಸಬೇಕಾಗಿತ್ತೆಂಬುದರ ಹಿನ್ನೆಲೆಯನ್ನು ಜನರು ಅರಿತುಕೊಂಡರೆ ಆಗ ನಿಜವಾಗಿಯೂ ನಮ್ಮ ಸರ್ಕಾರದವರು ಈ ಎಲ್ಲ ಕೆಲಸಕಾರ್ಯಗಳನ್ನೂ ದಕ್ಷತೆಯಿಂದ ಚೆನ್ನಾಗಿಯೇ ಮುಂದುವರಿಸಿಕೊಂಡು ಬಂದಿದ್ದಾರೆ. ಅಂಥ ಒಂದು ಸ್ಥಿತಿಯಿಂದ ಬೇಗ ಬಿಡುಗಡೆಯಾಗಿ ಇಂಥ ಒಂದು ಪರಿಸ್ಥಿತಿಗೆ ಬಂದದ್ದನ್ನು ಎಂಬುದನ್ನು ನೋಡಿದರೆ ಯಾರಿಗೇ ಆಗಲೀ ನಮ್ಮ ಸರ್ಕಾರ ದಕ್ಷತೆಯಿಂದ ಕೆಲಸ ನಡೆಸಿದೆಯೆಂದು ಹೇಳದೆ ಇರುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಟೀಕೆಯನ್ನು ಯಾರು ಬೇಕಾದರೂ ಮಾಡಬಹುದು. ಆದರೆ ಟೀಕೆಮಾಡುವುದರಲ್ಲೂ ಎರಡು ವಿಧಗಳಿರುತ್ತವೆ. ಒಂದು ಕೇವಲ ಪ್ರಚಾರಕ್ಕಾಗಿ ಟೀಕೆಮಾಡತಕ್ಕಂಥ ವಿಧಾನ ಒಂದು. ಇನ್ನೊಂದು ಜನರಿಗೆ ಇನ್ನೂ ಹೆಚ್ಚಿನ ಅನುಕೂಲವಾಗಲಿ ಎಂದು ರಚನಾತ್ಮಕವಾಗಿ ಮಾಡತಕ್ಕ ಟೀಕೆಗಳೇ ಒಂದು ವಿಧ. ಹೀಗೆ ಈಗ ನಮ್ಮ ಸ್ನೇಹಿತರು ಮಾಡಿರತಕ್ಕ ಟೀಕೆಗಳಲ್ಲಿ ಕೆಲವು ರಚನಾತ್ಮಕವಾದವು ಇನ್ನು ಕೆಲವು ಅನಾವಶ್ಯಕವಾದಂಥ ಟೀಕೆಗಳಾಗಿವೆ. ನಾನು ಅನಾವಶ್ಯಕವಾದ ಟೀಕೆಗಳಿಗೆಲ್ಲ ಉತ್ತರಕೊಡದೆ ಕೇವಲ ರಚನಾತ್ಮಕವಾಗಿ ಮಾಡಿರುವಂಥ ಕೆಲವು ಟೀಕೆಗಳ ಉತ್ತರವನ್ನು ಕೊಡಬಯಸುತ್ತೇನೆ. ಆದಕ್ಕಾಗಿ ನಾನೀಗ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ.

ಸ್ವಾಮಿ, ನಮ್ಮ ಸಂಸ್ಥಾನದಲ್ಲಿರತಕ್ಕ ನಮ್ಮ ಸಿಬ್ಬಂದಿವರ್ಗಕ್ಕೆ ಸಂಬಳಸಾರಿಗೆಗಳೇನನ್ನು ನಾವೀಗ ಕೊಡುತ್ತಿದ್ದೇವೋ ಇದರಲ್ಲಿ ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೂ ಮತ್ತು ಕೇಂದ್ರ ಸರ್ಕಾರದವರು ಕೊಡುತ್ತಿರುವ ಸಂಬಳಸಾರಿಗೆಗಳಿಗೂ ಒಂದೊಂದು ವರ್ಗದಲ್ಲೂ ಈಗ ಬಹಳ ತಾರತಮ್ಯವಿರುತ್ತದೆ. ಈ ತಾರತಮ್ಯವನ್ನು ತೊಡೆದುಹಾಕಲು ಮತ್ತು ಎಲ್ಲರಿಗೂ ಒಂದೇರೀತಿಯ ಸಂಬಳಸಾರಿಗೆಗಳಿರುವಂತೆ ಮಾಡಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲ ನಮ್ಮ ಸರ್ಕಾರದವರು ಕೈಗೊಂಡಿದ್ದಾರೆ. ಆದರೆ ಈ ವಿಚಾರ ಕೇವಲ

(ಶ್ರೀ ಎ. ವಿ. ನರಸಿಂಹರೆಡ್ಡಿ)

ಒಂದು ಪ್ರಾಂತ್ಯಕ್ಕೆ ಸಂಬಂಧಪಟ್ಟುದಲ್ಲ. ಈಗ ಈ ಒಂದು ತಾರತಮ್ಯವನ್ನು ಸರಿಪಡಿಸತಕ್ಕ ಬಗ್ಗೆ ನಮ್ಮ ಸರ್ಕಾರದವರು ಕೇಂದ್ರ ವೇತನ ಸಮಿತಿಗೆ ನೀಡಿರತಕ್ಕ ಸಲಹೆಗಳ ವಿಚಾರದಲ್ಲಿ ನಾನು ಎರಡು ಮಾತುಗಳನ್ನಾಡಬಯಸುತ್ತೇನೆ. ಈ ದಿವಸ ಎಲ್ಲಾ ರಾಜ್ಯ ಸರ್ಕಾರಗಳೂ ಕೇಂದ್ರ ಸರ್ಕಾರದ ಅಧೀನದಲ್ಲಿ ಏರ್ಪಾಡಾಗಿರುತ್ತವೆ. ಹೀಗಿರುವಾಗ ಇಂದು ದೇಶದಲ್ಲಿ ಯಾವ ರೀತಿ ಪ್ರಜೆಗಳಿಗೆ ವ್ಯಕ್ತಿ ಸ್ವಾತಂತ್ರ್ಯ ಮತ್ತು ವಾಕ್ ಸ್ವಾತಂತ್ರ್ಯಗಳಿರುತ್ತವೆಂಬುದನ್ನು ಗಮನದಲ್ಲಿಟ್ಟುಕೊಂಡು ಒಂದು ಮಾತನ್ನು ಹೇಳುವುದಾದರೆ, ಈ ವರ್ಗದ ಜನರಿಗೆ ಅವರ ಸಂಬಳ ಸಾರಿಗೆಗಳಲ್ಲಿರತಕ್ಕ ವ್ಯತ್ಯಾಸವನ್ನು ಹೋಗಲಾಡಿಸದೆ ಅತೃಪ್ತಿಯನ್ನುಂಟುಮಾಡಿದರೆ ನಾವು ಮುಂದೆ ದೇಶದಲ್ಲಿ ಸರ್ವ ಸಬೇಕಾಗಿರತಕ್ಕ ಅನೇಕಾನೇಕ ಯೋಜನೆಗಳ ಕಾರ್ಯಗಳನ್ನು ಸುಗಮವಾಗಿ ಸಾಧಿಸಲಿಕ್ಕಾಗುವುದಿಲ್ಲ. ಶ್ರೀ ಕೆ. ಹನುಮಂತಯ್ಯನವರು ಹೇಳಿರುವಂತೆ ಈಗ I.A.S. ಮತ್ತು I.P.S. ವರ್ಗಗಳಿಗೆ ಜನರನ್ನು ತೆಗೆದುಕೊಳ್ಳುವ ಪರಿಸ್ಥಿತಿಯಿರುವುದರಿಂದ ಈ ಕಾರ್ಯದಬಗ್ಗೆ ಕೇಂದ್ರದಲ್ಲೊಂದು P.S.C. ಮತ್ತು ಪ್ರತಿಯೊಂದು ಪ್ರಾಂತ್ಯ ಮತ್ತು ರಾಷ್ಟ್ರದಲ್ಲೂ ಒಂದೊಂದು P.S C. ಇರುವುದು ಸರಿಯಲ್ಲ. ಇದು ಈ ರೀತಿ ಇರಕೂಡದು. ಇದರಿಂದ ಆಡಳಿತವರ್ಗದಲ್ಲಿ ಅತೃಪ್ತಿಯುಂಟಾಗಿ ಆಡಳಿತದ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಆದುದರಿಂದ ಕೇಂದ್ರದ ಹಾಗೂ ಪ್ರಾಂತ್ಯ ಸರ್ಕಾರದ ಪಬ್ಲಿಕ್ ಸರ್ವೀಸ್ ಕಮೀಷನ್ ಮಂಡಳಿಗಳು ಒಂದುಕಡೆ ಕುಳಿತು ಈಗೇನು ಅಧಿಕಾರವರ್ಗದಲ್ಲಿ ಒಂದು ಅತೃಪ್ತಿ ಬೆಳೆಯುತ್ತಿದೆ ಅದನ್ನು ತೆಗೆಯುವುದಕ್ಕೆ ಕೂಡಲೇ ಏರ್ಪಾಡುಮಾಡಬೇಕು. ಈ ಕಾರ್ಯವನ್ನು ಎಷ್ಟುಬೇಗ ಮಾಡಿದರೆ ದೇಶಕ್ಕೆ ಅಷ್ಟೂ ಒಳ್ಳೆಯದೆಂದು ಹೇಳುತ್ತೇನೆ. ದೇಶಾದ್ಯಂತವೂ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ತರಬೇಕೆಂಬುದು ನಮ್ಮ ಧ್ಯೇಯವೆಂದು ನಾವು ಹೇಳಿಕೊಳ್ಳುತ್ತಿದ್ದೇವೆ. ಅದನ್ನು ನಾವು ಕಾರ್ಯಗತಮಾಡಲು ಹೊರಟಿರತಕ್ಕ ಮಾರ್ಗದ ಬಗ್ಗೆ ಈಗಾಗಲೇ ಅನೇಕ ಟೀಕೆಗಳನ್ನು ಕೇಳುತ್ತಿದ್ದೇವೆ. ಆದರೆ ನಮ್ಮ ಈ ಮಾರ್ಗದಲ್ಲಿ ಎಷ್ಟೆಷ್ಟು ತೊಂದರೆಗಳಿವೆ, ಯಾವ ಯಾವ ಏನೇನು ತೊಂದರೆಗಳಿವೆ ಎನ್ನುವುದನ್ನು ಗಮನಿಸಿದರೆ ನಾನು ಆ ಟೀಕೆಗಳನ್ನೆಲ್ಲಾ ಸ್ವೀಕಾರಮಾಡಲು ಹಿಂದೆಗೆಯುವುದಿಲ್ಲ. ನಾವು ಈ ದಿವಸ ಯಾವ ಒಂದು ಸಿಬ್ಬಂದಿವರ್ಗದಮೂಲಕ ಮತ್ತು ಯಾವ ಒಂದು ಸರ್ಕಾರಿ ಆಡಳಿತ ಯಂತ್ರದ ಮೂಲಕ ನಮ್ಮ ಕೆಲಸಕಾರ್ಯಗಳನ್ನೆಲ್ಲಾ ಒಂದು ಸಮನ್ವಯಮಾಡಿಕೊಂಡು ಕಾರ್ಯಗತಮಾಡಬೇಕೆಂದು ಏರ್ಪಾಡು ಮಾಡುತ್ತಿದ್ದೇವೋ ಅಂಥ ವರ್ಗದಲ್ಲಿರತಕ್ಕ ಅತೃಪ್ತಿ ಅಸಮಾಧಾನಗಳನ್ನು ಹೋಗಲಾಡಿಸಲು ನಾವು ಮೊದಲು ಪ್ರಯತ್ನಮಾಡಬೇಕು. ಅದರಿಂದ ಈ ಸಿಬ್ಬಂದಿ ವರ್ಗದಲ್ಲಿರತಕ್ಕ ಸಂಬಳ ಸಾರಿಗೆಗಳ ವ್ಯತ್ಯಾಸಗಳು, ಏರುಪೇರುಗಳೇನಿವೆ, ಅವುಗಳ ಕನಿಷ್ಠ ಮತ್ತು ಅಂತಿಮ ಪರಮಾವಧಿಯ ವ್ಯತ್ಯಾಸವೇನಿದೆ ಅದನ್ನು ಕಡಮೆ ಮಾಡಬೇಕು. ಕನಿಷ್ಠ ಸಂಬಳ ಒಂದು ಆದರೆ ಹೆಚ್ಚಿನ ಸಂಬಳ ಹತ್ತರಷ್ಟಿರಬೇಕು. ಅದಕ್ಕಿಂತಲೂ ಹೆಚ್ಚು ಯಾವ ರೀತಿಯಲ್ಲಿಯೂ ಇರಬಾರದು. ಸಿಬ್ಬಂದಿಯ ಸಂಬಳ ಸಾರಿಗೆಗಳಲ್ಲಿರುವ ವ್ಯತ್ಯಾಸವನ್ನು ಎಷ್ಟು ಬೇಗ ನಮ್ಮ ಆಡಳಿತಗಾರರು ಕಾರ್ಯಗತ ಮಾಡುತ್ತಾರೆಯೋ ಅಷ್ಟು ಬೇಗ ಈ ದೇಶದ ಪ್ರಗತಿ ಸಾಧನೆಯಾಗುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

5 P. M.

ಸಿಬ್ಬಂದಿಯಮೇಲೆ ದೇಶದ ಹಣದ ಅತ್ಯಂತ ಹೆಚ್ಚಿನ ಭಾಗವನ್ನು ಖರ್ಚು ಮಾಡತಕ್ಕ ಪರಿಸ್ಥಿತಿ ಎಲ್ಲ ಸಂಸ್ಥಾನಗಳಲ್ಲಿಯೂ ಇದೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವವರೆಲ್ಲರೂ, ಪ್ರಜಾಪ್ರಭುತ್ವವು ಹೆಚ್ಚಿನ ಖರ್ಚಿನಿಂದ ಕೂಡಿರತಕ್ಕದ್ದು ಎಂದು ಹೇಳುತ್ತಾರೆ. ಅದನ್ನು ಎಷ್ಟೇ ಮಾನ್ಯ ಮಾಡಬಹುದಾದರೂ ಕೂಡ ದೇಶದ ಆದಾಯದಲ್ಲಿ ಶೇಕಡ 65 ರಷ್ಟನ್ನು ನಾವು ಸಿಬ್ಬಂದಿ ವರ್ಗದಮೇಲೆ ಖರ್ಚು ಮಾಡಿ, ಉಳಿದ 35ರಷ್ಟು ಹಣದಲ್ಲಿ ಮಾತ್ರ Welfare State ಕಟ್ಟುತ್ತೇವೆನ್ನುವ ಕಲ್ಪನೆಯನ್ನು ಮಾಡಿಕೊಂಡರೆ, ಅದು ತಪ್ಪಾಗುತ್ತದೆ. ಸಿಬ್ಬಂದಿ ವರ್ಗದಮೇಲೆ ಖರ್ಚು ಮಾಡುವುದರಲ್ಲಿ ಆದಾಯದ ಮೂರನೆಯ ಒಂದು ಭಾಗದಷ್ಟಕ್ಕಿಂತ ಹೆಚ್ಚು ಖರ್ಚು ಮಾಡುವುದು ದುಬಾರಿ ಎಂದು ನನ್ನ ಅಭಿಪ್ರಾಯ. ಈ ಅಂಶಕ್ಕೆ ಆಡಳಿತದಲ್ಲಿರತಕ್ಕ ಮುಖಂಡರು ಗಮನ ಕೊಡಬೇಕು. ಸಿಬ್ಬಂದಿಗೆ ದೇಶದ ಆದಾಯದ ಹೆಚ್ಚಿನ ಭಾಗವನ್ನು ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಡಕೂಡದು. ದೇಶದ ಮೇಲೆ ತೆರಿಗೆಗಳನ್ನು ಹಾಕುತ್ತಿದ್ದೀರಿ. ಸಂಪನ್ಮೂಲಗಳನ್ನು ಹೆಚ್ಚಿಸಲು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂಬುದನ್ನು ಒಪ್ಪುತ್ತೇನೆ. ಜನರಿಗೆ ಕೊಡುವ ಶಕ್ತಿ ಹೆಚ್ಚಾಗಿರಬಹುದು. ತೆರಿಗೆಗಳನ್ನು ಹಾಕಿದರೆ ಕೊಡುವುದಕ್ಕೆ ಸಾಮರ್ಥ್ಯ ವಿರಬಹುದು. ಅಷ್ಟಾದರೂ ಕೂಡ.....

SrI T. MARIAPPA.—Government would certainly be grateful if a little more light is thrown on this aspect even by the members opposite because on one side there is a complaint that the staff is increasing, emoluments are increasing and that there is less amount for real development work. Of course all are interested in our employees. But to what extent can we spend on more staff is also a pertinent question.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರಜಾಪ್ರಭುತ್ವದಲ್ಲಿ ಜನಗಳಮೇಲೆ ಸತತವಾಗಿ ಹೊರೆಯನ್ನು ಏರಿಸುತ್ತ ಹೋದರೆ ಅದು ಒಂದಲ್ಲ ಒಂದು ದಿವಸ ಕುಸಿದು ಬೀಳುತ್ತದೆ. ನಾವು ಜನಗಳಿಂದ ತೆರಿಗೆಯ ಮೂಲಕ ದೇಶದ ಆದಾಯವನ್ನು ನಿರೀಕ್ಷೆ ಮಾಡುತ್ತೇವೆ. ಅದಕ್ಕೆ ಸಾಕಷ್ಟು ಪ್ರತಿಫಲವನ್ನು ಒದಗಿಸಿ ಕೊಡುವ ಪ್ರಯತ್ನವನ್ನು ಮಾಡದೆ ಹೋದರೆ, ಅದರ ಕಡೆಗೆ ಪ್ರಮುಖವಾದ ಗಮನವನ್ನು ಕೊಟ್ಟು ಅಂಥ ಕಾರ್ಯ ಚಟುವಟಿಕೆಗಳಿಗೆ ಖರ್ಚು ಮಾಡತಕ್ಕ ವಿಷಯಗಳ ಕಡೆಗೆ ಗಮನ ಕೊಡದೆ ಹೋದರೆ ಇಂದಲ್ಲ ಇನ್ನೊಂದು ದಿವಸ ಪ್ರಜಾಪ್ರಭುತ್ವ ಯಂತ್ರವು ಕುಸಿದು ಬೀಳುತ್ತದೆ. ಆ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ಅದನ್ನು ಅನುಭವಸ್ಥರಾದ ಆಡಳಿತಗಾರರು ತೀಕ್ಷ್ಣವಾಗಿ ಪರಿಶೀಲಿಸಿ ಸರಿಪಡಿಸಬೇಕೆಂದು ಸಲಹೆ ಮಾಡುತ್ತೇನೆ.

ನಮ್ಮ ದೇಶ ಹಳ್ಳಿಗಳ ದೇಶ. ವ್ಯವಸಾಯವನ್ನೇ ನಂಬಿರುವ ಜನ ನಾವು. ಈ ದೇಶದ ಅಭಿವೃದ್ಧಿ ಎಂದರೆ ಹಳ್ಳಿಯ ಅಭಿವೃದ್ಧಿ ಎಂದು ನನ್ನ ಕಲ್ಪನೆ. ಹಳ್ಳಿಗಳ ಅಭಿವೃದ್ಧಿಯನ್ನು ನಾವು ಮಾಡಲು, ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ

ಮಾಡಿದ್ದೇವೆ, ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲು ಕೆಲಸ ಮಾಡುತ್ತಿದ್ದೇವೆ. ಈ ಯೋಜನೆಗಳನ್ನು ಕೈಕೊಂಡಿದ್ದರೂ ಪರಿಸ್ಥಿತಿ ಯಾವ ರೀತಿಯಲ್ಲಿ ಸುಧಾರಿಸಿದೆ ಎಂದು ಕೆಲವರು ಸ್ನೇಹಿತರು ಕೇಳಿದರು. ಹಳ್ಳಿಯಲ್ಲಿ ಹೋಗಿ ನಮ್ಮ ಮನೆಯ ಪಕ್ಕದಲ್ಲಿರುವವನ ಜೀವನದ ಸ್ಥಿತಿಯನ್ನು ನೋಡಿ ಅಳತೆ ಮಾಡಿ ಹೇಳುವಂಥ ವಿಷಯವಲ್ಲ ಇದು. ಇಡೀ ದೇಶದ ಸಮಗ್ರ ದೃಷ್ಟಿಯಿಂದ, ದೇಶದ ಆರ್ಥಿಕ ಸ್ಥಿತಿ ಸುಧಾರಿಸಿದೆಯೇ ಇಲ್ಲವೇ, ಪ್ರತಿ ವ್ಯಕ್ತಿಯ ಆರ್ಥಿಕ ಸ್ಥಿತಿ ಹೆಚ್ಚಾಗಿದೆಯೇ ಇಲ್ಲವೇ, ಪಂಚವಾರ್ಷಿಕ ಯೋಜನೆ ಕಾರ್ಯಗತಮಾಡುವುದಕ್ಕೆ ಮೊದಲು ಏನಿತ್ತು, ಈಗ ಏನಿದೆ ಎನ್ನುವುದನ್ನು ಪರಿಶೀಲನೆ ಮಾಡಿ ತಜ್ಞರು ತಿಳಿಸಿರುತ್ತಾರೆ. ಪ್ರತಿಯೊಬ್ಬ ಭಾರತೀಯನ ಆದಾಯವೂ ಮೊದಲು ಇದ್ದುದಕ್ಕಿಂತಲೂ ಮೊದಲನೆಯ ಪಂಚವಾರ್ಷಿಕ ಯೋಜನೆ ಮುಗಿದಮೇಲೆ ಶೇಕಡ 17ರಷ್ಟು ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ಹಾಗೆಯೇ ಎರಡನೆ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಿದಮೇಲೆ ಪ್ರತಿ ವ್ಯಕ್ತಿಯ ಆದಾಯ ಶೇಕಡ 25 ರಷ್ಟು ಹೆಚ್ಚಾಗುತ್ತದೆಂದು ಲೆಕ್ಕಾಚಾರ ಹಾಕಿದ್ದಾರೆ. ಇದರಲ್ಲಿ ಸ್ವಲ್ಪ ಹೆಚ್ಚುಕಡಮೆಯಾಗಬಹುದು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿನ ಎಲ್ಲ ಅಂಶಗಳನ್ನೂ ಕಾರ್ಯಗತ ಮಾಡುವುದಕ್ಕೆ ಅವಕಾಶವಾಗದೆ ಹೋದದ್ದರಿಂದ, ತಾವುಗಳೆಲ್ಲರೂ ತಿಳಿದಿರುವ ಹಾಗೆ, ಮೊದಲ ಎರಡು ಮೂರು ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚುಮಾಡಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾಗಿತ್ತೋ ಅಷ್ಟನ್ನು ಮಾಡಲು ಆಗಲಿಲ್ಲ. ಪಂಚವಾರ್ಷಿಕ ಯೋಜನೆಯ ಗುರಿಯನ್ನು ಮುಟ್ಟದೆ ಹೋದರೆ ಪರಿಸ್ಥಿತಿ ಏರು ಪೇರು ಆಗಬಹುದು. ಇದನ್ನು ಸಂಪೂರ್ಣವಾಗಿ ಕಾರ್ಯಗತ ಮಾಡಿದರೆ ಅದರಿಂದ ಉತ್ತಮ ಪರಿಸ್ಥಿತಿ ನಮ್ಮ ದೇಶದಲ್ಲಿ ಉಂಟಾಗುತ್ತದೆ ಎನ್ನುವುದನ್ನು ಮಾತ್ರ ನಾವು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

ನಾನು ಹಳ್ಳಿಗಳ ವಿಷಯವನ್ನು ಹೇಳುತ್ತಿದ್ದೆ. ನಮ್ಮ ದೇಶದಲ್ಲಿ ಈ ದಿವಸ ಪ್ರತಿವಾರಕ್ಕೆ ಒಂದು ಲಕ್ಷ ಪ್ರಜಾಸಂಖ್ಯೆ ಜಾಸ್ತಿಯಾಗುತ್ತಿದೆ. ಹತ್ತು ವರ್ಷಗಳಲ್ಲಿ ಐದು ½ಕೋಟಿ ಜನ ಜಾಸ್ತಿಯಾಗುತ್ತಿದ್ದಾರೆ. ಇನ್ನೊಂದು ಕಡೆ ಉಳುಮೆಯ ಭೂಮಿ ತಲೆಯೊಂದಕ್ಕೆ ಕೇವಲ ಒಂದು ಎಕರೆ ಚಿಲ್ಲರೆ ಬರುತ್ತದೆ. ನಮ್ಮ ದೇಶದಲ್ಲಿ ವ್ಯವಸಾಯವನ್ನೇ ನಂಬಿರುವವರು ಶೇಕಡ 76–77 ಜನರಿದ್ದಾರೆ. ನಾವುಗಳೆಲ್ಲರೂ ವ್ಯವಸಾಯವನ್ನೇ ಅವಲಂಬಿಸಿ ಮುಂದುವರಿದರೆ ನಿಜವಾಗಿಯೂ ಈ ದೇಶದಲ್ಲಿ ಸಂಪದ್ಯುಕ್ತರಾದ ಪ್ರಜೆಗಳಾಗಿರುವುದಕ್ಕಾಗುವುದಿಲ್ಲ. ಸರ್ಕಾರದವರು ಏನಾದರೂ ಮಾರ್ಗಗಳನ್ನು ಹುಡುಕಬೇಕು. ಈಗ ಸಣ್ಣ ಕೈಗಾರಿಕೆಗಳನ್ನು ಹಳ್ಳಿಗಾಡುಗಳಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆ ಪ್ರಯತ್ನವು ಇನ್ನೂ ಸ್ವಲ್ಪ ಹೆಚ್ಚಿನ ಮೆಹನತ್ತಿನಿಂದ ಆಗಬೇಕು. ಹಳ್ಳಿಯ ಜನಗಳ ಆದಾಯ ಮೂಲವನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದು ವ್ಯವಸಾಯದ ಹೊರತಾಗಿ ಮಾಡಬೇಕಾದ ಕಾರ್ಯ.

ವ್ಯವಸಾಯದ ವಿಷಯದಲ್ಲಿ ನಮ್ಮ ಸ್ನೇಹಿತರನೇಕರು ಪ್ರಸ್ತಾಪ ಮಾಡಿದರು. ಇದು ಇನ್ನೂ ಚರ್ಚಿತವಾಗಬೇಕಾದ ವಿಷಯ. Co-operative farming, ಸಹಕಾರ ಪದ್ಧತಿಯಿಂದ ವ್ಯವಸಾಯವನ್ನು ಮಾಡತಕ್ಕ ವಿಷಯವಾಗಿದೆ. ಈಗಾಗಲೇ ತಾವೆಲ್ಲ ಎರಡು ರೀತಿಯ ಅಭಿಪ್ರಾಯಗಳನ್ನೂ ಕೇಳಿದ್ದೀರಿ. ಈ ವಿಷಯದಲ್ಲಿ ನಾಗಪುರದ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಪಂಡಿತ ಜವಾಹರಲಾಲ್ ನೆಹರೂ ಅವರು ಅದರ ವಿಷಯವನ್ನು ಪದೇ ಪದೇ ಪ್ರಸ್ತಾಪ ಮಾಡುತ್ತಿದ್ದಾರೆ. ದೇಶದಲ್ಲಿ ಇನ್ನೂ ಕೆಲವರು ಮುಖಂಡರು ಇದಕ್ಕೆ ವಿರೋಧಾಭಿಪ್ರಾಯಗಳನ್ನೂ ವ್ಯಕ್ತಪಡಿಸಿದ್ದಾರೆಂಬುದು ನಮ್ಮ ಗಮನದಲ್ಲಿದೆ. ನನ್ನ ವೈಯಕ್ತಿಕ ಅಭಿಪ್ರಾಯಗಳನ್ನು ಈ ಸಮಯದಲ್ಲಿ ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ಒಬ್ಬ ವ್ಯವಸಾಯಗಾರ. ಸಹಕಾರ ವ್ಯವಸಾಯವೆಂದರೆ ಇಡೀ ಭೂಮಿಯ ಹಿಡುವಳಿಯನ್ನು ಸಹಕಾರ ಸಂಘಗಳಿಗೆ ಕೊಟ್ಟು, ವ್ಯವಸಾಯ ಮಾಡಬೇಕು ಎನ್ನುವ ವಿಷಯದಲ್ಲಿ ಹೇಳುತ್ತೇನೆ. ಇಂಥ ವ್ಯವಸಾಯ ನಡೆಯುವುದಿಲ್ಲ. ಈ ದಿವಸ ನಮ್ಮ ಸರ್ಕಾರಗಳು ಸಹಕಾರ ವ್ಯವಸಾಯ ಮಾಡಲು ಸಹಕಾರ ಸಂಘಗಳಿಗೆ ಭೂಮಿಯನ್ನು ಕೊಟ್ಟು ಕೆಲವು ಸಂಸಾರಗಳನ್ನೂ ಇಟ್ಟು ವ್ಯವಸಾಯ ಮಾಡಿ ಬಂದದ್ದನ್ನು ಹಂಚಿಕೊಳ್ಳಿ ಎಂದು ಹೇಳಿದ ಕಡೆಗಳಲ್ಲಿ ಯಾವ ರೀತಿಯಾಗಿದೆ ಎಂಬುದನ್ನು ಹೇಳುತ್ತೇನೆ. ಆ ಪ್ರಯತ್ನ ವಿಫಲವಾಗಿದೆ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ನಮ್ಮ ದೇಶದಲ್ಲಿ ಹಿಡುವಳಿಯು ಹರಿದು ಹಂಚಿಹೋಗಿದೆ. ಅವುಗಳು ಈಗಿರುವ ರೀತಿಯಲ್ಲಿ ತುಣಕು ಮುಣಕು ಆಗುವುದಕ್ಕೆ ಅವಕಾಶವಿದೆ. ಅದೇ ರೀತಿ ಮುಂದುವರಿಸಿಕೊಂಡು ಹೋದರೆ ನಮ್ಮ ಭೂಮಿಯಿಂದ ನಾವು ಸಾಕಷ್ಟು ಉತ್ಪಾದನೆಯನ್ನು ಪಡೆಯುವುದಕ್ಕಾಗುವುದಿಲ್ಲ. ಪ್ರಮುಖ ವಿಷಯ ನಾಗಪುರದ ಅಧಿವೇಶನದಲ್ಲಿ ಏನು ಆಗಿದೆ ಅದರಂತೆ Service Co-operatives ನಮ್ಮಲ್ಲಿ ಆಗಬೇಕು. ಒಂದು ಗ್ರಾಮದಲ್ಲಿ ಅನೇಕ ಭೂ ಹಿಡುವಳಿದಾರರಿದ್ದಾರೆ. ಇಡೀ ಭೂಮಿಯನ್ನು, ಒಂದು ಸಮಗ್ರ ಗ್ರಾಮದಲ್ಲಿ ಸಿಕ್ಕತಕ್ಕ ವ್ಯವಸಾಯದ ಕೆಲಸಗಾರರೆಷ್ಟಿದ್ದಾರೋ, ಅವರಿಗೆ ಏನೇನು ಸಲಕರಣೆಗಳು ಬೇಕೋ, ಅವುಗಳೆಲ್ಲವನ್ನೂ ಸಂಗ್ರಹಿಸಿ ಒಟ್ಟಿಗೆ ವ್ಯವಸಾಯವನ್ನು ಮಾಡತಕ್ಕದ್ದು Service Co-operatives. ಇದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕೇ ಹೊರತು Co-operative Farming ಗೆ ಅಲ್ಲ. ಇದರಲ್ಲಿ ಎರಡು ವ್ಯತ್ಯಾಸವಿದೆ. Service Co-operatives ನಲ್ಲಿ ownership ಇರುತ್ತದೆ. ಅವರೇ ಒಟ್ಟಿಗೆ ಫಲದಾಯಕವಾಗಿ ಕೆಲಸ ಮಾಡುವುದಕ್ಕೆ ಸಲಕರಣೆಗಳನ್ನೆಲ್ಲ ಒಟ್ಟಿಗೆ ಸೇರಿಸಿ ವ್ಯವಸಾಯ ಮಾಡುತ್ತಾರೆ. ಆ ರೀತಿಯಲ್ಲದೆ ಇವೊತ್ತು ವ್ಯವಸಾಯಗಾರರಿಗೆ ಬೇರೆ ಮಾರ್ಗವೇ ಕಾಣುವುದಿಲ್ಲ. ನಮ್ಮ ಭೂಮಿಗಳಿಂದ ಬಾಳುವಂಥ ಮಾರ್ಗ ಕಾಣುವುದಿಲ್ಲ. ಈ ದಿವಸ ನಮ್ಮಲ್ಲಿ ಸಹಕಾರ ಸಂಸ್ಥೆಗಳು ಅನೇಕವಾಗಿ ಆಗುತ್ತಿವೆ. ಸಹಕಾರದ ಮೂಲಕವೇ ನಮ್ಮ ಪ್ರಗತಿ ಮತ್ತು ಭಾರತದ ಪ್ರಗತಿ ಎಂದು ನಂಬಿರತಕ್ಕ ಪಕ್ಷದವನು ನಾನು.

ಇದರಲ್ಲಿರುವ ವ್ಯತ್ಯಾಸವನ್ನು ನಾನು ನೋಡುವುದಾದರೆ ಹೊರದೇಶಗಳಲ್ಲಿರುವಂತೆ ಇಲ್ಲಿಯೂ Co-operative farming ಮಾರ್ಗದಲ್ಲಿ ಹೋದರೆ ನಮ್ಮ ದೇಶದಲ್ಲಿ ಜಮೀನಿನಿಂದ ಸಾಕಷ್ಟು ಉತ್ಪನ್ನ ಬರುವುದಿಲ್ಲ. ಅದನ್ನು ಪ್ರಾಯಶಃ ಕಾರ್ಯಗತ ಮಾಡಲಾರರು ಎಂದು ನಂಬಿಕೊಂಡಿದ್ದೇನೆ. ಎಲ್ಲೋ ಹೆಸರಿಗೆ "ಅಲ್ಪ ಕಾಲಾವಧಿ ಸಾಲ, ದೀರ್ಘ ಕಾಲಾವಧಿ ಸಾಲ" ವೆಂದು ಹೇಳಿ ಒಂದು ಹೋಬಳಿಗೆ ಎರಡು ಸರ್ಕಲ್ಲುಗಳನ್ನು ಮಾಡಿ ಹದಿನೈದು, ಇಪ್ಪತ್ತು ಹಳ್ಳಿಗಳ ಸಹಕಾರ ಸಂಘಗಳ ಸಂಸ್ಥೆಗಳನ್ನು ಈ ರೀತಿಯಾಗಿ ಡೆವಲಪ್ಪುಮಾಡಿ ಸಹಾಯವನ್ನು ಒದಗಿಸ

(ಶ್ರೀ ಎ. ವಿ. ನರಸಿಂಹರೆಡ್ಡಿ)

ಲಾಗುತ್ತಿದೆ. ಅದರಿಂದ ವ್ಯವಸಾಯಗಾರರ ಸ್ಥಿತಿ ಉತ್ತಮವಾಗುತ್ತದೆ ಎಂದು ನಂಬುವುದಕ್ಕಾಗುವುದಿಲ್ಲ. ಗ್ರಾಮಾಂತರಗಳಲ್ಲಿ ವ್ಯವಸಾಯಗಾರರಿಗೆ ಏನೇನು ಸಹಾಯವನ್ನು ಒದಗಿಸಬೇಕು ಎನ್ನುವುದನ್ನು ಅನೇಕ ಸ್ನೇಹಿತರು ಚರ್ಚೆಮಾಡಿ ಹೇಳುತ್ತ ಎತ್ತು ಬಂಡಿಗಳಿಗೆ ಬದಲಾಗಿ ಕ್ರಮೇಣ ಟ್ರಾಕ್ಟರಿನ ಮೂಲಕ ವ್ಯವಸಾಯವನ್ನು ಮಾಡಲು ಅನುಕೂಲವಾಡಬೇಕು ಎಂದು ಹೇಳಿದರು. ಇದರಿಂದ ರೈತನಿಗೆ ಹೆಚ್ಚಿನ ಉಪಯೋಗವಾಗುವುದಿಲ್ಲ. ನಾಗಪುರದ ಅಧಿವೇಶನದಲ್ಲಿ ಇಟ್ಟರತಕ್ಕ ನಿರ್ಣಯವೇನು ಎನ್ನುವುದನ್ನು ತಿಳಿದುಕೊಂಡಿದ್ದೇನೆ. ನಾನೂ ಒಬ್ಬ ವ್ಯವಸಾಯಗಾರನೇ. ನನ್ನ ಅಭಿಪ್ರಾಯದಲ್ಲಿ Service Co-operatives ಮುಂದುವರಿಯದೆ ವ್ಯವಸಾಯ ಅಭಿವೃದ್ಧಿಯಾಗುವುದಕ್ಕೆ ಅವಕಾಶವಾಗುವುದಿಲ್ಲ. ಕಾರಣವೇನು ಎಂದರೆ ಸಹಕಾರ ಸಂಘಗಳನ್ನು ಒಟ್ಟಿಗೆ ಒಂದು ಯೋಜನೆಯಂತೆ ಸ್ಥಾಪನೆ ಮಾಡಿದರೆ ಸರಿಯಾದ ರೀತಿಯಲ್ಲಿ ರೈತರಿಗೆ ಸಹಾಯ ವ್ಯವಸ್ಥೆ ಮಾಡುವುದಕ್ಕಾಗುವುದಿಲ್ಲ. ಸಂಸ್ಥಾನದಲ್ಲಿರುವ ಸ್ಥಿತಿಯಲ್ಲಿ ಹಣಕಾಸಿನ ಸಿಬ್ಬಂದಿಯನ್ನೂ ಕೊಟ್ಟು ಚೆನ್ನಾಗಿ ವ್ಯವಸ್ಥೆ ಮಾಡುವುದಕ್ಕೆ Service Co-operativeಗಳು ಮುಂದಕ್ಕೆಬರಬೇಕು. ನಮ್ಮ ದೇಶದ ವ್ಯವಸಾಯದ ಉತ್ಪನ್ನದ ದೃಷ್ಟಿಯಿಂದ ಬೇರೆ ವಿಧ ಸರಿಹೋಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅದರಂತೆ ಮೊಟ್ಟಮೊದಲು Service Co-operatives ಬರಬೇಕಾಗುತ್ತದೆ.

ಶ್ರೀ ಟಿ. ಮರಿಯಪ್ಪ.—ಹಿಂದೆ ಸಮಗ್ರ ಸೇವಾ ಸಹಕಾರ ಸಂಘಗಳಿದ್ದಂತೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನನ್ನ ಸ್ನೇಹಿತರಾದ ಶ್ರೀ ನರಸಿಂಹನ್ ಅವರು ಮೊನ್ನೆ ದಿವಸ ಮಾತನಾಡುತ್ತಾ ಒಂದು ಮಾತನ್ನು ಹೇಳಿದರು: ಪ್ರಸಕ್ತ ಸಾಲಿನ ಸರಕಾರದ ಆಯವ್ಯಯ ಪಟ್ಟಿಯನ್ನು ನೋಡಿದರೆ ಎಲ್ಲಿಯೂ ದೇಶ ಅಭಿವೃದ್ಧಿಯಾದಂತೆ ಕಾಣುವುದಿಲ್ಲ. ಪ್ರಸಕ್ತ ಸಾಲಿನ ಕೇಂದ್ರ ಸರಕಾರದ ಆಯವ್ಯಯ ಪಟ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು. ಈ ಬಡ್ಜೆಟ್ಟನ್ನು ಪರಿಶೀಲನೆ ಮಾಡಿದಂತೆ ಕಾಣುತ್ತದೆ. ಅವರು ಮಾತನಾಡುತ್ತ ಮೈಸೂರು ಸರಕಾರದವರು ಕೂಡ Diesel oil ಮೇಲೆ ತೆರಿಗೆ ಹಾಕುವ ಪದ್ಧತಿಯನ್ನು ನೋಡಿದರೆ ಬಂಡವಾಳಶಾಹಿ ದೃಷ್ಟಿಯ ನೀತಿ ಎದ್ದು ಕಾಣುತ್ತದೆ ಎಂದು ಆರೋಪಣೆಯನ್ನು ಮಾಡಿದರು. ಇದು ಸಾಮಾನ್ಯಮನುಷ್ಯನ ತೆರಿಗೆ ಎಂದು ಹೇಗೆ ಹೇಳಿದರೋ ನನಗೆ ಅರ್ಥವಾಗುವುದಿಲ್ಲ. ಇಲ್ಲಿ ನಮ್ಮ ಸಂಸ್ಥಾನದಿಂದಲೇ ಒದಗಿಸಿ ಕೊಡಲು ಅವಕಾಶವಿಲ್ಲ. ಕೇಂದ್ರದವರು ಈ ತೆರಿಗೆ ಈಗಿನ ಮಿಲ್ಲುಗಳಮೇಲೆ ಬೀಳತಕ್ಕದ್ದು. Diesel oilನ್ನು ಉಪಯೋಗಿಸುವವನು common man ಆಗುತ್ತಾನೆಯೇ! ಈ Diesel oil ನ್ನು ಲಾರಿಗಳನ್ನು, ಬಸ್ಸುಗಳನ್ನು ಓಡಾಡುವುದಕ್ಕೆ ಉಪಯೋಗಿಸುವುದರಿಂದ ಅವರ ಮೇಲೆ ಬೀಳುತ್ತದೆ. ಆ ತೆರಿಗೆ ಕೂಡ ಕೇವಲ ಅಲ್ಪವಾದುದು. ಸಾಮಾನ್ಯ ಮನುಷ್ಯನ ಮೇಲಿನ ತೆರಿಗೆಯಲ್ಲ ಎನ್ನುವ ಅಂಶವನ್ನು ಚೇಂಬರ್ ಆಫ್ ಕಾಮರ್ಸ್ ಸಂಸ್ಥೆಕೂಡ ಹೇಳಿದೆ ಈ ಸಂಸ್ಥೆಯವರು ಆ ರೀತಿಯಾಗಿ ಒಂದು ನಿರ್ಣಯವನ್ನು ಕೂಡ ಪಾಸು ಮಾಡಿದ್ದರು. ದೇಶದಲ್ಲಿ ತೆರಿಗೆಯ ವಿಚಾರದಲ್ಲಿ ಯಾವ ರೀತಿ ನಡೆಯುತ್ತಿದೆ ಇನ್ನು ಮುಂದೆ ಯಾವ ರೀತಿಯಾಗಿ ಬದಲಾವಣೆಯಾಗತಕ್ಕಂತಹ ಅವಕಾಶವಿದೆ ಎನ್ನುವದರ ಬಗ್ಗೆ, ಅವರು ಒಂದು ಸಿರ್ಣಯವನ್ನು ಮಾಡಿ ಅದರಲ್ಲಿ ಹೇಳಿದ್ದಾರೆ. ಅದರಂತೆ ಅವರು proceed ಮಾಡಿದ್ದಾರೆ, ಅವರು Direct Taxes ಬೇಡ ಎಂದು ಹೇಳಿದ್ದಾರೆ. ಅದನ್ನು ನಿಜವಾಗಿಯೂ ಒಪ್ಪಲೇಬೇಕು; ಮತ್ತು ಅದರಿಂದ ಅನುಕೂಲವಾಗುತ್ತದೆ. ಕಾರಣವೇನೆಂದರೆ ಎಲ್ಲೆಲ್ಲಿ Indirect Taxes ಇದೆಯೋ ಅದು common man ಮೇಲೆ ಬೀಳುತ್ತದೆ. ಆದ್ದರಿಂದ ಸರಕಾರ Indirect Taxesನ್ನು ಆದಷ್ಟು ಶೀಘ್ರವಾಗಿ ರದ್ದುಮಾಡಿ Direct Taxesನ್ನು ದೇಶದಲ್ಲಿನ ಜನಗಳ ಮೇಲೆ ಹಾಕಬೇಕು.

Sri M. C. NARASIMHAN.—In the Soviet Union, those taxes are abolished.

Sri T. MARIAPPA.—There everything is in the hands of Government and so there is no need for such taxes. No worker in a factory pays tax. In old Mysore we have got a list and for new Mysore we are compiling a list.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇದರಂತೆ ಏನು Indirect Taxesನ್ನು ತೆಗೆದುಕೊಳ್ಳುತ್ತಾರೋ ಅದನ್ನು ಆದಷ್ಟು ಬೇಗ ರದ್ದುಮಾಡಬೇಕು. ಆದಷ್ಟು ಸಂಖ್ಯೆಯನ್ನು ಕಡಮೆಮಾಡಬೇಕೆಂದು ಹೇಳುತ್ತೇನೆ.

ನಮ್ಮ ಮಾನ್ಯ ಹಣಕಾಸಿನ ಸಚಿವರಿಗೆ ಕೇಂದ್ರದ ಹಣಕಾಸಿನ ಮಂತ್ರಿಗಳಮೇಲೆ ತಮ್ಮ ಪ್ರಭಾವವನ್ನು ಬೀರುವ ಭರವಸೆ ಸಾಮರ್ಥ್ಯವಿರುವುದರಿಂದ ಅವರ ಮೂಲಕ ನಾನು ಕೇಳಿಕೊಳ್ಳುತ್ತಿದ್ದೇನೆ. Indirect Taxesನ್ನು ಆದಷ್ಟು ಕಡಮೆಮಾಡುವುದಕ್ಕೆ ಪ್ರಯತ್ನ ಮಾಡಿದರೆ ಸಾಮಾನ್ಯ ಮನುಷ್ಯನ ಜೀವನದ ಸ್ಥಿತಿ ಉತ್ತಮವಾಗುತ್ತದೆ. ಇದಕ್ಕೆ ಸಹಾಯಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಪೋಲೀಸು ಇಲಾಖೆ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. 1947ರಲ್ಲಿ 27 ಲಕ್ಷ ರೂಪಾಯಿಗಳು ಖರ್ಚಾಗುತ್ತಿದ್ದ ಕಡೆಯಲ್ಲಿ ಈಗ ಸುಮಾರು ಮೂರು ಕೋಟಿ ಹೆಚ್ಚಿನ ಹಣ ಒದಗಿಸಿದ್ದಾರೆ. ಪೋಲೀಸ್ ಶಾಖೆಯಲ್ಲಿರುವ ಅಧಿಕಾರಿಗಳಿಂದ ಈಗ ಪೋಲೀಸು ರಾಜ್ಯವಾಗಿದೆ ಎಂದು ಕೆಲವರು ಹೇಳಿದರು. ಈಗ ಪೋಲೀಸು ರಾಜ್ಯವೋ ಅಥವಾ ಹಿಂದಿನ ಕಾಲದಲ್ಲೋ ಎನ್ನುವುದನ್ನು ನಮ್ಮ ಸ್ನೇಹಿತರೇ ಹೇಳಬೇಕು. ಇದರ ಜೊತೆಗೆ ಈಗ ಎರಡು ಕೋಟಿ ಇಪ್ಪತ್ತು ಲಕ್ಷ ಚಿಲ್ಲರೆ ಜನರಿದ್ದಾರೆ. ಇಲಾಖೆ ದೊಡ್ಡದಾಗಿದೆ. ಈ ಇಲಾಖೆಯಲ್ಲಿ ಏನು personnel ಇದೆ ಅದು ಇನ್ನೂ ಜಾಸ್ತಿಯಾಗಿಲ್ಲ. ಇಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳಿಂದ ಇದರ ವೆಚ್ಚ ಜಾಸ್ತಿಯಾಗಿದೆ ಎನ್ನುವ ಕಾರಣ ಸರಿಯಾದುದಲ್ಲ.

ಸುಖೀರಾಜ್ಯ ಮಾಡಬೇಕೆಂದಿರುವಾಗ ಪೋಲೀಸು ರಾಜ್ಯ ಮಾಡಬೇಕೆಂದಿದ್ದಾರೆ ಎಂದು ಹೇಳುವುದರಲ್ಲಿ ಎಷ್ಟುಮಟ್ಟಿನ ಹುರುಳಿದೆ ಎನ್ನುವದನ್ನು ಅವರ ವಿವೇಚನೆಗೇ ಬಿಡುತ್ತೇನೆ.

ಇನ್ನು ಹಳ್ಳಿಗಾಡಿನ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಯನ್ನು ಸರಕಾರ ಏರ್ಪಾಡು ಮಾಡುತ್ತಿದೆ. 1952ನೆಯ ಇಸವಿಯಿಂದ ಇಲ್ಲಿಯವರೆಗೆ ನಾವು ಶಾಸನ ಸಭೆಗಳಲ್ಲಿ ಮತ್ತು ಇತರ ಕಡೆಗಳಲ್ಲಿ ಹಳ್ಳಿಯ ಜನರಿಗೆ ಅವರ ಆರೋಗ್ಯ ಕೆಡಲು ಕಾರಣ ಸರಿಯಾದ ಕುಡಿಯುವ ನೀರನ್ನು ಒದಗಿಸದಿರುವುದೇ ಆಗಿದೆ. ನಿರ್ಮಲವಾದ ನೀರನ್ನು ಒದಗಿಸುವುದಕ್ಕೆ ಯಾವ ಯಾವ ಕಡೆಗಳಲ್ಲಿ ಕುಡಿಯುವ ನೀರಿನ ಬಾವಿಗಳಿವೆ ಎನ್ನುವುದನ್ನು ಪಟ್ಟಿ ಹಾಕಿ ನೋಡಿದರೆ ಕೋಟ್ಯಾಂತರ

ರೂಪಾಯಿಗಳ ಅಂದಾಜು ಪಂಚವಾರ್ಷಿಕ ಯೋಜನೆಯಲ್ಲಿ ಕಂಡುಬರುತ್ತಿದೆ. ಅದನ್ನು ತರಿಸಿ ನಮ್ಮ ಮುಂದೆ ಇಡುತ್ತಾರೆಂದು ನಂಬುತ್ತೇನೆ. ಈ ಹತ್ತು ಹದಿನೈದು ವರ್ಷಗಳಿಂದ ಮಾಡುತ್ತಿರುವ ರಸ್ತೆ ಮತ್ತು ಇತರ ಕೆಲಸಗಳಾಗದೆ ಹಣವು ಉಳಿಯುವ ಸಂಭವವಿದೆ. ಅದರಿಂದ ಎಲ್ಲದಕ್ಕಿಂತ ಮೊದಲು ಇಂತಹ ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಿ ಕೇವಲ ಕಡಮೆ ಕಾಲದಲ್ಲಿ ನಿರ್ಮಲವಾದ ನೀರನ್ನು ಒದಗಿಸಲು ಒಂದು ಕಾರ್ಯಕ್ರಮದ ಪಟ್ಟಿಯನ್ನು ಹಾಕಿಕೊಂಡು ಅದರಂತೆ ತೀವ್ರವಾಗಿ ಕಾರ್ಯಕ್ರಮಗಳನ್ನು ನಡೆಸುತ್ತಾರೆಂದು ಭಾವಿಸುತ್ತೇನೆ.

ಇನ್ನು ಹಳ್ಳಿಗಾಡಿನಲ್ಲಿ ಸಣ್ಣ ನೀರಾವರಿ ಕಾಮಗಾರಿಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇವತ್ತಿನ ದಿವಸ ನಮ್ಮ ಸಂಸ್ಥಾನದ ಸರಕಾರದವರೂ, ಕೇಂದ್ರ ಸರಕಾರದವರೂ ಆಹಾರದ ಪರಿಸ್ಥಿತಿ ಬಗ್ಗೆ, ಈ ಸಣ್ಣ ನೀರಾವರಿ ಕೆಲಸಗಳನ್ನು ಮೊದಲು ಕಾರ್ಯಗತ ಮಾಡಬೇಕೆನ್ನುವ ಸೂಚನೆ ಬಂದಿದೆ. ನಾವೆಲ್ಲ ನಮ್ಮ ದೇಶದಲ್ಲಿ ನೋಡಿದರೆ ಇಡೀ ಜನಾಂಗದ ಒಂದು ಪರಿಸ್ಥಿತಿ ಸಾಮಾನ್ಯವಾಗಿ ಹೇಗೆ ನಡೆಯುತ್ತಿದೆ, ಜೀವನ ಹೇಗಿದೆ ಎನ್ನುವುದನ್ನು ಮನಗಂಡಿದ್ದೇವೆ. ಹಾಗೆಯೇ ಈಗ ವ್ಯವಸಾಯಗಾರರ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿದೆ. ಯಾವುದೇ ದೇಶದ ಅಭಿವೃದ್ಧಿಗೆ ಮುಖ್ಯವಾದುದು ವ್ಯವಸಾಯ. ಇದಕ್ಕೆ ನಾವು ಹೆಚ್ಚು ಗಮನವನ್ನು ಕೊಡಬೇಕು. ಅದರಂತೆ ನಮ್ಮ ಮಂತ್ರಿಮಂಡಲದವರು ಇಂತಹ ಪ್ರಾಮುಖ್ಯವಾದ ಸಂಗತಿಗಳ ಕಡೆಗೆ ಅವರ ಗಮನ ಹರಿಸಿರುವುದು ನನಗೆ ಬಹಳ ಸಂತೋಷದ ಸಂಗತಿ. ಈಚೆಗೆ ಅವರು ನೀರಾವರಿ ಕಾಮಗಾರಿಯನ್ನೇ ನಮ್ಮ ದೇಶದ ವ್ಯವಸಾಯ ನಂಬಿ ಕೆಲಸಮಾಡಬೇಕು ಎಂದು ಈ ನೀರಾವರಿ ಕೆಲಸಗಳನ್ನು ಅಲ್ಲಲ್ಲಿ ಮಾಡುತ್ತಿದ್ದಾರೆ. ವ್ಯವಸಾಯದಲ್ಲಿ ನಂಬಿಕೆ ಇರುವುದರಿಂದ, ಅದಕ್ಕೋಸ್ಕರ ನಮ್ಮ ದೇಶದಲ್ಲಿ ನೀರಾವರಿ ಕೆಲಸಗಳನ್ನು ಮಾಡಬೇಕೆಂದು ಹೆಚ್ಚಿನ ಗಮನವನ್ನು ನಮ್ಮ ಸರಕಾರ ಕೊಡುತ್ತಿದೆ. ಎಲ್ಲೆಲ್ಲಿ ಸಾಧ್ಯವಿದೆಯೋ, ಎಲ್ಲೆಲ್ಲಿ ಪ್ರಕೃತಿಯು ಸಹಾಯವಾಗಿದೆಯೋ ಅಲ್ಲೆಲ್ಲಾ ಅಣೆಕಟ್ಟು–ಕಾಲುವೆ ಕಾಮಗಾರಿಗಳನ್ನು ಕೈಕೊಂಡು ಜನರಿಗೆ ಅನುಕೂಲ ಮಾಡಬೇಕೆಂದು ಹೇಳುತ್ತೇನೆ. ಈಗ್ಗೆ 150 ವರ್ಷಗಳ ಪರಕೀಯರ ಆಳ್ವಿಕೆಯಲ್ಲಿದ್ದುದಾಗಿ ನಮಗೇನಾಗಿದೆ ! ಅವರು ಕೇವಲ ವ್ಯಾಪಾರಗಾರರಾಗಿದ್ದುದರಿಂದ ಅಭಿವೃದ್ಧಿ ಕೆಲಸಗಳನ್ನಾವುದನ್ನೂ ಅವರು ಮಾಡಲು ಪ್ರಯತ್ನ ಪಡಲಿಲ್ಲ. ಇದರಿಂದಾಗಿ ಸಾವಿರಾರು ಕೆರೆಗಳನ್ನು ಪೂರ್ವಿಕರುಗಳು ಏನು ಕಟ್ಟಿದ್ದರೋ ಅವೆಲ್ಲಾ ಇಂದು ಮುಚ್ಚಿಹೋಗಿ ವರ್ಷ ವರ್ಷ ಎರಡಲ್ಲ, ಮೂರು ನಾರಿ ಮಳೆಬಂದು ತುಂಬಿದರೂ ಒಂದು ಫಸಲಿಗಾಗುವುದಿಲ್ಲ. ಆದ್ದರಿಂದ ಇಂದು ನಿಮ್ಮ ಮೇಲೆ ಬಿದ್ದಿರುವ ಒಂದು ದೊಡ್ಡ ಜವಾಬ್ದಾರಿ, ಈ ನಾಡಿನಲ್ಲಿ ಇರುವ ದೊಡ್ಡ–ಪುಟ್ಟ ಕೆರೆಗಳನ್ನು ಅತಿ ಶೀಘ್ರದಲ್ಲಿಯೇ ದುರಸ್ತು ಮಾಡಿಸುವುದು. ಈ ಬಗ್ಗೆ ಈ ವರ್ಷದಿಂದ ಹೆಚ್ಚಿನ ಮುತುವರ್ಜಿಯನ್ನು ಕೇಂದ್ರ ಸರ್ಕಾರದವರು ಕೂಡ ವಹಿಸುತ್ತಿದ್ದಾರೆಂಬುದು ಒಂದು ಸಂತೋಷದ ವಿಷಯ. ಆದರೂ ಕೂಡ ಸಂಸ್ಥಾನದ ಸರ್ಕಾರದವರು ಈ ಬಗ್ಗೆ ಹೆಚ್ಚಿನ ಶ್ರದ್ಧೆಯಿಂದ ಕೆಲಸಮಾಡಿ ಈ ಸಣ್ಣ ಕಾಮಗಾರಿಗಳೆಲ್ಲವೂ ಬೇಗ ರೈತರಿಗೆ ಫಲಕಾರಿಯಾಗುವಂತೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಮರಾಮತ್ತು ಶಾಖೆಯ ಮಂತ್ರಿಗಳಾದ ಡಣ್ಣಬಸಪ್ಪನವರೇನೋ ಶ್ಲಾಘನೀಯವಾದ ರೀತಿಯಲ್ಲಿ ಕೆಲಸಮಾಡುತ್ತಿದ್ದಾರೆ. ಇನ್ನೂ ಮೆಹನತ್ತಿನ ಕೆಲಸ ನಡೆಯಿಸುವ ಅವಶ್ಯಕತೆ ಇದರಲ್ಲಿ ಬೇಕಾಗಿದೆ. ಯೆಂದು ನಾನು ತಿಳಿಯಬಯಸುತ್ತೇನೆ.

ನಮ್ಮ ಸಂಸ್ಥಾನದಲ್ಲಿ ಕೆಲವು ಕಡೆ ಮಳೆಯ ಅಭಾವದಿಂದ ಪ್ರತಿವರ್ಷವೂ ಅಭಾವದ ಪ್ರದೇಶಗಳೆಂದು ಪರಿಗಣಿಸಲ್ಪಟ್ಟ ಕೆಲವು ಭಾಗಗಳಿವೆ. ಇವುಗಳ ಬಗ್ಗೆ ಈಗಾಗಲೇ ಎಸ್. ವಿ. ರಾಮಮೂರ್ತಿಯವರು ಮತ್ತು ಅಶೋಕ ಮೆಹತಾ ಅವರು ಅಮೂಲ್ಯವಾದ ತಮ್ಮ ವರದಿಗಳನ್ನು ಕೊಟ್ಟಿದ್ದಾರೆ. ಅಲ್ಲಿನ ಜನರನ್ನು ಈ ಕಷ್ಟದಿಂದ ಪಾರಾಗಿಸಬೇಕಾದರೆ ಕೆಲವು ವಿಶೇಷ ರೀತಿಯಲ್ಲಿ ಸಹಾಯವನ್ನು ಮಾಡಬೇಕೆಂದು ಅವರುಗಳು ತಿಳಿಸಿದ್ದಾರೆ. ಅವುಗಳಲ್ಲಿ ಒಂದು ಮುಖ್ಯವಾದ ಮಾರ್ಗವೆಂದರೆ, lift irrigationನ್ನಿಗೆ ಉತ್ತೇಜನ ಕೊಡುವುದು. ಹಳೆಯ ಮೈಸೂರು ಸಂಸ್ಥಾನದಲ್ಲಿ ಇದೇ ದೃಷ್ಟಿಯಿಂದಲೇ ಬಾವಿಗಳನ್ನು ತೆಗೆಯಿಸುವುದಕ್ಕೆಂದು 1,000 ರೂಪಾಯಿಗಳ ಸಬ್ಸಿಡಿ ಕೊಡುವ ವ್ಯವಸ್ಥೆ ಮಾಡಿದ್ದರು. ಆದರೆ ಅಗ್ಗೆ ಒಂದು ಕೂಗೂ ಇತ್ತು, ಕೆಲವು ಜನರು ಸಬ್ಸಿಡಿಯನ್ನು ತೆಗೆದುಕೊಂಡವರು ಪಾಸ್ತವವಾಗಿ ಬಾವಿಗಳನ್ನು ತೋಡಿಸದೆ ಹಣವನ್ನು ದುರುಪಯೋಗಮಾಡಿದರು ಎಂದು. ಅದು ಸ್ವಲ್ಪ ಮಟ್ಟಿಗೆ ನಿಜವಿದ್ದರೂ, ಅನೇಕರು ಬಾವಿಗಳನ್ನು ತೋಡಿಸಿದ್ದಾರೆಂಬುದೂ ನಿಜ. ಹೀಗಿರುವಲ್ಲಿ ಈಗ ಸರ್ಕಾರದವರು ಈ ಸಬ್ಸಿಡಿಯನ್ನು 250 ರೂಪಾಯಿಗಳಿಗೆ ಇಳಿಸಿದ್ದಾರೆ. ಒಂದು ಬಾವಿ ತೆಗೆಸಬೇಕಾದರೆ 6,000–7,000 ರೂಪಾಯಿಗಳು ಬೇಕಾಗುತ್ತವೆ. ಅಂಥದಕ್ಕೆ 250 ರೂಪಾಯಿ ಕೊಡುವುದೆಂದರೆ ಏನೋ ಉಪಚಾರಕ್ಕೆ ಕೊಟ್ಟಂತಾಗುತ್ತದೆ; ರೈತರಿಗೇನೂ ಸಹಾಯ ಮಾಡಿದಂತಾಗುವುದಿಲ್ಲ. ಈ ಹಣವನ್ನು ಹೆಚ್ಚುಮಾಡಬೇಕೆಂದು ಪ್ರತಿವರ್ಷವೂ ಸದಸ್ಯರು ಕೇಳುತ್ತಿದ್ದಾರೆ. ಇದನ್ನು 500 ರೂಪಾಯಿಗಳಿಗಾದರೂ ಹೆಚ್ಚಿಸಿ, ಈ ಅಭಾವ ಪ್ರದೇಶಗಳಲ್ಲಿ ಬಾವಿಗಳನ್ನು ತೋಡಿಸಲು ಒಂದು incentive ಇರುವ ರೀತಿಯಲ್ಲಿ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಕೆಲವು ಪ್ರದೇಶಗಳಲ್ಲಿ 40-50 ಅಡಿಗಳವರೆಗೂ ಬಾವಿಗಳನ್ನು ತೆಗೆಯಬೇಕಾಗುತ್ತದೆ. ಅಂಥ ಕಡೆ....

ಶ್ರೀ ಟಿ. ಮರಿಯಪ್ಪ.—ಈ ಬಗ್ಗೆ ಮಾಡಿಯಂ ಟರ್ಮ್ ಲೋನ್‌ಗಳೆಂದು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರೂ ಬೇರೆ ಕೊಡುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ರೈತರು ತಮ್ಮ ಆಸ್ತಿಯನ್ನು ಒಂದು ಕಡೆ ಒತ್ತೆಯಿಟ್ಟಿರುವಾಗ ಅದರ ಮೇಲೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರು ಮತ್ತೆ ಸಾಲಕೊಡುವುದಿಲ್ಲ. ಅದರಲ್ಲೂ ಸಣ್ಣ ಸಣ್ಣ ಹಿಡುವಳಿದಾರರು ಲ್ಯಾಂಡ್ ಮಾರ್ಟ್‌ಗೇಜಿನಲ್ಲಿ ಸ್ವಲ್ಪ ಜಮೀನು, ರೆವಿನ್ಯೂ ಇಲಾಖೆಯಲ್ಲಿ ಸ್ವಲ್ಪ ಜಮೀನು ಒತ್ತೆಯಿಟ್ಟು ಸಾಲ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಒಂದು ಕಡೆ ಮಾತ್ರ ತೆಗೆದುಕೊಳ್ಳಬಹುದು. ಆದ್ದರಿಂದ ನೀವು ಕೊಡತಕ್ಕ ಸಹಾಯದ್ರವ್ಯವನ್ನು ಹೆಚ್ಚಿಗೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಾನು ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಈಗ ನಮ್ಮ ಮುಂದಿರುವ ಅಂದಾಜು ಪಟ್ಟಿಯು ನಮ್ಮನ್ನು ಪ್ರಗತಿಯ ಹಾದಿಯಲ್ಲಿ ತೆಗೆದುಕೊಂಡು ಹೋಗುವ ಪಟ್ಟಿಯಾಗಿದೆ; ಶ್ರೀ ಮರಿಯಪ್ಪನವರು ತಮ್ಮ ಅನುಭವವೆಲ್ಲವನ್ನೂ ಉಪಯೋಗಿಸಿ ನಮ್ಮ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಸ್ಥಿತಿಗೆ ತಂದಿದ್ದಾರೆ. ಅವರು ಸರ್ವವಿಧದಲ್ಲೂ ಅಭಿ

(ಶ್ರೀ ಎ. ವಿ. ನರಸಿಂಹರೆಡ್ಡಿ)

ನಂದನೀಯರು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

[MR. SPEAKER in the Chair]

ಶ್ರೀ ಸಿ. ಎಸ್. ಹುಲುಕೋಟಿ (ಮುಂಡರಗಿ).—ಅಧ್ಯಕ್ಷರೇ, ಈ ಅಧಿವೇಶನದಲ್ಲಿ 1959-60ನೆಯ ಸಾಲಿನ ಮುಂಗಡ ಪತ್ರದ ವಿಷಯದಲ್ಲಿ ಅನೇಕ ಮಿತ್ರರು ಆಗಲೇ ಮಾತನಾಡಿದ್ದಾರೆ. ನಮ್ಮ ಹಣಕಾಸಿನ ಮಂತ್ರಿಗಳು ಬಹು ಕುಶಲತೆಯಿಂದ ವಿಷಯಗಳನ್ನು ತಮ್ಮ ಭಾಷಣದಲ್ಲಿ ವಿವರಿಸಿದ್ದಾರೆ, ಮತ್ತು ಅವರು ಜಾಣತನದಿಂದ ಕೇಂದ್ರಸರ್ಕಾರದ ಮೇಲೆಯೂ ತಮ್ಮ ಪ್ರಭಾವದಲ್ಲಿ ಬೀರುವ ಶಕ್ತಿಯುಳ್ಳವರಾಗಿದ್ದಾರೆಂದು ಕೂಡ ಹೇಳಿದ್ದಾರೆ. ಅವರ ಈ ಹೇಳಿಕೆಯಲ್ಲಿ ನಾನೂ ಸಹ ಭಾಗವಹಿಸಲು ನನಗೆ ಸಂತೋಷವಾಗುತ್ತದೆ.

ಆ ಭಾಷಣದಲ್ಲಿ ಮಾನ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಯಾವ ಯಾವ ಪ್ರಕಾರದ ಸಮಸ್ಯೆಗಳಿವೆ ಮತ್ತು ಅವುಗಳನ್ನು ಸಾಧಿಸುವುದಕ್ಕೆ ಯಾವ ಯಾವ ಅಡಚಣೆಗಳು ಒದಗಿವೆಯೆಂಬುದನ್ನು ತಿಳಿಸುತ್ತಾ, ಅವುಗಳನ್ನು ಎದುರಿಸುವುದಕ್ಕೆ ತಾವು ಏನೇನು ಪ್ರಯತ್ನ ನಡೆಸಿದ್ದಾರೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಮೊದಲನೆಯದಾಗಿ ಎರಡನೆಯ ಪುಟದಲ್ಲಿ ಇಡೀ ರಾಜ್ಯದಲ್ಲಿ ಸರ್ವಸಾಮಾನ್ಯವಾದ ಸಂಬಳದ ಸ್ಕೇಲುಗಳನ್ನು ಜಾರಿಗೆ ತರುವುದರಲ್ಲಿ ಬಂದಂಥ ವ್ಯಾವಹಾರಿಕ ತೊಡಕುಗಳನ್ನು ಇತ್ಯರ್ಥ ಮಾಡಿರುವುದಾಗಿ ತಿಳಿಸಿದ್ದಾರೆ. ಆದರೆ equation of posts ಮತ್ತು Inter-State seniority ಪಟ್ಟಿಯ ತಯಾರಿಕೆಯ ವಿಷಯದಲ್ಲಿ ಅನೇಕ ಅಡಚಣೆಗಳಿರುವುದನ್ನು ಅವರು ಸೂಚಿಸಿದ್ದಾರೆ. ಈ ಬಗ್ಗೆ ಅವರು ತೀವ್ರವಾಗಿ ಅವುಗಳನ್ನು ದೂರಮಾಡುವುದಕ್ಕೆ ಪ್ರಯತ್ನ ನಡೆಸಬೇಕೆಂದು ನಾನು ಸರ್ಕಾರಕ್ಕೆ ಬಿನ್ನವಿಸಿಕೊಳ್ಳುತ್ತೇನೆ. ಹಾಗೆಯೇ ಮೂರನೆಯ ಪುಟದಲ್ಲಿ Uniform taxation measures ವಿಚಾರ ಮತ್ತು ರೋಡ್‌ಟ್ರಾನ್ಸ್‌ಪೋರ್ಟ್ ಬಡಾವಣೆಯ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಬಗ್ಗೆಯೂ ಮತ್ತು ಪುಟ 23 ರಿಂದ 30ರ ವರೆಗೆ ಹಣಕಾಸಿನ ವಿಷಯವಾಗಿಯೂ ಅವರು ಕೊಟ್ಟಿರತಕ್ಕ ಅಂಕಿ ಅಂಶಗಳು ಬಹಳ ಅರ್ಥಗರ್ಭಿತವಾಗಿವೆ. ದೇಶದ ಆಯವ್ಯಯಗಳು ಯಾವ ಯಾವ ಪ್ರಮಾಣದಲ್ಲಿ ವರ್ಷವರ್ಷ ಹೆಚ್ಚುತ್ತಿವೆಯೆಂಬುದನ್ನು ಸೂಚಿಸುತ್ತಾ, ಒಟ್ಟಿನಲ್ಲಿ ಈ ವರ್ಷ ಸರ್ಪ್ಲಸ್ ಬಡ್ಜೆಟ್ಟನ್ನು ಹೇಗೆ ಸಾಧಿಸಲು ಸಾಧ್ಯವಾಗಿದೆಯೆಂಬುದನ್ನು ತಿಳಿಸಿದ್ದಾರೆ. ಇವುಗಳನ್ನೆಲ್ಲಾ ನೋಡಿದರೆ ನಮ್ಮ ರಾಜ್ಯ ಪ್ರಗತಿ ಪಥದಲ್ಲಿ ನಡೆಯುತ್ತಿದೆಯೆಂದು ಹೇಳುವುದಕ್ಕೆ ಅಭ್ಯಂತರವಿಲ್ಲವೆಂದು ಹೇಳುತ್ತೇನೆ.

5-30 P.M.

ಮತ್ತು ಉತ್ಪನ್ನದ ಬಾಬು ಸಹ ಪ್ರತಿವರ್ಷ ಹೆಚ್ಚುತ್ತಾ ಇದೆ. ಅದೇ ಪ್ರಮಾಣದಿಂದ ಖರ್ಚಿನ ಬಾಬುಗಳೂ ಸಹ ಹೆಚ್ಚುತ್ತಾ ನಡೆದಿವೆ. ಆದರೆ ಖರ್ಚಿನ ಬಾಬಿನಲ್ಲಿ ಪ್ರತಿವರ್ಷ ಉಳಿತಾಯವೂ ಹೆಚ್ಚು ಹೆಚ್ಚು ನಡೆಯುತ್ತಾ ಬಂದಿದೆ. ಉತ್ಪನ್ನದ ಬಾಬು ಹೆಚ್ಚುವುದಕ್ಕೆ, ಉಳಿತಾಯ ರಕಮು ಹೆಚ್ಚುತ್ತಾ ನಡೆಯುತ್ತಿರುವುದು ಒಂದು ಕಾರಣವಾಗಿದೆಯೆಂದು ಹೇಳಬಹುದು. ಆದರೆ ಮುಂಗಡ ಪತ್ರದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಕಾಣಿಸಿದ ರಕಮುಗಳು ಕೆಲವು ಕಡೆ ಖರ್ಚಾಗುತ್ತಾ ಇಲ್ಲ. ಆ ರಕಮು ಪ್ರತಿವರ್ಷದ ಅಖೈರಕ್ಕೆ ಅನೇಕ ಶೀರ್ಷಿಕೆಗಳಿಂದ ಸರೆಂಡರ್ ಆಗುತ್ತಾ ನಡೆದಿದೆ. ಇದು ಅಷ್ಟು ಚೆಂದವಾಗಿ ಕಾಣಿಸುವುದಿಲ್ಲ. ಏಕೆಂದರೆ ಯಾವುದಾದರೂ ಒಂದು ವಿಷಯವನ್ನು ಅಥವಾ ಒಂದು ಕೆಲಸವನ್ನು ಮುಂಗಡ ಪತ್ರದಲ್ಲಿ ಹಾಕಿದ ನಂತರ ಆ ವರ್ಷ ಅದು ಮುಕ್ತಾಯವಾಗದಿದ್ದರೆ ಪ್ರಗತಿ ಸಾಧಿಸದಂತಾಗುವುದಿಲ್ಲ. ಹಣ ರಂಡರ್ ಆಗಲು ಹೆಚ್ಚು ಅಸ್ಪದ ಕೊಡದೆ, ಅದನ್ನು ಖರ್ಚುಮಾಡಲು ಹೆಚ್ಚು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕೆಲಕೆಲವು ಡಿಪಾರ್ಟ್‌ಮೆಂಟುಗಳಲ್ಲಿ, ಯಾವುದಾದರೂ ಒಂದು ಅಡಚಣೆಯನ್ನು ತೋರಿಸಿ, ರಕಮನ್ನು ಖರ್ಚುಮಾಡದೆ ಹಾಗೆಯೇ ಬಿಟ್ಟುಬಿಡುತ್ತಾರೆ. ಜನರು ಬಡ್ಜೆಟ್ಟಿನಲ್ಲಿ ತೋರಿಸಿದ ಕೆಲಸವು ಆಗುವುದೆಂದು ಆಸೆ ಮಾಡಿಕೊಳ್ಳುತ್ತಾರೆ; ಆದರೆ ಆ ಕೆಲಸ ಆಗುವುದಿಲ್ಲ. ಇದರಿಂದ ಜನರು ನಿರಾಶರಾಗುವ ಸಂಭವವೂ ಇದೆ. ಆದ್ದರಿಂದ ಸರೆಂಡರ್ ಆಗುವುದಕ್ಕೆ ಆದಷ್ಟು ಅಸ್ಪದ ಕೊಡದೆ, ಕೆಲಸವನ್ನು ಪೂರ್ಣ ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಈ ಅಂಕಿ ಸಂಖ್ಯೆಗಳನ್ನು ನೋಡಿದಲ್ಲಿ ನಮ್ಮ ರಾಜ್ಯದಲ್ಲಿ ಪ್ರಗತಿಯು ಹೆಚ್ಚು ನಡೆದಿದೆ ಎಂಬ ಸಂತೋಷದಾಯಕವಾದ ವಿಷಯ ನನಗೆ ಕಾಣಿಸುತ್ತದೆ. ಇವುಗಳನ್ನು ನೋಡಿದಾಗ, ಕ್ವಾಂಟಮ್ ಆಫ್ ವರ್ಕ್ ಮತ್ತು ಕ್ವಾಂಟಮ್ ಆಫ್ ಪ್ರೋಗ್ರೆಸ್ ಹೆಚ್ಚುತ್ತಾ ನಡೆದಿದೆ ಎಂಬ ಸಂತೋಷದ ಸಂಗತಿಯನ್ನು ವ್ಯಕ್ತಪಡಿಸಲಿಕ್ಕೆ ಏನೂ ಅಭ್ಯಂತರವಿಲ್ಲ. ಆದರೆ ಈ ಹೆಚ್ಚು ಪ್ರಮಾಣದ ಅಂಕಿ ಸಂಖ್ಯೆಯ ಪ್ರಗತಿಯು ಕ್ವಾಂಟಮ್ಮಿನ ಪ್ರಗತಿ ಎಂಬುದನ್ನು ಮಾತ್ರ ತಿಳಿದುಕೊಳ್ಳಬೇಕು. ಅದು ಹೆಚ್ಚುತ್ತ ನಡೆದರೂ ಸಹ, ಅದೇ ಪ್ರಮಾಣದಿಂದ ಕ್ವಾಂಟಮ್ ಆಫ್ ಕ್ವಾಲಿಟಿ ಆಫ್ ವರ್ಕ್ ನಡೆದಿದೆಯೋ ಇಲ್ಲವೋ ಎಂಬುದನ್ನು ಸ್ವಲ್ಪ ವಿಮರ್ಶೆ ಮಾಡುವುದು ಅವಶ್ಯವೆಂದು ನನಗೆ ಎನಿಸುತ್ತದೆ. ಯಾವುದೇ ಒಂದು ಕೆಲಸವನ್ನು ಹಣದ ಪ್ರಮಾಣಕ್ಕೆ ಅನುಸರಿಸಿ ಅದನ್ನು ಮಾಡಲು ಸಾಧ್ಯವಾಗುವುದೋ ಅದೇ ಪ್ರಮಾಣದಲ್ಲಿ ಗುಣಧರ್ಮದಿಂದ ಆ ಕಾರ್ಯವನ್ನು ಮಾಡಲು ಸಾಧ್ಯವಾಗಿದೆಯೋ ಇಲ್ಲವೋ ಎಂಬುದನ್ನು ನೋಡಲು ಪ್ರಯತ್ನ ಮಾಡದಿದ್ದರೆ ಒದಗಿಸಿದ ಹಣದ ಪ್ರಮಾಣದ ಲಾಭವಾಗಿಲ್ಲವೆಂದು ವ್ಯಸನವಾಗುವ ಸಂಭವ ಬಹಳ ಇರುತ್ತದೆ. ಆದ್ದರಿಂದ ಈ ಗುಣಧರ್ಮದಲ್ಲಿ ಸಹ ಪ್ರಗತಿಯನ್ನು ಹೊಂದಿದ್ದರೆ, ವ್ಯಸನಪಡುವ ಸಂಭವವಿಲ್ಲ. ಹೆಚ್ಚು ಹೆಚ್ಚು ಹಣಖರ್ಚುಮಾಡುವ ಸಂದರ್ಭದಲ್ಲಿ ಗುಣಧರ್ಮದ ಪ್ರಗತಿ ಸಹ ಮಾಡುವುದು ನಮ್ಮೆಲ್ಲರ ಕರ್ತವ್ಯ. ಸರ್ಕಾರದವರು ಇದರ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರತಿಯೊಂದು ಖಾತೆಯಲ್ಲಿಯೂ ವಿಚಾರ ಮಾಡಿದರಾಗಿ ಗುಣಧರ್ಮದ ಅಭಾವವಿದೆ ಎಂದು ಕಂಡುಬರುತ್ತದೆ. ಸಹಕಾರದ ಒಂದು ವಿಷಯವನ್ನು ತೆಗೆದುಕೊಳ್ಳೋಣ. ಸಹಕಾರೀ ಖಾತೆಗೆ ಹೆಚ್ಚು ಹಣವನ್ನು ಒದಗಿಸಿದೆ. ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ದೇಶದಲ್ಲಿ ಯಾವತ್ತೂ ಕಾರ್ಯ ಸಹಕಾರದಿಂದ ನಡೆಯತಕ್ಕದ್ದು ಮತ್ತು ನಡೆಬೇಕು. ಸಹಕಾರ ತತ್ವಗಳ ಅಂಕಿ ಅಂಶಗಳನ್ನು ನೋಡಿದಲ್ಲಿ, ಅವು ಹೆಚ್ಚಾಗಿ ಬೆಳೆದಿವೆ ಎಂದು ಸಂತೋಷವಾಗುತ್ತದೆ. ಆದರೆ ಗುಣಧರ್ಮದಲ್ಲಿ ಮತ್ತು ಕ್ವಾಲಿಟಿ ಆಫ್ ವರ್ಕ್ ವಿಚಾರ ಮಾಡಿದರೆ ಸಾಕಷ್ಟು ಪ್ರಗತಿ ಹೊಂದಿರುವ ವಿಚಾರ ಸಂಶಯಾಸ್ಪದವಾಗಿ ಕಾಣಿಸುತ್ತದೆ. ಸಂಘದಲ್ಲಿ ಈಗ

ಉದ್ಭವಿಸಿರುವ ಗ್ರೂಪ್ ಮೆಂಟಾಲಿಟಿಯಿಂದ ಸಂಘದ ಕಾರ್ಯದಲ್ಲಿ ಅನೇಕ ತೊಂದರೆಗಳು, ಆತಂಕಗಳು ಉದ್ಭವಿಸಿ, ಕೆಲಸದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಆತಂಕ ಮಾತ್ರ ಹೆಚ್ಚುತ್ತಾ ನಡೆದಿದೆ. ಇದು ಯೋಗ್ಯವಲ್ಲವೆಂದು ನನಗನಿಸುತ್ತದೆ. ವಿಚಾರ ಮಾಡಲಾಗಿ ಸೇಲ್ ಕೋಆಪರೇಟೀವ್ ಮೂವ್‌ಮೆಂಟ್ ಗುಣಧರ್ಮದಲ್ಲಿ ಬಹಳ ಅಧೋಗತಿಯಲ್ಲಿ ನಡೆದಿದೆ; ಇದು ದುಃಖದಾಯಕವಾದ ಸಂಗತಿ. ಮೇಲ್ವಿಚಾರಕರು ಯೋಗ್ಯ ಪರಿಶೀಲನೆ ಮಾಡಿ ಎಲ್ಲಿ ತಪ್ಪಿದೆಯೋ ಆ ತಪ್ಪನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡಬೇಕೇ ವಿನಾ, ತಪ್ಪನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿದಲ್ಲಿ ಸೇಲ ಮೂವ್‌ಮೆಂಟಕ್ಕೆ ಧಕ್ಕೆ ತಗಲುವದು ಸ್ವಾಭಾವಿಕ. ಒಕ್ಕಲಿಗರಿಗೆ ಸೇಲ್ ಮೂವ್‌ಮೆಂಟ್ ಬಹಳ ಉತ್ತಮವಾದ ಮೂವ್‌ಮೆಂಟ್ ಇದ್ದು, ಇದು ಯೋಗ್ಯ ರೀತಿಯಲ್ಲಿ ನಡೆಯದಿದ್ದಲ್ಲಿ ಒಕ್ಕಲಿಗರಿಗೆ ಬಹಳ ತೊಂದರೆಯಾಗುವ ಸಂಭವವಿದೆ. ಈಗಾಗಲೇ ಈಗ ತೊಂದರೆಯಾಗುತ್ತಾ ನಡೆದಿದೆ. ಆದ್ದರಿಂದ ಸೇಲ್ ಮೂವ್‌ಮೆಂಟನ್ನು ಒಂದು ರೂಪದಲ್ಲಿ, ನಿಶ್ಚಿತ ಯೋಜನೆಯಿಂದ, ಯೋಗ್ಯರೀತಿಯಲ್ಲಿ ನಡೆಸಿಕೊಂಡು ಹೋಗುವುದು ಅವಶ್ಯವಿದೆ. ಗ್ರೂಪ್‌ಮೆಂಟಾಲಿಟಿ ಉಗ್ರಸ್ವರೂಪದಿಂದ ನಡೆದು, ಸಂಘಗಳಲ್ಲಿರುವವರನ್ನು ಡಿಸ್‌ಮೆಂಬರ್ ಮಾಡುವ ಪ್ರಯತ್ನಗಳು ನಡೆಯುತ್ತಾ ಬಂದಿವೆ. ಹಾಗೂ ಡಿಸಮೆಂಬರಮಾಡಲಾಗಿದೆ. ಇಂಥದ್ದನ್ನು ಯೋಗ್ಯ ವಿಚಾರಮಾಡಿ ತಪ್ಪಿಸಬೇಕೆಂದು ಸರ್ಕಾರಕ್ಕೆ ಬಿನ್ನೈಸಿಕೊಳ್ಳುತ್ತೇನೆ.

ಇದರಂತೆಯೇ ವಿದ್ಯಾಖಾತೆಯಲ್ಲಿ ಪ್ರತಿವರ್ಷ ಹೆಚ್ಚು ಹಣವನ್ನು ಖರ್ಚು ಮಾಡಿದ್ದೀರಿ. ಅದೇ ಅಂಕಸಂಖ್ಯೆಗಳ ಪ್ರಮಾಣದಿಂದ ವಿದ್ಯಾಖಾತೆಯಲ್ಲಿ ಗುಣಧರ್ಮ ಸುಧಾರಣೆ ಆಗಿದೆಯೋ ಇಲ್ಲವೋ ನೋಡಬೇಕು. ವಿದ್ಯಾಖಾತೆಯಲ್ಲಿ ಯಾವ ಪ್ರಕಾರದ ವಿದ್ಯೆಯು ದೊರೆಯಬೇಕೋ ಆ ಪ್ರಕಾರದ ವಿದ್ಯೆಯು ದೊರೆಯುವುದಿಲ್ಲ. ಪ್ರೈಮರಿ ಶಾಲೆಯಲ್ಲಿ ಕಲಿಯುವ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ಯಾವ ಪ್ರಕಾರದ ಉಪಯೋಗವಾಗಿದೆ ಎಂದು ಮೇಲ್ವಿಚಾರಕರು ವಿಚಾರ ಮಾಡಿದಲ್ಲಿ ನಿಜವಾದ ಉಪಯೋಗವಾಗಿಲ್ಲವೆಂದು ಕಂಡುಬರುವುದರಲ್ಲಿ ಸಂಶಯವಿಲ್ಲ. ನಮ್ಮ ಭಾಗದಲ್ಲಿ ಬೇಸಿಕ್ ಎಜುಕೇಷನ್ ಪದ್ಧತಿಯನ್ನು ಬಹು ವರ್ಷಗಳಿಂದ ಅನುಸರಿಸುತ್ತಾ ಬಂದಿದ್ದೇವೆ. ಬೇಸಿಕ್‌ಎಜುಕೇಷನ್ ವಿಚಾರದಲ್ಲಿ ಯಾವ ಪ್ರಕಾರದ ನಿರ್ಧಾರಗಳು ಆಗುತ್ತಾ ಇವೆಯೋ ಅವುಗಳನ್ನು ನಾವು ವಿಚಾರ ಮಾಡುವುದು ಅವಶ್ಯಕ. ಕಾನ್‌ಫರೆನ್ಸಿನಲ್ಲಿ ನಡೆದ ಸಂಗತಿಗಳಿಂದ ವಿಚಾರ ಮಾಡಲಾಗಿ ಬಹಳ ಉತ್ತಮವಾಗಿ ಚೆನ್ನಾಗಿ ನಡೆದಿವೆ, ಇದರಿಂದ ವಿದ್ಯಾರ್ಥಿಗಳು ಹೆಚ್ಚು ಪ್ರಗತಿ ಹೊಂದಿದ್ದಾರೆಂದು ಅನಿಸುತ್ತದೆ. ಅದರಲ್ಲಿ ಅಡಚಣಿಗಳು ಏನಿವೆಯೋ ಅವನ್ನು ಮಾತ್ರ ನಾವು ಲಕ್ಷ್ಯಕ್ಕೆ ತೆಗೆದುಕೊಂಡಿರುವುದಿಲ್ಲ. ಬೇಸಿಕ ಎಜುಕೇಷನ್ನಿಗೆ ಕೊಡತಕ್ಕಂಥ ಸಹಾಯಕ ಸಾಮಗ್ರಿಗಳನ್ನು ಸರಿಯಾಗಿ ಒದಗಿಸುವುದಿಲ್ಲ. ಅದಕ್ಕೆ ತಕ್ಕ ಶಿಕ್ಷಕರನ್ನು ತಯಾರು ಮಾಡುವುದಿಲ್ಲ. ಆದ್ದರಿಂದ ಅದಕ್ಕೆ ವೆಚ್ಚಮಾಡುವ ಹಣವನ್ನು ಸುಮ್ಮನೆ ಖರ್ಚುಮಾಡಿದಂತಾಗುತ್ತದೆ. ಅದರಿಂದ ವಿದ್ಯಾರ್ಥಿಗಳಿಗೆ ಸಾಕಷ್ಟು ಉಪಯೋಗವಾಗಿರುವುದಿಲ್ಲ. ಆದ್ದರಿಂದ ಸರ್ಕಾರದವರು ಅದರ ಕಡೆಗೆ ಹೆಚ್ಚು ಲಕ್ಷ್ಯ ಕೊಟ್ಟು, ಅದರಲ್ಲಿರುವ ಲೋಪದೋಷಗಳನ್ನು ವಿಚಾರ ಮಾಡಿ, ಸುಧಾರಣೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇದರಂತೆಯೇ ಪ್ರತಿಯೊಂದು ವಿಷಯದಲ್ಲಿಯೂ ವಿಚಾರ ಮಾಡತಕ್ಕಂಥ ವಿಷಯಗಳು ಬಹಳ ಇವೆ. ರೆವಿನ್ಯೂ ಖಾತೆಯಲ್ಲಿ ಅಡ್ಮಿನಿಸ್ಟ್ರೇಷನ್ ಸಾಕಷ್ಟು ಉತ್ತಮರೀತಿಯಿಂದ ಸಾಗುತ್ತಿದೆಯೋ ಇಲ್ಲವೋ ಎಂಬುದನ್ನೂ ಸಹ ನೋಡುವುದು ಅವಶ್ಯವೆನಿಸುತ್ತದೆ. ಮುಖ್ಯವಾಗಿ ನೋಡಿದಲ್ಲಿ ರೆವಿನ್ಯೂ ಖಾತೆಯಲ್ಲಿ ಮೊದಲಿಗಿಂತ ಅಡ್ಮಿನಿಸ್ಟ್ರೇಷನ್ ಸ್ವಲ್ಪ ಕಡಿಮೆ ತರಗತಿಗೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಈಗ ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ತಾಲ್ಲೂಕು ಮಟ್ಟದಲ್ಲಿ ನೋಡಿದರೆ ತಹಸೀಲುದಾರರು, ಅಲ್ಲಿಂದ ಸಬ್‌ಡಿವಿಜನಲ್ ಮಟ್ಟದಲ್ಲಿ ಪ್ರಾಂತ್ಯ ಆಫೀಸರು, ಅಸಿಸ್ಟೆಂಟ್ ಕಮಿಷನರು, ಜಿಲ್ಲಾ ಮಟ್ಟದಲ್ಲಿ ನೋಡಿದರೆ ಡೆಪ್ಯುಟಿ ಕಮಿಷನರು, ಡಿವಿಜನಲ್ ಕಮೀಶನರು ಮತ್ತು ಇಲ್ಲಿ ಸೆಕ್ರೆಟರಿ, ಈ ಪ್ರಕಾರವಾಗಿ ನೋಡಿದರೆ ಈಗ ಪ್ರತಿಯೊಂದು ಕೆಲಸವನ್ನೂ ರೆವಿನ್ಯೂ ಖಾತೆಗೆ ಒಪ್ಪಿಸುತ್ತಾ ನಡೆದದ್ದು ಕಂಡುಬರುತ್ತದೆ. ಇದರ ಪರಿಣಾಮವಾಗಿ ರೆವಿನ್ಯೂ ಖಾತೆಯಲ್ಲಿ ರೆವಿನ್ಯೂ ಆಡಳಿತದ ಕಡೆಗೆ ಸಾಕಷ್ಟು ಲಕ್ಷ್ಯವನ್ನು ಕೊಡಲಿಕ್ಕೆ ಸಾಧ್ಯವಾಗಿರುವುದಿಲ್ಲ. ರೆವಿನ್ಯೂ ಖಾತೆಯಲ್ಲಿ ರೆಕಾರ್ಡ್ ಆಫ್ ರೈಟ್ಸಿನ ಹಕ್ಕುದಾರ ಪತ್ರಿಕೆಗಳು ಬಹಳ ಮಹತ್ವದ ರೆಕಾರ್ಡುಗಳು ಇದ್ದು, ಅವುಗಳ ವ್ಯವಸ್ಥೆಯನ್ನು ಸರಿಯಾಗಿ ಏರ್ಪಡಿಸದಿದ್ದಲ್ಲಿ ಸಾಮಾನ್ಯ ಜನರಿಗೆ ಬಹಳ ಅಡಚಣಿಗಳು ಒದಗುತ್ತವೆ. ಆದ್ದರಿಂದ ರೆವಿನ್ಯೂ ಖಾತೆಯಲ್ಲಿ ಹೆಚ್ಚು ತಹಸೀಲುದಾರರು, ಹೆಚ್ಚು ಅಸಿಸ್ಟೆಂಟ್‌ಕಮಿಷನರು, ಹೆಚ್ಚು ಡೆಪ್ಯುಟಿಕಮಿಷನರನ್ನು ನೇಮಿಸಿ, ಒಂದು ಸುಧಾರಣೆ ಮಾಡದೆ ಇದ್ದ ಪಕ್ಷದಲ್ಲಿ ಮುಖ್ಯವಾಗಿ ರೈತಜನರು ಇದರಿಂದ ಅಸಂತೋಷಪಡುವ ಸಂಭವವಿದೆ. ಸರ್ಕಾರದವರು ಇತ್ತಕಡೆಗೆ ವಿಶೇಷ ಲಕ್ಷ್ಯಕೊಡಬೇಕೆಂದು ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಯಾವಪ್ರಕಾರ ಸರ್ಕಾರದಲ್ಲಿ ನಡೆಯುತ್ತಿದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಾನು ಹೆಸರು ಹೇಳುವುದಿಲ್ಲ. ಗದಗಿನ ಒಂದು ತಹಸೀಲ್‌ದಾರ್ ಕಚೇರಿಯಲ್ಲಿ ಒಬ್ಬನು ಹಂಗಾಮಿ ನೌಕರನಿದ್ದನು. ಅವನು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಅರ್ಜಿಮಾಡಿದ್ದನು. ಅವನ ಹೆಸರು ಪ್ರೊಬೇಷನ್‌ಲಿಸ್ಟಿನೊಳಗೆ ಒಂದನೇದಿತ್ತು. ಅವನನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ನೇಮಿಸಲಾಗಿದೆ ಎಂದು ಒಂದು ಹುಕುಮನ್ನು ಕಳುಹಿಸಲಾಯಿತು. ಆಗ ಅವನು ನನಗೆ ಬರುವುದಕ್ಕೆ ಕೆಲವು ಕಾರಣಾಂತರಗಳಿಂದ ತಡವಾಗುತ್ತದೆ, ಸ್ವಲ್ಪ ದಿನಗಳನಂತರ ಬರುತ್ತೇನೆ, ಪರವಾನಗಿಕೊಡಬೇಕು ಎಂದು ವಿನಂತಿ ಮಾಡಿಕೊಂಡಿದ್ದನು. ಪರವಾನಗಿ ಕೊಡಲಾಗಿತ್ತು. ಅನಂತರ ಅವನು ಗದಗಿನಿಂದ ಚಿಕ್ಕಮಗಳೂರಿಗೆ ಮುನ್ನೂರು ಮೈಲುಗಳ ಪ್ರವಾಸಮಾಡಿ ಹೋದನು, ಆದರೆ ಅವನು ಹಾಜರಾಗಲಿಕ್ಕೆ ಹೋದರೆ ಈಗ ಇರುವ ಹಂಗಾಮಿಯವನನ್ನು ತೆಗೆಯಲಿಕ್ಕೆ ಬರುವುದಿಲ್ಲೆಂದು ಅವನನ್ನು ನೌಕರಿಯಮೇಲೆ ಹಾಜರಮಾಡಿಸಿಕೊಳ್ಳಲಿಲ್ಲ. ಗದಗಿಗೆ ಹಿಂತಿರುಗಿದಾಗ ಇದ್ದ ನೌಕರಿಯು ಸಹ ಹೋಗಿಬಿಟ್ಟಿತ್ತು. ನೌಕರಿಯನ್ನೂ ಕಳೆದುಕೊಂಡು ಈಗ ಯಾವ ಆ ನೌಕರಿಯನ್ನೂ ಪಡೆಯದೆ ಅಡ್ಡಾಡುತ್ತಿದ್ದಾನೆ. ಇಂತಹ ಪ್ರಸಂಗಗಳು ಮೇಲಿಂದಮೇಲೆ ಒದಗಬಾರದು. ಇದರಿಂದ ಜನಗಳಿಗೆ ಅಸಂತೋಷ ಹೆಚ್ಚಾಗುತ್ತದೆ, ಸರಕಾರದ ಮೇಲೆ ಭರವಸೆ ಉಳಿಯುವದಿಲ್ಲ. ಕೂಡಲೆ ತಪ್ಪಿಸುವುದಕ್ಕೆ ಸರ್ಕಾರದವರು ಸರಿಯಾದ ಹುಕುಂಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

(ಶ್ರೀ ಸಿ. ಎಸ್. ಹುಲುಕೋಟಿ)

ಇನ್ನು ನ್ಯಾಯಖಾತೆಯ ವಿಷಯ. ಇಡೀ ರಾಜ್ಯದಲ್ಲಿ ಒಂದು ಕಾಮನ್ ಪ್ರೊಸೀಜರ್, ಕಾಮನ್ ರೂಲ್ಸ್ ಈ ಖಾತೆಯ ಬಗ್ಗೆ ಮಾಡುವುದು ಅವಶ್ಯಕ. ಈಗ ಎರಡು ವರ್ಷಗಳ ಮೇಲೆ ಆಗಿರುತ್ತದೆ. ಇದುವರೆಗೂ ಕಾಮನ್ ರೂಲ್ಸ್, ಕಾಮನ್ ಪ್ರೊಸೀಜರ್ ಆಗಿರುವುದಿಲ್ಲ. ಅದನ್ನು ಹೈಕೋರ್ಟಿನವರು ಮಾಡತಕ್ಕದ್ದಾಗಿದೆ. ಈ ಬಗ್ಗೆ ಸರ್ಕಾರದವರು ಹೈಕೋರ್ಟಿನವರಿಗೆ ವಿನಂತಿಮಾಡಿಕೊಳ್ಳಬೇಕು. ಕಾಮನ್ ರೂಲ್ಸ್ ಮತ್ತು ಕಾಮನ್ ಪ್ರೊಸೀಜರ್ ಅಫ್ ಸರ್ವಿಸ್ ರೂಲ್ಸ್ ಮಾಡಿದಲ್ಲ ಅದರಿಂದ ಜನಗಳಿಗೆ ತೊಂದರೆ ಕಡಮೆಯಾಗುತ್ತದೆ ಅದನ್ನು ಕೂಡಲೆ ಸರಿಪಡಿಸಬೇಕೆಂದು ನಾನು ಸರ್ಕಾರದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಮತ್ತೊಂದು ಮಹತ್ವವಾದಂಥ ಸಂಗತಿಯನ್ನು ಹೇಳಲಿಚ್ಛಿಸುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದ ಒಂಬತ್ತನೆಯ ಪಾನಿನಲ್ಲಿ ಫುಡ್ ಕ್ರಾಪ್ಸ್ ವಿಷಯದ ಬಗ್ಗೆ ವಿವರಣೆಯನ್ನು ಒದಗಿಸಿದ್ದಾರೆ. ಜೋಳ, ಅಕ್ಕಿ, ರಾಗಿ, ಬೇಳೆ ಕಾಳುಗಳು ಮತ್ತು ಭತ್ತ, ಸಜ್ಜೆ ಇವುಗಳ ವಿವರಣೆಕೊಟ್ಟಿದ್ದಾರೆ. ಅದರಂತೆಯೇ ಕಮರ್ಷಿಯಲ್ ಕ್ರಾಪ್ಸ್ ಅಂದರೆ ಗ್ರೌಂಡ್‌ನಟ್, ಹತ್ತಿ, ಕಾಫಿ ಮತ್ತು ಕಬ್ಬು ಇವುಗಳ ವಿವರಣೆಯನ್ನು ಕೊಟ್ಟಿರುತ್ತಾರೆ. ಅದೇ ಪ್ರಕಾರ ಅಗ್ರಿಕಲ್ಚರಲ್ ಹೆಡ್ಡಿನೊಳಗೆ ಬಡ್ಜೆಟ್ ಎಸ್ಟಿಮೇಟ್ಸ್ ಎಂಬ ಒಂದು ಬ್ಲೂಬುಕ್ಕಿನಲ್ಲಿ ನೂರಅರವತ್ತಮೂರನೆಯ ಪಾನಿನಿಂದ ಇನ್ನೂರ-ಅರವತ್ತನೆಯ ಪಾನಿನವರೆಗೆ ವ್ಯವಸಾಯ ಇಲಾಖೆಗಳ ಬಗ್ಗೆ ಅನೇಕ ಸಂಗತಿಗಳನ್ನು ವಿವರಿಸಿದ್ದಾರೆ. 1959-60ನೆಯ ವರ್ಷದ ಪ್ಲಾನ್ ಔಟ್‌ಲೆ ಪುಸ್ತಕದಲ್ಲಿ ಹದಿನೈದನೆಯ ಪಾನಿನಿಂದ ಇಪ್ಪತ್ತಾರನೆ ಪಾನಿನವರೆಗೆ ವಿವರಗಳನ್ನು ಕೊಟ್ಟಿದ್ದಾರೆ. ಇವುಗಳಲ್ಲಿ ಅರಳೆ, ಹತ್ತಿ, ರಿಸರ್ಚ್ ಸ್ಕೀಮ್ಸ್ ವಿವರಣೆ ಕೊಟ್ಟಿದ್ದಾರೆ. ಬೀಡಿ, ತಂಬಾಕದ ರಿಸರ್ಚ್ ಸ್ಕೀಮ್ಸ್ ವಿವರಗಳನ್ನೂ ಭತ್ತ, ಅಕ್ಕಿ ವಿವರಗಳನ್ನೂ ಕಾಫಿ ಮತ್ತು ಗೋಡಂಬಿ ಶೇಖರಣ ರಿಸರ್ಚ್‌ಸ್ಕೀಮ್ಸ್ ಇವುಗಳ ವಿವರಗಳನ್ನೂ ಕೊಟ್ಟು ಅವುಗಳ ಬಗ್ಗೆ ಹಣವನ್ನು ಸಹ ಪೂರೈಸಿದ್ದಾರೆ. ಆದರೆ ಒಂದು ಗೊತ್ತಾದ ಸಂಗತಿ ಅಂದರೆ ಮುಖ್ಯವಾಗಿ ಗೋಧಿ ಬೆಳೆಯ ವಿಷಯವಾಗಿ ಒಂದು ಶಬ್ದವನ್ನೂ ಸಹ ವಿವರಿಸಿಲ್ಲ. ಅದು ಮುಂಬೈ ಕರ್ಣಾಟಕ ಭಾಗದಲ್ಲಿ, ಹೈದರಾಬಾದ್ ಕರ್ಣಾಟಕ ಭಾಗದಲ್ಲಿ, ಹಳೆಯ ಮೈಸೂರಿನ ಕೆಲವು ಭಾಗಗಳಲ್ಲಿ ಮುಖ್ಯ ಬೆಳೆಯಾಗಿದೆ. ಈ ವಿಷಯದ ಬಗ್ಗೆ ಸರ್ಕಾರ ಇಷ್ಟು ಅಲಕ್ಷ್ಯವನ್ನು ಏಕೆ ಮಾಡಿರುವುದೋ ನನಗಂತೂ ಅರ್ಥವಾಗುವುದಿಲ್ಲ. ಸೊಗಸಾಗಿ ಹೇಳಬೇಕಾದರೆ, ವ್ಯವಸಾಯ ಖಾತೆಯವರಿಗೆ ಈ ಗೋಧಿಯ ರುಚಿ ಚೆನ್ನಾಗಿ ತಿಳಿದಿಲ್ಲವೆಂದು ನನಗನ್ನಿಸುತ್ತದೆ. ಗೋಧಿಯಿಂದ ಯಾವ ಯಾವ ರುಚಿಯಾದಂಥ ಸಾಮಾನುಗಳು ಆಗುತ್ತವೆಂದು ನಾನು ಹೇಳಿದರೆ, ಈ ಸಭೆಯಲ್ಲಿ ಅನೇಕರು ಬಾಯಿನೀರು ಬಿಡಬೇಕಾದ ಪರಿಸ್ಥಿತಿಯಾಗಬಹುದು. ಈ ವಿಷಯದ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನಕೊಡಬೇಕೆಂದು ನಾನು ಹೇಳುತ್ತೇನೆ. ಆ ರೀತಿ ಕೊಡುತ್ತಾರೆಂದು ನಾನು ನಂಬಿದ್ದೇನೆ. ಇದರಿಂದ ಹೂರಣದ ಹೋಳಿಗೆಗಳು ಆಗುತ್ತವೆ. ಹೂರಣದ ಕಡಬುಗಳು, ಸಿರಾ, ಉಪ್ಪಿಟ್ಟು, ಪೂರಿ, ಚಪಾತಿಗಳೆಲ್ಲಾ ತಯಾರುಮಾಡುತ್ತಾರೆ. ಇದು ಇಷ್ಟು ಮಹತ್ವದ ಬೆಳೆಯಾದುದಾಗಿದರೂ ಅದರ ಬಗ್ಗೆ ಒಂದು ಚಿಕ್ಕ ಶಬ್ದವನ್ನೂ ಮುಂಗಡ ಪತ್ರದ ವಿವರಣೆಯಲ್ಲಿ ಕೊಟ್ಟಿರುವುದಿಲ್ಲ. ಇದು ಬಹಳ ಶೋಚನೀಯಕರವಾದ ಸಂಗತಿ. ಕೇವಲ ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಅಕ್ಕಿ ಬೆಳೆಯುತ್ತಿರುವುದರಿಂದ ಅವರು ಆ ಜಿಲ್ಲೆಯವರು ಇರುವುದರಿಂದ ಗೋಧಿಯ ಬೆಳೆಯ ಕಡೆಗೆ ಅವರು ಗಮನ ಕೊಟ್ಟಂತೆ ಕಾಣುವುದಿಲ್ಲವೆಂದು ನನಗನ್ನಿಸುತ್ತದೆ. ನಮ್ಮ ಭಾಗಕ್ಕೆ ಯಾರಾದರೂ ಬಂದರೆ ಗೋಧಿಯಿಂದ ತಯಾರಾದ ರುಚಿಕರವಾದ ಊಟವನ್ನು ತಿನ್ನಿಸುವುದಕ್ಕೆ ನಾನು ಯಾವಾಗಲೂ ತಯಾರಾಗಿರುತ್ತೇನೆಂದು ವಿನಂತಿಮಾಡಿಕೊಳ್ಳುತ್ತೇನೆ. ಏಕೆಂದರೆ ನಮ್ಮಲ್ಲಿ ಮುಂಜಾನೆ, ಸಂಜೆ ಎರಡು ಹೊತ್ತೂ ಗೋಧಿ ಆಹಾರವನ್ನು ತಯಾರುಮಾಡುತ್ತಿರುತ್ತಾರೆ.

ಶ್ರೀ ಬಿ. ಡಿ. ಜತ್ತಿ.—ನಿಮ್ಮ ಕಡೆಯ ಗೋಧಿ ಬಹಳ ಚಲೋ ಇದೆ, ನನಗೆ ಗೊತ್ತುಂಟು. ಆದರೆ ಮೈಸೂರಿನವರಿಗೆ ಅದನ್ನು ಹೇಗೆ ಊಟಮಾಡುವುದು ಹೇಗೆ ತಯಾರುಮಾಡುವುದು ಎಂಬುದನ್ನು ತಿಳಿಸಬೇಕು.

ಶ್ರೀ ಸಿ. ಎಸ್. ಹುಲುಕೋಟಿ.—ನಾವು ಸಾಕಷ್ಟು ಪೂರೈಸುವುದಕ್ಕೆ ತಯಾರಿದ್ದೇವೆ. ವಿಚಾರಗಳೆಲ್ಲವನ್ನೂ ವಿಶದವಾಗಿ ತಿಳಿಸುತ್ತೇನೆ. ಧಾರವಾಡ, ಬೆಳಗಾಂ, ಬಿಜಾಪುರ, ರಾಯಚೂರ್, ಗುಲ್ಬರ್ಗ, ಬಳ್ಳಾರಿ, ಹಳೆಯ ಮೈಸೂರಿನ ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿಯೂ ಗೋಧಿಯನ್ನು ಬೆಳೆಯುತಕ್ಕ ಭಾಗಗಳು ಕೆಲವಿವೆ. ಆದರೆ ಅದರ ಕ್ಷೇತ್ರವೆಷ್ಟು, ಉತ್ಪನ್ನವೆಷ್ಟು, ಎಷ್ಟುಮಟ್ಟಿನ ಬೆಳೆಯಾಗುತ್ತದೆ, ಮತ್ತು ಅದರ ರೋಗಗಳೇನು ಎಂಬುದನ್ನು ವಿಚಾರಮಾಡಲಿಲ್ಲ. ಅದಕ್ಕೆ ಇರುವ ಮುಖ್ಯವಾದ ರೋಗಗಳು, ಭಂಡಾರರೋಗ, ಕುಂಕುಮ ರೋಗ ಇತ್ಯಾದಿ ರೋಗಗಳು ಗೋಧಿಯ ಬೆಳೆಗೆ ತಗುಲಿದರೆ ಆ ಬೆಳೆ ಬಾಲಪ್ರಮಾಣದಿಂದಲೇ ಸಾಯುತ್ತದೆ. ಆದ್ದರಿಂದ ಇವುಗಳ ರಿಸರ್ಚ್‌ಮಾಡತಕ್ಕದ್ದು ಅತ್ಯಾವಶ್ಯಕವೆಂದು ನಾನು ಸರ್ಕಾರದವರಿಗೆ ವಿನಂತಿಮಾಡುತ್ತೇನೆ. ಇದನ್ನು ರಿಸರ್ಚ್‌ಮಾಡದಿದ್ದರೆ, ಈ ಬೆಳೆಯೇ ನಾಶವಾಗಬಹುದು ಮತ್ತು ಜನರಿಗೆ ಬಹಳ ತೊಂದರೆಯಾಗುತ್ತದೆ.

ಅಧ್ಯಕ್ಷರು.—ಗೋಧಿಯಲ್ಲಿ ಈಗೀಗ ಕೆಲವು ಹೊಸ ನಮೂನೆಗಳನ್ನು ತೆಗೆದಿದ್ದಾರೆ. ಅವುಗಳನ್ನು ಸ್ವಲ್ಪ ವಿಚಾರಮಾಡಿ ತಿಳಿಸಿ.

ಶ್ರೀ ಸಿ. ಎಸ್. ಹುಲುಕೋಟಿ.—ಹೌದು. ಅವುಗಳನ್ನು ತಿಳಿಸಬೇಕಾಗಿದೆ. ಕೆನಫಾಡ ಗೋಧಿ ಎಂಬ ಮತ್ತೊಂದು ನಮೂನೆ ಗೋಧಿ ಇದೆ. ಅದು ಯಾವ ಪ್ರಮಾಣದಲ್ಲಿ ಹುಟ್ಟುವಳಿ ಬರಬೇಕಾಗಿರುತ್ತದೋ ಆ ಪ್ರಮಾಣದಲ್ಲಿ ಹುಟ್ಟುವಳಿ ಬರುವುದಿಲ್ಲ. ನನ್ನ ಸ್ವಂತ ಅನುಭವ ಅದರ ಬಗ್ಗೆ ಇದೆ. ನಾನು ಅದರ ಉಪಯೋಗಮಾಡಿದ್ದೇನೆ. ಈ ಕೆನ್ನಫಾಡ ರೋಗ ಬೀಳುವುದಿಲ್ಲ. ಆದರೆ ಅದರ ಹುಟ್ಟುವಳಿ ಕಡಿಮೆ ಪ್ರಮಾಣದ್ದು ಇರುವದಲ್ಲದೆ ಅದರ ಹೊಟ್ಟು ಬಿರುಸಾಗಿದ್ದು ದನಗಳಿಗೆ ಅದು ಸರಿಹೋಗುವುದಿಲ್ಲ. ಆದ್ದರಿಂದ ನಮ್ಮ ದೇಶದಲ್ಲಿ ನಮ್ಮ ಭಾಗಗಳಿಗೆಲ್ಲಾ ಗೋಧಿ ಬೆಳೆ ಬರುವಂತೆ ರಿಸರ್ಚ್‌ಸ್ಕೀಮ್ಸ್ ಅವಶ್ಯಕವಾಗಿ ಸರ್ಕಾರದವರು ಮಾಡಬೇಕೆಂದು ನಾನು ಕಳಕಳಿಯಿಂದ ಒತ್ತಾಯ ಪೂರ್ವಕವಾಗಿ ಬಿನ್ನಹಮಾಡುತ್ತೇನೆ. ಇನ್ನು ನೂರ-ಅರವತ್ತೈದನೆಯ ಪಾನಿನಲ್ಲಿ ಗ್ರೋಮೋರ್ ಫುಡ್ ಸಲುವಾಗಿ ಐದು ಲಕ್ಷ ನಲವತ್ತೊಂದು ಸಾವಿರದ ನೂರು ರೂಪಾಯಿಗಳನ್ನು ಕೊಟ್ಟಿದ್ದಾರೆ, ಅದು ಏತಕ್ಕೆಂದರೆ Pay of Officers, Pay of Establishment, Allowances and Honoraria, T.A, D.A.

ಇವೆಲ್ಲಕ್ಕೂ ಉಪಯೋಗಿಸುವುದಕ್ಕೆ. ಇವುಗಳಲ್ಲಿ ಸ್ವಲ್ಪ ಪ್ರಮಾಣವನ್ನಾದರೂ ರಿಸರ್ಚ್‌ಸ್ಟೇಷನ್‌ಗೋಸ್ಕರ ಕೊಟ್ಟಿದ್ದರೆ ಗ್ರೋಮೋರ್ ಫುಡ್ ವರ್ಕ್ಸ್ ಚೆನ್ನಾಗಿ ನಡೆಯುತ್ತಿತ್ತು. ಕೇವಲ ಭಾಷಣಮಾಡಿದರೆ ಗ್ರೋಮೋರ್ ಫುಡ್ ವರ್ಕ್ಸ್ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಬಡ್ಜೆಟ್ಟಿನಲ್ಲಿ ಈಗಲಾದರೂ, ಬಡ್ಜೆಟ್ ಸರ್ಕಾರದಲ್ಲಿ ಅಂಗೀಕಾರವಾಗುವುದಕ್ಕೆ ಮುಂಚಿತವಾಗಿಯೇ, ಈ ಗೋಧಿ ಬೆಳೆಯ ವಿಷಯದಲ್ಲಿ ಹೆಚ್ಚಿನ ಶ್ರದ್ಧೆಯಿಟ್ಟು, ಅದಕ್ಕಾಗಿ ಒಂದು ರಿಸರ್ಚ್ ಸ್ಟೇಷನ್ ಮಾಡಿ ಗೋಧಿಯ ಉತ್ಪನ್ನವನ್ನು ಹೆಚ್ಚಿಸುವುದಕ್ಕೂ, ಮತ್ತು ಗೋಧಿಯ ಬೆಳೆಗೆ ತಗಲುವ ರೋಗಗಳನ್ನು ಕಡಮೆಮಾಡುವುದಕ್ಕೂ ಸ್ವಲ್ಪ ಹಣವನ್ನು ಪೂರೈಸಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ನಾನು ಇನ್ನೂ ಕೆಲವು ವಿಚಾರಗಳನ್ನೀಗ ನಮ್ಮ ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಏನೆಂದರೆ ನಮ್ಮ ಭಾಗ ಮಳೆಯ ಅಭಾವದಿಂದ ಕ್ಷಾಮಪೀಡಿತ ಪ್ರದೇಶವಾಗಿದ್ದು ಜನರಿಗೆ ಬಹಳ ತೊಂದರೆಯಾಗುತ್ತದೆ. ಧಾರ್ವಾಡ, ಬೆಳಗಾಂ ಇತ್ಯಾದಿ ಜಿಲ್ಲೆಗಳಲ್ಲಿ ಮಳೆ ಬಹಳ ಕಡಮೆ. ಆದುದರಿಂದ ಅಲ್ಲಿಯ ಮಲಪ್ರಭಾ ಪ್ರಾಜೆಕ್ಟಿನ ಬಗ್ಗೆ ಮರಾಮತ್ ಶಾಖೆಯ ಸಚಿವರು ತಮ್ಮ ಸಂಪೂರ್ಣ ಗಮನವನ್ನು ಕೊಡಬೇಕು. ಆ ಪ್ರಾಜೆಕ್ಟನ್ನು ಪೂರ್ತಿಗೊಳಿಸಿದರೆ ನಮ್ಮ ಭಾಗದಲ್ಲಿರತಕ್ಕ ನರಗುಂದ, ನವಿಲುಗುಂದ, ಗದಗಿನ ಕೆಲವುಭಾಗ, ರೋಣ, ಬಾದಾಮಿ ತಾಲ್ಲೂಕಿನ ಕೆಲವು ಪ್ರದೇಶಗಳಿಗೆಲ್ಲ ನೀರು ಒದಗಿ ಸುಮಾರು ಐದು ಸಾವಿರ ಎಕರೆಗಳಷ್ಟು ಪ್ರದೇಶ ತರೀ ವ್ಯವಸಾಯಕ್ಕೆ ಬರುತ್ತದೆ. ಈಗ ಆ ಪ್ರದೇಶಗಳಿಗೆ ಕೇವಲ ಒಂದೆರಡು ಹದ ನೀರನ್ನು ಕೊಟ್ಟ ಪಕ್ಷದಲ್ಲಿ ಈಗೇನು ಅಲ್ಲಿ ಜನರು ಬೆಳೆ ತೆಗೆಯುತ್ತಿದ್ದಾರೋ ಅದಕ್ಕಿಂತಲೂ ಹೆಚ್ಚಿನ ಬೆಳೆ ಬೆಳೆಯಲು ಇದರಿಂದ ಅವಕಾಶವಾಗುತ್ತದೆ. ಈ ಪ್ರಾಜೆಕ್ಟಿಗೆ ಖರ್ಚು ಸಹ ಬಹಳ ಕಡಮೆಯಾಗುತ್ತದೆಂದು ತಿಳಿದುಬಂದಿದೆ. ಆ ಒಂದು ಪ್ರಾಜೆಕ್ಟ್ ಯಾವುದೆಂದರೆ ಅದು ಸವದತ್ತಿಯ ತೀರ್ಥದ ಪ್ರಾಜೆಕ್ಟು. ಇದರ ಸಂಪೂರ್ಣಮಾಹಿತಿ ನಮ್ಮ ಮರಾಮತ್ ಶಾಖೆಯ ಮಂತ್ರಿಗಳಿಗೂ ಗೊತ್ತಿದೆ. ಈ ಪ್ರಾಜೆಕ್ಟಿನ ಸ್ಥಳ ಬಹಳ ಆಯಕಟ್ಟು ಜಾಗದಲ್ಲಿ ಎರಡು ಗುಡ್ಡಗಳ ನಡುವೆ ಅಗದೀಕಿರಿದಾಯವುಳ್ಳದ್ದಾಗಿದೆ. ಈ ಪ್ರಾಜೆಕ್ಟನ್ನು ಕಾರ್ಯಗತಮಾಡಿದರೆ ಇದರಿಂದ ನಮ್ಮ ಪ್ರದೇಶಕ್ಕೆ ಬಹಳ ಉಪಯೋಗವಾಗುತ್ತದೆ. ಆದುದರಿಂದ ಆ ಪ್ರಾಜೆಕ್ಟಿನ ಸಂಪೂರ್ಣ ಇನ್‌ವೆಸ್ಟಿಗೇಷನ್ ನಡೆಸಿ ಈ ಕಾರ್ಯವನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲೋ, ತಪ್ಪಿದರೆ ಎರಡನೆಯ ಪಂಚವಾರ್ಷಿಕದ ಕೊನೆಯಲ್ಲೋ ಸೇರಿಸಬೇಕೆಂದು ಅವರಲ್ಲಿ ನಾನು ಆಗ್ರಹಪೂರ್ವಕವಾಗಿ ಅರಿಕೆಮಾಡಿಕೊಳ್ಳುತ್ತೇನೆ.

ಇದರಂತೆಯೇ ನಮ್ಮ ಭಾಗದಲ್ಲಿ ಮೈನರ್ ಟ್ಯಾಂಕುಗಳ ಜೀರ್ಣೋದ್ಧಾರ ಕಾರ್ಯವೂ ಸಹ ಬಹಳ ನಿಧಾನವಾಗಿದೆ. ಆದರೆ ಈಗಾಗಲೇ ನಮ್ಮ ಪಿ. ಡಬ್ಲ್ಯು. ಡಿ. ಮಂತ್ರಿಗಳು ಕೆಲವು ಮೈನರ್ ಇರಿಗೇಷನ್ ಕೆರೆಗಳನ್ನು ಒದಗಿಸಿಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ತುಂಬ ಆಭಾರಿಯಾಗಿದ್ದೇನೆ. ಆದರೆ ಈಗ ಆ ನಮ್ಮ ಧಾರ್ವಾಡ ಜಿಲ್ಲಾ ಮುಂಡರಗೀಪೇಟೆಕ್ಕೆ ಸೇರಿದ ಅಯ್ಯನ ಕೆರೆ ಚಿಕ್ಕ ಒಡ್ಡ ಹಟ್ಟಿಕೆರೆ, ತ್ಯಾಗನಕೆರೆ-ಇದು ಮೊದಲೇ ಇತ್ತು-ಈ ಕೆರೆಗಳ ಅಭಿವೃದ್ಧಿಯನ್ನು ಬೇಗ ಕಾರ್ಯಗತಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರದವರ ಗಮನಕ್ಕೆ ಇದೇ ಸಂದರ್ಭದಲ್ಲಿ ನಾನು ತರಬೇಕಾದ ಅಂಶ ಮತ್ತೊಂದಿದೆ. ಆ ಪ್ರದೇಶದಲ್ಲಿ ಕೆಲವು ಜಮೀನುಗಳನ್ನು ಅಕ್ವಯರ್ ಮಾಡಿಕೊಂಡಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮರಾಮತ್ ಶಾಖೆಯ ಸಚಿವರು ತಮ್ಮ ಗಮನವನ್ನು ಕೂಡಲೆ ಕೊಡಬೇಕಾಗಿದೆ. ಇಲ್ಲಿಯವರೆಗೂ ಆ ಜಮೀನುಗಳನ್ನೇನು ಸರ್ಕಾರದವರು ಅಕ್ವಯರ್‌ಮಾಡಿಕೊಂಡಿದ್ದಾರೋ ಅಂಥ ಜಮೀನುಗಳ ಬಗ್ಗೆ ಸಂಬಂಧಪಟ್ಟ ಅಲ್ಲಿಯ ಜನರಿಗೆ ಯಾವ ಒಂದು ಪರಿಹಾರವನ್ನೂ ನೀಡಿಲ್ಲ. ಅದನ್ನು ಸರ್ಕಾರದವರು ಬೇಗ ತೀರ್ಮಾನವಾಡಬೇಕೆಂದು ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಹತ್ತೊಂಭತ್ತು ನೂರನಲವತ್ತು ಮೂರರಲ್ಲಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಇಲ್ಲಿಯವರೆಗೆ ಯಾವ ಪರಿಹಾರವನ್ನೂ ಒದಗಿಸದಿರುವ ಕಾರಣ ಅಲ್ಲಿಯ ಜನರಿಗೆ ಬಹಳ ತೊಂದರೆಯಾಗಲಿಕ್ಕೆ ಹತ್ತಿದೆ. ಈ ವಿಚಾರಕ್ಕೆ ಸರ್ಕಾರದವರು ತಮ್ಮ ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಭಾಗದ ರಸ್ತೆ ಸಂಚಾರ ಸೌಕರ್ಯಗಳ ವಿಷಯ ಹೇಳುವುದಾದರೆ, ಹುಬ್ಬಳ್ಳಿ—ಗದಗದ ರೋಡ್ ಒಂದನ್ನು ಬಿಟ್ಟರೆ ಅಲ್ಲಿ ಇನ್ನೊಂದು ಟಾರ್ ರಸ್ತೆಯಿರುವುದಿಲ್ಲ. ಅಲ್ಲಿ ಗದಗ್—ಕೊಪ್ಪಳ ರೋಡು ಮತ್ತು ಹಾನ್ಸೀಟಿಯಿಂದ ಕಾರವಾರ್ ಬಂದರಿಗೆ ಹೋಗತಕ್ಕ ರೋಡು ಬಹಳ ಮಹತ್ವದವುಗಳಾಗಿರುವುದರಿಂದ ಈ ಮಾರ್ಗಗಳಿಗೆ ಟಾರು ಹಾಕಿಸತಕ್ಕ ಬಗ್ಗೆ ತೀವ್ರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಸರ್ಕಾರದವರನ್ನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಗದಗ್—ಕೊಪ್ಪಳ ರಸ್ತೆ ಕಾರ್ಯ ಭರದಿಂದ ಸಾಗುತ್ತಿದೆ. ನಾನು ಮೊನ್ನೆತಾನೆ ಅಲ್ಲಿಗೆ ಹೋಗಿದ್ದಾಗ ನೋಡಿಕೊಂಡು ಬಂದಿದ್ದೇನೆ.

ಶ್ರೀ ಸಿ. ಎಸ್ ಹುಲುಕೋಟಿ.—ಅದು ಕಾಗದದ ಮೇಲೆ ಭರದಿಂದ ಸಾಗುತ್ತಿರಬಹುದು !

Sri H. M. CHANNABASAPPA.—With the permission of the Speaker, I would like to tell the Hon'ble Member that the work is in progress. I myself have gone and seen Koppal side.

ಅಧ್ಯಕ್ಷರು.—ತಾವು ಕೊಪ್ಪಳ ಸೈಡಿನಿಂದ ಕೆಲಸ ಪ್ರಾರಂಭವಾಗಿದೆಯೆಂದು ಹೇಳುತ್ತಿದ್ದೀರಿ. ಪ್ರಾಯಶಃ ಮಾನ್ಯ ಸದಸ್ಯರು ಆ ಕೆಲಸ ಗದಗ್‌ಕಡೆಯಿಂದ ನಡೆಸಬೇಕೆಂದು ಕೇಳುತ್ತಿರಬಹುದು.

ಶ್ರೀ ಸಿ. ಎಸ್. ಹುಲುಕೋಟಿ.—ವಾಲರ್—ಬಾದಾಮಿರಸ್ತೆ ವಿಚಾರವನ್ನಾಗಲೇ ಶ್ರೀ ದೊಡ್ಡಮೇಟಿಯವರು ಹೇಳಿದ್ದಾರೆ. ಅದೂ ಸಹ ಬಹಳ ಮಹತ್ವದ ರಸ್ತೆ ಅದೆ. ಇವುಗಳಿಗೆಲ್ಲ ಸರ್ಕಾರದವರು ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಪ್ರಾಂತದಲ್ಲಿ ಲಂಬಾಣಿ ತಾಂಡಗಳು ಹೆಚ್ಚಾಗಿರುತ್ತವೆ. ಅವರಿಗೀಗ ಕುಡಿಯುವ ನೀರಿನ ತೊಂದರೆ ಬಹಳವಾಗಿದೆ. ಆ ಬಗ್ಗೆ ಸರ್ಕಾರದವರು ಕೂಡಲೇ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಪ್ರಾರ್ಥಿಸಿ ನನಗಿನ್ನು ಹೆಚ್ಚು ವಿಚಾರ ಹೇಳುವುದಕ್ಕೆ ವೇಳೆಯಿಲ್ಲದೆ ಇರುವುದರಿಂದ ನಾನು ಇಷ್ಟಕ್ಕೇ ನನ್ನ ಭಾಷಣವನ್ನು ಮುಗಿಸಿ ಇಷ್ಟು ಮಾತನಾಡುವುದಕ್ಕೆ ನನಗೊಂದು ಅವಕಾಶ ಕಲ್ಪಿಸಿಕೊಟ್ಟದ್ದಕ್ಕಾಗಿ ಅಧ್ಯ

(ಶ್ರೀ ಸಿ. ಎಸ್. ಹುಲಿಕೋಟಿ)

ಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಸ್ಥಾನದಲ್ಲಿ ಕುಳಿತುಕೊಳ್ಳುತ್ತೇನೆ.

Sri C. M. ARUMUGHAM.—How long are we sitting ?

Mr. SPEAKER.—Up to 7 P.M.

Sri C. M. ARUMUGHAM.—Why should we sit up to 7 ? In the beginning alone I submitted to the Deputy Speaker about it and he said that he would consider it.

Sri T. MARIAPPA.—Too much.

Mr. SPEAKER.—In the Lok Sabha they start at 11 O'clock and finish at 5.

Sri C. J. MUCKANNAPPA.—Yesterday we agreed to sit up to 7.

*ಶ್ರೀ ಯು. ಎಂ. ಮಾದಪ್ಪ.—ಸ್ವಾಮಿ, ಈ ಮಾನ್ಯ ಸಭೆಗೆ ನಾನು 1952ರಲ್ಲಿ ಸದಸ್ಯನಾಗಿ ಪ್ರವೇಶಿಸಿದ ನಂತರ ಇಲ್ಲಿಯವರೆಗೆ ಏಳು ಆಯವ್ಯಯ ಪಟ್ಟಿಗಳನ್ನು ಸಿಂಹಾವಲೋಕನಮಾಡುವ ಅವಕಾಶವನ್ನು ಪಡೆದಿದ್ದೇನೆ. ಈ ಏಳು ಆಯವ್ಯಯ ಪಟ್ಟಿಗಳನ್ನೂ ಮತ್ತು ವಿಶಾಲ ಮೈಸೂರು ರಾಜ್ಯವಾದಮೇಲೆ ನಾನು ಒಂದೆರಡು ಆಯವ್ಯಯ ಪಟ್ಟಿಗಳನ್ನೂ ಸಿಂಹಾವಲೋಕನಮಾಡಿ ನೋಡಿದ್ದೇನೆ. ಇವುಗಳೆಲ್ಲಾ ನೋಡಿದ್ದರಲ್ಲಿ ನನಗೆ ಅರ್ಥವಾಗಿರುವುದೇನೆಂದರೆ ಸರ್ಕಾರದವರನ್ನು ಕುರಿತು ವಿರೋಧ ಪಕ್ಷದವರು ವರ್ಷೇ ವರ್ಷೇ ನೀವು ಖೋತಾ ಬಡ್ಜೆಟ್ಟನ್ನೇ ನಮ್ಮ ಮುಂದೆ ಇಡುತ್ತಿದ್ದೀರಿ ಎಂದು ಹೇಳುತ್ತಿದ್ದಂಥ ಕಾಲವೂ ಇತ್ತು, ಮತ್ತು ಸರ್ಕಾರದವರು ಅವರ ಕೆಳಗಿರತಕ್ಕ ಗಜೆಟೆಡ್ ಆಫೀಸರುಗಳು ಹೇಗೆ ಲೀಡ್ ಕೊಟ್ಟರೆ ಹಾಗೆ ಒಂದು ಗ್ರಾಮಾಫೋನ್ ರೆಕಾರ್ಡಿನಂತೆ ಅದನ್ನೇ ಹೇಳುತ್ತಿದ್ದಾರೆಂದು ಹೇಳುತ್ತಿದ್ದಂಥ ಕಾಲವೂ ಇತ್ತು. ಇದನ್ನೆಲ್ಲಾ ಆಡಳಿತ ಪಕ್ಷದವರು ಗಮನಕ್ಕೆ ತೆಗೆದುಕೊಂಡು ಈ ದಿವಸ ಸರ್ಕಾರದವರು ಈ ರೀತಿಯ ಒಂದು ಬಡ್ಜೆಟ್ಟನ್ನು ಸಭೆಯ ಮುಂದಿಟ್ಟು ಇದರಲ್ಲಿ ಈಗ ಖೋತಾಯಿರುವುದಿಲ್ಲ ಎಂದು ಹೇಳುವುದಕ್ಕೆ ಧೈರ್ಯದಿಂದ ಮುಂದಾಗಿದ್ದಾರೆಂದು ಹೇಳಬೇಕಾಗಿದೆ. ಆದರೆ ಸರ್ಕಾರದವರು ಈ ದಿವಸ ನಮ್ಮ ಮುಂದಿಟ್ಟಿರತಕ್ಕ ಬಡ್ಜೆಟ್ ಖೋತಾ ಬಡ್ಜೆಟ್ಟೇ ಅಥವಾ ಉಳಿತಾಯದ ಬಡ್ಜೆಟ್ಟೇ ಎನ್ನುವುದನ್ನು ಮೊದಲು ನಿರ್ಧರಿಸಬೇಕಾದಂಥಾದ್ದು ನಮ್ಮ ಮೊದಲನೆಯ ಕರ್ತವ್ಯ ಎನ್ನುವ ಒಂದು ಪರಿಸ್ಥಿತಿ ಒದಗಿ ಬಂದಿದೆ.

ಸ್ವಾಮಿ, ಶ್ರೀ ಟಿ. ಮರಿಯಪ್ಪನವರು ತಮ್ಮದೇ ಆದ ಒಂದು ವಾದಸರಣಿಯಲ್ಲಿ ಇದೊಂದು ಸರ್‌ಪ್ಲಸ್ ಬಡ್ಜೆಟ್ ಎಂದು ಹೇಳಿದ್ದಾರೆ. ಅವರ ವಾದಸರಣಿ ಹೇಗಿದೆಯೆಂದರೆ—Total Revenue receipts Rs. 7167·39 and Total Expenditure on Revenue Accounts Rs. 7118·99, ಎಂದು ಈ ಪ್ರಕಾರ ಹೇಳಿ 48·40 ಲಕ್ಷ ರೂಪಾಯಿಗಳನ್ನು ಸರ್‌ಪ್ಲಸ್ ಎಂದು ವಾದಮಾಡಿದ್ದಾರೆ. ಆದುದರಿಂದ ಇದು ಖೋತಾ ಬಡ್ಜೆಟ್ಟಲ್ಲ ಎಂಬುದು ಅವರ ವಾದ. ಆದರೆ ಇದು ಖೋತಾ ಬಡ್ಜೆಟ್ಟೇ ಹೌದೇ ಅಲ್ಲವೇ ಎಂಬುದನ್ನು ನಾನೀಗ ಸಮರ್ಥನೆ ಮಾಡಬೇಕಾಗಿದೆ.

6 P.M.

[SRIMATHI K. S. NAGARATHNAMMA in the Chair.]

ನಾನು ಹೇಳುವುದಾದರೆ ಹೀಗೆ ಹೇಳುತ್ತೇನೆ. Total expenditure under Revenue Account 7118.99, Capital Expenditure outside the Revenue Account 7294.70. Total expenditure under Revenue and Capital 9413.69. ಅಲ್ಲಿಗೆ outside revenue ಹೇಳುವುದಾದರೆ 7167.39 ಆಗುತ್ತದೆ. ಇದರಿಂದ deficit ಎಷ್ಟು ಬರುತ್ತೆಂದರೆ 2246.30. ಇದು ನಿಜವಾದ ಒಂದು ಖೋತ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಬಹಳ ಚಮತ್ಕಾರದಿಂದ ಕೊಡಬಹುದು ಎಂದು ಇನ್ನು ಯಾವ ಯಾವ ತರಹ ಡಿಫಿಸಿಟ್ ಬರಬಹುದು ಎಂದು ಲೆಕ್ಕ ಹಾಕಿದ್ದೇನೆ. ಇನ್ನೂ ಸ್ವಲ್ಪ ಮುಂದೆ ಹೋಗಿ ಹೇಳುವುದಾದರೆ Capital Accountಗೆ ಲೋನಿನಿಂದ ಹಾಕುತ್ತೇವೆ, Unfunded Debtಗೆ ಮಾತ್ರ ಒಂದು ಆಸ್ತಿಯಿಂದ ಕೊಡುತ್ತೇವೆಂದು ಹೇಳುವುದಾದರೆ ಅದನ್ನೂ ನೋಡೋಣ, ಅದರಲ್ಲಿ ಎಷ್ಟರಮಟ್ಟಿಗೆ ಸತ್ಯವಿದೆ ಎನ್ನುವುದನ್ನು ನೋಡೋಣ Receipt under Consolidated Fund 9843.92, under Public Accounts 37528.43. Total all account of receipt 47372.35. ಇನ್ನು disbursement ತೆಗೆದುಕೊಂಡರೆ total disbursement out of Consolidated Fund 10737.83, disbursement out of Public Accounts 36667.76. ಹೀಗಾದರೆ total of disbursements 47,405.59. ಹೀಗೆ ಹೇಳುವಾಗ total all account receipt ಎಷ್ಟಿದೆ ಎಂದರೆ ಮೊದಲೇ ಹೇಳಿದಂತೆ 47372.35. ಇದರಿಂದ specific ಆದ deficit ಎಷ್ಟು ಬರುತ್ತದೆಂದರೆ 33.24 ಲಕ್ಷ. ಹೀಗೆ ಈ ರೀತಿಯಾಗಿ ಒಟ್ಟು ತೆಗೆದುಕೊಂಡರೆ 33.24ಲಕ್ಷ ರೂಪಾಯಿ ಡೆಫಿಸಿಟ್ ಬರುತ್ತದೆ ಎಂದು ಅರ್ಥ ಸಚಿವರು ತಿಳಿದುಕೊಳ್ಳಬೇಕೆಂದು ನಾನು ಒತ್ತಾಯಮಾಡಿ ಹೇಳಬೇಕಾಗಿ ಬಂದಿದೆ. ಅದೂ ಸಾರ್ವಜನಿಕ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಆದುದರಿಂದ ಈ ಬಡ್ಜೆಟ್ಟು ಸಾರ್ವಜನಿಕರನ್ನು ಮಾರ್ಗ ತಪ್ಪಿಸುವ ಬಡ್ಜೆಟ್ ಎಂದರೆ ತಪ್ಪಾಗುವುದಿಲ್ಲ. ಸಾರ್ವಜನಿಕರ ಮಾರುಕಟ್ಟೆಯ ಮೇಲೆ ಈ ಬಡ್ಜೆಟ್ ಪರಿಣಾಮ ಬಹಳವಾಗುತ್ತದೆ, ಬಹಳ ದುಷ್ಪರಿಣಾಮವಾಗುತ್ತದೆ. ಇಂಥ ತಪ್ಪು ಅಂಕಿಅಂಶಗಳಿಂದ ದೇಶದಲ್ಲಿ ತಪ್ಪು ಪರಿಣಾಮವುಂಟಾಗುತ್ತದೆ ಎಂದು ಹೇಳಬೇಕಾಗಿ ಬಂದಿದೆ.

ಇನ್ನೂ ಸ್ವಲ್ಪ ಮುಂದೆ ಹೋಗಿ ನೋಡೋಣ. ಇನ್ನು ಸಾಲವನ್ನು ಸರ್ಕಾರ ಎಷ್ಟರಮಟ್ಟಿಗೆ ತೀರಿಸುವ ಪ್ರಯತ್ನವನ್ನು ಮಾಡಿದೆ, ಅದಕ್ಕೇನಾದರೂ ಗ್ಯಾರಂಟಿ ಇದೆಯೇ, ಗ್ಯಾರಂಟಿ ಇರಬೇಕಾದದ್ದು ಅರ್ಥಶಾಸ್ತ್ರದ ವಿಷಯವಲ್ಲವೇ ಎನ್ನುವುದನ್ನು ಯೋಚನೆ ಮಾಡೋಣ. ಎಲ್ಲವನ್ನೂ ಒಪ್ಪಿಕೊಳ್ಳುತ್ತಾರೆ. ಆದರೆ ಕಾರ್ಯರೂಪದಲ್ಲಿ ತರುವಾಗಮಾತ್ರ ಸ್ವಲ್ಪ ತಪ್ಪು ಹೆಜ್ಜೆ ಇಡುತ್ತಾರೆ. ಇವರು ಮಾಡುವುದು ಹೇಗಿದೆ ಎಂದರೆ ಪಾಯಸ ಮಾಡಿ ಅದರಲ್ಲಿ ಏನೋ ಹಾಕಿದರು ಎಂದು ಹೇಳುವಂತಿದೆ. ನಮ್ಮ ಸ್ನೇಹಿತರು ನಾಯಿ ಬಾಲವೆಂದು ಹೇಳುತ್ತಾರೆ. ಹೀಗಾಗಬಾರದು.

ಶ್ರೀ ಟಿ. ಮರಿಯಪ್ಪ.—ಅದು ಸರಿಯಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಅದನ್ನೆಲ್ಲ ನಾನು ಹೇಳಬೇಕಾಗಿಲ್ಲ. ಸಾರ್ವಜನಿಕರು ತಿಳಿದುಕೊಂಡಿದ್ದಾರೆ. ಸಾರ್ವಜನಿಕರಿಂದ ತೆಗೆದುಕೊಂಡಿರತಕ್ಕ ಸಾಲ, ಇಂಡಿಯಾ ಸರ್ಕಾರದಿಂದ ತೆಗೆದುಕೊಂಡಿರತಕ್ಕ ಸಾಲ ಈ ಸಾಲಗಳನ್ನು ತೀರಿಸುವ ಪ್ರಯತ್ನದಲ್ಲಿ Sinking Fund create ಮಾಡಬೇಕು ಎಂದು ಇದೆ. ಇದರಲ್ಲಿ 157.00 ಇವೊತ್ತಿನ ದಿವಸ receipts ಇದೆ. Debt service ಎಷ್ಟಿದೆ ಎಂದರೆ 376.35. ಆದುದರಿಂದ ಬಡ್ಡಿಯನ್ನು ಕೊಡಬೇಕಾಗಿದ್ದರೆ ಮತ್ತು ಸಾಲವನ್ನು ತೀರಿಸಬೇಕಾಗಿದ್ದರೆ ಈ ಲೆಕ್ಕದಲ್ಲಿರತಕ್ಕ ಪ್ರಕಾರ 219.35 ಡಿಫಿಸಿಟ್ ಬರುತ್ತದೆ. ಇದು ಸರಿಯಲ್ಲ. ಇನ್ನೂ ಮುಂದೆ ಬರುತ್ತೇನೆ. ಆವಾಗ ಎಲ್ಲರಿಗೂ ಚೆನ್ನಾಗಿ ಅರ್ಥವಾಗುತ್ತದೆ ಎಂದು ಕಾಣುತ್ತದೆ. ಇದನ್ನು ಎಲ್ಲಿಂದ ಸರಿತೂಗಿಸುತ್ತಾರೆ! ಇದನ್ನು ಸರಿತೂಗಿಸುವುದಕ್ಕೆ Consolidated Fundನಿಂದ ತರಬಹುದು ಅಥವಾ ಸಾರ್ವಜನಿಕರಿಂದ ತೆಗೆದುಕೊಂಡಿರತಕ್ಕ ಸಾಲದಿಂದ ಬಂದಿರುವ ಹಣದಲ್ಲಿ ಕೊಡಬಹುದು, ಅಥವಾ ಸಾರ್ವಜನಿಕರು ಇವರನ್ನು ನಂಬಿ ಇಟ್ಟಿರುವ ಡಿಪಾಸಿಟ್ ಹಣದಲ್ಲಿ ಕೊಡಬಹುದು. ಈ ಡಿಪಾಸಿಟ್‌ನಿಂದ ಕೊಟ್ಟರೆ ಅದು breach of trust ಆಗುತ್ತದೆ. ಇನ್ನು Public Debt ಎಷ್ಟಿದೆ ಎಂದರೆ 607.23. ಇದನ್ನು ಸಹ, ಇವರು ತಯಾರಿಸಿರುವ ಬಜೆಟ್ ಪ್ರಕಾರ Consolidated Fundನಿಂದಲೇ ಕೊಡಬಹುದು. ಅದನ್ನೆಲ್ಲ ನೋಡಿದರೆ ನಮಗೆ ಎಷ್ಟು ಡಿಫಿಸಿಟ್ ಕಾಣಿಸುತ್ತದೆಂದರೆ, Charge on Consolidated Account ಎಷ್ಟಾಗುತ್ತದೆಂದರೆ, 607.23 + 219.35 = 826.58 ಕೋಟಿ ರೂಪಾಯಿಗಳನ್ನು ಇವೊತ್ತಿನ ದಿವಸ ಕನ್‌ಸಾಲಿಡೇಟೆಡ್ ಫಂಡಿನಿಂದ ಕಡ್ಡಾಯವಾಗಿ ಕೊಡಲೇಬೇಕು. ಇದನ್ನು ಸಾರ್ವಜನಿಕರಿಂದ ವಸೂಲಾದ ರೆವೆನ್ಯೂ ಅಕೌಂಟಿನಿಂದ ಕೊಡುವುದಕ್ಕೆ ಅವಕಾಶವೇ ಇಲ್ಲ, ಸಾಧ್ಯವೇ ಇಲ್ಲ. ಇದು ಅಂಕಿಸಂಖ್ಯೆಗಳನ್ನು ಆ ಕಡೆ ಈ ಕಡೆ ಹಾಕಿ ಬಜೆಟ್ಟನ್ನು ತಯಾರುಮಾಡಿ ಮಕಮಲ್ ಟೋಪಿ ಹಾಕುವ ಪ್ರಯತ್ನವೇ ವಿನಾ ಇನ್ನೇನೂ ಇಲ್ಲವೆಂದು ಘಂಟಾಘೋಷವಾಗಿ ಹೇಳಬಲ್ಲೆ. Receipt under Debt Services 243.83, receipt under Sinking Fund 157.00 ಅಲ್ಲಿಗೆ Receipt towards discharge 86.83 ಮಾತ್ರವಾಗುತ್ತದೆ. ಇದರಿಂದ ಏನಾಗುತ್ತದೆಂದರೆ ಅರ್ಥಿಕ ಮಂತ್ರಿಗಳು ಆಯವ್ಯಯ ಪಟ್ಟಿಯನ್ನು ಮಂಡಿಸಿ ಮಾತನಾಡುತ್ತ ಹೇಳಿದ ಒಂದು ಮಾತು ಮಾತ್ರ ಸಿದ್ಧಾಂತವಾಗಿದೆ. ಕೊಟ್ಟಂಥ ಸಾಲ ಸರಿಯಾಗಿ ಬರುತ್ತಿಲ್ಲ, ಸ್ಥಳೀಯ ಸಂಸ್ಥೆಗಳಿಂದ ವಸೂಲಾಗುತ್ತಿಲ್ಲ, ವ್ಯಕ್ತಿಗಳಿಗೆ ಕೊಟ್ಟಿರತಕ್ಕ ಸಾಲವೂ ಸಹ ನಿಗದಿಯಾದ ಕಾಲದಲ್ಲಿ ಬರುತ್ತಿಲ್ಲ. ಇದರಿಂದ ಬೊಕ್ಕಸಕ್ಕೆ ಬಂದಂಥ ಉತ್ಪತ್ತಿಯಲ್ಲಿ ನಾವು ಸಾಲವನ್ನು ತೀರಿಸುವುದಕ್ಕೆ ಪ್ರಯತ್ನಪಡಬೇಕಾಗಿದೆ, ಎಂದು ಹೇಳಿದ ಮಾತು ನಿಜವಾಗಿ ಕಾಣುತ್ತದೆ. ಈ ಬಜೆಟ್ಟಿನ ಆರ್ಥಿಕ ಪರಿಸ್ಥಿತಿ ಬಹಳ ಕಳವಳವನ್ನು ಉಂಟುಮಾಡುತ್ತದೆಂದು ಭಾಷಣಮಾಡಿದರು. ನಾವು ಕೊಡಬೇಕಾದಂಥ ಸಾಲ 826.58 ಲಕ್ಷ ರೂಪಾಯಿಗಳಾಗಿರುವುದರಿಂದ ಕಳವಳಕ್ಕೆ ಕಾರಣ ಪಿದ್ದೇ ಇದೆ. ಅದಕ್ಕೆ ಕಾರಣರು ಯಾರು! ಸ್ಥಳೀಯ ಸಂಸ್ಥೆಗಳೇ ಅಥವಾ ಸರ್ಕಾರವೇ! ಇದು ನಮ್ಮ ಮುಂದೆ ಇವೊತ್ತಿನ ದಿವಸ ಇರತಕ್ಕ ಪ್ರಶ್ನೆ. ಇಂಥ ಕಳವಳವನ್ನುಂಟುಮಾಡತಕ್ಕ ಪರಿಸ್ಥಿತಿಯನ್ನುಂಟು ಮಾಡಿದವರು ಯಾರು. ಸರ್ಕಾರವೇ ಹೊರತು ಬೇರೆಯಲ್ಲವೆಂದು ಘಂಟಾಘೋಷವಾಗಿ ಹೇಳಬಲ್ಲೆ. ಸ್ಥಳೀಯ ಸಂಸ್ಥೆಗಳು ಕೆಲಸ ಮಾಡಲಿಲ್ಲವೇ ಎಂದು ಕೇಳಿದರೆ ಅವು ಕಾಲಕಾಲಕ್ಕೆ ಸರಿಯಾಗಿ ಕೆಲಸ ಮಾಡಿವೆ. ಆದರೆ ಒಂದು ಸರ್ಕಾರ ಹೋಗಿ ಮತ್ತೊಂದು ಸರ್ಕಾರ ಬರುವುದರಲ್ಲಿ ನಿಮ್ಮಲ್ಲಿ confusion ಉಂಟಾಗಿ, ಸ್ಥಳೀಯ ಸಂಸ್ಥೆಗಳಿಗೆ ಎಷ್ಟು ಸಾಲವನ್ನು ಕೊಟ್ಟಿದ್ದೇವೆ, ಅದು ಯಾವ ಕಾಲದಲ್ಲಿ ವಸೂಲ್ಮಾಡಬೇಕೆಂಬುದು ಅರ್ಥವಾಗಿಲ್ಲ.

ಶ್ರೀ ಟಿ. ಮರಿಯಪ್ಪ.—ಎಷ್ಟು ಸಲ ಕೇಳಿದರೂ ಕೂಡ ಕೊಡದೆ ಕಾಲವನ್ನು ಕೊಡುವಂತೆ ಪ್ರಾರ್ಥಿಸಿ ಎಷ್ಟೋ ಡೆಪ್ಯುಟೇಷನ್‌ಗಳೂ ಮತ್ತು ಅಪ್ಲಿಕೇಷನ್‌ಗಳೂ ಬಂದಿವೆ. ಅದಕ್ಕಾಗಿಯೇ ಈ ಸಲ ಆ ಜವಾಬ್ದಾರಿ ಅಸೆಂಬ್ಲಿಗೇ ಇರಲಿ ಎಂದು ಆ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಮಾನ್ಯ ಮಂತ್ರಿಗಳ ಮಾತು ಎಷ್ಟರಮಟ್ಟಿಗೆ ನಿಜವೆನ್ನುವುದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇವರು ಹೇಳುವುದು ಸತ್ಯಕ್ಕೆ ದೂರವಾದುದು ಎಂದರೆ ನೂರಕ್ಕೆ 90ರಷ್ಟು ಭಾಗ ದೂರವಾದುದು. ಇದರಲ್ಲಿ ಶೇಕಡ ಹತ್ತರಷ್ಟು ನಿಜವಿರಬಹುದು. ನನ್ನ ಕ್ಷೇತ್ರದಲ್ಲಿ ಮುನಿಸಿಪಾಲಿಟಿ ಕೊಟ್ಟಿರುವುದು 12½ ಲಕ್ಷ ರೂಪಾಯಿ ಸಾಲ. ಅದು 1956ನೇ ಇಸವಿಯಲ್ಲಿ ಮಂಜೂರು ಆದದ್ದು. ಇವೊತ್ತಿನವರಿಗೂ ಅವರಿಗೇ ಪಾವತಿ ಮಾಡಿಲ್ಲವೆಂದು ತಿಳಿದಿದ್ದೇನೆ. ಇಲ್ಲಿ ಪ್ರಶ್ನೋತ್ತರಗಳ ಕಾಲದಲ್ಲಿ ಸರ್ಕಾರ ಹೊರಪಡಿಸಿದಂತೆ 12½ ಲಕ್ಷ ಸಾಲ ಮಂಜೂರಾಗಿ ಮತ್ತು ಮಂಜೂರಾದ ಬಗ್ಗೆ ಕಾಪಿಗಳನ್ನು ಮುನಿಸಿಪಾಲಿಟಿಗೆ ಕಳುಹಿಸಿದ್ದೇವೆಂದು ಹೇಳಿದರು. ನನ್ನ ಕ್ಷೇತ್ರದಲ್ಲಿರುವ ಮುನಿಸಿಪಾಲಿಟಿಗೆಯೇ ಸುಮಾರು ಮೂರುವರೆ ಲಕ್ಷರೂಪಾಯಿಗಳಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದಾರೆ. ಅದು ಹೇಗೆ ವಸೂಲಾಗುತ್ತಿದೆ ಎನ್ನುವುದು ನಮ್ಮ ಸೆಕ್ರೆಟೇರಿಯಟ್ಟಿಗೇ ಗೊತ್ತಾಗಬೇಕು ಅಥವಾ ಇನ್ನು ಹೇಗೆ ಬರುತ್ತದೆಯೋ ದೇವರೇ ಬಲ್ಲ. ಅಲ್ಲದೆ ಈ ಮುನಿಸಿಪಾಲಿಟಿಗೆ ಸ್ಯಾಂಕ್ಷನ್ನು ಆದ ಕೆಲಸಕ್ಕೆ ಬೇಕಾದಂತಹ ಸಾಮಾನುಗಳು ಪೈಪುಗಳು ಭದ್ರಾವತಿಯಿಂದ ಬೇಕಾದ ಹಾಗೆ ಬಂದು ರಸ್ತೆಯಲ್ಲಿ ಬಿದ್ದಿವೆ. ಏಕೆಂದರೆ ಇನ್ನೂ ಪೈಪು ಟೆಸ್ಟಿಂಗು ಆಗಬೇಕಂತೆ. ಅಲ್ಲದೆ ನಮ್ಮ ಕಡೆಯ ಭಾಗಗಳಲ್ಲಿ ಏನಾದರೂ ಕೆಲಸ ಪ್ರಾರಂಭಿಸಿದ್ದೀರಾ! ಐವತ್ತಾರನೆಯ ಇಸವಿಯಲ್ಲಿ ಸ್ಯಾಂಕ್ಷನ್ನು ಆದ ಕೆಲಸ ನಾಲ್ಕೈದು ವರ್ಷಗಳಾದರೂ ಪ್ರಾರಂಭವಾಗದೆ ಹಾಗೆಯೇ ಇದೆ. ಇದಕ್ಕಾಗಿ ಬೇಕಾದಂತಹ ಪೈಪುಗಳನ್ನು ತರಿಸಿ ರಸ್ತೆಗಳಲ್ಲಿ ಹಾಕಿರುವುದರಲ್ಲಿ ಎಷ್ಟೋ ಕಳೆದುಹೋಗುತ್ತಲೂ ಇವೆ. ಇನ್ನೂ ಮೆಷಿನರಿ ಬಂದಿಲ್ಲ ಮತ್ತು ಟೆಸ್ಟಿಂಗು ಆಗಬೇಕೆಂದು ಹೇಳುತ್ತ ಈ ಕೆಲಸವನ್ನು ನಿಧಾನಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. ಇಂತಹ ಕೆಲಸಗಳನ್ನು ಇನ್ನು ಮುಂದೆಯಾದರೂ ಜಾಗ್ರತೆಯಾಗಿ ಮಾಡಿ ಪೂರೈಸಬೇಕೆಂದು ಪ್ರಯತ್ನ ಮಾಡಬೇಕಾಗಿದೆ. ಯಾವಾಗಲೋ ದುಡ್ಡನ್ನು ಕೊಡಲಾಗಿದೆ ಮತ್ತು ಹೀಗೆ ವೇಸ್ಟ್ ಆಗಿ ವಿನಿಯೋಗವಾಗುತ್ತದೆ. ಈ ರೀತಿಯಾದ ತಾತ್ಸಾರ ಮನೋಭಾವನೆ ಇದ್ದ ಪಕ್ಷದಲ್ಲಿ ಕೆಲಸ ಹೇಗೆ ಆಗುತ್ತದೆ. ಅನೇಕ ವೇಳೆ ಈ ಪಕ್ಷದಲ್ಲಿ ಅಥವಾ ಆಳುವ ಪಕ್ಷದಲ್ಲಿ ಈ ರೀತಿಯಾದ ತಾತ್ಸಾರ ಮನೋಭಾವನೆಯಿದೆ ಎಂದು ಹೇಳಿದರೂ ಅದು ತಪ್ಪಾಗಲಾರದು.

ಸ್ವಾಮೀ, ಇನ್ನು ಪ್ಲಾನಿನ ಚೌಕಟ್ಟಿನಲ್ಲಿ ನೋಡಿದರೆ ಒಟ್ಟು ವರ್ಕುಗಳಿಗಾಗಿ 37.5 ಎಂದಿದೆ.

SRI J. B. MALLARADHYA.—Does the Finance Minister agree that, on the basis of these arguments, there is a deficit.

SRI T. MARIAPPA.—I will answer him effectively. There is a confusion in thinking.

SRI U. M. MADAPPA.—Silence amounts to acceptance. Total disbursements under Public Debt is 36,66,876. ಆದುದರಿಂದ ಇನ್ನು ಇಲ್ಲಿ ಏನು ಹೇಳುತ್ತಿದ್ದಾರೆ ಎಂದರೆ, ಸಾರ್ವಜನಿಕರಿಂದ ಬಂದ ದುಡ್ಡಿನಿಂದ ಬಳಸಿಕೊಂಡಿದ್ದಾರೆ. Unfunded debt, bearing interest ಎಷ್ಟೋ ದಿವಸಗಳಿಂದ ಅನೇಕ ಸಾರ್ವಜನಿಕರು ಡಿಪಾಜಿಟ್ಟುಗಳನ್ನು ಸಾರ್ವಜನಿಕ ಕೆಲಸಗಳಿಗಾಗಿ ಕೊಟ್ಟಿದ್ದರೂ ಕೂಡ ಅವರಿಗೆ ಕೊಡಬೇಕಾದ ಇಂಟರೆಸ್ಟನ್ನು ಕೂಡ ಕೊಡುತ್ತಿಲ್ಲ. ಈ ಬಗ್ಗೆ ಏನಾದರೂ ಮಂತ್ರಿಗಳನ್ನು ಪ್ರಶ್ನೆ ಮಾಡಿದರೆ ಅಥವಾ ಇಂಟರ್‌ಪೆರೇಷನ್ನನ್ನು ಕಳುಹಿಸಿದರೆ ಅಥವಾ ಇನ್ನಾವ ಅಂಕುಶವನ್ನು ತಂದು ಬಿಟ್ಟಿದರೂ ಕೂಡ ಏನನ್ನೂ ಮಾಡುತ್ತಿಲ್ಲ. ಇಂಟರ್‌ಪೆರೇಷನ್ನು ಬಂದರೆ ಏನಾಗುತ್ತದೆ ಎಂದರೆ ಅದನ್ನು ಸಂಬಂಧಪಟ್ಟ ಸೆಕ್ರೆಟೇರಿಯಟ್ಟಿಗೆ ಕಳುಹಿಸಿದರೆ, ಇದು ಮಾಮೂಲಾಗಿ ಬರುವ ಪ್ರಶ್ನೆ ಎಂದು ಅದರ ಬಗ್ಗೆ ಕೊನೆಯ ತೀರ್ಮಾನ ಆಗುವ ಹೊತ್ತಿಗೆ ಸಾರ್ವಜನಿಕರ ಫೈಲನಂತೆ ಬರುತ್ತದೆ; ಮತ್ತು ಪುನಃ ಹಾಗೆಯೇ ಫೈಲಿನ ಮೇಲೆ ಯಾವ ಡಿಸಿಷನುಗಳನ್ನೂ ತೆಗೆದುಕೊಳ್ಳದೆ ವಾಪಸಾಗುತ್ತದೆ. ಇಂತಹ ಸೆಕ್ರೆಟೇರಿಯಟ್ಟಿಗಾಗಿ ಎಷ್ಟು ದುಡ್ಡನ್ನು ಖರ್ಚು ಮಾಡುತ್ತಿದ್ದೇವೆಯೋ ಅಷ್ಟೇ ಖರ್ಚು ಇಂತಹ ಸೆಕ್ರೆಟೇರಿಯಟ್ಟಿನ ಒಂದು ಫೈಲಿನ ಮೇಲೆ, ಡಿಸಿಷನನ್ನು ತೆಗೆದುಕೊಳ್ಳುವುದಕ್ಕೂ ತಗಲುತ್ತದೆ. ಉದಾಹರಣೆಯಾಗಿ ಒಂದು ಕಾಂಟ್ರಿಬ್ಯೂಷನನ್ನು ವಾಪಸು ಪಡೆಯುವ ಫೈಲಿನ ಬಗ್ಗೆ ಅದಕ್ಕೆ ಇಲ್ಲಿ ದುಡ್ಡು ಕೊಟ್ಟು ಅಲ್ಲಿ ದುಡ್ಡು ಕೊಟ್ಟು ಹೀಗೆ ಇಪ್ಪತ್ತು ನಾಲ್ಕು ಕಡೆಗಳಲ್ಲಿ ದುಡ್ಡು ಕೊಟ್ಟು ಅದಕ್ಕಾಗಿ ಎಷ್ಟೋ ಹಣ ಖರ್ಚಾಗುತ್ತದೆ.

ಇನ್ನು ಬಡ್ಜೆಟ್ಟು ಮೆಮೊರ್ಯಾಂಡಂನಲ್ಲಿ ಪುಟ ಏಳರಲ್ಲಿ ರಸೀಟ್ಸ್ ಬಾಬಿನಲ್ಲಿ Deposits not bearing interestಗಾಗಿ 2447.31 ರೂಪಾಯಿಗಳಷ್ಟನ್ನು ಒದಗಿಸಿದ್ದೀರಿ. ಈ ರೀತಿಯಾಗಿ ಒದಗಿಸುತ್ತ ಜನಗಳಿಂದ ಸಾರ್ವಜನಿಕರಿಂದ ಕೋ-ಆಪರೇಷನ್ನು ಬೇಕು, ಸಹಕಾರ ಬೇಕು, ಎನ್. ಇ. ಎಸ್. ಡೆವಲಪ್ಪು ಆಗಬೇಕು ಎಂದು ಹೇಳುತ್ತ ಹೀಗೆ ತಪ್ಪು ನಿಮ್ಮಲ್ಲೇ ಇರುವಾಗ ಸಾರ್ವಜನಿಕರಿಂದ ಸಹಕಾರವನ್ನು ಹೇಗೆ ನಿರೀಕ್ಷಿಸಬೇಕು ? ಸರ್ಕಾರ ಸರಿಯಾದ ರೀತಿಯಲ್ಲಿ ಉತ್ತರ ಕೊಡಬೇಕು. ಇಂತಹ ಉತ್ತಮವಾದ ಬಾಬುಗಳಿಗೆ ವಿವರಗಳನ್ನು ಕೊಡಬೇಕಾದುದನ್ನು ಬಿಟ್ಟು ಬಿಟ್ಟು ಸುಮ್ಮನೆ ಹೇಳಿದರೆ ಹೇಗೆ ? ಇನ್ನು ಇಲ್ಲಿಯ ಮೆಂಬರುಗಳು ಎಷ್ಟೋ ಕನ್‌ಸ್ಟ್ರಕ್ಟೀವ್ ಆದ ಸಲಹೆಗಳನ್ನು ಕೊಟ್ಟಿದ್ದರೂ ಅವನ್ನು ಕಾರ್ಯಗತ ಮಾಡಿಲ್ಲ. ಮಾನ್ಯ ಮಂತ್ರಿಗಳು ನಾಳೆ ಉತ್ತರ ಕೊಡುವಾಗ ಸುಮ್ಮನೆ ವಿರೋಧ ಪಕ್ಷದವರು ವಿರೋಧಿಸುತ್ತಿದ್ದಾರೆಯೇ ಹೊರತು ಕನ್‌ಸ್ಟ್ರಕ್ಟೀವ್ ಆದ ಸಲಹೆಗಳನ್ನ ಕೊಡುತ್ತಿಲ್ಲ ಎಂದು ಪ್ರಚಾರ ಭಾಷಣ ಮಾಡುವ ಹಾಗೆ ಒಂದು ಪ್ಲಾಟ್‌ಫಾರಮ್ಮನ್ನು ಕ್ರಿಯೇಟು ಮಾಡಿಕೊಳ್ಳುತ್ತಾರೆ.

ಶ್ರೀ ಟಿ. ಮರಿಯಪ್ಪ.—ಇಷ್ಟು ಕ್ಲಿಯರಾಗಿ ಎಲ್ಲ ಅಂಕಿಅಂಶಗಳನ್ನೂ ನಾನು ಸಭೆಯ ಮುಂದೆ ಇಟ್ಟಿದ್ದೇನೆ. In fact every aspect, even the investment is given to the House.

ಶ್ರೀ ಯು. ಎಂ. ಮಾದಪ್ಪ. ಇಷ್ಟು ಕ್ಲಿಯರಾಗಿ ಇಟ್ಟಿಲ್ಲದಿದ್ದರೆ ಮಾಡಿದಂತಹ ಕೆಲಸಗಳು ತಿಳಿಯುತ್ತಿರಲಿಲ್ಲ

SRI T. MARIAPPA.—You must be fair to us.

ಶ್ರೀ ಯು. ಎಂ. ಮಾದಪ್ಪ.—ನಾವು just ಆಗಿರಬೇಕು, ನಿಜ. ಇಲ್ಲಿ,

> "The deficit shown under B above, *i.e.*, Cosolidated Fund is arrived at after taking into account the various loans and grants expected to be received from the Centre and R.B.I. amounting to Rs. 2493.78 lakhs and a Public Loan of Rs. 550 lakhs and providing for repayment of loans to the extent of Rs. 407.23 lakhs. This deficit is covered partly by net incomings under Public Account and partly from opening cash balance."

ಎಂದು ಹೇಳಿದ್ದಾರೆ. ಇದು ಎಷ್ಟರಮಟ್ಟಿಗೆ ನಿಜ ಎನ್ನುವುದನ್ನು ಯೋಚನೆ ಮಾಡಬೇಕು.

ಶ್ರೀ ಟಿ. ಮರಿಯಪ್ಪ.—ಇಷ್ಟು ಫ್ಯಾಕ್ಟ್ಸುಗಳನ್ನು ಕೊಟ್ಟು ಯಾವುದನ್ನು ಹೇಗೆ ಕವರಪ್ಪು ಮಾಡಬೇಕು ಎನ್ನುವುದಕ್ಕಾಗಿ ಇನ್‌ವೆಸ್ಟ್‌ಮೆಂಟ್ ಅಕೌಂಟ್ ನಿಂದ ತೆಗೆದುಕೊಂಡಿದ್ದೇವೆ. ಇದರಲ್ಲಿ ಮುಚ್ಚುಮರೆ ಏನಿಲ್ಲ. We have to draw from the investment account. We are obliged to draw from the resources. Nothing s hidden.

ಶ್ರೀ ಯು. ಎಂ. ಮಾದಪ್ಪ.—ತಾವು ಎಲ್ಲವನ್ನೂ ಕೊಟ್ಟಿದ್ದೀರಿ. ಒಪ್ಪಿಕೊಳ್ಳುತ್ತೇನೆ. ಓವರು ಆಲ್ ಬಡ್ಜೆಟ್ಟು ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ, ಹೇಗೆ ?

ಶ್ರೀ ಟಿ. ಮರಿಯಪ್ಪ.—ರೆವಿನ್ಯೂ ಅಕೌಂಟಿಗೆ ಸರ್ಪ್ಲಸ್ ಕ್ಯಾಪಿಟಲ್ಲಿನಿಂದ ಬಡ್ಜೆಟ್ಟನ್ನು ಮಾಡುವಾಗ ತೊಂದರೆಯಾಗುತ್ತದೆ.

SRI U.M. MADAPPA.—In an expanding economy, plan outlay ನಲ್ಲಿ ಇವೆಲ್ಲ ಆಗುತ್ತವೆ. You cannot have surplus to meet the capital budget. Therefore there ought to be deficit in the capital budget. I accept it. That is made up by borrowings from other accounts and from Savings. ಇದರಲ್ಲಿ ಏನೂ ಅನುಮಾನವೇ ಇಲ್ಲ. ಇದನ್ನು ಸ್ವಲ್ಪ ತಿರುಗಮುರುಗಾಗಿ ಮಾಡಿ ಹೇಳಿದ್ದಾರೆ. ರೆವಿನ್ಯೂ ರಿಸೀಟ್ಸಿನಲ್ಲಿ ಬಂದಿದೆಯೇ, ಕ್ಯಾಪಿಟಲ್ಲು ಎಕ್ಸ್‌ಪೆಂಡಿಚರಿನಲ್ಲಿ ಬಂದಿದೆಯೇ ಹೇಗೆ, ಎಲ್ಲಿದೆ ಎನ್ನುವುದನ್ನು ನೋಡಬೇಕು.

ಶ್ರೀ ಟಿ. ಮರಿಯಪ್ಪ.—ರೆವಿನ್ಯೂ ಸರ್ಪ್ಲಸ್ಸು ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಅದರ ವಿವರಗಳನ್ನು ಕೊಡುವುದಕ್ಕೆ ಈ ಮೆಮೋರ್ಯಾಂಡಂನಲ್ಲಿ ಪ್ರಯತ್ನ ಪಟ್ಟಿದ್ದಾರೆ. ಇದರಲ್ಲಿ—

Revenue Receipts ...	6446.72
Grant-in-aid from Government of India.	609.74

ಹೀಗೆ ಗ್ರಾಂಟು-ಇನ್-ಏಡ್ ಎಂದು ಗವರ್ನಮೆಂಟು ಆಫ್ ಇಂಡಿಯಾದಿಂದ ಇಷ್ಟು ದಿವಸಗಳವರೆಗೆ ಕೊಟ್ಟಿದ್ದುದನ್ನು ಯಾವುದಕ್ಕಾಗಿ ಕೊಟ್ಟಿದ್ದೀರಿ. . . .

ಶ್ರೀ ಟಿ. ಮರಿಯಪ್ಪ.—ಅದು ಬೇರೆ ವಿಚಾರ. That is a different matter.

ಶ್ರೀ ಯು. ಎಂ. ಮಾದಪ್ಪ.—ತಾವು ಇವನ್ನೆಲ್ಲ ಪರಿಶೀಲಿಸಿ ಇದು ಯಾವ ಕೌಂಟಿನಲ್ಲಿ ಬರುತ್ತದೆ, ಯಾವ ಬಾಬಿನಲ್ಲಿ ಜಮಾವಾದಿ ಯಾವುದಕ್ಕಾಗಿ ಹೋಗುತ್ತಿದೆ ಎನ್ನುವ ವಿವರಗಳನ್ನೆಲ್ಲ ಕೊಡಬೇಕಾಗಿತ್ತು. ಅದರಂತೆ ಇಲ್ಲಲ್ಲ.

ಶ್ರೀ ಟಿ. ಮರಿಯಪ್ಪ.—ಪ್ಲಾನು ಕಟ್ ಆಗಬೇಕಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಆದರೆ ಪ್ಲಾನು ಆಗಬೇಕಾದರೆ ಅದು ಕೇಂದ್ರದವರ ಸಹಾಯದ ಮೇಲೇ ನಿಂತಿರಬೇಕಾಗುತ್ತದೆ. ಇನು ನಮಗೆ ತಿಳಿದಿರುವಂತೆ ಈ ಶರಾವತಿ ಯೋಜನೆ ಎನ್ನುವುದು ಇನ್ನೂ ಅನಿಶ್ಚಿತ ಪರಿಸ್ಥಿತಿಯಲ್ಲಿದೆ. ಈ ಯೋಜನೆ ಆಗಿಯೇ ಆಗಬೇಕು ಎನ್ನುವ ಒತ್ತಾಯವನ್ನು ನಮ್ಮ ಸರ್ಕಾರದವರು ಮಾಡುತ್ತಿದ್ದಾರೆಂದು ಕೇಳಿದೆ. ಆದರೆ ಆ ಒತ್ತಾಯ ಬಹಳ ಕಡಿಮೆಯಿದು.

Sri T. MARIAPPA.—I have made a provision of 225 lakhs.

ಶ್ರೀ ಯು. ಎಂ. ಮಾದಪ್ಪ.—ಇವೊತ್ತಿನ ದಿವಸ ತಮ್ಮ ಸ್ಪೀಚಿನಲ್ಲಿ ಎಲ್ಲೂ ಇಲ್ಲ. ಸ್ಪೀಚಿನಲ್ಲಿ ಸೇರಿಲ್ಲ ಎಂದು ಟೋನ್ ಕಡಿಮೆ ಆದದ್ದು ನೋಡಿದ್ದೇನೆ.

ಶ್ರೀ ಟಿ. ಮರಿಯಪ್ಪ.—ಶರಾವತಿ ಅಕ್ಸೆಪ್ಟ್ ಆಗಿದೆ. We have made provision.

ಶ್ರೀ ಯು. ಎಂ. ಮಾದಪ್ಪ.—ನೀವು ಎಷ್ಟೆಷ್ಟೋ ಭರವಸೆ ಕೊಡುತ್ತೀರಿ, arrangements are being made ಎಂದು ಹೇಳುತ್ತೀರಿ.

Sri H. M. CHANNABASAPPA.—Why should the member feel that Sharavathi has not got foreign exchange? I have made it crystal clear that we are going to have the foreign exchange. We have received an official communication at the moment. We will have it, we don't want to bring all that money now and keep it idle here.

ಶ್ರೀ ಟಿ. ಮರಿಯಪ್ಪ.—ಸಿವಿಲ್ ಪೋರ್ಷನ್ ಆಗಬೇಕು.

ಶ್ರೀ ಯು. ಎಂ. ಮಾದಪ್ಪ.—ಮಂತ್ರಿಗಳು ಹೇಳಿದ್ದರೆ ಚೆನ್ನಾಗಿತ್ತು. ಅರ್ಥಿಕ ಮಂತ್ರಿಗಳು ಹೇಳಿದ್ದಾರೆ, ಗೌರ್ನರ್ ಸಹ ಹೇಳಿದ್ದಾರೆ, ಇನ್ನೂ ಪ್ರಯತ್ನ ನಡೆಯುತ್ತಿವೆ ಎಂದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಯತ್ನ ಏನೂ ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಅದು ತಮ್ಮ ಅಭಿಪ್ರಾಯ.

Sri T. MARIAPPA.—Sri Hathi has definitely said that foreign exchange will be found.

ಶ್ರೀ ಯು. ಎಂ. ಮಾದಪ್ಪ.—ಇವೊತ್ತಿನ ದಿವಸ ಏನಾಗುತ್ತಿದೆ ಎಂದು ನೋಡಿದರೆ ನಮ್ಮ ಬಡ್ಜೆಟ್ ಬೋಗಸ್ ಆಗುತ್ತಿದೆ.

ಇನ್ನು ಐದು ವರ್ಷ ಕೇಂದ್ರ ಸರ್ಕಾರದವರ ಗ್ಯಾರೆಂಟಿ ಇರಬಹುದು. ಐದು ವರ್ಷ ಆಗಿದ ಮೇಲೂ ನಿಮ್ಮ ಡಿಫಿಸಿಟ್ ಇದ್ದೇ ಇರುತ್ತದೆ. ಆ ಗ್ಯಾಪನ್ನು ಫಿಲ್‌ಅಪ್‌ಮಾಡಲು ಏನು ಏರ್ಪಾಟು ಮಾಡಿದ್ದೀರಿ ಹೇಳಿ. ಸಾಲ ಎತ್ತುವುದು ಅಥವಾ ಕೇಂದ್ರ ಸರ್ಕಾರದಿಂದ ಭಿಕ್ಷೆ ಬೇಡುವುದು. ಓಪನ್ ಮಾರ್ಕೆಟ್ಟಿನಲ್ಲಿ ಸಾಲ ಎತ್ತುವುದು. ಅಥವಾ ಸರ್ಟಿಫಿಕೇಟುಗಳನ್ನು ಮಾರಾಟ ಮಾಡುವುದು ಇದರಿಂದ ನೀವು ಡಿಫಿಸಿಟ್ ಸರಿಮಾಡಬೇಕೇ ವಿನಾ ಬೇರೆ ಇನ್ನೇನೂ ಇಲ್ಲ. ಸಾರ್ವಜನಿಕರ ಪರ್‌ಕ್ಯಾಪಿಟಾ ಆದಾಯ ಹೆಚ್ಚಿಸುವ ಅನೇಕ ಸ್ಕೀಮುಗಳನ್ನು ಮಾಡಿ ಆ ಮೇಲೆ ಟ್ಯಾಕ್ಸ್ ಹಾಕಿದ್ದರೆ ಒಪ್ಪಿಕೊಳ್ಳುತ್ತಿದ್ದೆ. ಈಗ ಆಗುವ ದುಷ್ಪರಿಣಾಮ ಏನು ಎನ್ನುವುದಕ್ಕೆ ಹಿಂದೆ ಇಮಾಂ ರವರು ಹೇಳುತ್ತಿದ್ದರು. ಹಿಂದೆ ಸುಂಕದ ರಂಗಣ್ಣ ಎಂಬ ರಾಜ ಇದನಂತೆ, ಅವನ ಕಾಲದಲ್ಲಿ ಬೇಕಾದಷ್ಟು ಸುಂಕ ಹಾಕಿದ್ದರಿಂದ ಅವನನ್ನು ಸುಂಕದ ರಂಗಣ್ಣ ಎಂದು ಕರೆಯುತ್ತಿದ್ದರಂತೆ. ಅನಂತರ ಅವನ ಮಗ ಪಟ್ಟಾಧಿಕಾರಿಯಾಗಿ ಬಂದನಂತೆ ಆಗ ಅವನು ಬಂದಾಗ ಎಲ್ಲಾ ಟ್ಯಾಕ್ಸು ಹಾಕುವುದು ಮುಗಿದು ಹೋಗಿತ್ತು. ಯಾವುದಕ್ಕೆ ಟ್ಯಾಕ್ಸ್ ಹಾಕಬೇಕು ಎಂದು ಮಂತ್ರಿಗಳ ಸಲಹೆ ತೆಗೆದುಕೊಂಡು ಯೋಚನೆ ಮಾಡಿ ನಾಮದ ಮೇಲೆ ಹಾಕಬೇಕು ಎಂದು ಯೋಚನೆ ಮಾಡಿದನಂತೆ. ಆಗ ಜನರು ತಂದೆ ತಾಯಿಗಳ ಕಾಲ ಒಳ್ಳೆಯದಾಗಿತ್ತು ಮಕ್ಕಳ ಕಾಲ ನೋಡಿದರೆ ಏನೂ ಹೇಳುವಹಾಗಿಲ್ಲ ಎಂದರಂತೆ. ಆ ಕತೆಯು ಇವೊತ್ತಿನ ದಿವಸ ಜ್ಞಾಪಕಕ್ಕೆ ಬರುತ್ತದೆ. ತಲೆಗಂದಾಯ ಮಹಮದ್‌ಬಿನ್ ತೊಗಲಕ್‌ನ ಕಾಲದಲ್ಲಿ ಇತ್ತು ಎಂದು ನೀವೂ ಮಾಡುವುದಕ್ಕೆ ಹೊರಟಿದ್ದೀರಿ ಎಂದು ಮಾತ್ರ ಹೇಳಬಹುದು. ಅದರಿಂದ ಆಗುವ ಪರಿಣಾಮವನ್ನು ಕೂಲಂಕಷವಾಗಿ ಯೋಚನೆಮಾಡತಕ್ಕದ್ದು ಒಳ್ಳೆಯದೆಂದು ಹೇಳುತ್ತೇನೆ. ಟ್ಯಾಕ್ಸುಗಳನ್ನು ಬಸ್ಸುಗಳ ಮೇಲೆ ಹಾಕಿದರೆ ಆಗ ಖಾಸಗಿ ಬಸ್ ಮಾಲೀಕರು ಪ್ರಯಾಣಿಕರ ದರಗಳನ್ನು ಹೆಚ್ಚಿಸುವುದು ಸಿದ್ಧ. ರೈತರು ವ್ಯಾಪಾರಮಾಡತಕ್ಕವರು, ಕೈಗಾರಿಕೆ ಮಾಡತಕ್ಕವರು ಎಷ್ಟೋ ಟ್ಯಾಕ್ಸನ್ನು ಅಪ್ರತ್ಯಕ್ಷವಾಗಿಯೂ ಕೊಡಬೇಕಾಗಿ ಬಂದಿದೆ. ಅವರು ಉತ್ಪತ್ತಿಮಾಡತಕ್ಕ ಪದಾರ್ಥಗಳಿಗೂ ಇಷ್ಟರ ಮಟ್ಟಿಗೆ ಬೆಲೆಯನ್ನು ಹೆಚ್ಚಿಸುವುದು ಅತ್ಯಗತ್ಯ ಈಗ ರೂಪಾಯಿಗೆ ಒಂದೂಕಾಲು ಸೇರು ಅಕ್ಕಿ ಆಗಿದೆ.

ಶ್ರೀ ಟಿ. ಮರಿಯಪ್ಪ.—ಮದ್ರಾಸ್, ಬೊಂಬಾಯಿಗಳಲ್ಲಿ, ಆಂಧ್ರದಲ್ಲಿ ಇದಕ್ಕಿಂತ ವಿಪರೀತ ಜಾಸ್ತಿಯಾಗಿದೆ. ಕಂಪೇರ್‌ಮಾಡಿ. ಏನಾದರೂ ಆಧಾರ ಇದ್ದರೆ ಟೀಕೆ ಮಾಡುವುದು ಉತ್ತಮ. ಬಿಹಾರ್, ಬೊಂಬಾಯಿ, ಮದ್ರಾಸಿಗಿಂತ ಹೆಚ್ಚಿಗೆ ಟ್ಯಾಕ್ಸ್ ಹಾಕಬೇಕೆಂದು ಆಲೋಚನೆಮಾಡಿಲ್ಲ. ಅದಕ್ಕಿಂತ ಜಾಸ್ತಿ ಬದ್ದರೆ ಯೋಚನೆಮಾಡೋಣ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಬೊಂಬಾಯಿನವರು ಮತ್ತು ಬಿಹಾರಿನವರು ನಮ್ಮನ್ನು ಏತಕ್ಕೆ ಫಾಲೋ ಮಾಡಬಾರದು ? ನಮ್ಮಲ್ಲಿ ಕಡಮೆ ಇದೆ. ಹಾಗೆಯೇ ಅವರೂ ಕಡಮೆ ಮಾಡಬೇಕು. ಸಾರ್ವಜನಿಕರ ಕಾಸ್ಟ್ ಆಫ್ ಲಿವಿಂಗ್ ಕಡಮೆಮಾಡುವ ದೃಷ್ಟಿಯಿಂದ ಮಾಡಬೇಕು. ಒಂದು ಕ್ಷೇತ್ರದಲ್ಲಿ ಟ್ಯಾಕ್ಸ್ ಹೆಚ್ಚಿಸಿದರೆ ಅದು ಅವರ ಒಂದು ಬೆಳೆಯ ಮೇಲೆ ಪರಿಣಾಮವಾಗುತ್ತದೆ. ಬೆಲೆ ತಾನಾಗಿಯೇ ಇಂಕ್ರೀಸ್ ಆಗುತ್ತದೆ. ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ಮಾಡಬಾರದು.

ಶ್ರೀ ಟಿ. ಮರಿಯಪ್ಪ.—ಬೇರೆ ಪ್ರಾಂತದ ಪರ್ ಕ್ಯಾಪಿಟಾ ಇನ್‌ಕಂಗೂ ಮತ್ತು ಪರ್‌ಕ್ಯಾಪಿಟಾ ಟ್ಯಾಕ್ಸೇಷನ್ನಿಗೂ ಮೈಸೂರಿನ ಪರ್‌ಕ್ಯಾಪಿಟಾ ಇನ್‌ಕಂಗೂ ಮತ್ತು ಟ್ಯಾಕ್ಸೇಷನ್ನಿಗೂ ಕಂಪೇರ್ ಮಾಡಿನೋಡಿ.

Sri M. C. NARASIMHAN (Kolar Gold Fields).—What are the capital assets in Mysore ?

ಶ್ರೀ ಯು. ಎಂ. ಮಾದಪ್ಪ.—ತಾವು ಒಂದು ಸಾರ್ತಿ ಏನು ಮಾಡಿದ್ದೀರೋ ಅದನ್ನು ಡಿಫೆಂಡ್ ಮಾಡಿಕೊಳ್ಳದೆ ವಿಧಿ ಇಲ್ಲ. ಅರ್ಥ ಸಚಿವರು ಹೊರಗಡೆ ಬಂದರೆ ಹಾಗೆಯೇ ಹೇಳುವುದು. ಅರ್ಥ ಸಚಿವರು ಕೈಗಾರಿಕಾ ಕ್ಷೇತ್ರದಲ್ಲಿ ಏನಾದರೂ ಉತ್ಪತ್ತಿ ಹೆಚ್ಚಿಸಿದ್ದಾರೆಯೇ ?

ಶ್ರೀ ಟಿ. ಮರಿಯಪ್ಪ.—ಗೌರ್ನಮೆಂಟ್ ಆಫ್ ಇಂಡಿಯಾ ad hoc ಗ್ರಾಂಟ್ ಇಣ ಏಮ್ ಐದು ವರ್ಷ ಇರುತ್ತದೆ. ನಾವು ಅದಕ್ಕೋಸ್ಕರ ತಾಪತ್ರಯಪಡಬೇಕಾಗಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಅದು ಗೊತ್ತಿದೆ. ಫೈನಾನ್ಸ್ ಕಮಿಷನ್ ಅವರು ಆರು ಕೋಟಿ ರೂಪಾಯಿಗಳ ಗ್ರಾಂಟ್ ಕೊಡಿಸಿದರು. ಆದ್ದರಿಂದ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ಅದನ್ನು 1956-57ನೆಯ ಬಜೆಟ್ಟಿನಲ್ಲಿ ತಿಳಿಸಿದ್ದೀರಿ. ಆಶಾದಾಯಕವಾಗಿತ್ತು. ಅದು ತಾತ್ಕಾಲಿಕ ಪರಿಹಾರ ಎಂದು ತಿಳಿದುಕೊಂಡಿದ್ದೇವೆ. ಸಾಲದ ವಿಷಯದಲ್ಲೂ ನಾಲ್ಕು ಇನ್‌ಸ್ಟಾಲ್‌ಮೆಂಟ್ ಮಾಡಬೇಕೆಂದು ಒಂದು ರಿಕಮೆಂಡೇಷನ್ ಆಗಿತ್ತು.

Budget memorandum for the year 1959-60ಅಲ್ಲಿ ಈ ರೀತಿ ಹೇಳಿದ್ದಾರೆ:

> "The balance at the credit of Sinking Fund as on 1st April 1958 is Rs. 11,468-40 lakhs. Since most of the Government of India Loans are repayable in annual instalments, no sinking fund is created for them. According to the recommendation of the Finance Commission the Government of India Loans had to be consolidated into four loans. This part of the recommendation is not yet implemented as Government of India did not accept the recommendation of Commission *in toto*."

ಆದ್ದರಿಂದ ಹಿಂದೆ ಅವರು ಏನು ಭರವಸೆ ಕೊಟ್ಟಿದ್ದಾರೋ ಅದು ಪೂರ್ಣವಾಗಿ ಕಾರ್ಯಗತವಾಗಿಲ್ಲ. ಸ್ವಲ್ಪ ಮಾತ್ರ ಕೇಂದ್ರ ಸರ್ಕಾರದವರು ಒಪ್ಪಿದ್ದಾರೆ.

ಶ್ರೀ ಟಿ. ಮರಿಯಪ್ಪ.—"We have requested them again to consolidate the Loans" ಎಂದು ನನ್ನ ಸ್ಪೀಚಿನಲ್ಲಿ ಹೇಳಿದ್ದೇನೆ.

Sri U. M. MADAPPA.—It is not get implemented; it is only a request. ನೀವು ರಿಕ್ವೆಸ್ಟ್ ಮಾಡಿಕೊಂಡರೂ ಕೇಂದ್ರ ಸರ್ಕಾರದವರು ಮಾಡಿಕೊಟ್ಟಿಲ್ಲ. ಪ್ರಾಮಿಸ್ ಮಾಡಿಲ್ಲ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಅವರು Promise ಮಾಡಿದ್ದರೆ ಈ ರೀತಿ ಹೇಳಿಕೊಳ್ಳುವುದಕ್ಕೆ ಆವಶ್ಯಕತೆಯೇ ಇರಲಿಲ್ಲ. ಆದ್ದರಿಂದ ನೀವು ಪರಿಸ್ಥಿತಿಯನ್ನು ಹೇಗೆ ಸುಧಾರಿಸುತ್ತೀರಿ ಎಂದು ನಿರ್ಧರವಾಗಿ ಹೇಳುವುದಕ್ಕೇ ಸಾಧ್ಯವಿಲ್ಲ. ಹಣಕಾಸಿನ ಪರಿಸ್ಥಿತಿ ನಮ್ಮ ದೇಶದಲ್ಲಿ ಚಿಂತಾಜನಕವಾಗಿದೆ. ಈ ಬಜೆಟ್ ಅಂದಾಜುಗಳೇನಿದ್ದರೂ ಸಾರ್ವಜನಿಕರನ್ನು ಮಾರ್ಗ ತಪ್ಪಿಸುವುದಕ್ಕೆ ಅನುಕೂಲವಾಗಿದೆಯೇ ಹೊರತು ಮತ್ತೇನೂ ಅಲ್ಲ.

6-30 P.M.

ಶ್ರೀ ಟಿ. ಮರಿಯಪ್ಪ.—ತಾವು ದಯವಿಟ್ಟು 134ನೆಯ ಪುಟವನ್ನು ನೋಡಿ. ಬಡ್ಡಿಗೆ ಕೂಡ ಒದಗಿಸಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಅಲ್ಲಿ ಸಿಂಕಿಂಗ್ ಫಂಡ್ ನೋಡಿದರೆ........

ಶ್ರೀ ಟಿ. ಮರಿಯಪ್ಪ.—ನಾಲ್ಕು ಕೋಟಿ ರೂಪಾಯಿಗಳಿವೆಯಲ್ಲಾ! ಇದರಲ್ಲೇನು ಭಯವಿದೆ ? ತಾವೇನೂ ಸರಿಯಾಗಿ ಯೋಚಿಸುವುದೇ ಇಲ್ಲವಲ್ಲಾ !

ಶ್ರೀ ಯು. ಎಂ. ಮಾದಪ್ಪ.—ಇದರಲ್ಲಿ ತೋರಿಸಿರುವುದಾದರೂ ಎಷ್ಟು! ನೀವೇ ಹೇಳಿದ್ದೀರಿ, ನಾಲ್ಕು ಕಂತುಗಳಲ್ಲಿ ತೀರಿಸುವ ಭರವಸೆಯಿರುವುದರಿಂದ ಅದಕ್ಕಾಗಿ ಸಿಂಕಿಂಗ್ ಫಂಡ್ ಮಾಡಿಲ್ಲ ಎಂದು ಹೇಳಿದ್ದೀರಿ. ಏಕೆ ಮಾಡಕೂಡದಾಗಿತ್ತು ? ಇದನ್ನು ಮಾಡಿದ್ದರೆ ಜನರಿಗೆ ಸರ್ಕಾರಕ್ಕೆ ಸಾಲಕೊಡುವುದಕ್ಕೆ ಇನ್ನೂ ಹೆಚ್ಚಿನ ಧೈರ್ಯವಿರುತ್ತಿರಲಿಲ್ಲವೇ ? ದೇಶದ ಹಿತದೃಷ್ಟಿಯಿಂದ ಇದನ್ನು ಈಗಲೂ create ಮಾಡಿ ಎಂದು ನಾನು ಹೇಳುತ್ತೇನೆ. ಅಲ್ಲದೆ ಬಡ್ಡಿಕೊಡುವುದಕ್ಕೆ ಮಾತ್ರ ಸಿಂಕಿಂಗ್ ಫಂಡ್ ಏರ್ಪಡಿಸುವುದಲ್ಲ. ಸಾಲದ ಮೊಬಲಗನ್ನೂ ಸ್ವಲ್ಪವಟ್ಟಿಗೆ ತೀರಿಸುವ ಬಗ್ಗೆ ಏರ್ಪಾಡುಮಾಡುವುದು ಸೂಕ್ತ.

ಶ್ರೀ ಟಿ. ಮರಿಯಪ್ಪ. ನಮ್ಮ credit worthiness ಎಷ್ಟಿದೆಯೆಂಬುದನ್ನು ಹೇಳುತ್ತೇನೆ. ಈ ಹೊತ್ತು ನಮ್ಮ ದುಡ್ಡನ್ನು ತಗೆದುಕೊಳ್ಳುತ್ತೀರಾ ಎಂದು ನಮ್ಮನ್ನು ಕೇಳುವವರು ಅನೇಕರಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಯಾರೋ ನಿಮ್ಮ ಪ್ರಭಾವಕ್ಕೊಳಗಾದವರಿರಬೇಕು ಅಷ್ಟೆ. ಯಾರೋ ಎಕ್ಸೈಸ್ ಕಂಟ್ರಾಕ್ಟರುಗಳಿಂದ ಕೊಡೆದುಕೊಳ್ಳುತ್ತೀರಿ.

[MR. SPEAKER in the Chair]

Sri T. MARIAPPA.—Government loans are very few. It is the banking institutions that always give loans and they give loans under two tests—one, creditworthiness and the other, whether the loan would be utilised for the building up of good assets.

Sri M. C. NARASIMHAN.—The State can never go back under any circumstances; that is where the test of creditworthiness of a State comes in.

Sri T. MARIAPPA.—Our securities were being sold at 94 in the early part of 1956. To-day they are above par. We are almost on the safest line.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ ನಮಗೆ ಸಂತೋಷವೇ. ಅಗ್ಗೆ ನಾನು ಒಪ್ಪಿಕೊಳ್ಳದೆ ಇರುವುದಿಲ್ಲ. ಅದಕ್ಕೆ ಧಕ್ಕೆ ಬರುತ್ತದೆಂದು ನಾನು ಹೇಳುತ್ತೇನೆ. ಸಾರ್ವಜನಿಕರಿಗೆ ಇದೆಲ್ಲ ಗೊತ್ತಾದರೆ ಅವರೇನು ಮಾಡುತ್ತಾರೆ!

Sri T. MARIAPPA.—It must be the common endeavour of both of us to safeguard the creditworthiness of the State, criticism apart.

ಶ್ರೀ ಯು. ಎಂ. ಮಾದಪ್ಪ.—ಈ ವಿಚಾರದಲ್ಲಿ ತಮಗೆಷ್ಟು ಅಭಿಮಾನವಿದೆಯೋ ನಮಗೂ ಅಷ್ಟೇ ಇದೆಯೆಂದು ಹೇಳುತ್ತೇನೆ. ನನಗೆ ಆ ಅಭಿಮಾನವಿಲ್ಲದಿದ್ದರೆ ಬೇರೆ ರೀತಿಯಿಂದ ಮಾತನಾಡುತ್ತಿದ್ದೆ. ನಾನು ಹೇಳುವುದನ್ನು ಅರ್ಥ ಮಾಡಿಕೊಂಡು......

ಶ್ರೀ ಟಿ. ಮರಿಯಪ್ಪ.—151ನೆಯ ಪುಟವನ್ನು ಸ್ವಲ್ಪ ಓದಿ.

ಶ್ರೀ ಯು. ಎಂ. ಮಾದಪ್ಪ.—ಏನಿದೆ ಅಲ್ಲಿ!

ಶ್ರೀ ಟಿ. ಮರಿಯಪ್ಪ.—ಸಿಂಕಿಂಗ್ ಫಂಡ್ ಅಕೌಂಟು 31ನೆಯ ಮಾರ್ಚಿಗೆ 18 ಕೋಟಿ ರೂಪಾಯಿಗಳಾಗುತ್ತದ್ದೆಂದು ಹೇಳಿದೆ. ಮೊದಲು 14 ಕೋಟಿ ಇತ್ತು. ನಾಲ್ಕು ಕೋಟಿಯಷ್ಟು ಜಾಸ್ತಿಯಾಗಿದೆ ನೋಡಿ. From 14 crores it has risen to 18 crores.

ಶ್ರೀ ಯು. ಎಂ. ಮಾದಪ್ಪ.—ನನ್ನ ಅಭಿಪ್ರಾಯ ಇಷ್ಟೆ. 143ನೆಯ ಪುಟದಲ್ಲಿ ತಾವು ಕೊಟ್ಟಿರುವ remarks ಪ್ರಕಾರ ಸಿಂಕಿಂಗ್ ಫಂಡ್ ಏರ್ಪಡಿಸಬೇಕಾಗುವ ಅವಶ್ಯಕತೆಯಿಲ್ಲ ಎಂದು ತಿಳಿಸಿದ್ದೀರಿ.

Sri T. MARIAPPA.—Because we are able to pay back.

ಶ್ರೀ ಯು. ಎಂ. ಮಾದಪ್ಪ.—ಕೊಡುತ್ತೀರೋ ಇಲ್ಲವೋ ಹೇಗೆ ಗೊತ್ತು?

ಶ್ರೀ ಟಿ. ಮರಿಯಪ್ಪ.—ನಾವು ಹೇಳಬೇಕಾದದ್ದೇ ಇಲ್ಲ. ಅಕೌಂಟೆಂಟ್ ಜನರಲ್‌ರಲ್ಲಿ adjust ಮಾಡಿಕೊಂಡುಬಿಡುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ಆ ಮೇಲೆ Contingency Fund ವಿಷಯ ನೋಡಿ. ಎರಡು ಕೋಟಿ ರೂಪಾಯಿಗಳನ್ನು ರಾಜ್ಯಾಂಗದ ವಿಧಿಗಳ ಆಧಾರದ ಮೇಲೆ ಮತ್ತು ಇಲ್ಲಿ ಆಗಿರತಕ್ಕ ಆಕ್ಟಿನ ಆಧಾರದಮೇಲೆ ತೆಗೆದುಕೊಂಡಮೇಲೆ ಅದಕ್ಕೆ ಅಕೌಂಟ್ ಏನು ಎಂಬುದನ್ನು ಈ ಹೊತ್ತಿನವರೆಗೂ ಕೊಟ್ಟಿಲ್ಲ. ಈ ಹಣಕ್ಕೆ ಅಕೌಂಟ್‌ಸಿಕ್ಕುವುದಿಲ್ಲವೆಂದು ಹೇಳಿದರೆ, ಅಕೌಂಟೆಂಟ್ ಜನರಲ್ ಯಾವರೀತಿ adjust ಮಾಡಿಕೊಳ್ಳುತ್ತಾರೆ ಎಂದು ತಿಳಿಯೋಣ. ಕಂಟಿಂಜೆನ್ಸಿ ಫಂಡಿಗೆ ಅಕೌಂಟನ್ನು ಸರ್ಕಾರ ಒದಗಿಸುತ್ತಿಲ್ಲ ಎಂದು ಅಕೌಂಟೆಂಟ್ ಜನರಲ್ ಸಹ ಹೇಳುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಉಪಯೋಗಿಸತಕ್ಕ ಹಣಕ್ಕೆ ಪೂರ್ಣ ಜವಾಬ್ದಾರಿ ತೆಗೆದುಕೊಂಡು ಅಕೌಂಟುಗಳನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ನಾವು ಕೇಂದ್ರ ಸರ್ಕಾರದವರಿಗೆ ರೈಲ್ವೆ ಸೌಕರ್ಯಗಳನ್ನು ನಮಗೆ ಹೆಚ್ಚಿಸಿಕೊಡಿಯೆಂದು ಮೊದಲಿನಿಂದಲೂ ಒತ್ತಾಯಮಾಡುತ್ತಲಿದ್ದೇವೆ. ನಾಲ್ಕು ಮಾರ್ಗಗಳನ್ನು ಕೂಡ ಮಾಡಿಕೊಡುವುದಾಗಿ ಅವರು ಹೇಳಿದ್ದರು. ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಈ ವ್ಯವಸ್ಥೆಯೆಲ್ಲವೂ ಗೊತ್ತಿದೆ. ಅವರು ಮಂತ್ರಿಗಳಾಗಿ ಈಗಿರುವುದಲ್ಲದೆ ಹಿಂದಿನ ಸಭೆಯಲ್ಲಿಯೂ ಇದ್ದರು. ಮೈಸೂರು ಸರ್ಕಾರದವರು ತಮ್ಮ ರೈಲ್ವೆಯನ್ನು ಫೆಡರಲ್ ಸರ್ಕಾರಕ್ಕೆ ವರ್ಗಮಾಡಿದಾಗ ಸತ್ಯಮಂಗಲ ರೈಲ್ವೆಯನ್ನು ಅವರು ಕೂಡಲೆ ಕೈಕೊಳ್ಳಬೇಕೆಂದು ಹೇಳಿ ಬರವಸೆ ತೆಗೆದುಕೊಂಡಿದ್ದರು. ಅಲ್ಲದೆ, ಈ ಸಭೆಯೂ ಕೂಡ ಈ ಬಗ್ಗೆ ಒಂದು ನಿರ್ಣಯನ್ನು ಮಾಡಿ ಈ ವಿಷಯನ್ನು ಕೇಂದ್ರ ಸರ್ಕಾರದವರಲ್ಲಿ ಒತ್ತಾಯಮಾಡಬೇಕೆಂದು ಸರ್ಕಾರಕ್ಕೆ ಒಂದು mandateನ್ನೂ ಕೂಡ ಕೊಟ್ಟಿತ್ತು. ಅದರ ಮೇಲೆ ಆಗಿನ ಸರ್ಕಾರ ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಿ ವಿಷ್ಟೋ ಒತ್ತಾಯ ಮಾಡಿತು. ಆದರೂ ಏನನ್ನೂ ಅವರು ಮಾಡಿಲ್ಲ. ಹೀಗಿರುವಲ್ಲಿ ನೀವೇನು ಮುಂದಿನ ಕಾರ್ಯಕ್ರಮದ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೀರಿ? ರೈಲ್ವೆ ವಿಷಯ federal subject ಆಯಿತು, ನಾವೇನು ಮಾಡುವುದು ಎಂದು ಹೇಳಬಹುದು. ಆದರೆ ಒಂದು ವಿಷಯವನ್ನು ಈಗಲೂ ತಾವು ಗಮನಿಸಬೇಕು ಈಗ್ಯೂ, ಅನೇಕ ರೈಲ್ವೆಗಳನ್ನು ಇಂಡಿಯಾ ದೇಶದಲ್ಲಿ ಕೇಂದ್ರ ಸರ್ಕಾರಕ್ಕೆ ಒಳಪಡಿಸದೆ ಖಾಸಗಿಯವರು ತಾವೇ ನಡೆಸುವುದಕ್ಕೆ ಅವಕಾಶಕೊಟ್ಟಿದೆ. ಹೀಗೆ ಬೇರೆ ಖಾಸಗಿ ರೈಲ್ವೆಗಳಿರುವಲ್ಲಿ ನಾವೂ ನಮ್ಮ ರೈಲ್ವೆಯನು ಸ್ವಂತವಾಗಿ ನಡೆಸುವುದಕ್ಕೆ ಅವಕಾಶಕೊಡಿ, ನಮ್ಮ ರೈಲ್ವೆಯನ್ನು ವಾಪಸು ಕೊಡಿ ಎಂದೇಕೆ ಕೇಳಬಾರದು, Communication, Defence ಗಳು ಕೇಂದ್ರ ಸರ್ಕಾರಕ್ಕೆ ಸೇರಿರಬೇಕೆಂಬ ತತ್ವಕ್ಕೆ ನಾನು ತಲೆಬಾಗಿದರೂ, ಈ ದೃಷ್ಟಿಯಿಂದ ನಾವೇಕೆ ಪುನಃ ಕೇಳಕೂಡದು ಎನಿಸುತ್ತದೆ. We are all in all in internal affairs. ಆ ದೃಷ್ಟಿಯಿಂದ ಯೋಚನೆ ಮಾಡಬೇಕು. ಚಾಮರಾಜನಗರ–ಸತ್ಯಮಂಗಲಂ ರೈಲ್ವೆ ಮಾರ್ಗಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟು ಸರ್ಕಾರ ಯೋಚಿಸಬೇಕು. ಅದರ ಕೈ ಬಿಟ್ಟು ಮಂಗಳೂರು-ಬೆಂಗಳೂರು ತಿರುವಾಂಕೂರು—ಸೇಲಂ ರೈಲುಮಾರ್ಗವಾಗುವುದಕ್ಕೆ ಸರ್ಕಾರ ಹೆಚ್ಚಾಗಿ ಪ್ರಯತ್ನ ನಡೆಸುತ್ತಿದೆಯೆಂದು ಅವರ ಭಾಷಣದ ವೈಖರಿಯಿಂದ ಕಾಣುತ್ತದೆ.

ಶ್ರೀ ಟಿ. ಮರಿಯಪ್ಪ.—ಪೋರ್ಟ್ಸ್ ಮತ್ತು ವೆಸ್ಟ್ ಕೋಸ್ಟ್ ಡೆವಲಪ್ ಮಾಡುವ ವಿಚಾರದಲ್ಲಿ ಅದನ್ನು ಪ್ರಸ್ತಾಪ ಮಾಡಿದೆಯೇ ಹೊರತು, ಚಾಮರಾಜನಗರ-ಸತ್ಯಮಂಗಲಂ ರೈಲ್ವೆ ಲೈನಿನ ಕೈ ಬಿಟ್ಟಿವು ಎಂದು ಇಲ್ಲ. ಚಾಮರಾಜನಗರ-ಸತ್ಯಮಂಗಲ ರೈಲ್ವೆಯನ್ನು ಪ್ರೆಸ್ ಮಾಡಿಕೊಂಡು ಬಂದಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಹೀಗೆಯೇ ಬಿಟ್ಟರೆ ಮೈಸೂರು ಪಟ್ಟಣ ಮತ್ತು ಮೈಸೂರು ಡಿಸ್ಟ್ರಿಕ್ಟಿನ ಮೇಲೆ ಒಂದು ಪರಿಣಾಮವನ್ನುಂಟುಮಾಡುತ್ತದೆ ಎನ್ನುವುದನ್ನು ಸರ್ಕಾರ ಮನಗಾಣಬೇಕು.

ಶ್ರೀ ಟಿ. ಮರಿಯಪ್ಪ.—ದೆಹಲಿಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅದು ಆದಕ್ಷಣ ಇದೂ ಆಗುವ ಸಂಭವವಿದೆ.

ಶ್ರೀ ಯು. ಎಂ. ಮಾದಪ್ಪ.—ರೈಲ್ವೆ ಸೆಂಟ್ರಲ್ ಸಬ್ಜೆಕ್ಟು. ಹೆಚ್ಚಿಗೆ ಚರ್ಚೆಯಾಗುವ ಪರಿಸ್ಥಿತಿ ಇಲ್ಲ.

(ಶ್ರೀ ಯು. ಎಂ. ಮಾದಪ್ಪ)

ಮೈಸೂರಿನಿಂದ ಚಾಮರಾಜನಗರಕ್ಕೆ ರೈಲ್ವೆ ಮಾರ್ಗ ಮೂವತ್ತಾರು ಮೈಲಿ. ಇವತ್ತಿನ ದಿವಸ ಒಬ್ಬ ವ್ಯಕ್ತಿಗೆ ಈ ರೈಲಿನಲ್ಲಿ ಮೈಸೂರಿನಿಂದ ಚಾಮರಾಜನಗರಕ್ಕೆ ಹೋಗಲು ನಾಲ್ಕು ಘಂಟೆ ಬೇಕಾಗುತ್ತದೆ. ಮೂವತ್ತಾರು ಮೈಲಿ ಟ್ರಾವಲ್ ಮಾಡುವುದಕ್ಕೆ ನಾಲ್ಕು ಘಂಟೆ ತೆಗೆದುಕೊಂಡರೆ, ಯಾವ ಪ್ಯಾಸೆಂಜರುಗಳು ಈ ರೈಲಿನಲ್ಲಿ ಪ್ರಯಾಣ ಮಾಡಲು ಇಷ್ಟಪಡುತ್ತಾರೆ ಮತ್ತು ಹೋಗುತ್ತಾರೆ? ಹೀಗೆ ಪ್ಯಾಸೆಂಜರು ಕಡಮೆಯಾಗಿ, ಈ ಮಾರ್ಗ ಲಾಭದಾಯಕವಾಗಿಲ್ಲವೆಂದು ಇಂಡೈರೆಕ್ಟಾಗಿ ಇದನ್ನು ಬಿಡುವ ವ್ಯವಸ್ಥೆ ನಡೆಯುತ್ತಾ ಇದೆ. ಈ ರೈಲಿನಲ್ಲಿ ಪ್ರಯಾಣಮಾಡಲು ನಾಲ್ಕು ಘಂಟೆ ತೆಗೆದುಕೊಳ್ಳುತ್ತದೆಂದು ಜನರು ಗವರ್ನಮೆಂಟ್ ಮತ್ತು ಖಾಸಗಿ ಬಸ್ಸುಗಳಲ್ಲಿ ಓಡಾಡುವ ಏರ್ಪಾಡನ್ನು ಮಾಡಿಕೊಳ್ಳುತ್ತಾರೆ. ಅವು ಒಂದೂಮುಕ್ಕಾಲು ಘಂಟೆ ತೆಗೆದುಕೊಳ್ಳುತ್ತವೆ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಸ್ವಾಮಿ, Point of order. ಒಬ್ಬೊಬ್ಬರಿಗೆ ಮಾತನಾಡುವುದಕ್ಕೆ ಎಷ್ಟೆಷ್ಟು ಕಾಲ ಕೊಟ್ಟಿದ್ದೀರಿ?

ಅಧ್ಯಕ್ಷರು.—Point of order ಆಗುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಶ್ರೀ ಮಾದಪ್ಪನವರು ಮಾತನಾಡುತ್ತಾ ಮುಕ್ಕಾಲು ಘಂಟೆಯಾಗಿದೆ.

ಅಧ್ಯಕ್ಷರು.—ಮುಕ್ಕಾಲು ಘಂಟೆಯಾಗಿದೆ. ಮೊದಲು ಎರಡು ದಿವಸ ಎಲ್ಲ ಭಾಷಣಗಳೂ ಸ್ವಲ್ಪ ಹೀಗಾಗುತ್ತವೆ. ನಾಳೆಯಿಂದ ಎಲ್ಲಾ strict ಆಗುತ್ತದೆ.

ಶ್ರೀ ಟಿ. ಹನುಮಯ್ಯ.—ನಾಳೆ ಮಾತನಾಡುವವರ ಮೇಲೆ ಸ್ಟ್ರಿಕ್ಟ್ ಆಗುತ್ತೀರಾ! ನಮ್ಮ ಮೇಲೆ ಸ್ಟ್ರಿಕ್ಟ್ ಆಗಬೇಡಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಿನ್ನೆಯದಿವಸ ಬಾಳಿಗಾ ಅವರು ಮಾತನಾಡುವಾಗ ಬೇಕಾದಷ್ಟು ಟೈಮ್ ಕೊಟ್ಟಿರಿ. ಬೇಡವೆಂದು ಹೇಳಲಿಲ್ಲ.

SRI T. MARIAPPA.—Baliga's was the shortest speech.

ಅಧ್ಯಕ್ಷರು.—ಯಾರುಯಾರು ಎಷ್ಟೆಷ್ಟು ಕಾಲ ತೆಗೆದುಕೊಂಡಿದ್ದಾರೆನ್ನುವುದು ಇಲ್ಲಿದೆ. ಬೇಕಾದಷ್ಟು ಸಮಯವನ್ನು ಕೊಡೋಣವೆಂದರೆ ಕಾಲ ಸಾಕಷ್ಟಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಚಾಮರಾಜನಗರ-ಸತ್ಯಮಂಗಲಂ ರೈಲಿನ ವಿಷಯ ಹೇಳುತ್ತಾ ಇದ್ದೆ. ಆಗಲೇ ಇನ್ನೊಂದು ಪ್ರಯತ್ನ ನಡೆಯುತ್ತಿದೆ. ಅದೇನೆಂದರೆ, ಮೈಸೂರು-ಚಾಮರಾಜನಗರ ರೈಲ್ವೆಯನ್ನು ತಪ್ಪಿಸಬೇಕೆಂದು. ಮೂವತ್ತಾರು ಮೈಲಿ ಟ್ರಾವಲ್ ಮಾಡುವುದಕ್ಕೆ ನಾಲ್ಕು ಘಂಟೆ ತೆಗೆದುಕೊಂಡರೆ ಯಾವ ಸಾರ್ವಜನಿಕರು ಪ್ರಯಾಣ ಮಾಡುತ್ತಾರೆ? ಇದೂ ಅಲ್ಲದೆ ಈ ಟ್ರೇನಿನಲ್ಲಿ ಫಸ್ಟ್‌ಕ್ಲಾಸ್ ಇಲ್ಲ ಸೆಕೆಂಡ್‌ಕ್ಲಾಸಿಲ್ಲ. ಜನತಾ ಎಕ್ಸ್‌ಪ್ರೆಸ್ ಆಗಿಬಿಟ್ಟಿದೆ. ಆದ್ದರಿಂದ ಬಸ್ಸುಗಳಿಗೆ ಹೆಚ್ಚಿಗೆ ಪ್ರಾಧಾನ್ಯತೆ ಕೊಟ್ಟ ಹಾಗಾಯಿತು. ಕೇಂದ್ರ ಸರ್ಕಾರಕ್ಕೆ ಈ ವಿಷಯವನ್ನು ತಿಳಿಸಿ ಚಾಮರಾಜನಗರ-ಸತ್ಯಮಂಗಲಂ ರೈಲು ಮಾರ್ಗವನ್ನು ತೆಗೆದುಕೊಳ್ಳುವ ಏರ್ಪಾಡನ್ನು ಮಾಡಬೇಕೆಂದು ನಾನು ಸರ್ಕಾರದ ಮುಂದೆ ಇಡುತ್ತೇನೆ.

ಕೆಲವು ಸದಸ್ಯರು ಮಂತ್ರಿಗಳ ಪ್ರವಾಸ ವಿಷಯದಲ್ಲಿ ಮಾತನಾಡಿದರು. ಮಂತ್ರಿಗಳು ಪ್ರವಾಸ ಮಾಡುವುದು ಬೇಡವೆಂದು ನಾವು ಹೇಳುವುದಕ್ಕಾಗುವುದಿಲ್ಲ. ಮಂತ್ರಿಗಳಿಗೆ ಪ್ರವಾಸಬೇಕು. ಆದರೆ ಎಂಥ ಪ್ರವಾಸ? ದೇಶದ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡುವ ಪ್ರವಾಸ. ಅವರು ಸುಮ್ಮನೆ ರೆಕ್ಕೆಕಟ್ಟಿಕೊಂಡು ಹಾರುವ ಪ್ರವಾಸವಲ್ಲ. ಅದು ಸಾರ್ವಜನಿಕರ ಹಿತದೃಷ್ಟಿಯಿಂದ ಇರಬೇಕು. ಸಾರ್ವಜನಿಕರ ಕಾರು, ಪೆಟ್ರೋಲು, ಅಲೋಯನ್ಸ್ ಇಷ್ಟನ್ನೆಲ್ಲಾ ತೆಗೆದುಕೊಂಡು, ತಮ್ಮ ಪೋರ್ಟ್‌ಫೋಲಿಯೋಗೆ ಸಂಬಂಧವಿಲ್ಲದಿರುವ ಯಾವುದೋ ಫಂಕ್ಷನಲ್ಲಿ ಭಾಗವಹಿಸುವ, ಭಾಷಣ ಮಾಡುವ, ಚಪ್ಪರ, ಹಾರ ಹಾಕಿಸಿಕೊಂಡು ಬರುವ ಪದ್ಧತಿಯನ್ನು ವಿರೋಧಿಸಲೇಬೇಕು. ಕೆಲಸ ಮಾಡುವವರಿಗೆ ಕೆಲವು ಸಂದರ್ಭಗಳಲ್ಲಿ ಪ್ರೋತ್ಸಾಹಬೇಕು. ಆದರೆ ಇದನ್ನೇ ಒಂದು ಆಸ್ಪದವಾಗಿ ಇಟ್ಟುಕೊಂಡರೆ ಹೇಗೆ? ಇದೇ ನನ್ನ ಪ್ರಶ್ನೆ. ಒಂದು ವಿಷಯವನ್ನು ಉದಾಹರಣೆಗಾಗಿ ಹೇಳುತ್ತೇನೆ. ಮರಾಮತ್ ಇಲಾಖಾ ಮಂತ್ರಿಗಳು ಸ್ವಲ್ಪ ದಿವಸಗಳ ಹಿಂದೆ ನಮ್ಮ ಪ್ರಾಂತಕ್ಕೆ ಬಂದಿದ್ದರು. ಬಂದಾಗ ಅವರು ಮರಾಮತ್ ಇಲಾಖೆಗೆ ಸಂಬಂಧಪಟ್ಟ ಫಂಕ್ಷನುಗಳಲ್ಲಿ ಭಾಗವಹಿಸಿದ್ದರು. ಅಂದರೆ ಮಾರ್ಜಿನ್ ಕೊಡೋಣ. ನಮ್ಮ ಕ್ಷೇತ್ರದಲ್ಲಿ ಅವರ ಪೋರ್ಟ್‌ಫೋಲಿಯೋಗೆ ಸಂಬಂಧಪಟ್ಟ ಏನಾದರೂ ಒಂದು ಕೆಲಸವನ್ನು ನೋಡಿದರೇ? ಎನ್ನುವುದು ನನ್ನ ಪ್ರಶ್ನೆ. ಏನೂ ಇಲ್ಲ. ಸ್ವಾಮಿ, ಪಂಚವಾರ್ಷಿಕ ಯೋಜನೆ ಸಕ್‌ಸೆಸ್ ಫುಲ್ ಆಗಬೇಕು ಎಂದು ಒಂದು ಕಡೆ ಹೇಳುತ್ತೀರಿ. ನಮ್ಮಲ್ಲಿ ಚಿಕ್ಕಹೊಳೆ ಎಂಬ ಒಂದೇ ಒಂದು ಪ್ರಾಜೆಕ್ಟ್ ಸಾಂಕ್ಷನ್ ಮಾಡಿಬಿಟ್ಟಿರಿ. ಅಲ್ಲಿ ಆಗಾಗ್ಗೆ ಕ್ಷಾಮ ಪರಿಸ್ಥಿತಿ ತಲದೋರಿರುವುದನ್ನು ಗಣನೆಗೆ ತೆಗೆದುಕೊಳ್ಳಲೇಬೇಕು.

ಆ ಪ್ರಾಜೆಕ್ಟಿಗೆ ಇಪ್ಪತ್ತೆರಡು-ಇಪ್ಪತ್ತೇಳು ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿರುವಾಗ, ಕೆಲಸ ಹೇಗೆ ನಡೆಯುತ್ತಿದೆ ಎಂದು ಅವರು ನೋಡಬೇಡವೇ? ಪ್ರಾಜೆಕ್ಟ್ ಸ್ಪಾಟು ಆರೇಳು ಮೈಲಿಯಲ್ಲಿತ್ತು. ಅದರ ಇನ್‌ಸ್ಪೆಕ್ಷನನ್ನು ಟೂರಿನ ಪ್ರೋಗ್ರಾಂನಲ್ಲಿ ಸೇರಿಸಿಕೊಳ್ಳಲೇಬೇಕಾಗಿತ್ತು. ಪೇಪರ್ ಮೇಲೆ ನೋಡಿದರೆ, ಅಲ್ಲಿರುವ ಕಷ್ಟಗಳು ಗೊತ್ತಾಗುವುದಿಲ್ಲ ಪ್ರಾಕ್ಟಿಕಲ್ ಆಗಿ ಏನು ಕಷ್ಟವಿದೆ ಯಾರುಯಾರಿಂದ ಅಬ್‌ಸ್ಟ್ರಕ್ಷನ್ ಇದೆ, ಗವರ್ನಮೆಂಟ್ ಆರ್ಡರ್ ಕಾರ್ಯಗತವಾಗದೆ ಕುಂಠಿತವಾಗಲು ಏನು ಕಾರಣ ಎನ್ನುವುದು ಇಲ್ಲ ಗೊತ್ತಾಗುವುದಿಲ್ಲ. ಇನ್ನು ಮೇಲಾದರೂ ಮಂತ್ರಿಗಳು ಅಲ್ಲಿಗೆ ಬಂದಾಗ, ಸಾರ್ವಜನಿಕ ಹಿತದೃಷ್ಟಿಗೆ ಸಂಬಂಧಪಟ್ಟ ಇಲಾಖೆಗಳಲ್ಲಿ ಹೆಚ್ಚಿಗೆ ನಿಗಾ ತೆಗೆದುಕೊಳ್ಳಬೇಕು; ತಾತ್ಸಾರ ಮನೋಭಾವವನ್ನು ಬಿಡಬೇಕು. ಒಂದು ಕ್ಷೇತ್ರವನ್ನು ಹೆಚ್ಚು ಸಂತೋಷದಿಂದ ನೋಡಿಕೊಂಡು, ಮತ್ತೊಂದು ಕ್ಷೇತ್ರದ ರಸ್ತೆಯಲ್ಲಿ ಕಾರಿಗೆ ಏನೂ ಅಬ್‌ಸ್ಟ್ರಕ್ಷನ್ ಇಲ್ಲ ಎಂದು ಹಾಗೆಯೇ ಹೋಗುವ ಪರಿಸ್ಥಿತಿ ಬರಬಾರದು. ಹಾಗೆ ಮಾಡಿದರೆ, ಸಾರ್ವಜನಿಕರ ಮನಸ್ಸಿನ ಮೇಲೆ ಬೇರೆ ತರಹ ಪರಿಣಾಮವಾಗುತ್ತದೆ. ಅದಕ್ಕೆ ನಾವೂ ನೀವೂ ಕಾರಣರಾಗುತ್ತೇವೆ. ಪ್ರಜಾಪ್ರಭುತ್ವ ಯಶಸ್ವಿ ಯಾಗಬೇಕೆಂದು ನಾವು ನೀವು ಇಬ್ಬರೂ ಹೇಳುತ್ತೇವೆ. ಪ್ರಜಾಪ್ರಭುತ್ವತತ್ವಕ್ಕೆ ಕುಂಠಿತವಾಗುವ ರೀತಿಯಲ್ಲಿ ನಡೆದರೆ, ನಾನು ಕಡಾ ಖಂಡಿತವಾಗಿ ಖಂಡಿಸಲೇಬೇಕು. ಸಾರ್ವಜನಿಕರ ಮನಸ್ಸಿನಲ್ಲಿ ನೊ-ಟ್ಯಾಕ್ಸೇಷನ್ ವಿಥೌಟ್ ರೆಪ್ರೆಸೆಂಟೇಷನ್ ಅನ್ನತಕ್ಕಂಥ ಭಾವನೆ ಬಂದು ಈ ರೀತಿ ಪರಿಣಾಮವಾಗುತ್ತದೆ. ಆದರಿಂದ constructive suggestions ಬೇಕು. ಹೊರಗಡೆಯಿಂದ destructive

suggestions ಬಂದು ಬಿಟ್ಟಾವು. ಸಾರ್ವಜನಿಕ ದೃಷ್ಟಿಯಿಂದ ಎಚ್ಚರಿಕೆ! ಅವರು ಸಾರ್ವಜನಿಕ ಮಂತ್ರಿಗಳು ಎಂಬ ದೃಷ್ಟಿಯಿಂದ ಕೆಲಸ ಮಾಡಲಿ. ಈ ವಿಷಯದಲ್ಲಿ ನಿಮ್ಮ ನೀತಿ ನಿಯಮಗಳನ್ನೂ, ಸರ್ಕಾರದ ಕೆಲವು ಆರ್ಡರುಗಳನ್ನೂ ಸ್ವಲ್ಪ ಬದಲಾಯಿಸಿ ಕೊಳ್ಳಬೇಕು. ಸೆಕ್ರೆಟರಿಗಳು ಸ್ವಲ್ಪ ಚೆನ್ನಾಗಿ ಕಣ್ಣು ಮೇಲೆ ಕಣ್ಣಿಟ್ಟುಕೊಂಡು ನೋಡಬೇಕು.

ಇನ್ನು ಫಸ್ಟ್ ಡಿವಿಜನ್ ಕ್ಲಾರ್ಕ್ ವಿಷಯ. ಈ ಫಸ್ಟ್ ಡಿವಿಜನ್ ಪೋಸ್ಟ್‌ಗೆ ಸಾವಿರಾರು ಜನರನ್ನು ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಸೆಲೆಕ್ಟ್ ಮಾಡಿದರು. ಕೆಲವರನ್ನು ಸಂಬಂಧಪಟ್ಟಂಥ ಇಲಾಖೆಗಳಿಗೆ ಪೋಸ್ಟ್ ಮಾಡಲಾಯಿತು. ಹಲವಾರು ಜನ ಕೆಲಸ ಎಲ್ಲವೆ ಹಂಗಾಮಿಯಾಗಿ ಲೋಕಲ್ ಕ್ಯಾಂಡಿಡೇಟ್‌ಗಳಾಗಿ ಕೆಲಸಮಾಡಿದರು. ಯಾವ ಇಲಾಖೆಯಲ್ಲಾಗಲಿ ಆರು ತಿಂಗಳು ಕಡಮೆ ಇದ್ದರೆ ಅಂತಹ ನೌಕರರು ಕನ್‌ಫರ್ಮ್ ಆಗದಿರಾರದು; ಅಂತಹವರು ಪಿ.ಎಸ್.ಸಿ.ಯಲ್ಲಿ ಸೆಲೆಕ್ಟ್ ಆಗಿರಬೇಕು. ಯಾವ ಖಾತೆಯಲ್ಲಿಯೇ ಇರಲಿ ಆರು ತಿಂಗಳುಗಳ ಮೇಲ್ಪಟ್ಟು ಇದ್ದರೆ ಅಂತಹವರನ್ನು ಕನ್‌ಫರ್ಮ್ ಮಾಡಿ ಎಂದು ಈಗ ತಾನೆ ಸರ್ಕಾರದ ಆರ್ಡರ್ ಬಂದಿದೆ.

ಶ್ರೀ ಟಿ. ಮರಿಯಪ್ಪ.—ದಯವಿಟ್ಟು ಯಾವುದು ಜಿ.ಓ. ಎಂಬುದನ್ನು ಹೇಳಬೇಕು.

ಶ್ರೀ ಯು. ಎಂ. ಮಾದಪ್ಪ.—ಈಗ ತಾನೆ ಒಬ್ಬ ಮಾನ್ಯ ಸದಸ್ಯರು ಗುಲ್ಬರ್ಗಾದಿಂದ ಟಿಕ್ಕವಾಗಳೊಂಗೆ ಬಂದ ಪುನಃ ವಾಪಸ್ಸು ಹೋಗಬೇಕಾದ ಪರಿಸ್ಥಿತಿ ಒಬ್ಬ ಹಂಗಾಮಿ ನೌಕರನಿಗೆ ಬಂದುದನ್ನು ಹೇಳಿದರು. ಅಂಥಾದ್ದಕ್ಕೆ ತಾವು ಒಪ್ಪಿದ್ದೀರಿ.

Sri T. MARIAPPA.—That is a different matter. ಅದು ಟ್ರಾನ್ಸ್‌ಫರ್ ಮಾಡಿದ್ದು. ನೀವು ಆರು ತಿಂಗಳ ಮೇಲ್ಪಟ್ಟು ನೌಕರನಿದ್ದರೆ ಕನ್‌ಫರ್ಮ್ ಮಾಡಬೇಕೆಂದು ಹೇಳಿದಿರಿ ಪೋಸ್ಟ್ ಮಾಡಿ ವಾಪಸ್ಸಾಗಿರುವ ಅಂತಹ ಕೇಸನ್ನು ಇಮ್ಮಿಡಿಯೇಟಾಗಿ ರೆಕ್ಟಿಫೈ ಮಾಡುತ್ತೇವೆ. ತಾವು ಸೂಚಿಸಿದ ಆ ಜಿ.ಓ ಯಾವುದು ಹೇಳಿ.

ಶ್ರೀ ಯು. ಎಂ. ಮಾದಪ್ಪ.—ಆ ಜಿ. ಓ. ನಂಬರ್ ಗೊತ್ತಿಲ್ಲ. ಜಿ.ಓ. ಪತ್ರವನ್ನು ಮಾನ್ಯ ಮಂತ್ರಿಗಳಿಗೆ ತಲುಪುವಂತೆ ವ್ಯವಸ್ಥೆ ಮಾಡುತ್ತೇನೆ. ಆರು ತಿಂಗಳು ಪ್ರೊಬೇಷನರಿಯಾಗಿ, ಹಂಗಾಮಿಯಾಗಿ ಕೆಲಸ ಮಾಡಿದ ಮೇಲೆ ಅಂತಹ ನೌಕರರನ್ನು ಖಾಯಂ ಮಾಡಬೇಕು.

Sri B. D. JATTI.—That is not correct.

Sri T. MARIAPPA.—There are two things which you have said. ಬೇರೆ ಒಬ್ಬ ಸದಸ್ಯರು ಹೇಳಿದ್ದು ನೌಕರನು ಹಂಗಾಮಿ ನೌಕರಿಯಲ್ಲಿದ್ದು ವಾಪಸ್ಸು ಹೋಗಿದ್ದರಿಂದ ತೊಂದರೆಯಾಗಿದೆ ಎಂದು. We will look and correct it.

ಶ್ರೀ ಯು. ಎಂ. ಮಾದಪ್ಪ.—ಸರ್ಕಾರದವರು ಇನ್ನು ಹರಿಜನರ ಉದ್ಧಾರಕ್ಕಾಗಿ ಕೊಡತಕ್ಕ ಹಣದ ವಿಷಯವಾಗಿ ಒಂದು ಮಾತನ್ನು ಹೇಳಿದಿದ್ದರೆ, ನಾನು ಬಂದಿರತಕ್ಕ ಕ್ಷೇತ್ರಕ್ಕೇ ತೊಂದರೆ ಮಾಡಿದಂತಾಗುತ್ತದೆಂದು ನನ್ನ ಭಾವನೆ. ಅವರಿಗೆ ಈಗ ಕೊಡುವ ಒಂದು ಪರಿಹಾರ, ಅದರಿಂದ ತೊಂದರೆ ಹೆಚ್ಚಾಗುತ್ತಿದೆಯೇ ವಿನಾ ಅನುಕೂಲವಾಗುತ್ತಿಲ್ಲ. ಕೇವಲ 400 ರೂಪಾಯಿಗಳನ್ನು ಕೊಟ್ಟು ಮನೆ ಕಟ್ಟಿಕೊಳ್ಳಿ ಎಂದರೆ ಏನು ಮಾಡಬೇಕು? ನಿಮಗೆ ಈರೀತಿ ಕೊಟ್ಟರೆ ಇದರಿಂದ ಮನೆ ಕಟ್ಟಲಿಕ್ಕೆ ಸಾಧ್ಯವೇ? ಮನೆ ಕಟ್ಟಿ ನೋಡು ಎಂಬ ಒಂದು ಗಾದೆ ಇದೆ. ಮನೆ ಕಟ್ಟಿ ನೋಡಿದ್ದರೆ ಈರೀತಿ ಒಂದು ಪರಿಹಾರ ಕೊಡುವ ನೀತಿಯನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಎಷ್ಟು ಖರ್ಚಾಗುತ್ತದೆ ಎಂಬುದನ್ನು ತಿಳಿದು ಹರಿಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಹಣ ಸಹಾಯ ಮಾಡಬೇಕು. ಕೇವಲ 400 ರೂಪಾಯಿಗಳು ಎಲ್ಲಿ ಸಾಲುತ್ತದೆ? ಇದನ್ನು ಅನೇಕರು ತೆಗೆದುಕೊಂಡಿದ್ದರೂ ಮನೆಗಳನ್ನು ಕಟ್ಟದೇ ಇರುವ ಪರಿಸ್ಥಿತಿ ಬಂದಿದೆ. ನಾನು ಮತ್ತು ನನ್ನ ಸಹೋದ್ಯೋಗಿಗಳಾದ ಶ್ರೀ ಬಿ. ರಾಚಯ್ಯನವರು ಮನೆಗಳನ್ನು ಕಟ್ಟದೇ ಇರುವವರ ಮೇಲೆ ಹೆಚ್ಚಿಗೆ ಒತ್ತಾಯ ಮಾಡಿ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭಿಸಬೇಕು ಎಂಬುದಾಗಿ ವಿಷೋ ನಾರಿ ಹೇಳಲಾಗಿದೆ. ಎಸೇ ಆಗಲಿ ಆರ್ಥಿಕ ಮುಗ್ಗಟ್ಟು ಬಹಳ ಹೆಚ್ಚಾಗಿರುವುದರಿಂದ ಇದಕ್ಕೆ ಒಂದು ನೀತಿಯನ್ನು ಹಾಕಿಕೊಂಡು ಈಗಿರತಕ್ಕ ಪಾಲಿಸಿಯನ್ನು ಬದಲಾಯಿಸಿ ಅವರಿಗೆ ಮನೆ ಕಟ್ಟಿಕೊಳ್ಳಲಿಕ್ಕೆ ಪೂರ್ತಿಯಾಗಿ ಹಣ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮದರಾಸ್ ರಾಜ್ಯದಲ್ಲಿ ಸರ್ಕಾರದವರೇ ಮನೆಗಳನ್ನು ಕಟ್ಟಿಸಿಕೊಡುತ್ತಾರೆ. ಸರ್ಕಾರದವರೇ ತಮ್ಮ ಏಜೆಂಟ್ ಮೂಲಕ ಮನೆಗಳನ್ನು ಕಟ್ಟಿಸಿ ಅವರ ಮೇಲೆ ತೆರಿಗೆ ಹಾಕಿ ಪಂಚಾಯಿತಿ ಬೋರ್ಡಿಗೆ ಅದರ ಮೇಲ್ವಿಚಾರಣೆಯನ್ನು ವಹಿಸುತ್ತಾರೆ. ಸರ್ಕಾರದ ಹಣವನ್ನು ಅಲ್ಲಿ ಒಳ್ಳೆಯ ಉದ್ದೇಶಕ್ಕಾಗಿ ಖರ್ಚು ಮಾಡುತ್ತಾರೆ. ಇದರಿಂದ ಹೆಚ್ಚು ಕಾಲ ಮನೆ ಬಾಳಿಕೆಗೆ ಬರುತ್ತದೆ. ಇಲ್ಲಿ ಮನೆಗಳನ್ನು ಕಟ್ಟುತ್ತಾರೆ. ಅದು ಒಂದು ವಿಚಿತ್ರ. ಗಾಳಿ, ಮಳೆ ಬಂದರೆ ಬಿದ್ದುಹೋಗಿಬಿಡುತ್ತವೆ. ರುಚ್ಚಿನಿಂದ ಮನೆ ಕಟ್ಟಿದಹಾಗೆ ಇರುತ್ತದೆ. ನಿಮ್ಮ ಅಧಿಕಾರ ಇರುವಾಗಲೇ ಆ ಮನೆಗಳು ಬಿದ್ದು ಹೋಗಿಬಿಡುವಂತೆ ಇರುತ್ತವೆ. ಮುಂದೆ ಯಾರೇ ಬರಲಿ, ಯಾವ ಪಕ್ಷವೇ ರಾಜ್ಯಾಡಳಿತದಲ್ಲಿರಲಿ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುವಾಗ ಆ ಮನೆಗಳು ದೀರ್ಘಕಾಲ ಬಾಳಿಕೆ ಬರುವಂತಹ ರೀತಿಯಲ್ಲಿರಬೇಕೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಷಯ. ಈ ಬಗ್ಗೆ ನಿಮ್ಮ ನೀತಿ ಮತ್ತು ನಿಗಮವನ್ನು ಪೂರ್ಣವಾಗಿ ಬದಲಾಯಿಸಬೇಕು. ನಿಮ್ಮ ನೀತಿಯಿಂದ ಸರ್ಕಾರದ ಬೊಕ್ಕಸದ ಮೇಲೆ ಪರಿಣಾಮ ಉಂಟಾಗಿದೆ. ಇದರಿಂದ ತಮ್ಮ ಆತುರಾತುರದ ತೀರ್ಮಾನಗಳ ಪರಿಣಾಮವಾಗಿ ಹೈಕೋರ್ಟಿನಲ್ಲಿ ಸರ್ಕಾರದವರು ನಾಲ್ಕು-ನಾಲ್ಕುವರೆ ಸಾವಿರ ರೂಪಾಯಿಗಳ ಕಾಂಪೆನ್ಸೇಷನ್ ಕೊಡಬೇಕೆಂದು ತೀರ್ಮಾನಗಳು ಆಗಿರುವುದು ನನ್ನ ಗಮನಕ್ಕೆ ಬಂದಿವೆ. ಒಂದು ಕಡೆ ಖಾಸಗೀ ಬಸ್ಸಿನವರನ್ನೋಡಿಸಿ ನೀವು ಮತ್ತೆ ದುರ್ವ್ಯಾಜ್ಯಕ್ಕೆ ಕೈ ಹಾಕಬಹುದೇ? ತಮ್ಮಲ್ಲಿ 50-60 ಬಸ್ಸುಗಳಿದ್ದರೆ ಅವನ್ನು ತಾವು ಈಗ ನಡೆಸುವ ಮಾರ್ಗದಲ್ಲಿ ಹಾಕಿ ಓವರ್ ರೋಡ್ ಆಗದಂತೆ ಇತ್ತೀಚೆಗೆ ಏನಾದರೂ ಚೆಕ್ ಮಾಡಿದ್ದೀರಾ? ಸಾರ್ವಜನಿಕರಿಗೆ ಇದರಿಂದ ಸಂಚಾರಕ್ಕೆ ಎಷ್ಟು ಅನಾನುಕೂಲಗಳಾಗುತ್ತಿವೆ ಎಂಬುದನ್ನು ಯೋಚಿಸಿದ್ದೀರಾ? ಈ ರೀತಿಯಾಗಿ ಜನತೆ ತೊಂದರೆಪಡುತ್ತಿರುವುದರಿಂದ ಅದನ್ನು ತಡೆಗಟ್ಟುವ ದೃಷ್ಟಿಯಿಂದ ಹೆಚ್ಚು ಹೆಚ್ಚಾಗಿ ಬಸ್ಸುಗಳನ್ನು ಹಾಕಬೇಕು. ಆಗ ಅದರಿಂದ ಕರಪ್ಷನ್ ನಿಂತುಹೋಗುತ್ತದೆ.

SRI C. J. MUCKANNAPPA.—Is it the intention of my friend not to nationalise road transport ?

ಶ್ರೀ ಯು. ಎಂ. ಮಾದಪ್ಪ.—ಶ್ರೀ ಮುಕ್ಕಣ್ಣಪ್ಪನವರದು ಬಹಳ ಆತುರದ ತೀರ್ಮಾನ. ನಾನು ಸರ್ಕಾರದಲ್ಲಿರತಕ್ಕ ಮಾರ್ಗವನ್ನು ಸಂಪಾದಿಸಿಕೊಳ್ಳಿ, ಸಾರ್ವಜನಿಕರ ದುಡ್ಡನ್ನು ವೇಸ್ಟ್ ಮಾಡಬೇಡಿ ಎಂದು ಸರ್ಕಾರಕ್ಕೆ ತಿಳಿಸಿದೆನೇ ಹೊರತು ಮತ್ತೇನೂ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.–ಒಳ್ಳೆಯ ಮಾರ್ಪಾಟು ಈ ಬಗ್ಗೆ ಆಗಬೇಕೆಂದು ಅವರು ಸ್ವಲ್ಪ ಅನುಮಾನದಿಂದ ಹೇಳಿದರು.

ಶ್ರೀ ಯು. ಎಂ. ಮಾದಪ್ಪ.—ಅವರು ಏನೋ ಮನಸ್ಸಿನಲ್ಲಿ ಬೆಳಗ್ಗೆ ನೋಡಿದ್ದು ಈಗ ಹೊರಕ್ಕೆ ಬಿದ್ದಿದೆ. ಆ ವಿಷಯ ಬೇರೆ, ಇರಲಿ. ಇನ್ನು ಮುಂದಾದರೂ ಬಸ್‌ಗಳಲ್ಲಿ ಅಕಾಮಡೇಷನ್ ಹೆಚ್ಚಿಸಬೇಕು. ಈಗಿರತಕ್ಕ ಮಾರ್ಗಗಳಲ್ಲಿಯೇ ಇನ್ನೂ ಹೆಚ್ಚಿಗೆ ಬಸ್ಸುಗಳನ್ನು ಹಾಕಿ, ಸಾರ್ವಜನಿಕರಿಗುಂಟಾಗುತ್ತಿರುವ ಕರಪ್ಷನ್ ಮುಂತಾದ ತೊಂದರೆಗಳನ್ನು ತಪ್ಪಿಸುವ ವ್ಯವಸ್ಥೆಯನ್ನು ಕೂಡಲೇ ಸರ್ಕಾರದವರು ಮಾಡಬೇಕೆಂದು ನಾನು ಇಚ್ಛೆ ಪಡುತ್ತೇನೆ.

ಇನ್ನು ಸಿರಿಕಲ್ಚರ್ ವಿಷಯ. ಈ ಬಗ್ಗೆ ಸರ್ಕಾರ ಸ್ವಲ್ಪ ಪ್ರಯತ್ನಪಟ್ಟಿದ್ದರೂ ಪೂರ್ಣ ಎಚ್ಚರಿಕೆಯಿಂದ ಕೆಲಸ ಮಾಡುತ್ತಿಲ್ಲ. ಸಿಲ್ಕ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿ ಎಂಬುದು ಬೆಂಗಳೂರಿನಲ್ಲಿದೆ. ಇದನ್ನು ಸ್ಥಾಪಿಸುವುದಕ್ಕೆ ಕೇಂದ್ರ ಸರ್ಕಾರದವರು ಹತ್ತು ಲಕ್ಷ ರೂಪಾಯಿಗಳನ್ನು ಷೇರು ಮೊಬಲಗು ರೂಪದಲ್ಲಿ ಕೊಟ್ಟಿದ್ದಾರೆ. ಈ ಮೊತ್ತವನ್ನು ಎರಡು ವರ್ಷಗಳ ತನಕ ಹಾಗೆಯೇ ಇಟ್ಟುಕೊಂಡು ಅನಂತರ ಸೊಸೈಟಿ ಎಂದು ಮಾಡಿ ಪ್ರಾರಂಭ ಮಾಡುತ್ತಿದ್ದಾರೆ. ಈಗ ಅದನ್ನು ಪೂರ್ಣ ಮಾಡಿದ್ದಾರೆ. ಗವರ್ನ್‌ಮೆಂಟ್ ಫಿಲೇಚರಿನಿಂದ ಉತ್ಪತ್ತಿಯಾದಂಥ ಸಿಲ್ಕ್ ಇಲ್ಲಿಯವರೆಗೂ ಸೊಸೈಟಿಗೆ ಬರುತ್ತಿರಲಿಲ್ಲ. ಅದನ್ನು ಸೊಸೈಟಿಗೆ ತಂದು ಮಾರಾಟ ಮಾಡಬೇಕೆಂದು ಇದೆ. ಅಲ್ಲಿ ಲೂಪ್‌ಹೋಲ್ಸ್ ಇವೆ. ಅದನ್ನು ವೀವಿಂಗ್ ಫ್ಯಾಕ್ಟರಿಗೂ ಕೊಡುತ್ತಿಲ್ಲ. ಸ್ಟಾಕ್ ಸರ್‌ಪ್ಲಸ್ ಇಲ್ಲವೆಂದು ಹೇಳುವುದಕ್ಕೆ ಅವಕಾಶವಾಗಿದೆ. ಈ ಬಗ್ಗೆ ಏನಾದರೂ ಜಿ.ಓ.ಗಳು ಆಗಿದ್ದರೆ ಅವನ್ನು ವಿತ್‌ಡ್ರಾ ಮಾಡಿಕೊಳ್ಳಿ. ಯಾವ ಇಂಟರ್‌ಪ್ರಿಟೇಷನ್ನಿಗೂ ಅವಕಾಶವಿಲ್ಲದಂತೆ ಅದನ್ನು ಪರಿಗಣಿಸಬೇಕು. ಈ ಸಂಸ್ಥೆ ಇದ್ದರೂ ಕೂಡ 1956ನೆಯ ಇಸವಿಯಲ್ಲಿ ಕೋರಿಗಳ ಅವಾಂತರ ಕಡಿಮೆ ಇತ್ತು. ಈಗ ಪೇಟಾ ಮುಚ್ಚಿಕೊಂಡು ಅನೇಕರು ವ್ಯಾಪಾರ ನಡೆಸುತ್ತಿದ್ದಾರೆ. ಮಧ್ಯೆ ಇರುವ ಜನ ಏನು ಹೇಳುತ್ತಾರೋ ಎಂದುಕೊಂಡು ಬೆರಳು ಮುಚ್ಚಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಆ ವಿಷಯಗಳೆಲ್ಲಾ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ.

ಶ್ರೀ ಯು. ಎಂ. ಮಾದಪ್ಪ.—ಅಂತಹ ಕೆಲಸ ಇವರು ಬಂದ ಮೇಲೆ ಜಾಸ್ತಿಯಾಗುತ್ತಿದೆ. ಅನೇಕರಿಗೆ ಈ ವಿಷಯಗಳು ಗೊತ್ತಿಲ್ಲ. ಆ ವಿಷಯಗಳನ್ನು ಈ ಸಭಾಗಮನಕ್ಕೆ ತರಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದನ್ನು ನಮ್ಮ ನಿತ್ಯಹರಿ ಕಾರ್ಯದಲ್ಲಿ ನೋಡುತ್ತಿದ್ದೇನೆ. 1956ನೆಯ ಇಸವಿಯೊಳಗೆ ಈ ಪದ್ಧತಿ ನಿಂತಿತ್ತು. ಅದು ಬಹಳ ಹಿಂದಿನ ಪದ್ಧತಿಯಾಗಿತ್ತು. ಮತ್ತೆ ಅದನ್ನು ಷುರು ಮಾಡಿದ್ದಾರೆ. ನಿಮ್ಮ ಕಾಲದಲ್ಲಿ ಈ ಪದ್ಧತಿ ತೊಲಗಬೇಕು. ಆ ಒಂದು ಕಾರ್ಯದಲ್ಲಿ ಒಂದು ತೀರ್ಮಾನವನ್ನು ಕೂಡಲೆ ಕೈಗೊಳ್ಳಬೇಕು. ಸಾರ್ವಜನಿಕರಿಗೆ ಇದರಿಂದಾಗುತ್ತಿರುವ ಮೋಸವನ್ನು ಹೋಗಲಾಡಿಸಬೇಕು. ರೇಷ್ಮೆಗೆ ಸಂಬಂಧಪಟ್ಟ ಡಿಮ್ಯಾಂಡ್ ಚರ್ಚೆಗೆ ಬಂದಾಗ, ಇತರ ವಿಷಯಗಳನ್ನು ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ.

ಕೊನೆಯದಾಗಿ, ಈ ಬಜೆಟ್ ನಿಜವಾಗಿ ಡಿಫಿಸಿಟ್ ಬಜೆಟ್ ಎಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.–ಯಾರು ಯಾರು ಎಷ್ಟೆಷ್ಟು ಕಾಲವನ್ನು ಈ ದಿನ ತೆಗೆದುಕೊಂಡಿದ್ದಾರೆಂಬುದು ಈರೀತಿ ಇದೆ:

		ನಿಮಿಷಗಳು
ಶ್ರೀ ರಾಮಕೃಷ್ಣ ಹೆಗ್ಗಡೆ	...	38
ಶ್ರೀ ಜಿ. ಎಸ್. ಬೊಮ್ಮೇಗೌಡ	...	29
ಶ್ರೀ ಎ. ವಿ. ನರಸಿಂಹರೆಡ್ಡಿ	...	37
ಶ್ರೀ ಸಿ. ಎಸ್. ಹುಲುಕೋಟಿ	...	33
ಶ್ರೀ ಯು. ಎಂ. ಮಾದಪ್ಪ	...	62

The House now rises and will meet at 1 P.M. to-morrow.

The House adjourned at Seven of the Clock to meet again at One of the Clock on Wednesday, the 11th March 1959.